# ಪ್ಯಾರಿಸ್ ಕಮ್ಯೂನ್ 150

ಕಾರ್ಲ್ ಮಾರ್ಕ್ಸ್ | ವಿ.ಐ. ಲೆನಿನ್ | ಬರ್ಟೋಲ್ಟ್ ಬ್ರೆಕ್ಟ್

ವಿಜಯ ಪ್ರಶಾದ್ ಅವರ
ಪ್ರಸ್ತಾವನೆಯೊಂದಿಗೆ




PARIS
COMMUNE
150
1871

# ಪ್ಯಾರಿಸ್ ಕಮ್ಯೂನ್ 150

**ಕಾರ್ಲ್ ಮಾರ್ಕ್ಸ್ । ವಿ.ಐ.ಲೆನಿನ್ । ಬೆಟ್ರೋಲ್ಟ್ ಬ್ರೆಕ್ಟ್**
**। ಯುಜೆನ್ ಪೋಟಿಯೆರ್ । ತಿಂಗ್ಸ್ ಚಾಕ್**

**ವಿಜಯ್ ಪ್ರಶಾದ್**
ಪ್ರಸ್ತಾವನೆಯೊಂದಿಗೆ

ಅನುವಾದ
**ವಸಂತರಾಜ ಎನ್ ಕೆ । ವಿಶ್ವ ಕುಂದಾಪುರ । ಬಿ ಪೀರ್ ಬಾಷಾ । ಕೆ ನೀಲಾ**

"Pyaaris kammun 150" Kannada translation of "Paris Commune 150" – Collectin of Articles by Karl Marx, V.I. Lenin, Bertolt Brecht, Vijay Prashad, Tings Chak; Kannada Translation by Vasantharaja N K, Vishwa Kundapur, B Peer Basha and K Neela

Published in India on May 28, 2021,
the 150th anniversary of the fall of the Paris Commune,
by Kriya Madhyama Pvt. Ltd. in association with partners from
the International Union of Left Publishers.

This publication is issued under a Creative Commons Attribution-Share Alike 2.5 India (CC BY-SA 2.5 IN) license. The human-readable summary of the license is available at
https://creativecommons.org/licenses/by-sa/2.5/in/

© ಕನ್ನಡ ಕೃತಿ ಸ್ವಾಮ್ಯ : ಕ್ರಿಯಾ ಮಾಧ್ಯಮ ಪ್ರೈ.ಲಿ. (Kriya Madhyama Pvt Ltd)

ಪ್ರಥಮ ಮುದ್ರಣ : 2021
ಪುಟಗಳು : 118 + ರಕ್ಷಾಪುಟ
ಪ್ರಕಾಶಕರು : ಕ್ರಿಯಾ ಮಾಧ್ಯಮ ಪ್ರೈ.ಲಿ.
37/ಎ, ನಾಲ್ಕನೇ ಅಡ್ಡರಸ್ತೆ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು–560086
email: kriyamadhyama@gmail.com
080–23494488, 9902249150

Cover : Jorge Luis Aguilar (Cuba)
Back cover: Junaina Muhammed (India, Student Federation of India/ Young Socialist Artists)
ಕನ್ನಡ ಪುಸ್ತಕ ರಕ್ಷಾಪುಟ ಮತ್ತು ಪುಸ್ತಕ ವಿನ್ಯಾಸ : ಎಂ.ರಾಮು

Batalla de Ideas (Argentina)
www.batalladeideas.com.ar

Bharathi Puthakalayam (India)
www.thamizhbooks.com

Centro Social y Librería Proyección (Chile)

Chintha (India)
www.chinthapublishers.com

Editorial Caminos (Cuba)
ww.ecaminos.org

El Colectivo (Argentina)
www.editorialelcolectivo.com

Expressao Popular (Brasil)
www.expressaopopular.com.br

Fondo Editorial Fundarte (Venezuela)
www.fundarte.gob.ve

Idea (Romania)

Gonoprokashon (Bangladesh)

Janata Prasaran Tatha Prakashan
Public Limited (Nepal)

Insituto Simón Bolívar (Venezuela)
www.isb.ve

Janashakti Prakashan (India)

Kriya Madyama (India)

LeftWord (India)
www.mayday.leftword.com

Naked Punch (Pakistan)
www.nakedpunch.com

National Book Agency
www.nationalbookagency.com

Marjin Kiri (Indonesia)
www.marjinkiri.com

Nava Telangana (India)
www.navatelanganabooks.com

Ojas: Vidyarthi Ni Pahel (India)

Prajasakti (India)
www.psbh.in

Red Star Press (Italy)
www.redstarpress.it

Studia Humanitatis (Slovenia)
www.studia-humanitatis.si

Tricontinental. Institute of Social Research
www.thetricontinental.com

Vam Prakashan (India)
mayday.leftword.com/vaam-prakashan/

Yordam Kitab (Turkey)

Založba /*cf (Slovenia)
www.zalozbacf.si

# ಕಾರ್ಮಿಕರ ಮೊದಲ ಕ್ರಾಂತಿಗೆ 150ರ ಸಂಭ್ರಮ

ಮೇ 28, 2021, ಪ್ಯಾರಿಸ್ ಕಮ್ಯೂನಿನ 150ನೆಯ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಪ್ಯಾರಿಸ್ಸಿನ ಕಾರ್ಮಿಕರು 1871ರ ಮಾರ್ಚ್ 18 ರಂದು ಆಳುತ್ತಿದ್ದ ಬಂಡವಾಳಶಾಹಿಗಳನ್ನು ಓಡಿಸಿ ಸ್ಥಾಪಿಸಿದ ಕಾರ್ಮಿಕರ ಆಡಳಿತವನ್ನು "ಪ್ಯಾರಿಸ್ ಕಮ್ಯೂನ್" ಎಂದು ಕರೆದರು. "ಪ್ಯಾರಿಸ್ ಕಮ್ಯೂನ್" ಜಗತ್ತಿನಲ್ಲೇ ಮೊದಲ ಕಾರ್ಮಿಕರ ಪ್ರಭುತ್ವ ಮತ್ತು ಕ್ರಾಂತಿ ಎಂದೇ ಪ್ರಸಿದ್ಧವಾಗಿದ್ದರೂ, ಅದು ಇನ್ನೂ ಹಲವು ರೀತಿಯಲ್ಲಿ ಚಿರಂತನ ಮಹತ್ವವನ್ನು ಪಡೆದಿದೆ. "ಪ್ಯಾರಿಸ್ ಕಮ್ಯೂನ್" ಎಂಬ ಕಾರ್ಮಿಕರ ಕ್ರಾಂತಿಕಾರಿ ಪ್ರಭುತ್ವವು (ಮೇ 28, 1871ರಂದು ಪತನವಾಗುವ ಮೊದಲು) ಕೇವಲ 72 ದಿನಗಳ ಕಾಲ ಮಾತ್ರ ಬಾಳಿತಾದರೂ, ಅದು ತನ್ನ ಸಾಧನೆ–ವೈಫಲ್ಯಗಳು ಬಲ–ದೌರ್ಬಲ್ಯಗಳು ಎರಡರಿಂದಾಗಿಯೂ ಆ ನಂತರದ ಕಾರ್ಮಿಕ ಪ್ರಭುತ್ವ ಮತ್ತು ಕ್ರಾಂತಿಗಳಿಗೆ ಸ್ಫೂರ್ತಿಯ ಚಿಲುಮೆಯೂ ದಾರಿದೀವಿಗೆಯೂ ಆಯಿತು.

ಮಾರ್ಕ್ಸ್–ಏಂಗೆಲ್ಸ್ ಕಮ್ಯೂನಿನ ಹೋರಾಟಕ್ಕೆ ಸಕ್ರಿಯವಾದ ಭೌತಿಕ ಮತ್ತು ಸೈಧ್ಧಾಂತಿಕ ಬೆಂಬಲ ಕೊಟ್ಟಿದ್ದಲ್ಲದೆ, ಅದರ ಅನುಭವವನ್ನು ಕ್ರೋಢೀಕರಿಸಿ, ಮುಂದಿನ ಕ್ರಾಂತಿಗಳಿಗೆ ದಾರಿದೀವಿಗೆ ಆಗುವಂತೆ ಸಿದ್ಧಾಂತೀಕರಿಸಿ "ಫ್ರಾನ್ಸಿನ ಅಂತರ್ಯುದ್ಧ" ಎಂಬ ಕೃತಿಯನ್ನು ಪ್ರಕಟಿಸಿದರು. ಪ್ಯಾರಿಸ್ ಕಮ್ಯೂನನ್ನು ಸ್ಥಾಪಿಸಿದ ಪ್ಯಾರಿಸಿನ ಕಾರ್ಮಿಕರು "ಸ್ವರ್ಗದ ಬಾಗಿಲು ತೆಗೆದರು" ಎಂದು ಅವರ ಕೆಚ್ಚನ್ನು ಮಾರ್ಕ್ಸ್ ಮೆಚ್ಚಿಕೊಂಡಿದ್ದಾರೆ. ಈ ಕೃತಿಯ ಅಧ್ಯಯನ ಮಾಡಿದವರೆಲ್ಲರೂ, ಪ್ರಮುಖವಾಗಿ ಲೆನಿನ್ ಮತ್ತು ಮಾವೋ, ಪ್ಯಾರಿಸ್ ಕಮ್ಯೂನ್‌ನ ಎಲ್ಲಾ ಸಕಾರಾತ್ಮಕ ಹಾಗೂ ನಕಾರಾತ್ಮಕ ಪಾಠಗಳನ್ನು ಸಫಲ ಕ್ರಾಂತಿಗಳಲ್ಲಿ ತಮ್ಮ ದೇಶ–ಕಾಲಕ್ಕೆ ಅನುಸಾರವಾಗಿ ಅನ್ವಯಿಸಿದರು. ಜಗತ್ತಿನಾದ್ಯಂತ ಕಾರ್ಮಿಕರ ಪ್ರಭುತ್ವ ಮತ್ತು ಸಮತಾವಾದಿ ಸಮಾಜ ಕಟ್ಟುವ ಕನಸು ಹೊತ್ತ ಎಲ್ಲರಿಗೂ ಇಂದಿಗೂ ಅದು ಮೈನವಿರೇಳಿಸುವ ನೆನಪು.

ಪ್ಯಾರಿಸ್ ಕಮ್ಯೂನಿನ 150ನೆಯ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಜಗತ್ತಿನ 15 ದೇಶಗಳ ಮತ್ತು ಹಲವು ಪ್ರದೇಶಗಳ ಭಾಷೆಗಳ 27 ಪ್ರಗತಿಪರ ಪ್ರಕಾಶನಗಳು ಜಂಟಿಯಾಗಿ 'ಪ್ಯಾರಿಸ್ ಕಮ್ಯೂನ್ 150' ಎಂಬ ಒಂದೇ ಇ–ಪುಸ್ತಕವನ್ನು 18 ಭಾಷೆಗಳಲ್ಲಿ ಒಂದೇ ಡಿಸೈನಿನ ಕವರ್ ಪುಟಗಳೊಂದಿಗೆ ಒಂದೇ ದಿನ ಮೇ 28, 2021ರಂದು ಪ್ರಕಟಿಸುತ್ತಿವೆ. ಬಾಂಗ್ಲಾ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ತಮಿಳು, ತೆಲುಗು ಇತ್ಯಾದಿ ಭಾರತೀಯ ಉಪಖಂಡದ ಭಾಷೆಗಳು, ಇಂಡೋನೇಶ್ಯನ್, ಟರ್ಕಿ, ಲ್ಯಾಟಿನ್ ಅಮೆರಿಕಾ ಮತ್ತು ಯುರೋಪಿನ ಪ್ರಮುಖ ಭಾಷೆಗಳಾದ ಸ್ಪಾನಿಷ್, ಪೋರ್ಚುಗೀಸ್, ಸ್ಲೊವೆನಿಯನ್ ಮತ್ತು ಇಂಗ್ಲಿಷ್ ಸೇರಿದಂತೆ 18 ಭಾಷೆಗಳಲ್ಲಿ ಈ ಪುಸ್ತಕ ಪ್ರಕಟವಾಗುತ್ತಿದೆ.

ಅಮೆರಿಕದ ಟ್ರೈಕಾಂಟಿನೆಂಟಲ್ ಇನ್‌ಸ್ಟಿಟ್ಯೂಟ್ ಮತ್ತು ಭಾರತದ ಲೆಫ್ಟ್ ವರ್ಡ್ ನಾಯಕತ್ವದಲ್ಲಿ ವಾಮ ಪ್ರಕಾಶನ, ಚಿಂತಾ, ಪ್ರಜಾಶಕ್ತಿ, ನವತೆಲಂಗಾಣ, ಭಾರತಿ ಪುಸ್ತಕಾಲಯ, ಕ್ರಿಯಾ ಮಾಧ್ಯಮ ಸೇರಿದಂತೆ ಈ 27 ಪ್ರಕಾಶನಗಳು (ಇವುಗಳ ಹೆಸರು ಮತ್ತು ಲೊಗೊಗಳು ಈ ಪುಸ್ತಕದ ಒಳ ರಕ್ಷಾ ಪುಟಗಳಲ್ಲಿವೆ) ಒಂದು ವೇದಿಕೆಯನ್ನು ರಚಿಸಿಕೊಂಡು ಪ್ರತಿ ವರ್ಷ ಅಂತರ್‍ರಾಷ್ಟ್ರೀಯ ಸೌಹಾರ್ದತೆಯನ್ನು ಬಿಂಬಿಸುವ ಇಂತಹ ಒಂದು ವಿಶಿಷ್ಟ ಕಾರ್ಯಾಚರಣೆಯನ್ನು ಸಂಘಟಿಸಲಾರಂಭಿಸಿವೆ. ಕಳೆದ ಕೆಲವು ವರ್ಷಗಳಲ್ಲಿ ಲೆನಿನ್ 150ನೆಯ ಹುಟ್ಟುದಿನ ಮತ್ತು ಚೆ ಹತ್ಯಾ ದಿನದಂದು ಇಂತಹ ಜಂಟಿ ಪ್ರಕಟಣೆಗಳನ್ನು ಮಾಡಲಾಗಿತ್ತು. 2020ರಲ್ಲಿ ಚೆ ಹತ್ಯಾದಿನದಂದು 'ಚೆ' ಪುಸ್ತಕದ ಜಂಟಿ ಪ್ರಕಟಣಾ ಕಾರ್ಯಕ್ರಮದಲ್ಲಿ ಕ್ರಿಯಾ ಮಾಧ್ಯಮ ಭಾಗವಹಿಸಿತ್ತು.

ಈ ಪುಸ್ತಕದ ಕವರ್ ಡಿಸೈನ್ ಗಾಗಿ ಈ 27 ಪ್ರಕಾಶಕರ ವೇದಿಕೆ ಒಂದು ಅಂತರ್‍ರಾಷ್ಟ್ರೀಯ ಕಲಾ ಸ್ಪರ್ಧೆ ಏರ್ಪಡಿಸಿತ್ತು. ಈ ಕರೆಗೆ ಓಗೊಟ್ಟು ನೂರಾರು ಕಲಾವಿದರು ತಮ್ಮ ಕೃತಿಗಳನ್ನು ಕಳಿಸಿದ್ದರು. ಇವುಗಳಲ್ಲಿ 41 ಕೃತಿಗಳನ್ನು ಆರಿಸಿ ಒಂದು ವೆಬ್ ಕಲಾಪ್ರದರ್ಶನವನ್ನು ಮೇ 21ರಿಂದ ಏರ್ಪಡಿಸಲಾಯಿತು. ಕರ್ನಾಟಕದಿಂದ ಕ್ರಿಯಾ ದ ಡಿಸೈನರ್ ಕಲಾವಿದ ಎಂ.ರಾಮು ಮತ್ತು ರೈತ ಸಂಘದ ನಾಯಕ, ಛಾಯಾಚಿತ್ರಗ್ರಾಹಕರು, ಬರಹಗಾರರೂ ಆದ ಹಾಸನದ ನವೀನ್ ಕುಮಾರ್ ಭಾಗವಹಿಸಿದ್ದರು. ಅವರ ತಲಾ ಒಂದು ಕೃತಿ ಆಯ್ಕೆಯಾಗಿ ವೆಬ್ ಕಲಾಪ್ರದರ್ಶನದಲ್ಲಿ ಪ್ರದರ್ಶಿತವಾಗಿದೆ. ಈ 41 ಕೃತಿಗಳಲ್ಲಿ ಕ್ಯೂಬಾದ ಕಲಾವಿದ ರೊಡ್ರಿಗಸ್ ಅಗಿಲಾರ್ ಅವರ ಕೃತಿಯನ್ನು ಮುಖಪುಟಕ್ಕೆ ಆಯ್ಕೆ ಮಾಡಲಾಯಿತು. ಹಿಂಪುಟಕ್ಕೆ ಭಾರತದ ಕಲಾವಿದ ಜುನೈನಾ ಮುಹಮ್ಮದ್ ಕೃತಿಯನ್ನು ಆಯ್ಕೆಯಾಗಿದೆ. ಕಲಾಪ್ರದರ್ಶನದ 41 ಕೃತಿಗಳ ಕೊಲಾಜ್ ಮುಂದಿನ ಒಳರಕ್ಷಾಪುಟದಲ್ಲಿ ಕೊಡಲಾಗಿದೆ. ವಿವಿಧ ಭಾಷೆಗಳ ಮುಖಪುಟಗಳ ಕೊಲಾಜ್ ಮತ್ತು ರಾಮು ಮತ್ತು ನವೀನ್ ಅವರ ಡಿಸೈನುಗಳನ್ನು ಹಿಂದಿನ ಒಳರಕ್ಷಾಪುಟದಲ್ಲಿ ಕೊಡಲಾಗಿದೆ.

ಪ್ಯಾರಿಸ್ ಕಮ್ಯೂನಿನ ನೆನಪಿನ ಈ ಪುಸ್ತಕದಲ್ಲಿ ಅದರ ಪತನದ ಎರಡು ವಾರಗಳಲ್ಲಿ (ಜೂನ್ 12, 1871ರಂದು) ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ

ಜನರಲ್ ಕೌನ್ಸಿಲ್ ನಲ್ಲಿ ಮಾರ್ಕ್ಸ್ ಮಾಡಿದ ಪ್ರಸಿದ್ಧ ಭಾಷಣದ ಅನುವಾದವಿದೆ. ಇದರಲ್ಲಿ ಕಮ್ಯೂನ್ ಉದಯವಾದ ಹಿನ್ನೆಲೆ, ಅದರ ಸಾಧನೆಗಳು–ವೈಫಲ್ಯಗಳು, ಅದು ಪತನ ಹೊಂದಲು ಕಾರಣಗಳು, ಅದರ ಮಹತ್ವ, ಅದರಿಂದ ಮುಂದಿನ ಕಾರ್ಮಿಕ ಕ್ರಾಂತಿಗಳು ಕಲಿಯಬೇಕಾದ ಪಾಠಗಳು, ಬೂರ್ಜ್ವಾ ಹಾಗೂ ಕಾರ್ಮಿಕ ಪ್ರಭುತ್ವದ ಸ್ವರೂಪಗಳ ಸೈದ್ಧಾಂತಿಕ ಗ್ರಹಿಕೆ – ಇತ್ಯಾದಿಗಳಿರುವ ಸಮಗ್ರ ಉಜ್ವಲ ವಿಶ್ಲೇಷಣೆಯಿದೆ. ಇದು ಆನಂತರ 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಎಂಬ ಹೆಸರಿನಲ್ಲಿ ಪ್ರಕಟವಾದ ಪುಸ್ತಕದ ಒಂದು ಅಧ್ಯಾಯ. ಕನ್ನಡಕ್ಕೆ ಇದನ್ನು ಅನುವಾದ ಮಾಡಿರುವ ವಿಶ್ವ ಕುಂದಾಪುರ, ಆ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸಿರುವ ಮತ್ತು ಆ ಅಧ್ಯಾಯವನ್ನು ಇಲ್ಲಿ ಸೇರಿಸಲು ಅನುಮತಿ ಕೊಟ್ಟ ನವಕರ್ನಾಟಕ ಪ್ರಕಾಶನಕ್ಕೂ ಕೃತಜ್ಞತೆಗಳು.

ಈ ಪುಸ್ತಕದಲ್ಲಿ ಕಮ್ಯೂನ್ ಕುರಿತು ಲೆನಿನ್ ತಮ್ಮ 'ಪ್ರಭುತ್ವ ಮತ್ತು ಕ್ರಾಂತಿ' ಪುಸ್ತಕದಲ್ಲಿ ಬರೆದ ಭಾಗ (ಅಧ್ಯಾಯ–3)ವನ್ನೂ ಕೊಡಲಾಗಿದೆ. ಮಾರ್ಕ್ಸ್ ಅವರ ಕಮ್ಯೂನಿನ ಉಜ್ವಲ ವಿಶ್ಲೇಷಣೆಯ ಪ್ರಮುಖ ಅಂಶಗಳ ಸಾರಾಂಶವನ್ನು ಮತ್ತೆ ಒತ್ತಿ ಹೇಳಿ, ಅದನ್ನು ವಿಕೃತಗೊಳಿಸಲು ಪ್ರಯತ್ನಿಸಿದ ಪಾರ್ಲಿಮೆಂಟರಿವಾದಿ ಪರಿಷ್ಕರಣವಾದಿಗಳ ಕಟು ವಿಮರ್ಶೆ ಮಾಡಿದ, ಆ ನಂತರದ ಕಾರ್ಮಿಕ ಚಳುವಳಿಯ ಅನುಭವ ಮತ್ತು ಅದರ ಆಧಾರದ ಮೇಲೆ ಸಮಕಾಲೀನಗೊಳಿಸಿದ ಕಮ್ಯೂನಿನ ಪಾಠಗಳ ಪ್ರಸ್ತುತತೆ – ಇವೆಲ್ಲದರ ಸಮಗ್ರ ನೋಟ ಇದರಲ್ಲಿದೆ. ಇದರ ಅನುವಾದವನ್ನು ವಸಂತರಾಜ ಎನ್.ಕೆ ಮಾಡಿದ್ದು, ಇದು ಈಗಾಗಲೇ ಕ್ರಿಯಾ ಪ್ರಕಟಿಸಿರುವ 'ಪ್ರಭುತ್ವ ಮತ್ತು ಕ್ರಾಂತಿ' ಪುಸ್ತಕದ ಭಾಗ.

'ಸ್ವರ್ಗದ ಬಾಗಿಲು ತೆರೆದ' ಪ್ಯಾರಿಸ್ ಕಮ್ಯೂನ್ ಕುರಿತು ಮಾರ್ಕ್ಸ್ ಮತ್ತು ಲೆನಿನ್ ವಿಶ್ಲೇಷಣೆಯನ್ನು ನೆನಪು ಮಾಡಿಕೊಳ್ಳುತ್ತಾ ಇಂದಿನ ಪ್ರಸ್ತುತತೆ ಕುರಿತು ವಿಜಯ ಪ್ರಶಾದ್ ಅವರ ದೀರ್ಘ ಪ್ರಸ್ತಾವನೆಯೂ ಇಲ್ಲಿದೆ.

ಇವಲ್ಲದೆ ಪ್ಯಾರಿಸ್ ಕಮ್ಯೂನಿನ ಮತ್ತು ಅದರ ಕುರಿತು ಹೊಮ್ಮಿದ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಈ ಪುಸ್ತಕ ಒಳಗೊಂಡಿದೆ. ಕಮ್ಯೂನಿನ ಭಾಗವಾಗಿದ್ದು, ಅದರ ಸಾಂಸ್ಕೃತಿಕ ನೀತಿಯನ್ನು ಮತ್ತು ಜನತಾ ಕಲೆಯ ಪರಿಕಲ್ಪನೆಯನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿದ್ದ, ಕಲಾವಿದರ ಫೆಡರೇಶನ್ನಿನ ಕೆಲಸ ಮತ್ತು ಕೊಡುಗೆಗಳ ಕುರಿತು ತಿಂಗ್ಸ್ ಚಾಕ್ ಬರೆದಿದ್ದಾರೆ. ಕಲಾವಿದರ ಫೆಡರೇಶನ್ನಿನ ಪ್ರಣಾಳಿಕೆಯೂ ಇದೆ.

ಪ್ರಸಿದ್ಧ ಕ್ರಾಂತಿಕಾರಿ ನಾಟಕಕಾರ, ಕವಿ ಬೆಟ್ರೋಲ್ಟ್ ಬ್ರೆಕ್ಟ್ ಬರೆದ 'ಕಮ್ಯೂನ್ ಧೀರರ ಸಂಕಲ್ಪ'ದ ಕುರಿತ ಮಾರ್ಮಿಕ ಕವನದ ಕನ್ನಡ ಅನುವಾದ ಇಲ್ಲಿದೆ. 'ಇಂಟರ್ ನ್ಯಾಸನಾಲ್' ಎಂದು ಪ್ರಸಿದ್ಧವಾದ ಜಗತ್ತಿನ ದುಡಿಯುವ ಜನರ, ಚಳುವಳಿಗಳ, ಕಮ್ಯುನಿಸ್ಟರ 'ನಾಡಗೀತೆ'ಯ ಬಹುಶಃ ಮೊದಲ ಕನ್ನಡ ಅನುವಾದವೂ ಇಲ್ಲಿದೆ. 'ಇಂಟರ್ ನ್ಯಾಸನಾಲ್' ಬರೆದ ಯುಜಿನ್ ಪೊಟಿಯೆರ್ ಒಬ್ಬ ಕಮ್ಯೂನ್ ಧೀರನಾಗಿದ್ದ. ಅವನ ಮತ್ತು ಅವನ ಪ್ರಸಿದ್ಧ ಹಾಡಿನ ಕುರಿತೂ ಇಲ್ಲಿದೆ. ಜತೆಗೆ ಪುಸ್ತಕದ ಉದ್ದಕ್ಕೂ 'ಇಂಟರ್ ನ್ಯಾಸನಾಲ್' ಸಂಗೀತ ಪಠ್ಯವನ್ನು ವಿವಿಧ ಭಾಷೆಗಳಲ್ಲಿ ಈ ಹಾಡಿನ ಒಂದು

ಸಾಲಿನ ಜೊತೆ ಕೊಡಲಾಗಿದೆ. ಬ್ರೆಕ್ಟ್ ಕವನವನ್ನು ಅನುವಾದಿಸಿದ ಬಿ.ಪೀರ್ ಬಾಷ ಮತ್ತು 'ಇಂಟರ್ ನ್ಯಾಸನಾಲ್' ಅನುವಾದಿಸಿ ಕೊಟ್ಟ ಕೆ.ನೀಲಾ ಅವರಿಗೂ ನಮ್ಮ ಕೃತಜ್ಞತೆಗಳು. ಪುಸ್ತಕದ ರಕ್ಷಾಪುಟ ಮತ್ತು ಒಳಪುಟಗಳ ಡಿಸೈನ್ ಮಾಡಿದ ಎಂ.ರಾಮು, ಇ–ಪುಸ್ತಕ ಆವೃತ್ತಿ ತಯಾರಿಸಿದ ವಿಶಾಲಮತಿ ಮತ್ತು ಅಂದವಾಗಿ ಮುದ್ರಣ ಮಾಡಿದ ಜಿ.ಚಂದ್ರಶೇಖರ್ ಮತ್ತು ಅವರ ಸಂಗಾತಿಗಳಿಗೆ ನಮ್ಮ ಧನ್ಯವಾದಗಳು.

ಕಾರ್ಮಿಕರ ಮೊದಲ ಕ್ರಾಂತಿಯಲ್ಲಿ ಹೋರಾಡಿ ಬಲಿದಾನ ಮಾಡಿದ ಲಕ್ಷಾಂತರ ಕಮ್ಯೂನ್ ಧೀರರರಿಗೆ ಈ ಪುಸ್ತಕ ಅರ್ಪಣೆ. ನಮ್ಮ ದೇಶದಲ್ಲೂ ಕರ್ನಾಟಕದಲ್ಲೂ ದುಡಿಯುವ ಜನರ ಚಳುವಳಿ ಮುನ್ನಡೆಸಿ ಕ್ರಾಂತಿಯತ್ತ ಸಾಗಲು ಈ ಪುಸ್ತಕ ಸ್ಫೂರ್ತಿ ಕೊಡಲಿ.

ವಸಂತರಾಜ ಎನ್.ಕೆ.

# ಪರಿವಿಡಿ


1. ಪ್ಯಾರಿಸ್ ಕಾರ್ಮಿಕರು ಸ್ವರ್ಗದ ಬಾಗಿಲು ತೆರೆದಾಗ 11
– ವಿಜಯ ಪ್ರಶಾದ್ (ಅನು: ವಸಂತರಾಜ ಎನ್.ಕೆ)

2. ಉಜ್ವಲ ಹೂವು 23
– ತಿಂಗ್ಸ್ ಚಾಕ್(ಅನು: ವಸಂತರಾಜ ಎನ್.ಕೆ)

3. ಫ್ರಾನ್ಸಿನಲ್ಲಿ ಅಂತರ್ಯುದ್ಧ 27
– ಕಾರ್ಲ್ ಮಾರ್ಕ್ಸ್ (ಅನು : ವಿಶ್ವ ಕುಂದಾಪುರ)

4. ಪ್ರಭುತ್ವ ಮತ್ತು ಕ್ರಾಂತಿ ಅಧ್ಯಾಯ 3 83
– ವಿ.ಐ.ಲೆನಿನ್ (ಅನು: ವಸಂತರಾಜ ಎನ್.ಕೆ)

5. ಪ್ಯಾರಿಸ್ ಕಮ್ಯೂನಿನ ಕಲಾವಿದರ ಫೆಡರೇಶನ್ನಿನ ಪ್ರಣಾಳಿಕೆ 107
– ಅನು: ವಸಂತರಾಜ ಎನ್.ಕೆ

6. ಕಮ್ಯುನಾರ್ಡರ ಸಂಕಲ್ಪ 113
– ಬೆರ್ಟೋಲ್ಟ್ ಬ್ರೆಕ್ಟ್ (ಅನು: ಬಿ ಪೀರ್ ಬಾಷ)

7. ದುಡಿವವರ ಜಗದ ಹಾಡು 115
– ಯುಜಿನ್ ಪೊಟಿಯೆರ್(ಅನು: ಕೆ ನೀಲಾ)


Debout! les damnés de la terre. Debout! les forçats de la faim
La raison tonne en son cratère, C'est l'éruption de la fin.
Du passé faisons table rase. Foule esclave, debout! Debout!
Le monde va changer de base. Nous ne sommes rien, soyons tout!
শেষ যুদ্ধ শুরু আজ কমরেড
এসো মোরা মিলি একসাথ গাও
ইন্টারন্যাশনাল মিলাবে মানবজাত।।

# ಪ್ಯಾರೀಸ್ ಕಾರ್ಮಿಕರು ಸ್ವರ್ಗದ ಬಾಗಿಲು ತೆರೆದಾಗ...

**ವಿಜಯ ಪ್ರಶಾದ್**

1871ರಲ್ಲಿ 72 ದಿನಗಳ ಕಾಲ, ಪ್ಯಾರೀಸಿನ ಜನ ಸ್ವರ್ಗದ ಬಾಗಿಲು ತೆರೆದರು. ಫ್ರಾನ್ಸನ್ನು ಪ್ರಶ್ಯಾದ ಜತೆ ವಿನಾಶಕಾರಿ ಯುದ್ಧಕ್ಕೆ ಮತ್ತು ಅದರ ಅಡಿಯಾಳಾಗುವ ಸ್ಥಿತಿಗೆ ತಳ್ಳಿದ ಆಳುವ ವರ್ಗಕ್ಕೆ ಮುಖಾಮುಖಿಯಾದಪ್ಯಾರೀಸಿನ ಕಾರ್ಮಿಕರು ತಡೆಗೋಡೆಗಳಿಂದ ತಮ್ಮನ್ನು ರಕ್ಷಿಸಿಕೊಂಡರು, ತಮ್ಮದೇ ಆದ ಪ್ರಜಾಪ್ರಭುತ್ವ ನೀತಿಗಳ ತಮ್ಮದೇ ಸರಕಾರವನ್ನು ಸ್ಥಾಪಿಸಿದರು, ಮತ್ತು ಆಳುವ ವರ್ಗಗಳು ಸೃಷ್ಟಿಸಿದ್ದ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದರು. "ಈ ಪ್ಯಾರೀಸಿಯನ್ನರಲ್ಲಿ ಯಾವುದೇ ಪರಿಸ್ಥಿತಿಯನ್ನು ಎದುರಿಸುವ ಎಂತಹ ಚಾಕಚಕ್ಯತೆ, ಎಂತಹ ಚಾರಿತ್ರಿಕ ಮುನ್ನೆಚ್ಚರಿಕೆ, ಎಂತಹ ಅಪರಿಮಿತ ತ್ಯಾಗದ ಸಾಮರ್ಥ್ಯ" ಎಂದು ಕಾರ್ಲ್ ಮಾರ್ಕ್ಸ್ ತಮ್ಮ ಮಿತ್ರ ಕುಗೆಲ್‌ಮನ್‌ಗೆ ಬರೆದರು.[1] "ಬಾಹ್ಯ ವೈರಿಗಳಿಂದಲ್ಲ, ಆಂತರಿಕ ದ್ರೋಹದ ಪರಿಣಾಮವಾದ ಆರು ತಿಂಗಳ ಹಸಿವು ಮತ್ತು ದುಸ್ಥಿತಿಯ ನಂತರ, ಫ್ರಾನ್ಸ್ ಮತ್ತು ಪ್ರಶ್ಯಾಗಳ ನಡುವೆ ಯುದ್ಧವೇ ನಡೆದಿಲ್ಲವೇನೋ, ಶತ್ರುಗಳು ಪ್ಯಾರೀಸಿನ ಹೊಸ್ತಿಲಲ್ಲಿ ಇರಲಿಲ್ಲವೇನೋ ಎಂಬಂತೆ, ಪ್ರಶ್ಯನ್ ಭರ್ಚಿಗಳ ಕೆಳಗಿಂದ ಅವರು ಎದ್ದು ಬರುತ್ತಾರೆ. ಇಂತಹ ಮಹಾನತೆಯ ಉದಾಹರಣೆ ಇನ್ನೊಂದಿಲ್ಲ."

ಈ ಪ್ಯಾರೀಸಿನ ಕಾರ್ಮಿಕರು 1789ರ ಫ್ರೆಂಚ್ ಕ್ರಾಂತಿ ಮತ್ತು 1848ರ ದಂಗೆಗಳ ವಾರಸುದಾರರಂತೆ ಅವರ ಹಾದಿಯಲ್ಲಿ ನಡೆದರು. ಈ ಪ್ರತಿ ಕ್ಷಣಗಳಲ್ಲೂ ಕಾರ್ಮಿಕರು ವಿನ್ಯಾಸ ಮಾಡಿದ ಮತ್ತು ಆಳುವ ಜಗತ್ತನ್ನು ಸೃಷ್ಟಿಸುವ ನಿರೀಕ್ಷೆಯೊಂದಿಗೆ, ಅವರು ಸ್ವರ್ಗದ ಹೊಸ್ತಿಲಲ್ಲಿ ಇದ್ದರು. ಆದರೆ ಪ್ರತಿ ಬಾರಿಯೂ ಅವರ ದಂಗೆಯನ್ನು ಒಂದು ಸಣ್ಣ ಆದರೆ ಪ್ರಬಲವಾದ ವರ್ಗ –ಬೂರ್ಶ್ವಾ ವರ್ಗ– ಮೋಸದಿಂದ ಅವರಿಂದ ಕಿತ್ತುಕೊಂಡಿತು ಮತ್ತು ಅದನ್ನು ತನ್ನದೇ ಉದ್ದೇಶಗಳಿಗೆ ಬಳಸಿಕೊಂಡಿತು. ಇಲ್ಲವೇ ಕಾರ್ಮಿಕರ ವೈರಿ ವರ್ಗಗಳು (ಬೂರ್ಶ್ವಾ ವರ್ಗಸೇರಿದಂತೆ) ಅಣಿ ನೆರೆಸಿದ ಪ್ರಭುತ್ವದ

1 Karl Marx to Ludwig Kugelmann, 12 April 1871. Karl Marx, *Letters to Kugelmann*, New York: International Publishers, 1934.

ಹಿಂಸೆಯಿಂದ ಕಿತ್ತುಕೊಂಡಿತು. ಮೊದಲನೆಯ ಮತ್ತು ಮೂರನೇ ನೆಪೋಲಿಯನ್ ಹಲವರ ಆಕಾಂಕ್ಷೆಗಳ ವಿರುದ್ಧವಾದ ಮತ್ತು ಪ್ರಬಲರ ಪರವಾದ ಸಾಧನವಾದರು[2]. 1871 ಹೋರಾಟ ಕಷ್ಟವೆಂದು ಗೊತ್ತಿದ್ದರೂ, 1789 ಮತ್ತು 1848ರ ಸೋಲುಗಳ ಅರಿವಿದ್ದರೂ ಅವರು ಹಿಂಜರಿಯಲಿಲ್ಲ. ಅದು ಅವರ ಪರಾಜಯದೊಂದಿಗೆ ಕೊನೆಯಾಯಿತು. ನಿರ್ದಯಿ ಫ್ರೆಂಚ್ ಬೂರ್ಶ್ವಾಗಳು ಲಕ್ಷಕ್ಕೂ ಹೆಚ್ಚು ಪುರುಷ ಮತ್ತು ಮಹಿಳಾ ಹೋರಾಟಗಾರರನ್ನು ಬಲಿ ತೆಗೆದುಕೊಂಡರು.

## ಹೊಟೇಲ್ ದ ವಿಲ್ಲೆಮೇಲೆ ಕೆಂಬಾವುಟ

ಈ 72 ದಿನಗಳ ಪ್ರಯೋಗವನ್ನು ಪ್ಯಾರೀಸ್ ಕಮ್ಯೂನ್ ಎಂದು ಕರೆಯಲಾಯಿತು. ಕ್ರಾಂತಿಕಾರಿಗಳು 1792ರಲ್ಲಿ ಅವರ ನಗರಗಳನ್ನು ಸ್ಥಳೀಯ ಸ್ವಯಂ–ಆಡಳಿತದ ನೀತಿಗಳನ್ನು ಅಭಿವೃದ್ಧಿಪಡಿಸಿದ ಪ್ರಾದೇಶಿಕ ವಲಯಗಳಾಗಿ ಸಂಘಟಿಸಿದ್ದರಿಂದ 'ಕಮ್ಯೂನ್' ಎಂಬ ಹೆಸರು ಬಂತು. ಜನತಾ ಸರಕಾರಗಳ ಈ ಸಂಪ್ರದಾಯದ ಭಾಗವಾಗಿ ಪ್ಯಾರೀಸಿನ ದಂಗೆಯು ಈ ಹೆಸರನ್ನು ಪಡೆಯಿತು. ಪ್ಯಾರೀಸಿನ ಪ್ರತಿಯೊಂದು (ಅರಾಂಡಿಸ್ ಮೆಂಟ್ ಎಂದು ಕರೆಯಲಾಗುವ) ಜಿಲ್ಲೆ/ವಾರ್ಡಿನಲ್ಲಿ ಕಮ್ಯೂನಾರ್ಡರ (ಕಮ್ಯೂನ್ ನಾಯಕರು ಹಾಗೂ ಕಾರ್ಯಕರ್ತರನ್ನು ಹೀಗೆಂದು ಕರೆಯಲಾಗಿದೆ) ಕಾವಲು ಸಮಿತಿಗಳನ್ನು ರಚಿಸಲಾಯಿತು. ಇಡೀ ಕಮ್ಯೂನಿನ ವ್ಯವಹಾರಗಳನ್ನು ನಿರ್ದೇಶಿಸಿದ ಕೇಂದ್ರ ಸಮಿತಿಗೆ ಈ ಸಮಿತಿಗಳಿಂದ ನಾಲ್ಕು ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಇಂತಹ ಪ್ರತಿನಿಧಿಗಳು ಹೆಚ್ಚಾಗಿ ಕಾರ್ಮಿಕ ವರ್ಗದಿಂದ ಬಂದವರಾಗಿದ್ದರು. ಅದರಲ್ಲೂ 1871ಕ್ಕೂ ಹಿಂದಿನ ದಶಕಗಳಲ್ಲಿ ಸಕ್ರಿಯವಾಗಿದ್ದ ಕ್ರಾಂತಿಕಾರಿ ಚಳುವಳಿಗಳಿಂದ ಬಂದವರಾಗಿದ್ದರು. ಮುನಿಸಿಪಲ್ ಅಧಿಕಾರಿಗಳು ಚುನಾಯಿತರಾಗಿರಬೇಕು, ಪೋಲಿಸ್ ಚುನಾಯಿತ ಸಂಸ್ಥೆಗಳ ನಿಯಂತ್ರಣದಲ್ಲಿರಬೇಕು, ನ್ಯಾಯಾಧೀಶರೂ ಚುನಾಯಿತರಾಗಿರಬೇಕು, ಪತ್ರಿಕೆ ಮತ್ತು ಸಾರ್ವಜನಿಕ ಸಭೆಗಳು ಮುಕ್ತವಾಗಿರಬೇಕು, ನಗರದ ರಕ್ಷಣೆಯನ್ನು ನಿರ್ವಹಿಸಲು ನಾಗರಿಕರಿಗೆ ಶಸ್ತ್ರ ಒದಗಿಸಬೇಕು & ಎಂದು ಕೇಂದ್ರ ಸಮಿತಿ ಒತ್ತಾಯಿಸಿತು.[3]

ಕಮ್ಯೂನ್ ಆರಂಭವಾಗಿದ್ದು ಪ್ಯಾರೀಸನ್ನು ಪ್ರಶ್ಯನ್ ಸೈನ್ಯದಿಂದ ರಕ್ಷಿಸುವ ದೇಶಪ್ರೇಮಿ ಸಂಕೇತವಾಗಿ; ಆದರೆ ಜನರ ಆಗಿನ ಮನಃಸ್ಥಿತಿ ಮತ್ತು ಕ್ರಾಂತಿಕಾರಿ ಗುಂಪುಗಳ ಪ್ರಭಾವದಿಂದಾಗಿ ತ್ವರಿತವಾಗಿ ಸಮರಶೀಲ, ಪ್ರಜಾಸತ್ತಾತ್ಮಕ ಸ್ವಭಾವ ಪಡೆದುಕೊಂಡಿತು. ಕಮ್ಯೂನ್ ನ ಒಬ್ಬ ಸದಸ್ಯನಾಗಿದ್ದು ಅದರ ಕುರಿತು ವಿವರವಾದ ಚಿತ್ರಣ ನೀಡಿದ್ದ ಪ್ರಾಸ್ಪರ್–ಒಲಿವಿಯರ್ ಲಿಸ್ಸಾಗರೆ, ಕಮ್ಯೂನ್ ನ ಹಿರಿಯ ನಾಯಕರಾದವರು 'ಅಪರಿಚಿತ'ರಾಗಿದ್ದರು. ಆದ್ದರಿಂದಲೇ ಏನೋ, ಕಮ್ಯೂನ್

2 Karl Marx, *The Eighteenth Brumaire of Louis Bonaparte*, 1852 and Karl Marx, *The Class Struggles in France, 1848-1850*, 1895.

3 Jacques Rougerie, *La Commune de 1871*, Paris: Presses universitaires de France, 2014; Jacques Rougerie, *Paris libre 1871*, Paris: Editions du Seuil, 2004.

'ಸಾರ್ವತ್ರಿಕವಾಗಿತ್ತು, ಪಂಥವಾದಿಯಾಗಿರಲಿಲ್ಲ ಮತ್ತು ಹಾಗಾಗಿ ಪ್ರಬಲವಾಗಿತ್ತು' ಎಂದು ಬರೆಯುತ್ತಾರೆ. ಕಮ್ಯೂನ್ ಆರಂಭವಾದ ಮರುದಿನ, ಅಂದರೆ ಮಾರ್ಚ್ 19ರಂದು "ಹೊಟೆಲ್ ದ ವಿಲ್ಲೆ ದ ಮೇಲೆ ಕೆಂಬಾವುಟ ಹಾರಾಡುತ್ತಿತ್ತು. ಮುಂಜಾನೆಯ ಮಂಜಿನೊಂದಿಗೆ ಅದರಂತೆ ಸರಕಾರ, ಆಡಳಿತ ಕರಗಿ ಹೋಗಿತ್ತು. ಬ್ಯಾಸ್ಟಿಲ್ಲೆಯ ಆಳದಿಂದ, ಯಾರೂ ಕೇಳಿರದ ಬಾಸ್ ಪ್ರೋಯ್ ನಿಂದ, ಇಡೀ ಜಗತ್ತಿಗೆ ಕಾಣುವಂತೆ ಪ್ಯಾರೀಸಿನ ಶಿಖರಗಳಿಗೆ ಕೇಂದ್ರ ಸಮಿತಿ ಏರಿತ್ತು." ಎಂದು ಲಿಸ್ಸಾಗರೆ ಬರೆಯುತ್ತಾರೆ[4].

ಮಾರ್ಚ್ 27ರಂದು ಕಮ್ಯೂನ್ ತನ್ನ ಹಲವು ಅಂಗಗಳಿಗೆ ಚುನಾವಣೆ ನಡೆಸಿತು. ಮರುದಿನ ಈ ಚುನಾಯಿತ ಪ್ರತಿನಿಧಿಗಳು ಹೇಗೆ ತನ್ನ ಸ್ಥಾನವನ್ನು ಸ್ವೀಕರಿಸಿದರು ಎಂದು ಲಿಸ್ಸಾಗರೆ ಹೀಗೆ ಬಣ್ಣಿಸುತ್ತಾರೆ

> *"ಎರಡು ಲಕ್ಷ 'ನಿರ್ಗತಿಕರು' (ಹೊಟೆಲ್ ದ ವಿಲ್ಲೆ ಗೆ ತಾವು ಚುನಾಯಿಸಿದ ಪ್ರತಿನಿಧಿಗಳನ್ನು ಪ್ರತಿಷ್ಠಾಪಿಸಲು ಬಂದಿದ್ದರು. ಅವರು ಬಟಾಲಿಯನ್ ಡೋಲುಗಳನ್ನು ಬಾರಿಸುತ್ತಾ,ಕೋವಿಗಳು ಮತ್ತುಫ್ರಿಜಿಯನ್ ಟೋಪಿಗಳ ಸುತ್ತ ಕೆಂಪು ಅಂಚನ್ನು ಹೊಂದಿದ್ದ ಬ್ಯಾನರುಗಳನ್ನುಹಿಡಿದು ಬಂದಿದ್ದರು. ಅವರೊಂದಿಗೆ ಪ್ಯಾರೀಸಿಗೆ ವಿಧೇಯರಾಗಿದ್ದ ಕಾಲಾಳು ಸೈನಿಕರು, ಫಿರಂಗಿ ಸೈನಿಕರು ಮತ್ತು ನೌಸೈನಿಕರು ಎಲ್ಲಾ ಬೀದಿಗಳಿಂದ ಪ್ಲಾಸ್ ಡಿ ಗ್ರೀವ್ ಗೆ ಮಹಾನದಿಯೊಂದರ ಸಾವಿರಾರು ತೆರೆಗಳಂತೆ ಹರಿದು ಬಂದಿದ್ದರು."*

ಚುನಾಯಿತ ಪದಾಧಿಕಾರಿಗಳು ತಮ್ಮ ಹೆಗಲ ಮೇಲೆ ಕೆಂಪು ಸ್ಕಾರ್ಫ್(ಶಾಲು) ಹೊದ್ದಿದ್ದರು. ಹಲವು ಸ್ಥಳೀಯ ಅಂಗಗಳಿಗೆ ಚುನಾಯಿತರಾದ ಪದಾಧಿಕಾರಿಗಳಿಗೆ ನಿಗದಿತ ಜವಾಬ್ದಾರಿಗಳಿದ್ದವು. ಅವರು ಜನರ ಇಚ್ಛೆಯಂತೆ ಕೆಲಸ ಮಾಡದಿದ್ದರೆ ಅವರನ್ನು ಮುಕ್ತವಾಗಿ ವಾಪಸು ಕರೆಸಿಕೊಳ್ಳುವ ನಿಯಮಗಳೂ ಇದ್ದವು. ಕಮ್ಯೂನಿನ ಒಬ್ಬ ಚುನಾಯಿತ ಪದಾಧಿಕಾರಿಯಾಗಿದ್ದ ಹಾಗೂ ಪಿಂಗಾಣಿ ಮೇಲೆ ಚಿತ್ರ ಬರೆಯುವ ಕಲಾವಿದ ಗೇಬ್ರಿಯಲ್ ರನ್ವೀಯರ್ "ಜನರ ಹೆಸರಿನಲ್ಲಿ ಕಮ್ಯೂನಿನ ಬರವನ್ನು ಘೋಷಿಸಲಾಗಿದೆ" ಎಂದು ಘೋಷಿಸಿದರು. " 'ಕಮ್ಯೂನ್ ಜಿಂದಾಬಾದ್' (ವಿವ್‌ಲ ಕಮ್ಯೂನ್) ಘೋಷಣೆಗಳು ಮುಗಿಲು ಮುಟ್ಟಿದವು. ಭರ್ಚಿಗಳ ಮೇಲಿದ್ದ ಟೋಪಿಗಳನ್ನು ಮೇಲೆ ಎಸೆಯಲಾಯಿತು, ಬಾವುಟಗಳು ಗಾಳಿಯಲ್ಲಿ ಹಾರಾಡಿದವು. ಎಲ್ಲ ಹೃದಯಗಳು ಸಂತೋಷದಿಂದ ಹಿಗ್ಗಿದವು; ಎಲ್ಲ ಕಣ್ಣುಗಳು ಆನಂದಬಾಷ್ಪ ಹರಿಸಿದವು." ಎಂದು ಲಿಸ್ಸಾಗರೆ ಆ ದಿನಗಳನ್ನು ನೆನೆದು ಬರೆದಿದ್ದಾರೆ. ಪ್ರತಿ–ಕ್ರಾಂತಿಯ ಏಜೆಂಟರು ಓಡಿಹೋಗಿ ವರ್ಸೆಲೆಸ್ ನಲ್ಲಿದ್ದ ತಮ್ಮ ಒಡೆಯರ ಕಿವಿಗಳಲ್ಲಿ 'ಇಡೀ ಪ್ಯಾರೀಸ್ ಈ ಸಂಭ್ರಮದಲ್ಲಿ ಮುಳುಗಿತ್ತು' ಎಂದು ಉಸುರಿದರು.

---

4 Prosper-Olivier Lissagaray, *Histoire de la Commune de 1871*, 1876, translated by Eleanor Marx. Most of the unattributed quotes in this text are taken from this crucial book.

## ಕಮ್ಯೂನಿನ ಶ್ರಮಜೀವಿ ಸ್ವರೂಪ

ಪ್ಯಾರೀಸ್ ಕಮ್ಯೂನಿನ ಆಜ್ಞೆಗಳಲ್ಲಿ ಆಡಳಿತದ ಕಾರ್ಮಿಕ ವರ್ಗ-ಸ್ವರೂಪವನ್ನು ಕಾಣಬಹುದು : ಮಾಲೀಕರು ತೊರೆದು ಹೋದ ಕಾರ್ಖಾನೆಗಳನ್ನು ಕಾರ್ಮಿಕರು ವಶಪಡಿಸಿಕೊಂಡು ನಡೆಸಬೇಕು, ಕಾರ್ಮಿಕರ ಮೇಲೆ ವಿಧಿಸಲಾಗುತ್ತಿದ್ದ ದಂಡಗಳನ್ನು ರದ್ದು ಮಾಡಲಾಯಿತು, ಬೇಕರಿಗಳಲ್ಲಿ ರಾತ್ರಿಪಾಳಿಯನ್ನು ನಿಷೇಧಿಸಲಾಯಿತು, ಚರ್ಚಿನ ಆಸ್ತಿಯನ್ನು ಸಾಮಾಜಿಕ ಬಳಕೆಗೆ ತೆರೆಯಲಾಯಿತು. ಕಾರ್ಮಿಕರು ಕಷ್ಟದ ದಿನಗಳಲ್ಲಿ ಮೊರೆ ಹೋಗುತ್ತಿದ್ದ ಗಿರವಿ ಅಂಗಡಿಗಳನ್ನು, ನಿರುದ್ಯೋಗಿಗಳಾದಾಗ ಕಾರ್ಮಿರಿಗೆ ತುರ್ತು ಬೆಂಬಲ ಕೊಡುವ ಸಂಘಟನೆಗಳಾಗಿ ಪರಿವರ್ತಿಸಲಾಯಿತು. ಕಮ್ಯೂನ್ 'ಕಾರ್ಮಿಕರನ್ನು ಬಂಡವಾಳದ ಶೋಷಣೆಯಿಂದ ರಕ್ಷಿಸುವ ಸಂಘಟನೆಗಳನ್ನು ಸ್ಥಾಪಿಸಬೇಕು' ಎಂದರು ಕಮ್ಯೂನಾರ್ಡರು.

ಬಡ ರೈತರು ಸೇರಿದಂತೆ ದುಡಿಯುವ ವರ್ಗಗಳ (ಕಮ್ಯೂನಿಗೆ ವಿರುದ್ಧವಾಗಿದ್ದು ಅದರ ವಿರುದ್ಧ ಹೋರಾಡಿದವರನ್ನೂ ಒಳಗೊಂಡು) ಪ್ರತಿಯೊಬ್ಬ ಸದಸ್ಯರನ್ನು ಹೊಸ ಸಮಾಜದಲ್ಲಿ ಒಳಗೊಳ್ಳಬೇಕು ಎಂಬುದು ಕಮ್ಯೂನಿನ ಧೋರಣೆಯಾಗಿತ್ತು. 'ನಮ್ಮವರನ್ನು ಕೊಂದ 92 ಸೈನಿಕರ ಮಡದಿಯರಿಗೆ ಕಮ್ಯೂನ್ ಬ್ರೆಡ್ ಕಳಿಸಿದೆ. ಯಾಕೆಂದರೆ ವಿಧವೆಯರು ಯಾವುದೇ ಪಕ್ಷಕ್ಕೆ ಸೇರಿದವರಲ್ಲ. ಪ್ರತಿಯೊಬ್ಬರಿಗೂ ಬ್ರೆಡ್ ಮತ್ತು ಅನಾಥರಿಗೆ ಆರೈಕೆ-ಸಾಂತ್ವನ ನಮ್ಮ ಬಳಿ ಇದೆ." ಎಂದು ಕಮ್ಯೂನಿನ ಸಾರ್ವಜನಿಕ ಭದ್ರತೆಯ ಬ್ಯುರೋದ ಮುಖ್ಯಸ್ಥ ಹೇಳಿದರು. ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘದ ಮೇಡಂ ಆಂದ್ರೆ ಲಿಯೋ ಹಳ್ಳಿಯ ಬಡರೈತರನ್ನು ಉದ್ದೇಶಿಸಿದ ಪ್ರಣಾಳಿಕೆಯಲ್ಲಿಹೀಗೆ ಹೇಳಿದರು "ಸೋದರರೇ, ನಿಮಗೆ ಮೋಸ ಮಾಡಲಾಗುತ್ತಿದೆ. ನಮ್ಮಿಬ್ಬರ ಹಿತಾಸಕ್ತಿಗಳು ಒಂದೇ. ನಾವು ಕೇಳುತ್ತಿರುವುದು, ನೀವು ಬಯಸುತ್ತಿರುವುದು ಒಂದೇ. ನಾವು ಒತ್ತಾಯಿಸುತ್ತಿರುವ ವಿಮೋಚನೆ ನಿಮ್ಮದೂ ಕೂಡಾ. ಪ್ಯಾರೀಸ್ ಕೇಳುತ್ತಿರುವುದು ರೈತನಿಗೆ ಭೂಮಿ ಮತ್ತು ಕಾರ್ಮಿಕನಿಗೆ ಅವನ ಉಪಕರಣ ತಾನೇ".

ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘದ ಸಭೆಯಲ್ಲಿ ಕಮ್ಯೂನ್ ಪತನದ ಎರಡು ದಿನಗಳ ನಂತರ ಮಾತನಾಡುತ್ತಾ (ಈ ಪುಸ್ತಕದಲ್ಲಿ ಆ ಭಾಷಣವನ್ನು ಸಂಗ್ರಹಿಸಲಾಗಿದೆ), ಕಮ್ಯೂನ್ ಒಂದು "ತನ್ನ ಉತ್ಪನ್ನಗಳನ್ನು ವಶಪಡಿಸಿಕೊಳ್ಳುವ ವರ್ಗದ ವಿರುದ್ಧ ಉತ್ಪಾದಕ ವರ್ಗದ ಹೋರಾಟದ ಫಲಿತವಾಗಿರುವ ಮತ್ತು ಶ್ರಮಿಕರ ಆರ್ಥಿಕ ವಿಮೋಚನೆಯನ್ನು ಸಾಧಿಸಲು ಅಗತ್ಯವಾಗಿದ್ದು ಕೊನೆಗೂ ಕಂಡುಕೊಂಡ ರಾಜಕೀಯ ರೂಪವಾಗಿರುವ, ಕಾರ್ಮಿಕ ವರ್ಗದ ಸರಕಾರವಾಗಿತ್ತು." ಎಂದು ಅದನ್ನು ಬಣ್ಣಿಸಿದ್ದರು.

ಹಿಂದಿನ ಆಳುವವರು ಅತ್ಯಂತ ಅದಕ್ಷ ರೀತಿಯಲ್ಲಿ ಕೆಲಸ ನಿರ್ವಹಿಸಿದ್ದರು ಎಂಬುದನ್ನುವಿವಿಧ ಇಲಾಖೆಗಳಲ್ಲಿ ಕೆಲಸ ವಹಿಸಿಕೊಂಡ ಪದಾಧಿಕಾರಿಗಳು ಕಂಡುಕೊಂಡರು ಮತ್ತು ಅವರು ಅದನ್ನು ಸರಿಪಡಿಸುವುದರಲ್ಲಿ ತಕ್ಷಣವೇ ತೊಡಗಿಸಿಕೊಂಡರು. ಕಂಚಿನ ಕುಶಲಕರ್ಮಿಯಾದ ಝೆಫ್ರಿನ್ ಕಮೆಲಿನಾಟ್, ನಾಣ್ಯ ಇಲಾಖೆಯಲ್ಲಿ ವ್ಯವಸ್ಥೆಯನ್ನು ಸ್ಥಾಪಿಸಿದ. ಒಬ್ಬ ಕೆತ್ತನೆಯ ಕುಶಲಕರ್ಮಿಯಾದಅಲ್ಬರ್ಟ್

ಥೀಸಿಸ್ ಅಂಚೆ ಇಲಾಖೆಯ ಅವ್ಯವಸ್ಥೆಯನ್ನು ಸರಿಪಡಿಸಿದ. (ಝೆಫ್ರಿನ್ ಕಮೆಲಿನಾಟ್ ಮುಂದೆ 1924ರಲ್ಲಿ ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾದ ಎಂಬುದನ್ನು ಗಮನಿಸಬೇಕು). ಉಳಿದ ಹಲವು ಪದಾಧಿಕಾರಿಗಳು ಆಡಳಿತದಲ್ಲಿ ಬೂರ್ಶ್ವಾ ವರ್ಗವು ಮಾಡಿದ್ದ ಹೊಲಸನ್ನು ಸ್ವಚ್ಛಗೊಳಿಸಿದರು : ಸಾರ್ವಜನಿಕ ನೆರವು ಇಲಾಖೆಯಲ್ಲಿ ಕಮಿಲ್ಲೆ ಟ್ರೈಲ್ಲಾರ್ಡ್, ಪೋಸ್ಟಾಫೀಸಿನಲ್ಲಿ ಜೂಲೆಸ್ ಫೋಂಟೈನ್, ರಾಷ್ಟ್ರೀಯ ಪ್ರಿಂಟಿಂಗ್ ಪ್ರೆಸ್ ನಲ್ಲಿ ಮೇರಿಯಸ್ ಫೈಲ್ಲೆ ಮತ್ತು ಅಮೆದೀ ಕೊಂಬಾಲ್ಟ್, ರಾಷ್ಟ್ರೀಯ ಲೈಬ್ರರಿಯನ್ನು ಬಳಸುವಂತೆ ಪುನರ್ಸಂಘಟಿಸಿದ ಎಲಿ ರೆಕ್ಲುಸ್ ಮತ್ತು ಲೂಯಿ–ಗಿಲ್ಲೊಮೆ ದೆಬೊಕ್, ಮ್ಯೂಸಿಯಂಗಳನ್ನು ಸಾರ್ವಜನಿಕರು ನೋಡುವಂತೆ ತೆರೆದ ಕಲಾವಿದರ ಫೇಡರೇಶನ್ ನ ಗುಸ್ತಾವ್ ಕೌರ್ಬೆ. ಕೆಲವೇ ತಿಂಗಳುಗಳಲ್ಲಿ ಇವರೆಲ್ಲರ ಕೆಲಸದ ನಿರ್ವಹಣೆ,ಕೆಲವರ ಮಾತ್ರವಲ್ಲದೆ ಎಲ್ಲ ಜನರ ಹಿತಾಸಕ್ತಿಯನ್ನು ಎತ್ತಿಹಿಡಿಯುವ ಕೈ ಕೆಸರಾಗಿರುವವರ ಸಾಮರ್ಥ್ಯ ಮತ್ತು ಶ್ರಮಿಕರ ಆಡಳಿತದ ದಕ್ಷತೆಯನ್ನು ತೋರಿಸಿಕೊಟ್ಟಿತು.

## ಕಮ್ಯೂನಿನ ಮಿತಿಗಳು

ಕಮ್ಯೂನಿನ ಈ ನಾಯಕರು ಹಲವು ವಿವಿಧ ರೀತಿಯ ರಾಜಕೀಯ ಹಿನ್ನೆಲೆಯಿಂದ ಬಂದವರಾಗಿದ್ದರು. ಲೂಯಿ ಅಗಸ್ತೆ ಬ್ಲಾಂಕಿ, ಪಿಯರೆ–ಜೊಸೆಫ್ ಪ್ರೌಧಾನ್ ಮತ್ತು ಲೂಯಿ ಮಿಶೆಲ್ ಅವರ ಅನುಯಾಯಿಗಳು ಇದ್ದರು; ಕೆಲವರು ಮಾತ್ರ ಮಾರ್ಕ್ಸ್ ಅನುಯಾಯಿಗಳು ಮತ್ತು (ಕಾರ್ಮಿಕರ) ಅಂತರ್ರಾಷ್ಟ್ರೀಯದ ಸದಸ್ಯರಾಗಿದ್ದರು. ಅವರ ಹಲವು ನಿಲುವುಗಳಿಂದಾಗಿ ಕಮ್ಯೂನ್ ಹಲವು ಸುಧಾರಣೆಗಳ ಜಾರಿಗೆ ಮುಂದಾಯಿತು. ಆದರೆ ಒಟ್ಟಾರೆಯಾಗಿ ಒಂದು ಸ್ಪಷ್ಟ ಮತ್ತು ಸಮಗ್ರ ಕ್ರಿಯಾಯೋಜನೆ ಇರಲಿಲ್ಲ.

ಇಂತಹ ಒಂದು ಕಾರ್ಯಕ್ರಮದ ಅಭಾವ ಬ್ಯಾಂಕ್ ಆಫ್ ಫ್ರಾನ್ಸ್ ನ ಬಾಗಿಲಲ್ಲಿ ತೀಕ್ಷ್ಣವಾಗಿ ಬೆಳಕಿಗೆ ಬರುತ್ತದೆ. "ಮಾರ್ಚ್ 19ರಿಂದ ಬ್ಯಾಂಕಿನ ಗವರ್ನರುಗಳು ಮರಣದಂಡನೆಗೆ ಗುರಿಯಾದ ಕೈದಿಗಳಂತೆ ಭಂಡಾರದ 'ಮರಣದಂಡನೆ'ಯನ್ನು ನಿರೀಕ್ಷಿಸುತ್ತಿದ್ದರು" ಎಂದು ಲಿಸ್ಸಾಗರೆ ನೆನೆಸಿಕೊಳ್ಳುತ್ತಾರೆ. ನೂರಾರು ದಶಲಕ್ಷ ಫ್ರಾಂಕುಗಳಷ್ಟು ಅದರ ಗೋರಿಯಲ್ಲಿದ್ದಂತೆ ಬ್ಯಾಂಕಿನಲ್ಲಿದ್ದವು. ಇಷ್ಟು ಪ್ರಮಾಣದ ಹಣವನ್ನು ಪ್ರತಿಕ್ರಾಂತಿಯ ಕೇಂದ್ರವಾದ ವರ್ಸೆಲೆಸ್ ನ 'ಸುಭದ್ರ ಪ್ರದೇಶ'ಕ್ಕೆ ವರ್ಗಾಯಿಸುವುದರ ಬಗ್ಗೆ ಕಲ್ಪಿಸಿಕೊಳ್ಳುವುದೂ ಬ್ಯಾಂಕರುಗಳಿಗೆ ಕಷ್ಟಕರವಾಗಿತ್ತು. ಅವರ ಮೇಲೆ ಎಷ್ಟು ಒತ್ತಡ ಇತ್ತೆಂದರೆ ಬ್ಯಾಂಕಿನ ಗವರ್ನರ್ ಗುಸ್ತಾವ್ ರೌಲಾಂಡ್, ಪ್ಯಾರೀಸಿನಿಂದ ಓಡಿಹೋದ. ಅವನು ತನ್ನ ಸಹಾಯಕ ಅಲೆಕ್ಸಾಂಡ್ರೆ ಡಿ ಪ್ಲೌಕ್ ರ ಸುಪರ್ದಿನಲ್ಲಿ ಬ್ಯಾಂಕನ್ನು ಒಪ್ಪಿಸಿದ್ದ. ಡಿ ಪ್ಲೌಕ್ ಕಮ್ಯೂನಿನ ಚುನಾಯಿತ ಸದಸ್ಯರ ಮಿತಿಗಳನ್ನು ಬಲ್ಲವನಾಗಿದ್ದ. ಅವರಲ್ಲಿ ಹಲವರು ಅವನು ಕೊಡುವ ಅಂಕೆಸಂಖ್ಯೆಗಳು ಮತ್ತು ಮಾಹಿತಿಗಳನ್ನು ಭಯಮಿಶ್ರಿತ ಬೆರಗಿನಿಂದ ಕೇಳುವುದನ್ನು ಗಮನಿಸಿದ್ದ. ಅವನು ಅವರಿಗೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಮಾತ್ರ ಕೊಡುತ್ತಾ ಕಮ್ಯೂನ್ ಕೆಲಸ ವಿಸ್ತರಿಸಲು ಮತ್ತು ಅದು ವಿಫಲವಾಗುವುದನ್ನು ತಡೆಯುವಷ್ಟು ಹಣವಿದೆ ಎಂದು ಆಶ್ವಾಸನೆ ಕೊಡುತ್ತಿದ್ದ.

ಕಾರ್ಮಿಕರ ಅಂತರ್‍ರಾಷ್ಟ್ರೀಯ ಸಂಘದ ಸದಸ್ಯ ಮತ್ತು ಪ್ಯಾರೀಸ್ ಕಮ್ಯೂನ್ ಸರಕಾರದ ಹಿರಿಯ ಸದಸ್ಯರಾದ ಚಾರ್ಲ್ಸ್ ಬೆಸ್ಲೆ, ಬ್ಯಾಂಕರ್ ಡಿ ಪ್ಲೌಕ್ ನ್ನು ಭೇಟಿ ಮಾಡಲು ಹೋಗಿದ್ದ. ಬ್ಯಾಂಕು 'ನಿಮ್ಮ ದೇಶದ ಸೌಭಾಗ್ಯ'ವನ್ನು ಕಾಪಿಟ್ಟುಕೊಂಡಿದೆ. ಅದನ್ನು ಚರ್ಚಿನ ಆಸ್ತಿಗಿಂತ ಪವಿತ್ರ ಎಂದು ಪರಿಗಣಿಸಬೇಕು. ಆದರೆ ಚರ್ಚಿನ ಆಸ್ತಿಯಂತೆ ಅದನ್ನು ವಶಪಡಿಸಿಕೊಳ್ಳಲು ಹೋಗಬಾರದು ಎಂದು ಡಿ ಪ್ಲೌಕ್ ಕಿವಿಮಾತು ಹೇಳಿದ್ದನ್ನು ಕೇಳಿದ ಬೆಸ್ಲೆ ಹೊಟೇಲ್ ದ ವಿಲ್ಲೆ ಗೆ ವಾಪಸು ಓಡಿ ಬಂದು ಈ ಶರಣಾಗತಿಯ ಸಂದೇಶ ಅರುಹಿದ 'ಬ್ಯಾಂಕು ದೇಶದ ಸೌಭಾಗ್ಯ. ಅದಿಲ್ಲದೆ ಕೈಗಾರಿಕೆ ಇಲ್ಲ, ವಾಣಿಜ್ಯವಿಲ್ಲ. ಅದನ್ನು ಉಲ್ಲಂಘಿಸಿದರೆ ಅಲ್ಲಿರುವ ನೋಟುಗಳು ಬರಿಯ ಕಸ ಆಗಿ ಬಿಡುತ್ತವೆ." ಬ್ಯಾಂಕನ್ನು ವಶಪಡಿಸಿಕೊಂಡು, ಪ್ರಜಾಸತ್ತಾತ್ಮಕ ನಿಯಂತ್ರಣದಡಿ ತಂದು, ಅದನ್ನು ಸಾಮಾಜಿಕ ಒಳಿತಿಗೆ ಬಳಸಲು ಕಮ್ಯೂನ್ ಹಿಂಜರಿಯಿತು. 'ಅವರು ಪವಿತ್ರ ಬೆರಗು ಮತ್ತು ಗೌರವದೊಂದಿಗೆ ಬ್ಯಾಂಕ್ ಆಫ್ ಫ್ರಾನ್ಸ್ ನ ಗೇಟಿನ ಹೊರಗೆ ನಿಂತಿದ್ದನ್ನು ನನಗೆ ಅರ್ಥ ಮಾಡಿಕೊಳ್ಳುವುದು ನನಗೆ ಬಹಳ ಕಷ್ಟವಾಗುತ್ತದೆ."[5] ಎಂದು ಆ ಮೇಲೆ ಏಂಗೆಲ್ಸ್ ಬರೆದರು. ಕಮ್ಯೂನಿನ ನಾಯಕರ ಅರಿವಿನಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಕಾಲ್ಪನಿಕ ಸಮಾಜವಾದದ ರೂಪಗಳು, (ಬಂಡವಾಳಶಾಹಿ ಸಮಾಜದಲ್ಲಿ ಬ್ಯಾಂಕಿನ ಪಾತ್ರವನ್ನು), ಪ್ರಜಾಪ್ರಭುತ್ವಕ್ಕೆ ಹಣಕಾಸನ್ನು ಅಧೀನಗೊಳಿಸುವುದು ಮತ್ತು ಬೂರ್ಶ್ವಾ ವರ್ಗದ ಕೆಲಸ ಮಾಡುತ್ತಿರುವ ಹೃದಯವನ್ನು ಕಾರ್ಮಿಕ ವರ್ಗಕ್ಕೆ ವರ್ಗಾಯಿಸುವುದರ ಅಗತ್ಯವನ್ನು ಅರ್ಥ ಮಾಡಿಕೊಳ್ಳುವಲ್ಲಿ ಅವರಿಗೆ ತೊಡಕಾಗಿದ್ದವು ಎನ್ನುವ ಮೂಲಕ ಮಾತ್ರ ಇದನ್ನು ವಿವರಿಸಬಹುದು.

## ಪ್ರಭುತ್ವವನ್ನು ಪುಡಿಗಟ್ಟಿ

ಬ್ಯಾಂಕ್ ಆಫ್ ಫ್ರಾನ್ಸ್ ಕುರಿತು 'ಭಯಭಕ್ತಿ'ಯು ಫ್ರೆಂಚ್ ಪ್ರಭುತ್ವದ ಸಂರಚನೆಗಳಲ್ಲಿ ನಂಬಿಕೆಯಿಂದಾಗಿ ಅದರ ಜೊತೆಗೆ ಬಂದಿದ್ದಾಗಿತ್ತು. 1789ರ ಕ್ರಾಂತಿಯ ನಂತರ ಮುಂದಿನ ಕ್ರಾಂತಿಯನ್ನು ಮಾಡುವ ಯಾವುದೇ ಪ್ರಯತ್ನವು 'ಹಿಂದಿನ ಪ್ರಯತ್ನಗಳಂತೆ ಅಧಿಕಾರಶಾಹಿ–ಮಿಲಿಟರಿ ಯಂತ್ರವನ್ನು ಹಸ್ತಾಂತರ ಮಾಡುವ ಪ್ರಯತ್ನ ಯಾವತ್ತೂ ಆಗಿರುವುದಿಲ್ಲ, ಬದಲಿಗೆ ಅದನ್ನು ಪುಡಿಗಟ್ಟುವುದು ಆಗಿರುತ್ತದೆ' ಎಂದು 'ಲೂಯಿ ಬೊನಾಪಾರ್ಟೆಯ 18ನೇ ಬ್ರುಮೆರ್' ಎಂದು ಹೇಳಿದ್ದನ್ನುಮಾರ್ಕ್ಸ್ ಎಪ್ರಿಲ್ 12ರಂದು ಕುಗೆಲ್‌ಮನ್ ಗೆ ಬರೆದ ಪತ್ರದಲ್ಲಿ ನೆನಪಿಸಿದ್ದರು.

ವರ್ಗಗಳ ಕಟ್ಟುನಿಟ್ಟುಗಳು ಪ್ರಭುತ್ವದ ಸಂಸ್ಥೆಗಳಲ್ಲಿ, ಅಧಿಕಾರಿಗಳ ಸ್ವಭಾವಗಳಲ್ಲಿ, ಕಚೇರಿಗಳ ನಿಯಮ–ನಿರ್ಬಂಧಗಳಲ್ಲಿ ಜಡ್ಡುಗಟ್ಟಿರುತ್ತದೆ. ಎಪ್ಪತ್ತೆರಡು ದಿನಗಳಲ್ಲಿ ಅವುಗಳನ್ನು ಬದಲಾಯಿಸುವುದು ಖಂಡಿತ ಸಾಧ್ಯವಿರಲಿಲ್ಲ. ಕಮ್ಯೂನ್ ಅಂತಹ ಪ್ರಯತ್ನ ಮಾಡುವ ಗೋಜಿಗೂ ಹೋಗಲಿಲ್ಲ. ಕಮ್ಯೂನಿನ ಪತನದ ನಂತರ, ಮಾರ್ಕ್ಸ್ ಅಂತರ್‍ರಾಷ್ಟ್ರೀಯವನ್ನು ಉದ್ದೇಶಿಸಿ ಮಾತನಾಡುತ್ತಾ 'ಈಗ ಇರುವ ಸಿದ್ಧ ಪ್ರಭುತ್ವ ಯಂತ್ರವನ್ನು ಹಾಗೆನೇ ತೆಗೆದುಕೊಂಡು ಕಾರ್ಮಿಕ ವರ್ಗವು ತನ್ನ ಉದ್ದೇಶ ಸಾಧನೆಗೆ

5 Friedrich Engels, postscript to Karl Marx, *Civil War in France*, 1891.

ಬಳಸುವುದು ಸಾಧ್ಯವಿಲ್ಲ' ಎಂದು ಹೇಳಿದ್ದರು. ಪ್ರಭುತ್ವ ಯಂತ್ರವೇ ಪ್ರತಿಕ್ರಾಂತಿಯ ಟ್ರೋಜನ್–ಕುದುರೆ ಆಗುವ ಅಪಾಯದ ಕುರಿತು ಅವರು ಎಚ್ಚರಿಸಿದ್ದರು. ಸರಕಾರದ ಸದುದ್ದೇಶಗಳೇನೇ ಇರಲಿ, ಈ ಪ್ರಭುತ್ವ ಯಂತ್ರ ಜನತೆಯ ನಿರೀಕ್ಷೆಗಳಿಗೆ ಅದು ಬಗ್ಗಿ ಅದಕ್ಕೆ ವಿಧೇಯವಾಗಿರುವುದಿಲ್ಲ. ಎಂಬುದೇ ಇದಕ್ಕೆ ಕಾರಣ. ಏಂಗೆಲ್ಸ್ ಮಾರ್ಕ್ಸ ಅವರ ಈ ಭಾಷಣವನ್ನು ಕಿರುಪುಸ್ತಿಕೆಯನ್ನು ಪ್ರಕಟಿಸುವಾಗ ಬರೆದ ಮುನ್ನುಡಿಯಲ್ಲಿ ಈ ವಿಷಯವನ್ನು ಒತ್ತಿ ಹೇಳುತ್ತಾರೆ :

> *"ಕಾರ್ಮಿಕ ವರ್ಗ ಒಂದು ಬಾರಿ ಅಧಿಕಾರಕ್ಕೆ ಬಂದ ಮೇಲೆ ಹಳೆಯ ಪ್ರಭುತ್ವ ಯಂತ್ರವನ್ನು ಬಳಸಿ ತನ್ನ ಉದ್ದೇಶ ಸಾಧಿಸುವುದು ಸಾಧ್ಯವಿಲ್ಲ. ಆದ್ದರಿಂದ ಈಗ ತಾನೇ ಗೆದ್ದುಕೊಂಡಿರುವ ಅಧಿಪತ್ಯ ಕಳೆದುಕೊಳ್ಳದಿರಬೇಕಾದರೆ, ಈ ಕಾರ್ಮಿಕ ವರ್ಗ ಒಂದು ಕಡೆ ತನ್ನ ವಿರುದ್ಧವೇ ಬಳಸಲಾದ ಈ ದಮನಯಂತ್ರವನ್ನು ಕಳಚಿ ಹಾಕಬೇಕು. ಇನ್ನೊಂದು ಕಡೆ ಯಾರನ್ನೂ ಬಿಡದಂತೆ ತನ್ನದೇ ಎಲ್ಲ ಸಹಾಯಕರು ಮತ್ತು ಅಧಿಕಾರಿಗಳನ್ನು ಯಾವುದೇ ಕ್ಷಣದಲ್ಲಿ ಹಿಂತೆಗೆಯಬಹುದು ಎಂಬ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಬೇಕು. ಇದನ್ನು ಕಮ್ಯೂನ್ ಆರಂಭದಿಂದಲೇ ಗುರುತಿಸಲೇಬೇಕಾಗಿ ಬಂದಿತ್ತು."*

ಆ ನಂತರ, ಏಂಗೆಲ್ಸ್ ಇನ್ನೊಂದು ಸೈದ್ಧಾಂತಿಕ ತೀರ್ಮಾನಕ್ಕೆ ಬಂದರು, "ವಾಸ್ತವವಾಗಿ, ಪ್ರಭುತ್ವ ಒಂದು ವರ್ಗವು ಇನ್ನೊಂದು ವರ್ಗವನ್ನು ದಮನ ಮಾಡಲು ಬಳಸುವ ಯಂತ್ರವಲ್ಲದೆ ಮತ್ತೇನೂ ಅಲ್ಲ. ಇದು ರಾಜಪ್ರಭುತ್ವದಷ್ಟೇ, ಪ್ರಜಾಸತ್ತಾತ್ಮಕ ಗಣತಂತ್ರದಲ್ಲೂ ನಿಜ.'

ಎರಡು ದಶಕಗಳ ನಂತರ, 1917ರ ಅಕ್ಟೋಬರ್ ಕ್ರಾಂತಿಯ ಸಂದರ್ಭದಲ್ಲಿ ಲೆನಿನ್ ಕಮ್ಯೂನ್ ಕುರಿತು ಮಾರ್ಕ್ಸ್ ಅವರ ಭಾಷಣವನ್ನು ಮತ್ತೆ ಮತ್ತೆ ಓದಿ ಕಾರ್ಮಿಕ ವರ್ಗವು ಅಧಿಕಾರ ವಹಿಸಿಕೊಂಡಾಗ ಪಡೆಯುವ ಪ್ರಭುತ್ವ ಯಂತ್ರದ ಅಪಾಯಗಳ ಕುರಿತು ಚಿಂತನೆ ನಡೆಸಿದರು. ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಅಲ್ಲ, ಆದರೆ ಹಳೆಯ ಪ್ರಭುತ್ವದ ಸಂಸ್ಥೆಗಳನ್ನು ಪುಡಿಗಟ್ಟಿ ಶ್ರಮಜೀವಿಗಳ ಆಡಳಿತದ ಹೊಸ ರೂಪಗಳನ್ನು ಜಾರಿಗೆ ತರಬೇಕು ಎಂದು ಸೂಚಿಸಿದರು. ಝಾರ್ ಸಾಮ್ರಾಟನ ವಿರುದ್ಧ 1905ರ ಕ್ರಾಂತಿಯ ಸಂದರ್ಭದಲ್ಲಿ ಪ್ರಾತಿನಿಧಿಕ ಸರಕಾರ ಮತ್ತು ಆಡಳಿತಗಳ ಒಂದು ರೂಪವಾದ ಸೋವಿಯೆಟ್ ಅನ್ನು ಕಟ್ಟಿಕೊಂಡಿದ್ದರು. ಲೆನಿನ್ 1908ರಲ್ಲಿ, ಕಮ್ಯೂನ್ ಮತ್ತು 1905ರ ಕ್ರಾಂತಿಯ ಕುರಿತು ಬರೆಯುತ್ತಾ ಹೀಗೆಂದರು, 'ಸಮಾಜವಾದಿ ಕ್ರಾಂತಿಯ ಕರ್ತವ್ಯಗಳನ್ನು ನಿರ್ದಿಷ್ಟವಾಗಿ ಮುಂದಿಡಬೇಕೆಂದು ಕಮ್ಯೂನ್ ಯುರೋಪಿನ ಕಾರ್ಮಿಕ ವರ್ಗಕ್ಕೆ ಕಲಿಸಿತು; ಒಂದು ಕ್ರಾಂತಿಯು ಪ್ರಜಾಪ್ರಭುತ್ವದ ತಕ್ಷಣದ ಆಕಾಂಕ್ಷೆಗಳನ್ನು ಈಡೇರಿಸಬೇಕು ಮತ್ತು ಮಾನವ ಅಗತ್ಯಗಳನ್ನು ಪೂರೈಸಬೇಕು.[6] ಸೋವಿಯೆಟ್ ಕಮ್ಯೂನಿಗಿಂತ ಹೆಚ್ಚು ಮುಂದುವರೆದ (ಶ್ರಮಜೀವಿಗಳ

6 V. I. Lenin, 'Lessons of the Commune', *Zagranichnaya Gazeta*, no. 2, March 1908.

ಪ್ರಾತಿನಿಧಿಕ ಸರಕಾರ ಮತ್ತು ಆಡಳಿತಗಳ) ರೂಪವಾಗಿತ್ತು, ಆದರೆ ಕಮ್ಯೂನ್ ಸ್ವತಃ (ಈ ನಿಟ್ಟಿನಲ್ಲಿ) ಅಗಾಧ ಪ್ರಗತಿಯನ್ನು ಸಾಧಿಸಿತ್ತು. ಲೆನಿನ್ ತಮ್ಮ 'ಪ್ರಭುತ್ವ ಮತ್ತು ಕ್ರಾಂತಿ' ಎಂಬ ಕೃತಿಯಲ್ಲಿ, ಕಮ್ಯೂನಿನ ಪ್ರಜಾಸತ್ತಾತ್ಮಕ ಕಾರ್ಯವಿಧಾನಗಳ ಕುರಿತು ಹೀಗೆಂದಿದ್ದಾರೆ :

> *"ಹಾಗಾಗಿ ಕಮ್ಯೂನ್, ಪುಡಿಗಟ್ಟಲಾದ ಪ್ರಭುತ್ವ ಯಂತ್ರದ ಸ್ಥಾನದಲ್ಲಿ ಇನ್ನೂ ಹೆಚ್ಚಿನ ಪೂರ್ಣವಾದ ಪ್ರಜಾಪ್ರಭುತ್ವವನ್ನು 'ಮಾತ್ರವೇ' ಸಾಧಿಸಿತು: ಸ್ಥಾಯೀ ಸೈನ್ಯದ ರದ್ದತಿ; ಎಲ್ಲ ಅಧಿಕಾರಿಗಳು ಚುನಾಯಿತರಾಗಿರಬೇಕು ಮತ್ತು ಹಿಂತೆಗೆಯಲ್ಪಡಲು ಬದ್ಧರಾಗಿರಬೇಕು. ಆದರೆ ವಾಸ್ತವವಾಗಿ, ಕೆಲವು ಸಂಸ್ಥೆಗಳ ಸ್ಥಳದಲ್ಲಿ ಇತರ ಮೂಲಭೂತವಾಗಿ ಭಿನ್ನವಾದ ಸಂಸ್ಥೆಗಳನ್ನು ಸ್ಥಾಪಿಸುವ ಅಗಾಧ ಬದಲಾವಣೆಯಾಗಿ 'ಮಾತ್ರವೇ' ಇದನ್ನು ಅರ್ಥೈಸಬಹುದು. ಇದು 'ಪರಿಮಾಣಾತ್ಮಕ ಬದಲಾವಣೆಗಳು ಗುಣಾತ್ಮಕ ಬದಲಾವಣೆಗೆ ಕಾರಣವಾಗುವ ಒಂದು ಪ್ರಕರಣ' ಎಂದು ನಿಖರವಾಗಿ ಹೇಳಬಹುದು:ಸಮಗ್ರವಾಗಿ ಮತ್ತು ಸಾಧ್ಯವಾದಷ್ಟು ಸುಸಂಗತವಾಗಿ, ಬೂರ್ಜ್ವಾ ಪ್ರಜಾಪ್ರಭುತ್ವವನ್ನು ಶ್ರಮಜೀವಿ ಪ್ರಜಾಪ್ರಭುತ್ವವಾಗಿ ಬದಲಾಯಿಸುವುದು; (ಒಂದು ನಿರ್ದಿಷ್ಟ ವರ್ಗವನ್ನು ದಮನ ಮಾಡುವ ವಿಶೇಷ ಶಕ್ತಿಯಾದ) ಪ್ರಭುತ್ವವನ್ನು ಪ್ರಭುತ್ವವಲ್ಲದ ಶಕ್ತಿಯೊಂದನ್ನಾಗಿ ಬದಲಾಯಿಸುವುದು."*

ಕಮ್ಯೂನ್ ಕುರಿತು ಚಿಂತನೆ ನಡೆಸುತ್ತಾ, ಕುಗೆಲ್‌ಮನ್ ಗೆ ಮಾರ್ಕ್ಸ್ ಹೀಗೆಂದು ಬರೆದರು: 'ಇಂತಹ ಮಹಾನತೆಯ ಉದಾಹರಣೆಗಳೇ ಚರಿತ್ರೆಯಲ್ಲಿ ಇಲ್ಲ.' ಆದರೆ ಅವರು ಇಲ್ಲಿ ತಪ್ಪೆಸಗಿದ್ದರು. ಬಂಡವಾಳಶಾಹಿಯ ವಿರುದ್ಧ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ದಮನಕಾರಿ ಪ್ರಭುತ್ವವನ್ನು ಮೀರಿ ನಿಂತು ಹೊಸ ಪ್ರಜಾಸತ್ತಾತ್ಮಕ ರೂಪಗಳನ್ನು ಸ್ಥಾಪಿಸುವ ಪರಾಕ್ರಮಶಾಲಿ ಮತ್ತು ಸೃಜನಶೀಲ ಪ್ರಯತ್ನಗಳು ಹಲವಾರು ಇವೆ. 18ನೇ ಶತಮಾನದಲ್ಲಿ, ಹೈತಿಯ ಬಂಡವಾಳಶಾಹಿ ಪ್ಲಾಂಟೇಶನುಗಳ ಕಾರ್ಮಿಕ ವರ್ಗ ಪ್ಲಾಂಟರ್ ಆಳ್ವಿಕೆಯ ವಿರುದ್ಧ ಬಂಡೆದ್ದು ವಿಮೋಚನೆ ಪಡೆದು ಆಡಳಿತದ ಹೊಸ ರೂಪಗಳನ್ನು ಸೃಷ್ಟಿಸುವ ಪ್ರಯತ್ನಗಳನ್ನು ಮಾಡಿತ್ತು. ಅವುಗಳಲ್ಲಿ ಕೆಲವು, ಹಿಂದೆ ಪ್ಲಾಂಟರುಗಳ ಗುಲಾಮಗಿರಿಯಿಂದ ಓಡಿ ಹೋಗಿ ನಿರ್ಜನ ಪ್ರದೇಶಗಳಲ್ಲಿ ತಮ್ಮದೇ ಸಮಾನತಾ ಸಮುದಾಯಗಳನ್ನು ಕಟ್ಟಿಕೊಂಡಿದ್ದ ಕಾರ್ಮಿಕರ ಮಾದರಿಗಳಿಂದ ಆಯ್ದುಕೊಂಡಿದ್ದರು. ಇಂತಹ ಅನುಭವಗಳು ಶ್ರಮಜೀವಿಗಳ ದಂಗೆಯ ನಡುವೆ ಪ್ರಜಾಸತ್ತಾತ್ಮಕ ಸಂಘಟನೆಯ ಪ್ರವೃತ್ತಿಗಳ ಅರಿವನ್ನು ಶ್ರೀಮಂತಗೊಳಿಸುತ್ತವೆ. ಹೈತಿಯನ್ ಕ್ರಾಂತಿ(1804)ಯಿಂದ ಶಾಂಘಾಯ್ ಕಮ್ಯೂನ್ (1927)ನವರೆಗೆ ಇಂತಹ ಪ್ರಯೋಗಗಳ ಪರಂಪರೆಯೇ ಇದೆ. ಈ ಉದಾಹರಣೆಗಳನ್ನು ನಾವು ಆಳವಾಗಿ ಅಧ್ಯಯನ ಮಾಡಬೇಕಾಗಿದೆ. ಇಂತಹ ಅಧ್ಯಯನಗಳಿಂದ ಶ್ರಮಜೀವಿ ಕ್ರಾಂತಿಗಳ ಚಲನಶೀಲತೆಯ ಕೊರತೆಗಳನ್ನು ಅರ್ಥಮಾಡಿಕೊಂಡು ಶ್ರಮಜೀವಿ ಪ್ರಜಾಪ್ರಭುತ್ವವನ್ನು ಹೇಗೆ ಇನ್ನಷ್ಟು ಉತ್ತಮವಾಗಿ ಕಟ್ಟಬಹುದು ಎಂದು ಯೋಜಿಸಬಹುದು.

## ನಿಂತು ಹೋದ ಕ್ರಾಂತಿಗಳು

ಕಾರ್ಮಿಕರು ಪ್ಯಾರೀಸ್ ವಶಪಡಿಸಿಕೊಂಡಾಗ, ಬ್ಯಾಂಕುಗಳನ್ನು ವಶಪಡಿಸಿಕೊಳ್ಳಲಿಲ್ಲ. ಇನ್ನಷ್ಟು ಪಡೆಗಳಿಂದ ಶಕ್ತಿ ಹೆಚ್ಚಿಸಿಕೊಂಡು ಬೂರ್ಶ್ವಾ ಸರಕಾರವು ಶರಣಾಗುವಂತೆ (ಅವರ ಕೇಂದ್ರವಾಗಿದ್ದ) ವರ್ಸಾಲೆಸ್ ಗೆ ದಂಡೆತ್ತಿ ಹೋಗಲಿಲ್ಲ. ಅಡೋಲ್ಫ್ ತೀಯರ್ಸ್ ಸರಕಾರಕ್ಕೆ ಸವಾಲು ಹಾಕದೆ ಅಧಿಕಾರದಲ್ಲಿ ಉಳಿಯುವಂತೆ ಬಿಟ್ಟು, ತನ್ನದೇ ನಾಶಕ್ಕೆ ನಾಂದಿ ಹಾಡಿತ್ತು. (1871) ಎಪ್ರಿಲ್ ಮಧ್ಯದ ಹೊತ್ತಿಗೆ ಕಮ್ಯೂನ್ ಆರಂಭವಾಗಿ ಕೆಲವೇ ವಾರಗಳಲ್ಲಿ, ಮಾರ್ಕ್ಸ್ ಕುಪಿತರಾಗಿ ಕುಗೆಲ್‌ಮನ್ ಗೆ ಹೀಗೆ ಪತ್ರ ಬರೆದಿದ್ದರು:

> *"ಅವರು ಪರಾಜಿತರಾದರೆ, ಅವರ ಒಳ್ಳೆತನವನ್ನಷ್ಟೇ ಹಳಿಯಬಹುದು. ವಿನೊಯ್ (ವರ್ಸಾಲೆಸ್ ಪಡೆಗಳ ಮುಖ್ಯಸ್ಥ) ಮತ್ತು ಪ್ಯಾರೀಸ್ ನೇಶನಲ್ ಗಾರ್ಡಿನ ಪ್ರತಿಗಾಮಿ ವಿಭಾಗ ಹಿಮ್ಮೆಟ್ಟಿದ ಕೂಡಲೇ ವರ್ಸಾಲೆಸ್ ಮೇಲೆ ದಂಡೆತ್ತಿ ಹೋಗಬೇಕಿತ್ತು. ಸರಿಯಾದ ಕ್ಷಣ ಶುದ್ಧ ಅಂತಃಕರಣದ ಅಳುಕುಗಳಿಂದಾಗಿ ತಪ್ಪಿ ಹೋಯಿತು. ಅವರು ಅಂತರ್ಯುದ್ಧವನ್ನು ಆರಂಭಿಸಲು ಇಚ್ಛಿಸಲಿಲ್ಲ. ಆ ಕಿಡಿಗೇಡಿ ಥಿಯರ್ಸ್ ಪ್ಯಾರಿಸನ್ನು ನಿಶ್ಶಸ್ತ್ರಗೊಳಿಸಲು ಈಗಾಗಲೇ ಅಂತರ್ಯುದ್ಧವನ್ನು ಆರಂಭಿಸಿದ್ದಾನೆ ಎಂಬುದು ಅವರಿಗೆ ಹೊಳೆಯಲಿಲ್ಲವೇಕೆ?"*

ಕಮ್ಯೂನಿನ ನಿಷ್ಕ್ರಿಯತೆ ಪ್ರತಿಗಾಮಿ ಸರಕಾರ ಮತ್ತು ಸೈನ್ಯವನ್ನು ವರ್ಸಾಲೆಸ್ ಗೆ ತೆಗೆದುಕೊಂಡು ಹೋಗಲು ಥಿಯರ್ಸ್ ಗೆ ಅವಕಾಶ ಮಾಡಿಕೊಟ್ಟಿತು. ಕಮ್ಯುನಾರ್ಡರು ವರ್ಸಾಲೆಸ್ ಪಡೆಗಳನ್ನು ಪ್ಯಾರೀಸ್ ಬಿಟ್ಟು ಹೋಗಲು ಅವಕಾಶ ಕೊಡಬಾರದಿತ್ತು. ಅವರನ್ನು ಪ್ಯಾರೀಸಿನಲ್ಲಿಯೇ ಕಟ್ಟಿ ಹಾಕಿದ್ದರೆ ಬಹುಪಾಲು ಸೈನಿಕರನ್ನು ಕಮ್ಯೂನ್ ಪರವಾಗುವಂತೆ ಗೆದ್ದುಕೊಳ್ಳಬಹುದಿತ್ತು. ಆದರೆ ಇದು ಆಗಲಿಲ್ಲ.

ಈ ಪಾಠ ಇತರ ಕ್ರಾಂತಿಕಾರಿಗಳ ಮೇಲೆ ಗಾಢ ಅಚ್ಚುಮೂಡಿಸಿತ್ತು. ಅಕ್ಟೋಬರ್ ಕ್ರಾಂತಿಯ ನಂತರ, ತಾವು ವಶಪಡಿಸಿಕೊಂಡ ಅಧಿಕಾರವನ್ನು, ಹಳೆಯ ಪ್ರತಿಗಾಮಿ ವರ್ಗಗಳಿಂದ ಮತ್ತು ಸಾಮ್ರಾಜ್ಯಶಾಹಿ ಸೈನ್ಯಗಳಿಂದ ರಕ್ಷಿಸಲು, ಸೋವಿಯೆಟ್ ಗಳು ಕಾರ್ಮಿಕರ ಮತ್ತು ರೈತರ ಕೆಂಪು ಸೈನ್ಯವನ್ನು ಸ್ಥಾಪಿಸಿದವು. ಪ್ರತಿಗಾಮಿ ವರ್ಗಗಳ ಮತ್ತು ಸಾಮ್ರಾಜ್ಯಶಾಹಿಗಳ ವಿರೋಧವನ್ನು ಛಿದ್ರಗೊಳಿಸಿ ತಮ್ಮ ಬಲವನ್ನು ಹೆಚ್ಚಿಸದಿದ್ದರೆ, ಕ್ರಾಂತಿಯು ನಾಶವಾಗುತ್ತದೆ ಎಂಬುದು ಅವರಿಗೆ ಸ್ಪಷ್ಟವಾಗಿತ್ತು. ಇದು ಪ್ಯಾರೀಸ್ ಕಮ್ಯೂನ್ ಅವಶೇಷಗಳಿಂದ ಕಲಿತ ಪ್ರಮುಖ ಪಾಠ.

ಥೀಯರ್ಸ್ ಪ್ರಶ್ಯದ ಜೊತೆ ಮಾತುಕತೆ ನಡೆಸಿ ಬಂಧಿಯಾಗಿದ್ದ ಫ್ರೆಂಚ್ ಸೈನಿಕರನ್ನು ಬಿಡುಗಡೆ ಮಾಡಿ ಅವರನ್ನು ಸಂಘಟಿಸಿ ಪ್ಯಾರೀಸಿನ ಮೇಲೆ ಆಕ್ರಮಣ ನಡೆಸಿದರು. ಕಮ್ಯುನಾರ್ಡರ ಬರಲಿರುವ ದಾಳಿಗೆ ತಯಾರಿ ನಡೆಸಿ ತಡೆಗೋಡೆಗಳನ್ನು ನಿರ್ಮಿಸಿದರು. ಕೊನೆಗೂ ಮೇ 22 ಮತ್ತು 28ರ ನಡುವೆ ದಾಳಿ ಬಂದಾಗ ಅವರು ಪ್ಯಾರೀಸಿನ ಮೇಲೆ ನಿಯಂತ್ರಣ ಉಳಿಸಿಕೊಳ್ಳಲು ಆಗಲಿಲ್ಲ. ಪ್ರತಿಯೊಂದು ಬೀದಿ ರಣರಂಗವಾಯಿತು. ಆದರೆ ಪ್ರತಿಯೊಂದು ಕಾಳಗದಿಂದ ಹಿಂದೆ ಹಿಂದೆ ಸರಿಯುತ್ತಾ

ನಗರದೊಳಗೆ ಆಳವಾಗಿ ಹಿಮ್ಮೆಟ್ಟಬೇಕಾಯಿತು. ಬೂರ್ಶ್ವಾ ಸೈನ್ಯ ಅತ್ಯಂತ ಕ್ರೂರವಾಗಿತ್ತು. ಕಮ್ಯುನಾರ್ಡ್ ಹೋರಾಟಗಾರರನ್ನು ಕಂಡ ಕಂಡಲ್ಲಿ ಕೊಲ್ಲಲಾಯಿತು. ಬೀದಿಯಲ್ಲಿ ರಕ್ತದ ನದಿಯೇ ಹರಿಯಿತು. ವರ್ಸಾಲೆಸ್ ಸೈನ್ಯ ತನ್ನನ್ನು 'ವಧಾಗೃಹದ ಕೊಲೆಗಡುಕರ ತುಕಡಿಯಾಗಿ' ಪರಿವರ್ತಿಸಿಕೊಂಡತ್ತಿತ್ತು ಎಂದು ಲಿಸ್ಸಾಗರೆ ಬರೆದರು. ಮೊನ್‌ಮಾತ್ರಾ ದಲ್ಲಿ, ಕಮ್ಯುನಾರ್ಡರ ಮಹಿಳಾ ಬಟಾಲಿಯನ್ ಗಂಟೆಗಳ ಕಾಲ ಪ್ರತಿರೋಧ ಒಡ್ಡಿತು. ಜನರಲ್ ಜಸ್ಟಿನ್ ಕ್ಲಿಂಚೆಂಟ್ ಅವರ ಸೈನ್ಯ ಅವರ ಪ್ರತಿರೋಧ ಮುರಿದು ಮುದುವರೆಯಿತು. ಆ ಪ್ರದೇಶದ ಕ್ಯೂನ್ ನಾಯಕರನ್ನು ಸೈನ್ಯದ ಕಮಾಂಡರ್ ಮುಂದೆ ತರಲು ಆಜ್ಞೆ ಮಾಡಲಾಯಿತು. ನೀನು ಯಾರು ಎಂದು ಕಮಾಂಡರ್ ಕೇಳಿದ. 'ಲೆವೆಕ್, ಮೇಸ್ತ್ರಿ, ಕೇಂದ್ರ ಸಮಿತಿಯ ಸದಸ್ಯ' ಎಂಬ ಉತ್ತರ ಬಂತು. 'ಪ್ಯಾರೀಸಿನ ಆಡಳಿತವನ್ನು ಒಬ್ಬ ಮೇಸ್ತ್ರಿ ನಿರ್ವಹಿಸಲು ಪ್ರಯತ್ನಿಸುತ್ತಿದ್ದಾನೆ' ಎಂದು ವ್ಯಂಗ್ಯವಾಗಿ ಹೇಳಿದ. ಕಾರ್ಮಿಕರ ಬಗ್ಗೆ ಬೂರ್ಶ್ವಾಗಳ ತಿರಸ್ಕಾರದ ಮಟ್ಟ ಅಷ್ಟಿತ್ತು. ಲೆವೆಕ್ ನ ಮುಖದ ಮೇಲೆ ಗುಂಡು ಹೊಡೆದು ಸಾಯಿಸಲಾಯಿತು.

ವಶಪಡಿಸಿಕೊಳ್ಳಲಾದ ಕಮ್ಯುನಾರ್ಡರನ್ನು ಪೆರೆ ಲಾಶಾಯಿಸ್ ಸ್ಮಶಾನಕ್ಕೆ ಒಯ್ದು ಅಲ್ಲಿ ಸಾಲಾಗಿ ನಿಲ್ಲಿಸಿ ಗುಂಡಿಟ್ಟು ಕೊಲ್ಲಲಾಯಿತು. ಜನರಲ್ ಗಾಸ್ಟನ್ ಅಲೆಕ್ಸಾಂಡ್ರೆ ಅಗಸ್ತೆ, ಮಾಕಿಸ್ ಡಿ ಗಾಲ್ಲಿಫೆಟ್ ಈ ಕೊಲೆಡುಕರ ನಾಯಕತ್ವ ವಹಿಸಿದ್ದರು. ಮುಂದೆ ಅವರನ್ನು ಅಲ್ಜೀರಿಯಾ ದಲ್ಲಿ ಉತ್ತರ ಆಫ್ರಿಕಾದಲ್ಲಿ ಫ್ರೆಂಚ್ ಸಾಮ್ರಾಜ್ಯವನ್ನು ವಿಸ್ತರಿಸಲು ಕಳಿಸಲಾಯಿತು. ಅಲ್ಲಿ ಅವರು ಕಮ್ಯುನಾರ್ಡರ ಮೇಲೆ ಪ್ರಯೋಗಿಸಿ ಕಲಿತ ಕ್ರೂರ ಕೌಶಲಗಳನ್ನು ಅಲ್ಲಿಯ ಜನರ ಮೇಲೆ ಬಳಸಿದರು. ಈ ಪೆರೆ ಲಾಶಾಯಿಸ್ ಸ್ಮಶಾನದಲ್ಲಿ ಕಮ್ಯುನಾರ್ಡರ ರಕ್ತದಿಂದ ಒದ್ದೆಯಾದ ಮತ್ತು 150 ವರ್ಷಗಳ ನಂತರ ಇನ್ನೂ ಕಾಣುವ ಬುಲೆಟ್ ಮಾಡಿದ ತೂತುಗಳು ಕಾಣಸಿಗುವ 'ಕಮ್ಯುನಾರ್ಡರ ಗೋಡೆ' ಇಂದಿಗೂ ಕಾಣಸಿಗುತ್ತದೆ. ಒಂದೇ ವಾರದಲ್ಲಿ ವರ್ಸಾಲೆಸ್ ಪಡೆ 40 ಸಾವಿರ ಪ್ಯಾರೀಸಿಯನ್ನರ ನರಮೇಧ ನಡೆಸಿತು. 'ಇಷ್ಟು ದೊಡ್ಡ ಸಂಖ್ಯೆಯ ಹೆಣಗಳನ್ನು ಮಣ್ಣು ಮಾಡುವುದು ಕಷ್ಟಸಾಧ್ಯವಾಯಿತು. ಹೆಣಗಳನ್ನು ತಡೆಗೋಡೆಗಳ ಸಾಮಗ್ರಿಯಿಂದ ಸುಡಲು ಪ್ರಯತ್ನಿಸಲಾಯಿತು. ಅವು ಸರಿಯಾಗಿ ಅರೆಬೆಂದು ಹೆಣಗಳು ಹಿಪ್ಪೆಯಾದವು. ಆ ನಂತರ ಬಟೆಸ್ ಶಾಮೊ ದಲ್ಲಿ ಹೆಣಗಳನ್ನು ರಾಶಿ ಹಾಕಿ ಪೆಟ್ರೋಲಿನಿಂದ ಸುಡಲಾಯಿತು.' ಎಂದು ಲಿಸಾಗಾರೆ ಬರೆಯುತ್ತಾರೆ.

ಅಡೊಲ್ಫ್ ಥಿಯರ್ಸ್ ರಕ್ತಸಿಕ್ತ ಬೀದಿಗಳ ಸರ್ವೇ ಮಾಡಿ ಘೋಷಿಸಿದ, "ಪ್ಯಾರೀಸಿನ ಮಣ್ಣು ಅವರ ಹೆಣಗಳಿಂದ ಮುಚ್ಚಿ ಹೋಗಿದೆ. ಈ ಭೀಕರ ದೃಶ್ಯ ತಾವು ಇನ್ನೂ ಪ್ಯಾರೀಸ್ ಕಮ್ಯುನ್ ಪರ ಎಂದು ಯಾರೇ ಬಂಡುಕೋರರು ಹೇಳಿಕೊಳ್ಳಲು ಧೈರ್ಯ ಮಾಡುವವರಿಗೆ ದಿಗಿಲು ಹುಟ್ಟಿಸಬಲ್ಲುದು." ಇದು ಮೇ 25ರಂದು ಆಗಿತ್ತು. ಮೂರು ದಿನಗಳ ನಂತರ, ಮೇ 28ರಂದು ಕಮ್ಯೂನ್ ನ ಪತನವಾಯಿತು.

## ಪ್ರತಿ ಸೋಲೂ ಕಾರ್ಮಿಕ ವರ್ಗಕ್ಕೆ ಶಿಕ್ಷಣವಾಗಿರುತ್ತದೆ

ಕಮ್ಯೂನ್ ಎರಡುವರೆ ತಿಂಗಳು ಮಾತ್ರವಿತ್ತು. ಕಮ್ಯುನಾರ್ಡರ ಹೆಣಗಳ ಮೇಲೆ, ಪ್ರಾನ್ಸಿನ ಬೂರ್ಶ್ವಾ ವರ್ಗ ಭಾರೀ ಗಾತ್ರದ 'ಸಾಕರ್ ಕೋರ್' (ಪವಿತ್ರ ಹೃದಯ)

ಎಂಬ ಹೆಸರಿನ ಚರ್ಚ(ಬೆಸ್ಲಿಕಾ)ನ್ನು ಕಟ್ಟಿತು. ಇದನ್ನು 'ಪ್ಯಾರೀಸ್ ಕಮ್ಯೂನಿನ ಅಪರಾಧಗಳ ಪ್ರಾಯಶ್ಚಿತ್ತಕ್ಕಾಗಿ' ಕಟ್ಟಲಾಯಿತು ಎಂದು ಇದನ್ನು ಕಟ್ಟಿದ ಕ್ಯಾಥೊಲಿಕ್ ಚರ್ಚು ಹೇಳಿದೆ. ಪ್ಯಾರೀಸ್ ನ ವಿಹಂಗಮ ನೋಟ ಕಾಣುವ ಈ ಅಗಾಧ ಚರ್ಚಿನ ಕೇಳಗಿರುವ ಭೀಕರ ಚರಿತ್ರೆಯ ಕುರಿತು ಯಾವುದೇ ಸುಳಿವಿಲ್ಲ. ಬೂರ್ಶ್ವಾ ವರ್ಗವು ಕಮ್ಯೂನು ಸ್ಥಾಪನೆಯ ದಂಗೆಯನ್ನು ಒಂದು ಪಾಪ ಮತ್ತು ಕಮ್ಯುನಾರ್ಡರ ಸಾವಿಗೆ ಅವರೇ ಕಾರಣ ಎಂದು ಪರಿಗಣಿಸುತ್ತದೆ. ಬಂಡಾಯ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಬೂರ್ಶ್ವಾ ವರ್ಗವು ಕಾರ್ಮಿಕ ವರ್ಗ ಹೋರಾಟದ ಮೂಲಕ ಪಡೆದ ಅದರ ಸಾರ್ವಭೌಮತೆಯನ್ನು ಕಸಿದುಕೊಂಡು ತನ್ನ ಅಧಿಪತ್ಯದ ವ್ಯವಸ್ಥೆಯನ್ನು ಮತ್ತೆ ಸ್ಥಾಪಿಸಲುಬಂಡಾಯದ ಕೊಲೆಮಾಡಿತು. ಪ್ಯಾರೀಸ್ ಕಮ್ಯೂನ್ ಪ್ರತಿನಿಧಿಸಿದ ಪ್ರಜಾಸತ್ತಾತ್ಮಕ ಮುನ್ನಡೆಯನ್ನು ಪಕ್ಕಕ್ಕೆ ತಳ್ಳಿತು, ಅದರ ನೆನಪನ್ನು ಅಗಾಧ ಚರ್ಚಿ(ಬೆಸ್ಲಿಕಾ)ನ ಕೆಳಗೆ ಹೂತು ಹಾಕಿತು.

ಕುಗೆಲ್‌ಮನ್‌ಅವರಿಗೆ ಮಾರ್ಕ್ಸ್ ಅವರ ಪತ್ರಗಳ ಸಂಕಲನಕ್ಕೆ ಒಂದು ಮುನ್ನುಡಿಯಲ್ಲಿ ಲೆನಿನ್ ಹೀಗೆ ಬರೆಯುತ್ತಾರೆ, "ಈಡೇರುವ ಸಾಧ್ಯತೆಯೇ ಇಲ್ಲದವು ಸೇರಿದಂತೆ ಒಂದು ಜನತೆಯ ಹೋರಾಟ, ಅವರ ಮುಂದಣ ಶಿಕ್ಷಣಕ್ಕಾಗಿ, ಮುಂದಣ ಹೋರಾಟಕ್ಕೆ ತರಬೇತಿಯಾಗಿ, ಇತಿಹಾಸದ ಹಲವು ಕ್ಷಣಗಳಲ್ಲಿ ಅಗತ್ಯವಾಗುತ್ತದೆ ಎಂಬುದನ್ನು ಮಾರ್ಕ್ಸ್ ಒಪ್ಪುತ್ತಾರೆ.'[7]ಪ್ಯಾರೀಸಿನ ಅಥವಾ ಫ್ರಾನ್ಸಿನ ಕಾರ್ಮಿಕರಿಗೆ ಮಾತ್ರವಲ್ಲ, ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗಕ್ಕೂ ಕಮ್ಯೂನಿನ ಪಾಠ ಅಗತ್ಯ. ಮನುಕುಲದ ಸಂದಿಗ್ಧಗಳನ್ನು ಪರಿಹರಿಸಲು ಮತ್ತು ಸಮಾಜವಾದದತ್ತ ಮುನ್ನಡೆಯಲು ನಮ್ಮೆಲ್ಲರ ಹೋರಾಟಗಳಿಗೆ ಬೇಕಾದ ಸ್ವ–ಶಿಕ್ಷಣದ ಪಾಠ ಕೂಡಾ. ಪ್ಯಾರೀಸ್ ಕಮ್ಯೂನಿನ 40ನೇ ವಾರ್ಷಿಕೋತ್ಸವದ ಸಂದರ್ಭಲ್ಲಿ 1911ರಲ್ಲಿ ಅದರ ಕುರಿತು ಲೆನಿನ್ ಹೀಗೆ ಬರೆದರು, "ಕಮ್ಯೂನಿನ ಧ್ಯೇಯ ಸಾಮಾಜಿಕ ಕ್ರಾಂತಿಯ ಧ್ಯೇಯ, ಕಾರ್ಮಿಕರ ಪೂರ್ಣ ರಾಜಕೀಯ ಮತ್ತು ಆರ್ಥಿಕ ವಿಮೋಚನೆಯ ಧ್ಯೇಯ. ಇದು ಇಡೀ ಜಗತ್ತಿನ ಶ್ರಮಜೀವಿಗಳ ಧ್ಯೇಯ. ಈ ಅರ್ಥದಲ್ಲಿ ಅದು ಅಮರ.'[8]

---

7 V. I. Lenin, preface, *Letters to Kugelmann*.

8 V. I. Lenin, 'In Memory of the Commune', *Rabochaya Gazeta*, no. 4-5, 15 April 1911.


പഴമതൻ വിലങ്ങു പൂട്ടിയിടുകയില്ല നമ്മളെ
അടിമകൾ നുകം വലിച്ചെറിഞ്ഞുയർത്തെണീക്കുവിൻ,
പുതിയതാം തറയ്ക്കു മീതെയുലകമിനിയുയർന്നിടും.
ഇന്നലെവരെയൊന്നുമല്ല നമ്മൾ, ഇന്നു തൊട്ടു നമ്മളാകുമെല്ലാം.
Agrupémonos todos, en la lucha final,
y se alcen los pueblos,
por la Internacional.

# ಒಂದು ಉಜ್ವಲ ಹೂವು

**ತಿಂಗ್‌ಚಕ್**

ನೆಪೋಲಿಯನ್ ಯುಗದ ಸ್ಮಾರಕವಾದ ವೆಂಡೋಮ್ ಸ್ತಂಭ ಮೇ 16, 1871ರಂದು ಉರುಳಿತು. ಕಮ್ಯುನಾರ್ಡರು ಆ ಜಾಗಕ್ಕೆ 'ಅಂತರ್‍ರಾಷ್ಟ್ರೀಯ ಚೌಕ' ಎಂದು ಮರುನಾಮಕರಣ ಮಾಡಿದರು.

ಎರಡು ದಶಕಗಳ ಹಿಂದೆನೇ ಕಾರ್ಲ್ ಮಾರ್ಕ್ಸ್ ಇದನ್ನು ಮುಂಗಂಡಿದ್ದರೋ ಎಂಬಂತೆ 'ಲೂಯಿ ಬೋನಪಾರ್ಟೆಯ 18ನೇ ಬ್ರುಮೇರ್' (1852) ಎಂಬ ಪುಸ್ತಕದಲ್ಲಿ' ಆದರೆ ಲೂಯಿ ಬೊನಪಾರ್ಟೆಯ ಹೆಗಲ ಮೇಲೆ ಸಾಮ್ರಾಜ್ಯದ ಜವಾಬ್ದಾರಿ ಬಿದ್ದಾಗ ವೆಂಡೋಮ್ ಸ್ತಂಭದ ಮೇಲಿರುವ ನೆಪೋಲಿಯನ್ನನ ಕಂಚಿನ ಮೂರ್ತಿ ಉರುಳುವುದು.' ಎಂದು ಬರೆದಿದ್ದರು. ಹಾಗೆನೇ ಆಯಿತು ಕೂಡಾ.

ನೆಪೋಲಿಯನ್ನನ ಮೂರ್ತಿ ಉರುಳುವುದರ ಹಿಂದೆ ಇದ್ದ ನಾಯಕರಲ್ಲಿ ಒಬ್ಬ ಕಮ್ಯುನಾರ್ಡನಾಗಿದ್ದ ಸಮಾಜವಾದಿ ಚಿತ್ರಕಲಾವಿದ ಗುಸ್ತಾವ್ ಕೊರ್ಬೆ (1819–77). ಬೂರ್ಶ್ವಾಗಳ ವೈಭವದ ಜೀವನದ ಬದಲು ರೈತರ ಬೆವರನ್ನು ಚಿತ್ರಿಸುವ ಕಲಾಕೃತಿಗಳನ್ನು ಬರೆಯುವವನಾಗಿದ್ದ ಕೊರ್ಬೆ. ಅವನ ಜೀವನ ಮತ್ತು ಕಲಾಕೃತಿಗಳು ಎರಡು ಚಾರಿತ್ರಿಕ ಘಟನೆಗಳ ನಡುವೆ ರೂಪಿತವಾಗಿದ್ದವು: ಒಂದು 1848ರ ಫ್ರೆಂಚ್‌ಕ್ರಾಂತಿ. ಇನ್ನೊಂದು ಕಾರ್ಮಿಕ ವರ್ಗ ತಾನೇ ಒಂದು ಶಕ್ತಿಯಾಗಿ ಹೊಮ್ಮಿದ 1871ರ ಪ್ಯಾರೀಸ್ ಕಮ್ಯೂನ್. ಅವನು 'ಒಂದು ಸುಂದರ ಕನಸು' ಎಂದು ಕರೆದ ಪ್ಯಾರೀಸ್ ಕಮ್ಯೂನ್ ನ ಅವಧಿಯಲ್ಲಿ, ಕಲಾವಿದರ ಫೆಡರೇಶನ್ನಿನ ಸ್ಥಾಪಕ ಅಧ್ಯಕ್ಷ ಮತ್ತು ಕಾರ್ಮಿಕ ನಾಯಕತ್ವದ ಪ್ರಭುತ್ವದಲ್ಲಿ ಸಂಸ್ಕೃತಿ ಮಂತ್ರಿಯಾದ. ಈ ಸಾಮ್ರಾಜ್ಯಶಾಹಿ–ವಿರೋಧಿ ಕಾರ್ಯಾಚರಣೆಗಾಗಿ, ಆತನಿಗೆ 6 ತಿಂಗಳು ಜೈಲು ಶಿಕ್ಷೆಯಾಯಿತು. ದಂಡಗಳ ಸಾಲದಿಂದ ಜೀವನದುದ್ದಕ್ಕೂ ಸಾಲಗಾರನಾಗಿರಬೇಕಾಯಿತು.

ಕಮ್ಯೂನ್ ಕೆಲಸ ಮಾಡುತ್ತಿರುವವರೆಗೆ, ಶಿಕ್ಷಣ ಮತ್ತು ಸೌಂದರ್ಯ ಶಾಸ್ತ್ರದ ವಿಧಾನಗಳು ಮತ್ತು ಸಂಘಟನೆಗಳ ಹಾಗೂ ಹಳೆಯ ಸ್ಮಾರಕಗಳನ್ನು ಉರುಳಿಸಿ ಹೊಸ ಸ್ಮಾರಕಗಳನ್ನು ಸ್ಥಾಪಿಸುವ ಕುರಿತು ಫೆಡರೇಶನ್ ಪ್ರಸ್ತಾವಗಳ ಕರಡುಗಳನ್ನು ತಯಾರಿಸಿ

ಚರ್ಚಿಸಿತು. ಶ್ರಮಜೀವಿಗಳ ಹೋರಾಟವು ಸಂಸ್ಕೃತಿ ಮತ್ತು ಅದರ ಸೈದ್ಧಾಂತಿಕ ಮತ್ತು ಸಾಂಸ್ಥಿಕ ಆಧಾರಗಳ ಕುರಿತು ಮತ್ತು ಈ ಕ್ರಾಂತಿಕಾರಿ ಪ್ರಕ್ರಿಯೆಯಲ್ಲಿ ಕಲಾವಿದರನ್ನು ಸಮರಶೀಲ ಹೋರಾಟಗಾರರಾಗಿ ಪುನಃ ಕಲ್ಪಿಸಿಕೊಳ್ಳಬೇಕು ಎಂಬುದರ ಕುರಿತು ಸಹ ಆಳವಾದ ಅರಿವು ಇತ್ತು.

"ಇಲ್ಲಿ ಕೇಳಿ: 'ನಿಮ್ಮ 'ಕ್ರುಪ್' ತೋಪುಗಳನ್ನು ನಮಗೆ ಬಿಟ್ಟುಕೊಡಿ, ನಮ್ಮವುಗಳ ಜತೆಗೆ ಅವನ್ನು ಕರಗಿಸುತ್ತೇವೆ' ಎಂದು ಕೋರ್ಬೆ ಪ್ಯಾರೀಸ್ ದಂಗೆಯ ಹಲವು ತಿಂಗಳುಗಳ ಮೊದಲು ಜರ್ಮನ್ ಸೈನ್ಯ ಮತ್ತು ಕಲಾವಿದರಿಗೆ ಬರೆದಿದ್ದರು. "ಮೂರು ತೋಪಿನ ಗುಂಡುಗಳ ಮೇಲೆ ನಿಂತಿರುವ ಪಾದಪೀಠದ ಮೇಲೆ ನೆಡಲ್ಪಟ್ಟ, 'ಫ್ರೀಜಿಯನ್‌ಟೋಪಿ'* (*ಫ್ರೆಂಚ್‌ಕ್ರಾಂತಿಯ ಪ್ರತೀಕವಾಗಿದ್ದ ಮುಂದೆ ಬಾಗಿದ್ದ ಕುಚ್ಚು ಇರುವ ರೋಮನ್ ಕಾಲದ ಈಗಿನ ಟರ್ಕಿಯ ಪ್ರದೇಶದ ಕೆಂಪು ಶಂಕು ಆಕಾರದ ವಿಮೋಚನೆಯನ್ನು ಪ್ರತಿನಿಧಿಸುವ ಟೋಪಿ)ಯನ್ನು ತನ್ನ ಮೇಲ್ಮುಖವಾಗಿರುವ ನಳಿಕೆಯ ಬಾಯಿಯಲ್ಲಿ ಏರಿಸಿಕೊಂಡ ಕೊನೆಯ ತೋಪು ನಮ್ಮ ಅಗಾಧ ಸ್ಮಾರಕವಾಗಿರುತ್ತದೆ. ಇದನ್ನು ನಾವು ನಿಮಗಾಗಿ, ನಮಗಾಗಿ, ನೆಡುವ ಜನತೆಯ ಸ್ತಂಭವಾಗಿರುತ್ತದೆ, ಅವರಿಗೆ, ಹಳೆಯ ಪ್ರತೀಕಗಳ ಜಾಗದಲ್ಲಿ ಹೊಸ ಪ್ರತೀಕಗಳನ್ನು ಸ್ಥಾಪಿಸಬೇಕು. ಅವು ಜಗತ್ತಿನ ಕಾರ್ಮಿಕರ 'ಸಾಮುದಾಯಿಕ ಆಸ್ತಿಯ ಆರಂಭ' ಆಗಿರಬೇಕು."

ನಲ್ವತ್ತೇಳು ಚಿತ್ರ ಕಲಾವಿದರು, ಶಿಲ್ಪಿಗಳು, ವಾಸ್ತುಶಾಸ್ತ್ರಿಗಳು, ಕೆತ್ತನೆಯ ಮತ್ತು ಆಲಂಕಾರಿಕ ಕಲಾವಿದರು ಒಡಗೂಡಿ ಭವಿಷ್ಯತ್ತನ್ನು ಶಿಕ್ಷಣ, ಸ್ಮಾರಕ ಮತ್ತು ಮ್ಯೂಸಿಯಂಗಳ ಮೂಲಕ ಪುನಾಸೃಷ್ಟಿ ಮಾಡಲು, ಹಿಂದಿನ ಭಂಡಾರವನ್ನು ಕಾಪಿಡುವ, ಇಂದಿನ ಆವಶ್ಯಕತೆಗಳ ಮೇಲೆ ಬೆಳಕು ಚೆಲ್ಲುವ ತಮ್ಮ ಧ್ಯೇಯವನ್ನು ಘೋಷಿಸಿದರು. ಕಲಾವಿದರ ಫೆಡರೇಶನ್‌ನ ಸ್ಥಾಪಕ ಸದಸ್ಯರಲ್ಲಿ ಕವಿ ಯುಜೀನ್ ಪೋಟಿಯೆರ್ ಕೂಡಾ ಇದ್ದ. 72 ದಿನಗಳ ಕಾರ್ಮಿಕರ ಪ್ರಭುತ್ವವನ್ನು ಕೊನೆಗೊಳಿಸಿದ ರಕ್ತಸಿಕ್ತ ನರಮೇಧವನ್ನು ಮೇ 28, 1871 ರಂದು ಕಂಡ ಪೊಟಿಯೆರ್ ಒಂದು ಕವನ ಬರೆದ. ಆಗಿನಿಂದ ನಮ್ಮ ಹೋರಾಟಗಳಿಗೆ ಸ್ಫೂರ್ತಿ ತುಂಂಬಲು ಆ ಕವಿತೆಯನ್ನು (ಲಾ ಇಂಟರ್ ನ್ಯಾಶನಲ್) ಅಗಣಿತ ಭಾಷೆಗಳಿಗೆ ಅನುವಾದಿಸಿ ಹಾಡಲಾಗಿದೆ. ಅದು ಜಗತ್ತಿನ ಎಲ್ಲ ದಮನಿತರ ಅತ್ಯಂತ ವ್ಯಾಪಕವಾಗಿ ಹಾಡಲ್ಪಡುವ 'ನಾಡಗೀತೆ' ಆಯಿತು. ಈ ಹಾಡು ಹಾಡಲ್ಪಟ್ಟ ವಿವಿಧ ಭಾಷೆಗಳಲ್ಲಿ ತಲಾ ಒಂದು ಸಾಲನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ಇಂತಹ ಸಾಲುಗಳ ಮೂಲಕ ಆ ಹಾಡನ್ನು ಪೂರ್ಣಗೊಳಿಸುವ ಮೂಲಕ ಅದರ ಮೂಲಾಶಯವಾದ ಅಂತರ್ರಾಷ್ಟ್ರೀಯ ಸೌಹಾರ್ದತೆಯನ್ನು ಎತ್ತಿ ಹಿಡಿಯುವಂತಾಗಿದೆ.

ಆ ರಕ್ತಸಿಕ್ತ ನರಮೇಧದ ಅರ್ಧ ಶತಮಾನದ ನಂತರ, ಚೀನಾದ ದಕ್ಷಿಣ ಗುವಾಂಗ್ಡಾಂಗ್ ಪ್ರಾಂತದಲ್ಲಿ 10 ಸಾವಿರ ರೈತರು ಮತ್ತು ಕಾರ್ಮಿಕರು ಪ್ಯಾರೀಸ್ ಕಮ್ಯೂನಿನ 55ನೇ ವಾರ್ಷಿಕೋತ್ಸವದಂದು ಸೇರಿದ್ದರು. ಕಮ್ಯೂನಿನಿಂದ ಸ್ಫೂರ್ತಿ ಪಡೆದು ಕಟ್ಟಲಾಗಿದ್ದ ರೈತರ ಕಾರ್ಮಿಕರ ಮತ್ತು ಕ್ರಾಂತಿಕಾರಿ ಸೈನಿಕರ ಮೈತ್ರಿಕೂಟ 1927ರಲ್ಲಿ ಹಲವು ದಂಗೆಗಳಿಗೆ ಎಡೆ ಮಾಡಿತು. ಅಂದಿನ ಸ್ಮಾರಕ ತ್ಯಾಲಿಯಲ್ಲಿ ಮಳೆ

ಹೊಯ್ಯುತ್ತಿದ್ದರೂ, 'ಅಂತರ್ರಾಷ್ಟ್ರೀಯ'ವನ್ನು ಹಾಡುವುದಲ್ಲದೆ 'ಪ್ಯಾರೀಸ್ ಕಮ್ಯೂನ್‌ಗೆ ಜಯವಾಗಲಿ' ಎಂದು ಘೋಷಿಸಿದರು. ಆಗ ಮಾವೋ ಝೇಡುಂಗ್ ಕಮ್ಯೂನಿನ ಸೋಲಿನ ಕುರಿತು ಮಾತನಾಡುವ ಬದಲು ಅದನ್ನು ಸಂಭ್ರಮದಿಂದ ನೆನೆದರು : 'ಪ್ಯಾರೀಸ್‌ಕ 'ಮ್ಯೂನ್ 'ಉಜ್ವಲ ಹೂವು' ಆಗಿದ್ದರೆ, ಅಕ್ಟೋಬರ್ ಕ್ರಾಂತಿ ಅದರ 'ಸಂತೋಷದ ಫಲ'ವಾಗಿತ್ತು.' ಹೀಗೆಂದು ಅವರ ನಾಯಕತ್ವದಲ್ಲಿ ತಮ್ಮ ಜನತೆ ಮತ್ತು ದೇಶವನ್ನು ಕ್ರಾಂತಿಯತ್ತ ನಡೆಸಿದ ಕೇವಲ 23 ವರ್ಷಗಳ ಮೊದಲು ಹೇಳಿದ್ದರು.

ಈ ಪುಸ್ತಕದಲ್ಲಿ ನಮ್ಮ ಈ ಬಳುವಳಿಯತ್ತ ಬೊಟ್ಟು ಮಾಡುವ ಪದಗಳು, ಚಿತ್ರ ಮತ್ತು ಹಾಡುಗಳು ಮುಂತಾದ ಸಾಂಸ್ಕೃತಿಕ ಅಂಶಗಳು ನಿಮಗೆ ಸಿಗುತ್ತವೆ. ನಾವು ನಮ್ಮ 'ಉಜ್ವಲ ಹೂವ'ನ್ನು ನೆನಪಿಸಿಕೊಳ್ಳುವ ಮೂಲಕ ಇನ್ನಷ್ಟು ಹೆಚ್ಚು 'ಫಲ'ಗಳು ದೊರಕಿವೆ, ದೊರಕಬಹುದು, ದೊರಕಲಿವೆ. 'ಕಮ್ಯುನಾರ್ಡ‌ರ ಕ್ರಾಂತಿ' ಎಂಬ ಕವನದಲ್ಲಿ ಬ್ರೆಕ್ಟ್ ಹಾಡಿದ ಹಾಗೆ, ಹೋರಾಟದ ಸ್ಮಾರಕಗಳಾಗಿ ಜನತಾ ಕಲೆಯ ಜೊತೆಗೆ 'ನಮ್ಮ ಆದೇಶದಂತೆ ನಮ್ಮ ಭವಿಷ್ಯವನ್ನು ನಿರ್ಮಿಸಬೇಕು'


தொன்றுதொட்டு ழைத்ததொழி லாளிகள் விவசாயிகள்
தோழராயினோம் உழைபோர் யாவரேனும் ஓர்குலம்
உண்டு நம் உழைப்பிலே உயர்ந்தவர்க்குச் சொல்லுவோம்
உழைப்பவர்கள் யாவருக்கும் சொந்தமிந்த உலகெளாம்
So comrades, come rally
And the last fight let us face
The Internationale unites the human race.

# ಫ್ರಾನ್ಸ್‌ನಲ್ಲಿ ಅಂತರ್ಯುದ್ಧ

**ಕಾರ್ಲ್ ಮಾರ್ಕ್ಸ್**

**ಫ್ರಾನ್ಸ್‌ನಲ್ಲಿ ಅಂತರ್ಯುದ್ಧದ ಕುರಿತು ಅಂತರರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ಜನರಲ್ ಕೌನ್ಸಿಲ್‌ನಲ್ಲಿ ಮಾಡಿದ ಭಾಷಣ.**
**ಯುರೋಪ್ ಮತ್ತು ಅಮೆರಿಕದಲ್ಲಿರುವ ಅಂತರ್ರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ಎಲ್ಲಾ ಸದಸ್ಯರಿಗೆ**

## I.

1870 ಸೆಪ್ಟೆಂಬರ್ 4ರಂದು, ಪ್ಯಾರಿಸ್‌ನ ಶ್ರಮಜೀವಿಗಳು ಗಣರಾಜ್ಯವನ್ನು ಘೋಷಿಸಿದರು. ತತ್‌ಕ್ಷಣವೇ ಫ್ರಾನ್ಸ್‌ನಾದ್ಯಂತ ಒಂದೇ ಒಂದು ಭಿನ್ನಮತದ ದನಿಯಿಲ್ಲದೆ ಅದಕ್ಕೆ ಶ್ಲಾಘನೆ ವ್ಯಕ್ತವಾಯಿತು. ಅಂಥ ಸಂದರ್ಭದಲ್ಲಿ ಥಿಯರ್ಸ್‌ನನ್ನು ದೇಶದ ಮುತ್ಸದ್ದಿಯನ್ನಾಗಿಯೂ ಟ್ರೊಚುವನ್ನು ದಂಡನಾಯಕನನ್ನಾಗಿಯೂ ಅಂಗೀಕರಿಸಿದ, ಪದವಿಗಾಗಿ ಹಾತೊರೆಯುತ್ತಿದ್ದ ಬ್ಯಾರಿಸ್ಟರ್‌ಗಳ ಒಂದು ಪಿತೂರಿಗಾರರ ಕೂಟ ಹೊಟೇಲ್ ದ ವಿಲ್ಲೆಯನ್ನು ನಿಯಂತ್ರಣಕ್ಕೆ ತೆಗೆದುಕೊಂಡರು. ಆ ಸಮಯದಲ್ಲಿ ಅವರು ಚಾರಿತ್ರಿಕ ಬಿಕ್ಕಟ್ಟಿನ ಎಲ್ಲಾ ಘಟ್ಟಗಳಲ್ಲಿ ಫ್ರಾನ್ಸನ್ನು ಪ್ರತಿನಿಧಿಸುವುದೇ ಪ್ಯಾರಿಸಿನ ಜೀವನೋದ್ದೇಶ ಎಂಬ ಅಂಧಶ್ರದ್ಧೆಯನ್ನು ಬೆಳೆಸಿಕೊಂಡಿದ್ದರು. ತಮ್ಮಿಂದ ಕಿತ್ತುಕೊಳ್ಳಲಾದ 'ಫ್ರಾನ್ಸಿನ ಆಡಳಿತಗಾರರು' ಎಂಬ ಪಟ್ಟವನ್ನು ನ್ಯಾಯಬದ್ಧಗೊಳಿಸಲಿಕ್ಕಾಗಿ, 'ಪ್ಯಾರಿಸಿನ ಪ್ರತಿನಿಧಿಗಳು'ಎಂಬ ರದ್ದಾದ ತಮ್ಮ ಜನರ ಒಪ್ಪಿಗೆಯನ್ನು ಪಡೆದುಕೊಳ್ಳಲು ಇದು ಸಾಕು ಎಂದು ಅವರು ಭಾವಿಸಿದ್ದರು. ಈ ಮಂದಿ ತಲೆಯೆತ್ತಿದ ಐದು ದಿನಗಳ ನಂತರ ಯುದ್ಧದ ಬಗ್ಗೆ ಮಾಡಿದ ಎರಡನೇ (*ಮಾರ್ಕ್ಸ್ 1870ರ ಸೆಪ್ಟೆಂಬರ್ 9ರಂದು ಫ್ರಾಂಕೊ–ಪ್ರಷ್ಯನ್ ಯುದ್ಧ ಕುರಿತು ಅಂತರರಾಷ್ಟ್ರೀಯ ಕಾರ್ಮಿಕರ ಸಂಘದಲ್ಲಿ ಮಾಡಿದ) ಭಾಷಣದಲ್ಲಿ ಅವರು ಯಾರು ಎನ್ನುವುದನ್ನು ಹೇಳಿದ್ದೆವು. ದುಡಿಯುವ ಜನರ ನಿಜವಾದ ನಾಯಕರು ಇನ್ನೂ ಬೊನಪಾರ್ಟೆಯ ಸೆರೆಮನೆಗಳಲ್ಲಿ ಬಂಧಿಗಳಾಗಿರುವಾಗ ಹಾಗೂ ಪ್ರಷ್ಯನ್ನರು ಅದಾಗಲೇ ಪ್ಯಾರಿಸ್‌ನತ್ತ

ಮುನ್ನಡೆಯುತ್ತಿದ್ದಾಗ, ಅವರು ಅಧಿಕಾರವನ್ನು ಕಿತ್ತುಕೊಂಡಿದ್ದನ್ನು ಪ್ಯಾರಿಸ್ ಸಹಿಸಿಕೊಂಡಿತು. ಅದು ರಾಷ್ಟ್ರೀಯ ರಕ್ಷಣೆಯ ಏಕೈಕ ಉದ್ದೇಶಕ್ಕಾಗಿ ಎಂಬ ಷರತ್ತಿನ ಮೇರೆಗೆ ಸಹಿಸಿ ಕೊಳ್ಳಲಾಯಿತು. ಆದರೆ, ದುಡಿಯುವ ಜನರನ್ನು ಸಶಸ್ತ್ರಗೊಳಿಸದೆ, ಅವರನ್ನು ಒಂದು ಪರಿಣಾಮಕಾರಿ ಪಡೆಯನ್ನಾಗಿ ಸಂಘಟಿಸದೆ ಹಾಗೂ ಅವರನ್ನು ಯುದ್ಧದಿಂದಲೇ ತರಬೇತಿಗೊಳಿಸದೆ ಪ್ಯಾರಿಸ್ ಅನ್ನು ರಕ್ಷಿಸಿಕೊಳ್ಳಲು ಸಾಧ್ಯವಿರಲಿಲ್ಲ. ಪ್ಯಾರಿಸ್ ಸಶಸ್ತ್ರೀಕರಣಗೊಂಡಿತೆಂದರೆ ಕ್ರಾಂತಿಯು ಸಶಸ್ತ್ರೀಕರಣಗೊಂಡಂತೆಯೇ. ಪ್ರಷ್ಯನ್ ಆಕ್ರಮಣಕಾರರ ವಿರುದ್ಧ ಪ್ಯಾರಿಸ್ ಗೆಲವು ಸಾಧಿಸಿದರೆ ಅದು ಫ್ರೆಂಚ್ ಬಂಡವಾಳಶಾಹಿಗಳು ಹಾಗೂ ಅದರ ಪ್ರಭುತ್ವ–ಪರಾವಲಂಬಿಗಳ ಮೇಲೆ ಫ್ರೆಂಚ್ ದುಡಿಯುವ ಜನರ ವಿಜಯವಾಗುತ್ತಿತ್ತು. ರಾಷ್ಟ್ರೀಯ ಕರ್ತವ್ಯ ಮತ್ತು ವರ್ಗ ಹಿತದ ನಡುವಿನ ಈ ಸಂಘರ್ಷದಲ್ಲಿ ರಾಷ್ಟ್ರೀಯ ರಕ್ಷಣಾ ಸರಕಾರವು ರಾಷ್ಟ್ರೀಯ ಪಕ್ಷಾಂತರಿಗಳ ಸರಕಾರವನ್ನಾಗಿ ಪರಿವರ್ತಿಸಲು ಒಂದರೆ ಕ್ಷಣವೂ ಹಿಂಜರಿಯಲಿಲ್ಲ.

ಒಬ್ಬ ರಾಜನಿಗೆ ಬದಲಿಯಾಗಿ ಗಣರಾಜ್ಯವನ್ನು ಬಿಟ್ಟುಕೊಡುವ ಕೊಡುಗೆಯನ್ನು ಮುಂದಿಟ್ಟು ಮಧ್ಯಸ್ಥಿಕೆ ವಹಿಸುವಂತೆ ಯುರೋಪ್‌ನ ಕೋರ್ಟ್‌ಗಳಿಗೆ ಮನವಿ ಮಾಡಲೆಂದು ಥಿಯರ್ಸ್‌ನನ್ನು ಕ್ಷಿಪ್ರ ಪ್ರವಾಸಕ್ಕಾಗಿ ಕಳಿಸಿದ್ದು ಅವರು ಮಾಡಿದ ಮೊದಲ ಕೆಲಸ. ಮುತ್ತಿಗೆ ಆರಂಭವಾದ ನಾಲ್ಕು ತಿಂಗಳ ನಂತರ, ಶರಣಾಗತಿಯ ಮೊದಲ ನುಡಿಯನ್ನು ಹೇಳುವ ಸಮಯ ಪಕ್ವವಾಗಿದೆ ಎಂದು ಅವರು ಭಾವಿಸಿದಾಗ ಜೂಲ್ಸ್ ಫರ್ವೆ ಮತ್ತು ಆತನ ಇತರ ಸಹೋದ್ಯೋಗಿಗಳ ಸಮ್ಮುಖದಲ್ಲಿ ಪ್ಯಾರಿಸ್‌ನ ಮೇಯರ್‌ಗಳ ಸಭೆಯಲ್ಲಿ ಟ್ರೊಚು ಮಾಡಿದ ಭಾಷಣ ಹೀಗಿತ್ತು:

> *"ಸೆಪ್ಟೆಂಬರ್ ನಾಲ್ಕರ ಸಂಜೆಯೇ ನನ್ನ ಸಹೋದ್ಯೋಗಿಗಳು ನನ್ನ ಮುಂದಿಟ್ಟ ಪ್ರಶ್ನೆ ಇದಾಗಿತ್ತು. ಪ್ರಷ್ಯನ್ ಸೇನೆಯ ದಾಳಿಯನ್ನು ತಡೆದುಕೊಳ್ಳಲು ಪ್ಯಾರಿಸ್ ಯಶಸ್ವಿಯಾಗಲು ಸಾಧ್ಯವಿದೆಯೇ? ನಕಾರಾತ್ಮಕ ಉತ್ತರ ನೀಡಲು ನಾನು ಯಾವುದೇ ಹಿಂದೇಟು ಹಾಕಲಾರೆ. ಇಲ್ಲಿರುವ ನನ್ನ ಕೆಲವು ಸಹೋದ್ಯೋಗಿಗಳು ನನ್ನ ಮಾತಿನ ಸತ್ಯವನ್ನು ಮತ್ತು ಅಭಿಪ್ರಾಯದ ದೃಢತೆಯನ್ನು ಅರ್ಥ ಮಾಡಿಕೊಳ್ಳುವರೆಂದು ನಾನು ಭಾವಿಸುತ್ತೇನೆ. ಪ್ರಸಕ್ತ ಪರಿಸ್ಥಿತಿಯಲ್ಲಿ, ಪ್ರಷ್ಯನ್ ಸೇನೆಯ ದಾಳಿಯನ್ನು ತಡೆಯಲು ಪ್ಯಾರಿಸ್ ಪ್ರಯತ್ನಿಸುವುದು ಮೂರ್ಖತನವಾಗುತ್ತದೆ. ನಿಸ್ಸಂಶಯವಾಗಿಯೂ ಅದು ವೀರೋಚಿತ ಮೂರ್ಖತನವೇ ಸರಿ. ಅದಷ್ಟೇ ಆಗುವುದು... (ಅವರಿಂದಲೇ ನಿರ್ವಹಿತ) ಘಟನಾವಳಿಗಳು ನನ್ನ ಮುನ್ನೆಚ್ಚರಿಕೆ ಸುಳ್ಳೆಂದು ಸಾಧಿಸುವುದಿಲ್ಲ".*

ಟ್ರೊಚು ಅವರ ಈ ಪುಟ್ಟ ಭಾಷಣವನ್ನು ಸಭೆಯಲ್ಲಿ ಹಾಜರಿದ್ದ ಮೇಯರ್‌ಗಳಲ್ಲಿ ಒಬ್ಬರಾದ ಎಂ. ಕಾರ್ಬನ್ ಆನಂತರ ಪ್ರಕಟಿಸಿದ.

ಈ ರೀತಿಯಾಗಿ, ಪ್ಯಾರಿಸ್ ಶರಣಾಗುವ ಟ್ರೊಚುನ 'ಯೋಜನೆ' ಆತನ ಸಹೋದ್ಯೋಗಿಗಳಿಗೆ ಗಣರಾಜ್ಯ ಘೋಷಣೆಯಾದ ದಿನದ ಸಂಜೆಯೇ ಗೊತ್ತಿತ್ತು. ರಾಷ್ಟ್ರೀಯ ರಕ್ಷಣೆಯು ಥಿಯರ್ಸ್, ಫಾವ್ರ್ ಮತ್ತು ಕೂಟದ ವೈಯಕ್ತಿಕ ಸರಕಾರಕ್ಕೆ ಒಂದು ನೆಪಕ್ಕಿಂತ ಹೆಚ್ಚಿನದಾಗಿದ್ದರೆ, ಸೆಪ್ಟೆಂಬರ್ ನಾಲ್ಕರಂದು ಆರಂಭವಾದ

ಅಬ್ಬರದ ಚಟುವಟಿಕೆಗಳು ಐದರಂದೇ ಮುಗಿದು ಹೋಗುತ್ತಿದ್ದವು, ಆ ಮೂಲಕ ಟ್ರೊಚು 'ಯೋಜನೆ'ಗೆ ಪ್ಯಾರಿಸ್ ಜನರು ಬಲಿಯಾಗುತ್ತಿದ್ದರು ಮತ್ತು ಒಂದೇ ಸಲಕ್ಕೆ ಶರಣಾಗುವಂತೆ ಅಥವಾ ನಿಮ್ಮ ಭವಿಷ್ಯವನ್ನು ನಿಮ್ಮ ಕೈಗೆ ತೆಗೆದುಕೊಳ್ಳಿ ಎಂದು ಅವರಿಗೆ ಕರೆ ಕೊಡುತ್ತಿದ್ದ. ಅದಕ್ಕೆ ಬದಲು, ಕುಖ್ಯಾತ ವಂಚಕರು ಪ್ಯಾರಿಸ್‌ನ ವೀರೋಚಿತ ಮೂರ್ಖತನವನ್ನು ದುರ್ಭಿಕ್ಷ್ಯ ಹಾಗೂ ಒಡೆದ ತಲೆಗಳ ಆಡಳಿತದ ಮೂಲಕ ಪರಿಹರಿಸುವುದಾಗಿ ಹೇಳತೊಡಗಿದರು. ಮತ್ತು ಅದೇ ಹೊತ್ತಿಗೆ, 'ಪ್ಯಾರಿಸ್‌ನ ಗವರ್ನರ್' ಟ್ರೊಚು 'ಯಾವತ್ತೂ ಶರಣಾಗುವುದಿಲ್ಲ', ಮತ್ತು ವಿದೇಶಾಂಗ ಸಚಿವ ಜೂಲ್ಸ್ ಫಾವ್ರ್ 'ನಮ್ಮ ಪ್ರದೇಶದ ಒಂದಿಂಚೂ ಭೂಮಿಯನ್ನು ಅಥವಾ ಕೋಟೆಯ ಒಂದು ಕಲ್ಲನ್ನೂ ಬಿಟ್ಟುಕೊಡುವುದಿಲ್ಲ' ಎಂದು ಪ್ರಚಾರ ಮಾಡಿದರು.

ಗ್ಯಾಂಬೆಟ್ಟಾಗೆ ಬರೆದ ಪತ್ರವೊಂದರಲ್ಲಿ ಇದೇ ಜೂಲ್ಸ್ ಫಾವ್ರ್, 'ನಾವು ರಕ್ಷಣೆ ಮಾಡಿಕೊಳ್ಳುತ್ತಿರುವುದು ಪ್ರಷ್ಯನ್ ಸೈನಿಕರ ವಿರುದ್ಧ ಅಲ್ಲ, ಪ್ಯಾರಿಸ್‌ನ ದುಡಿಯುವ ಜನರ ವಿರುದ್ಧ' ಎಂದು ಸ್ಪಷ್ಟವಾಗಿ ಘೋಷಿಸಿದ್ದ. ಟ್ರೊಚು ಪ್ಯಾರಿಸ್ ಸೇನೆಯ ಉಸ್ತುವಾರಿಯನ್ನು ಬುದ್ಧಿವಂತಿಕೆಯಿಂದ ಕಟ್ಟಾ ಬೊನಪಾರ್ಟೆವಾದಿಗಳಿಗೆ ವಹಿಸಿಕೊಟ್ಟಿದ್ದ. ಮುತ್ತಿಗೆ ಮುಂದುವರಿದ ಅವಧಿಯುದ್ದಕ್ಕೂ ಈ ಜನರು ತಮ್ಮ ಪತ್ರ ವ್ಯವಹಾರಗಳಲ್ಲಿ ರಕ್ಷಣೆಯನ್ನು ಅಪಹಾಸ್ಯ ಮಾಡಲು ಅಶ್ಲೀಲವಾದ ಹಾಸ್ಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. (ಉದಾಹರಣೆಗೆ, ಪ್ಯಾರಿಸ್ ರಕ್ಷಣಾ ಸೇನೆಯ ಫಿರಂಗಿ ದಳದ ಸರ್ವೋನ್ನತ ದಂಡನಾಯಕ ಹಾಗೂ ಲಿಜನ್ ಆಫ್ ಹಾನರ್‌ನ ಗ್ರಾಂಡ್ ಕ್ರಾಸ್ ಆಲ್ಫೋನ್ಸ್ ಸೈಮನ್ ಗಿಯೋಡ್ ಫಿರಂಗಿ ದಳದ ವಿಭಾಗದ ಜನರಲ್ ಸುಸಾನೆಗೆ ಬರೆದ ಪತ್ರವನ್ನು ನೋಡಿ. ಇದನ್ನು ಕಮ್ಯೂನ್‌ನ 'ಜರ್ನಲ್ ಅಫೀಷಿಯಲ್'[1] ಪ್ರಕಟಿಸಿದೆ). 1871ರ ಜನವರಿ 28ರಂದು ವಂಚಕರ ಮುಖವಾಡ ಕೊನೆಗೂ ಕಳಚಿ ಬಿತ್ತು. ನಿಜವಾದ ವೀರತ್ವದ ಸಂಪೂರ್ಣ ಸ್ವಯಂ–ಹೀಗಳಿಕೆಯೊಂದಿಗೆ ಶರಣಾದ ರಾಷ್ಟ್ರೀಯ ರಕ್ಷಣಾ ಸರಕಾರ ಬಿಸ್ಮಾರ್ಕ್‌ನ 'ಅನುಮತಿ'ಯಿಂದ ಮಾತ್ರ ಇದ್ದ ಫ್ರಾನ್ಸ್‌ನ ಸರಕಾರವಾಗಿ ರೂಪಿತವಾಯಿತು. ಅದು ಎಷ್ಟು ಕೆಟ್ಟದ್ದಾಗಿತ್ತೆಂದರೆ ಸ್ವತಃ ಲೂಯಿ ಬೊನಪಾರ್ಟೆಯೇ ಸೆಡಾನ್‌ನಲ್ಲಿ ಇದನ್ನು ಒಪ್ಪಿಕೊಳ್ಳುವುದಕ್ಕೆ ಹಿಂಜರಿದ. ಮಾರ್ಚ್ 18ರ ಘಟನಾವಳಿಗಳ ನಂತರ, ವರ್ಸೆಲ್ಸ್‌ಗೆ ಪಲಾಯನ ಮಾಡಿದ ಮೇಲೆ, ಶರಣಾದವರು ತಮ್ಮ ದೇಶದ್ರೋಹ ಕುರಿತ ದಾಖಲೆಸಹಿತ ಸಾಕ್ಷ್ಯಗಳನ್ನು ಪ್ಯಾರಿಸ್‌ನಲ್ಲಿ ಬಿಟ್ಟರು. ಈ ಸಾಕ್ಷ್ಯವನ್ನು ನಾಶಮಾಡಲು "ಪ್ಯಾರಿಸ್ ಅನ್ನು ರಕ್ತದ ಸಾಗರದಿಂದ ಕೊಚ್ಚಿಹೋದ ಪಳೆಯುಳಿಕೆಗಳ ರಾಶಿಯಾಗುವಂತೆ ಅದರ ಮೇಲೆ ದಾಳಿ ಮಾಡಲು ಈ ಜನರು ಹಿಂಜರಿಯುವುದಿಲ್ಲ" ಎಂಬುದಾಗಿ ಪ್ರಾಂತ್ಯಗಳಿಗೆ ಉದ್ದೇಶಿಸಿದ ಪ್ರಣಾಳಿಕೆಯಲ್ಲಿ ಕಮ್ಯೂನ್ ಹೇಳಿದೆ.

---

1 'ಅಫೀಷಿಯಲ್ ಡೆ ಲಾ ರಿಪಬ್ಲಿಕ್ ಫ್ರಾನ್ಸೈಸ್': ಇದು ಪ್ಯಾರಿಸ್ ಕಮ್ಯೂನ್‌ನ ಅಧಿಕೃತ ಮುಖವಾಣಿ. 1871 ಮಾರ್ಚ್ 19ರಿಂದ ಮೇ 24ರ ವರೆಗೆ ಅದು ಪ್ರಕಟವಾಯಿತು.

ಇಂಥದ್ದೊಂದು ಕಾರ್ಯ ಪೂರ್ಣಗೊಳ್ಳುವುದೆಂದು ಕುತೂಹಲದಿಂದ ಕಾಯುವುದಲ್ಲದೆ, ರಕ್ಷಣಾ ಸರಕಾರದ ಕೆಲವು ಪ್ರಮುಖ ಸದಸ್ಯರು ತಮ್ಮದೇ ಕೆಲವು ವಿಚಿತ್ರ ಕಾರಣಗಳನ್ನು ಹೊಂದಿದ್ದರು.

ಕದನ ವಿರಾಮ ಮುಕ್ತಾಯಗೊಂಡ ಸ್ವಲ್ಪವೇ ಸಮಯದ ನಂತರ, ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪ್ಯಾರಿಸ್ ನ ಪ್ರತಿನಿಧಿಗಳಲ್ಲಿ ಒಬ್ಬರಾದ ಎಂ. ಮಿಲಿಯೇರ್ (ಈಗ ಅವರನ್ನು ಜೂಲ್ಸ್ ಫಾವ್ರ್‌ಯ ಆದೇಶದ ಮೇರೆಗೆ ವಜಾ ಮಾಡಲಾಗಿದೆ), ಜೂಲ್ಸ್ ಫಾವ್ರ್ ಕುರಿತ ವಿಶ್ವಾಸಾರ್ಹ ಅಧಿಕೃತ ದಾಖಲೆಗಳ ಸರಣಿಯನ್ನು ಪ್ರಕಟಿಸಿದರು. ಫಾವ್ರ್ ಆಲ್ಜೀರ್ಸ್‌ನ ಒಬ್ಬ ಕುಡುಕನ ಹೆಂಡತಿಯನ್ನು ಉಪಪತ್ನಿಯಾಗಿ ಇಟ್ಟುಕೊಂಡಿರುವುದನ್ನು ಸಾಬೀತು ಪಡಿಸುವ ಕಾಗದಪತ್ರಗಳವು. ದಾಖಲೆಗಳನ್ನು ಫೋರ್ಜರಿ ಮಾಡುವ ಮೂಲಕ ಆ ಜಾರತನಕ್ಕೆ ಹುಟ್ಟಿದ ಮಕ್ಕಳ ಆಸ್ತಿಪಾಸ್ತಿ ಲಪಟಾಯಿಸಿ ಫಾವ್ರ್ ಸಿರಿವಂತನಾದ ಎನ್ನುವುದನ್ನು ಸಾಬೀತುಪಡಿಸುವ ದಾಖಲೆಗಳವು. ಬೊನಪಾರ್ಟೆ ಟ್ರಿಬ್ಯೂನಲ್‌ಗಳು ಶಾಮೀಲಾಗಿದ್ದರಿಂದಾಗಿ, ಕಾನೂನುಬದ್ಧ ಉತ್ತರಾಧಿಕಾರಿಗಳು ಹೂಡಿದ ದಾವೆಯಿಂದ ಇವೆಲ್ಲ ಬಹಿರಂಗ ಆಗುವುದರಿಂದ ಆತನಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ಈ ಒಣ ಕಾನೂನು ಕಾಗದಪತ್ರಗಳ ಪರಿಣಾಮಗಳನ್ನು ಯಾವುದೇ ಪ್ರಮಾಣದ ಬಾಯಿಬಡುಕತನದ ಶಕ್ತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿರದಿದ್ದಾಗ, ಜೂಲ್ಸ್ ಫಾವ್ರ್ ತನ್ನ ಜೀವನದಲ್ಲಿ ಅದೇ ಮೊದಲ ಬಾರಿಗೆ ಬಾಯಿಗೆ ಬೀಗ ಹಾಕಿಕೊಂಡು, ಅಂತಃಕಲಹ ಸ್ಫೋಟಗೊಳ್ಳುವುದನ್ನೇ ಕಾದ. ಪ್ಯಾರಿಸ್‌ನ ಜನರು ಕುಟುಂಬ, ಧರ್ಮ, ವ್ಯವಸ್ಥೆ ಮತ್ತು ಆಸ್ತಿಯ ವಿರುದ್ಧ ಬಂಡೆದ್ದು ಪಲಾಯನಗೈದ ಆಪಾದಿತರ ಕೂಟವೆಂದು ಆ ನಂತರ ಆವೇಶದಿಂದ ಜರೆಯುವುದು ಆತನ ಉದ್ದೇಶವಾಗಿತ್ತು. ಇದೇ ವಂಚಕ ಸೆಪ್ಟೆಂಬರ್ 4ರನಂತರ ಅಧಿಕಾರಕ್ಕೆ ಬಂದಿದ್ದೇ ತಡ, "ಎಟನಾರ್ಡ್"[2] ಹಗರಣದಲ್ಲಿ, ಫೋರ್ಜರಿಯ ಸಾಮ್ರಾಜ್ಯದ ಆಡಳಿತದಲ್ಲೇ ಶಿಕ್ಷೆಗೆ ಒಳಗಾದ ಪಿಕ್ ಮತ್ತು ಟ್ರೇಲ್‌ಫರ್‌ಗೆ ಮಾಫಿ ನೀಡಿ ಬಿಡುಗಡೆ ಮಾಡಿ ಸಮಾಜದ ಮೇಲೆ ಛೂ ಬಿಟ್ಟಿದ್ದ. ಆ ಪೈಕಿ ಒಬ್ಬನಾದ ಟ್ರೇಲ್‌ಫರ್ ಕಮ್ಯೂನ್ ಆಡಳಿತದಡಿ ಪ್ಯಾರಿಸ್‌ಗೆ ಮರಳುವ ಧೈರ್ಯ ತೋರಿದ. ಆತನನ್ನು ಮತ್ತೆ ಜೈಲಿಗೆ ತಳ್ಳಲಾಯಿತು. ಆಗ ಪ್ಯಾರಿಸ್ ತನ್ನ ಎಲ್ಲಾ ಜೈಲುಹಕ್ಕಿಗಳನ್ನು ಬಿಡುಗಡೆ ಮಾಡುತ್ತಿದೆ ಎಂದು ಜೂಲ್ಸ್ ಫಾವ್ರ್ ನ್ಯಾಷನಲ್ ಅಸೆಂಬ್ಲಿಯ ಟ್ರಿಬ್ಯೂನ್‌ನಿಂದ ಉದ್ಗರಿಸಿದ!

ಸಾಮ್ರಾಜ್ಯದ ಗೃಹ ಸಚಿವನಾಗಲು ವಿಫಲ ಪ್ರಯತ್ನ ನಡೆಸಿ, ತನ್ನನ್ನು ತಾನು ಹಣಕಾಸು ಸಚಿವನೆಂದು ನೇಮಿಸಿಕೊಂಡ ರಾಷ್ಟ್ರೀಯ ರಕ್ಷಣಾ ಸರಕಾರದ ಜೋ

2 'ಲಾ ಎಟನಾರ್ಡ್' (ಬ್ಯಾನರ್): ಬೊನಪಾರ್ಟೆವಾದಿ ಪ್ರವೃತ್ತಿಯ ಫ್ರೆಂಚ್ ಪತ್ರಿಕೆ. 1866ರಿಂದ 1868ರ ವರೆಗೆ ಅದು ಪ್ರಕಟವಾಯಿತು. ಸರಕಾರದ ಬೊಕ್ಕಸವನ್ನು ಲೂಟಿ ಮಾಡಿದವರು ಈ ಪತ್ರಿಕೆಗೆ ಹಣಕಾಸು ಒದಗಿಸಿದ್ದಾರೆ ಎನ್ನುವುದು ಗೊತ್ತಾದ ಮೇಲೆ ಅದರ ಪ್ರಕಟಣೆಯನ್ನು ನಿಲ್ಲಿಸಲಾಯಿತು.

ಮಿಲ್ಲರ್[3] ಎನಿಸಿದ ಅರ್ನೆಸ್ಟ್ ಪಿಕಾರ್ಡ್, ದ್ರೋಹಿ ಎಂದು ಪ್ಯಾರಿಸ್ ಬೌರ್ಸ್‌ನಿಂದ ಉಚ್ಚಾಟಿತನಾದ ಆರ್ಥರ್ ಪಿಕಾರ್ಡ್‌ನ ಸೋದರ (1867 ಜುಲೈ 13ರ ಪೋಲೀಸ್ ಮುಖ್ಯಾಧಿಕಾರಿ ವರದಿ ನೋಡಿ). ಸೊಸೈಟಿ ಜನರಲ್, ರೂ ಪಾಲೆಸ್ಟ್ರೊಗಳ ಶಾಖೆಗಳ ಮ್ಯಾನೇಜರ್ ಆಗಿದ್ದಾಗ ಮೂರು ಲಕ್ಷ ಫ್ರಾಂಕ್‌ಗಳನ್ನು ಕದ್ದಿದ್ದಾಗಿ ಒಪ್ಪಿಕೊಂಡು ಶಿಕ್ಷೆಗೆ ಗುರಿಯಾಗಿದ್ದ ವ್ಯಕ್ತಿ ಆರ್ಥರ್ ಪಿಕಾರ್ಡ್ (1868 ಡಿಸೆಂಬರ್ 11ರ ಪೋಲೀಸ್ ಮುಖ್ಯಾಧಿಕಾರಿಯ ವರದಿ ನೋಡಿ). ಅರ್ನೆಸ್ಟ್ ಪಿಕಾರ್ಡ್ ತನ್ನ ಪತ್ರಿಕೆ 'ಲಾ ಎಲೆಕ್ಟರ್ ಲೈಬ್ರ್' ಇದರ ಸಂಪಾದಕನನ್ನಾನಗಿ ಆರ್ಥರ್ ಪಿಕಾರ್ಡ್‌ನನ್ನು ನೇಮಿಸಿದ. ಈ ಹಣಕಾಸು ಕಚೇರಿ, ಪತ್ರಿಕೆಯ ಅಧಿಕೃತ ಸುಳ್ಳುಗಳಿಂದ ಬಂಡವಾಳದ ಸಟ್ಟಾ ವ್ಯಾಪಾರಿಗಳು ಹಾದಿ ತಪ್ಪುತ್ತಿರುವಾಗ ಫ್ರೆಂಚ್ ಸೈನ್ಯದ ಅನಾಹುತವನ್ನು ಕಡೆಗಣಿಸಲು ಆರ್ಥರ್ ಹಣಕಾಸು ಕಚೇರಿ ಮತ್ತು ಬೌರ್ಸ್ ನಡುವೆ ತೂಗಾಡುತ್ತಿದ್ದ. ಈ ಇಬ್ಬರು ಸೋದರರ ಇಡೀ ಆರ್ಥಿಕ ವ್ಯವಹಾರಗಳ ಕುರಿತ ಪತ್ರಗಳು ಮತ್ತು ದಾಖಲೆಗಳು ಕಮ್ಯೂನ್ ಕೈಗೆ ಬಂತು.

ಸೆಪ್ಟೆಂಬರ್ 4ರ ಮುಂಚೆ ಬಿಡಿಗಾಸೂ ಇಲ್ಲದಿದ್ದ ಜೂಲ್ಸ್ ಫೆರ್ರಿ ಮುತ್ತಿಗೆ ಅವಧಿಯಲ್ಲಿ ಪ್ಯಾರಿಸ್ ಮೇಯರ್ ಆಗಿದ್ದು, ಬರಗಾಲದ ನಡುವೆ ಸಂಪತ್ತನ್ನು ಗುಡ್ಡೆ ಹಾಕಿಕೊಳ್ಳಲು ಸಂಚು ರೂಪಿಸಿದ್ದ. ತನ್ನ ದುರಾಡಳಿತದ ಲೆಕ್ಕ ಕೊಡಬೇಕಾದ ದಿನವೇ ಆತನ ಶಿಕ್ಷೆಯ ದಿನವೂ ಆಗಿರುತ್ತದೆ.

ಪ್ಯಾರಿಸ್‌ನ ನಾಶದಲ್ಲೇ ಈ ಮಂದಿ ತಮ್ಮ 'ರಜಾ ಚೀಟಿ'ಗಳನ್ನು ಪಡೆಯಬಹುದು. ಬಿಸ್ಮಾರ್ಕ್‌ಗೆ ಬೇಕಾಗಿದ್ದವರೇ ಇಂಥ ಮಂದಿ. ಸರಕಾರವನ್ನು ಇದುವರೆಗೆ ಗುಪ್ತವಾಗಿ ಆಟವಾಡಿಸುತ್ತಿದ್ದ ಥಿಯರ್ಸ್ ಈಗ 'ರಜಾ ಚೀಟಿ' ಪಡೆದವರನ್ನೇ ತನ್ನ ಮಂತ್ರಿಗಳನ್ನಾಗಿ ಹೊಂದುವ ಮೂಲಕ ಆಡಳಿತದ ಚುಕ್ಕಾಣಿ ಹಿಡಿದಿದ್ದ. (ಇಂಗ್ಲೆಂಡ್‌ನಲ್ಲಿ ಶಿಕ್ಷೆಗೊಳಗಾದ ಕ್ರಿಮಿನಲ್‌ಗಳನ್ನು ಅವರ ಶಿಕ್ಷೆಯ ಗಣನೀಯ ಭಾಗವನ್ನು ಕಳೆದ ನಂತರ ಪೆರೋಲ್ ಮೇಲೆ ಬಿಡುಗಡೆ ಮಾಡಲಾಗುತ್ತದೆ. ಆ ಅವಧಿಯಲ್ಲಿ ಪೊಲೀಸರು ಅವರ ಮೇಲೆ ಕಣ್ಣಿಟ್ಟಿರುತ್ತಾರೆ. ಹೀಗೆ ಬಿಡುಗಡೆಯಾಗುವಾಗ ಅವರಿಗೆ ರಜಾ–ಚೀಟಿ (ಟಿಕೆಟ್ ಆಫ್ ಲೀವ್) ಎಂಬ ಸರ್ಟಿಫಿಕೆಟ್ ನೀಡಲಾಗುತ್ತದೆ. ಇಂಥ ಸರ್ಟಿಫಿಕೆಟ್ ಹೊಂದಿದವರನ್ನು ರಜಾ–ಚೀಟಿದಾರರು ಎಂದು ಕರೆಯುತ್ತಾರೆ. ಇದು 1871ರ ಜರ್ಮನ್ ಆವೃತ್ತಿಗೆ ಏಂಗೆಲ್ಸ್ ಮಾಡಿದ ಟಿಪ್ಪಣಿ).

ದೈತ್ಯ ಪಿಶಾಚಿ ಥಿಯರ್ಸ್ ಬಹುತೇಕ ಅರ್ಧ ಶತಮಾನ ಕಾಲ ಫ್ರೆಂಚ್ ಬಂಡವಾಳಶಾಹಿಯನ್ನು ಮೋಡಿ ಮಾಡಿದ್ದ. ಆತ ಹೆಚ್ಚುಕಮ್ಮಿ ಅವರ ವರ್ಗ–ಭ್ರಷ್ಟಾಚಾರದ ಬುದ್ಧಿಜೀವಿ ಅಭಿವ್ಯಕ್ತಿ ಆಗಿದ್ದುದೇ ಇದಕ್ಕೆ ಕಾರಣ. ಆತ ಅಧಿಕಾರಕ್ಕೆ

---

3 ಜರ್ಮನ್ ಆವೃತ್ತಿಯಲ್ಲಿ ಕಾರ್ಲ್ ವೊಗ್ಟ್ ಎಂದಿದೆ; ಫ್ರೆಂಚ್‌ನಲ್ಲಿ ಫಾಲ್‌ಸ್ಟಾಫ್ ಎಂದಿದೆ.

ಜೋ ಮಿಲ್ಲರ್ 18ನೇ ಶತಮಾನದ ಪ್ರಸಿದ್ಧ ಇಂಗ್ಲಿಷ್ ನಟ. ಕಾರ್ಲ್ ವೊಗ್ಟ್ ಜರ್ಮನ್ ಬಂಡವಾಳಶಾಹಿ ಡೆಮೊಕ್ರಾಟ್ ಆಗಿದ್ದು ಮೂರನೇ ನೆಪೋಲಿಯನ್‌ನ ಏಜೆಂಟ್ ಆಗಿದ್ದ. ಫಾಲ್‌ಸ್ಟಾಫ್– ಷೇಕ್ಸ್‌ಪಿಯರ್ ರೂಪಿಸಿರುವ ಒಬ್ಬ ವಿಲಕ್ಷಣ ಅಲೆಮಾರಿ ಹಾಗೂ ಬಡಾಯಿಕೋರ ಪಾತ್ರ.

ಬರುವ ಮುನ್ನ ಒಬ್ಬ ಇತಿಹಾಸಕಾರನಾಗಿ ತನ್ನ ಸುಳ್ಳು ಹೇಳುವ ಶಕ್ತಿಯನ್ನು ಆಗಲೇ ಪ್ರದರ್ಶಿಸಿದ್ದ. ಆತನ ಸಾರ್ವಜನಿಕ ಜೀವನದ ಇತಿಹಾಸ ಫ್ರಾನ್ಸ್‌ನ ದುರಾದೃಷ್ಟದ ಇತಿಹಾಸವೇ ಆಗಿದೆ. 1830ರ ಮುಂಚೆ ರಿಪಬ್ಲಿಕನ್‌ರ ಜೊತೆಗಿದ್ದ ಆತ, ತನ್ನ ರಕ್ಷಕ ಲಾಫ್ಟೆಗೆ ವಿಶ್ವಾಸದ್ರೋಹ ಬಗೆದು ಅಧಿಕಾರದೊಳಗೆ ನುಸುಳಿದ. ಪಾದ್ರಿಗಳ ವಿರುದ್ಧ ಗಲಭೆಯನ್ನು ಸೃಷ್ಟಿಸಿ ಸೇಂಟ್ ಜರ್ಮೇನ್ ಆಕ್ಸೆರೊಯಿಸ್ ಮತ್ತು ಆರ್ಚ್‌ಬಿಷಪ್‌ರ ಅರಮನೆಯನ್ನು ಲೂಟಿ ಮಾಡಿ ಸ್ವತಃ ರಾಜನ ಮೆಚ್ಚುಗೆ ಗಳಿಸಿದ್ದ. ಬೇಹುಗಾರಿಕೆ ಹಾಗೂ ಬೆರ್ರಿ ಡಚ್ಚೆಸ್‌ಳ ಜೈಲು ಸೂಲಗಿತ್ತಿಯಾಗಿ ಕೆಲಸ ಮಾಡುವ ಮೂಲಕ ಆತ ಅಧಿಕಾರ ವಲಯದೊಳಗೆ ನುಗ್ಗಿದ್ದ. ಟ್ರಾನ್ಸೊನೇಯ್ನ್‌ನಲ್ಲಿ ರಿಪಬ್ಲಿಕನ್ನರ ಘೋರ ಹತ್ಯಾಕಾಂಡ ಮತ್ತು ತದನಂತರ ಪತ್ರಿಕೆಗಳು ಹಾಗೂ ಸಂಘ ರಚಿಸುವ  ಹಕ್ಕಿನ ವಿರುದ್ಧ ಕುಖ್ಯಾತ ಸೆಪ್ಟೆಂಬರ್ ಕಾನೂನುಗಳನ್ನು ರೂಪಿಸಿದ್ದು ಆತನ ಕೆಲಸವಾಗಿದೆ. 1840 ಮಾರ್ಚ್‌ನಲ್ಲಿ ಕ್ಯಾಬಿನೆಟ್‌ನ ಮುಖ್ಯಸ್ಥನಾಗಿ ಮರುಪ್ರತ್ಯಕ್ಷನಾದ ಆತ ಪ್ಯಾರಿಸ್ ಮುತ್ತುವ ಯೋಜನೆಯ ಮೂಲಕ ಇಡೀ ಫ್ರಾನ್ಸ್ ಅನ್ನು ಚಕಿತಗೊಳಿಸಿದ. ಇದು ಪ್ಯಾರಿಸ್‌ನ ಸ್ವಾತಂತ್ರ್ಯದ ವಿರುದ್ಧ ಒಂದು ಕರಾಳ ಪಿತೂರಿಯಾಗಿದೆ ಎಂದು ಖಂಡಿಸಿದ ರಿಪಬ್ಲಿಕನ್‌ರಿಗೆ ಆತ ಡೆಪ್ಯುಟಿಗಳ ಚೇಂಬರ್‌ನಿಂದ ಹೀಗೆಂದು ಉತ್ತರಿಸಿದ:

> *"ಏನು! ಮುತ್ತಿಗೆ ಹಾಕುವ ಯಾವುದೇ ಕೆಲಸದಿಂದ ಸ್ವಾತಂತ್ರ್ಯಕ್ಕೆ ಅಪಾಯ ಉಂಟಾಗುತ್ತದೆ ಎಂದು ಭಾವಿಸುವುದು ಭ್ರಮೆಯಾಗಿದೆ! ಯಾವುದಾದರೊಂದು ಸರಕಾರ ತನ್ನನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಒಂದಲ್ಲ ಒಂದು ದಿನ ತನ್ನ ರಾಜಧಾನಿ ಮೇಲೆ ತಾನೇ ಬಾಂಬ್ ದಾಳಿ ಮಾಡುತ್ತದೆ ಎಂದು ನೀವೆಲ್ಲಾ ಅಪವಾದ ಹೊರಿಸುತ್ತೀರಿ... ಆದರೆ ಜಯಶಾಲಿಯಾದ ನಂತರ ಆ ಸರಕಾರ ಹಿಂದೆಂದಿಗಿಂತಲೂ ನೂರು ಪಟ್ಟು ಅಸಾಧ್ಯವಾಗುತ್ತದೆ".*

ಬಹುಶಃ ಈ ಕೋಟೆಗಳನ್ನು ಪ್ರಷ್ಯನ್ನರಿಗೆ ಹಿಂದೆ ಶರಣಾಗತಿಗೊಳಿಸಿದ ಸರಕಾರವನ್ನು ಹೊರತುಪಡಿಸಿ, ಕೋಟೆಗಳಿಂದ ಪ್ಯಾರಿಸ್ ಮೇಲೆ ಬಾಂಬ್ ದಾಳಿ ನಡೆಸಲು ಯಾವುದೇ ಸರಕಾರ ಧೈರ್ಯ ತೋರಲಾರದು.

1848ರಲ್ಲಿ ಪೊಲೆರ್ಮೊದಲ್ಲಿ ದೊರೆ ಬೊಂಬಾ ಪ್ರಯತ್ನ ನಡೆಸಿದಾಗ, ಆಗ ಬಹಳ ಸಮಯದಿಂದ ಅಧಿಕಾರದಿಂದ ಹೊರಗಿದ್ದ ಥಿಯರ್ಸ್ ಡೆಪ್ಯುಟಿಗಳ ಸಭೆಯಲ್ಲಿ ಪುನಃ ಹೀಗೆ ಹೇಳಿದ: "ಪೊಲೆರ್ಮೊದಲ್ಲಿ ಏನು ನಡೆಯುತ್ತಿದೆ ಎಂಬುದು ನಿಮಗೆ ಗೊತ್ತೇ ಸನ್ಮಾನ್ಯ ಸದಸ್ಯರೇ?[4] 48 ಗಂಟೆಗಳ ಅವಧಿಯಲ್ಲಿ ದೊಡ್ಡ ಪಟ್ಟಣದ ಮೇಲೆ ಎಡೆಬಿಡದ ಬಾಂಬ್ ದಾಳಿ ನಡೆಸಿದ್ದು ಯಾರು ಎನ್ನುವುದು ನಿಮಗೆ ಗೊತ್ತಾದರೆ

---

4 ಎರಡನೇ ಫರ್ಡಿನಾಂಡ್‌ನ ನಿಯಪಾಲಿಟನ್ (ನೇಪಲ್ ಪಟ್ಟಣದ) ಪಡೆಗಳು 1848 ಜನವರಿಯಲ್ಲಿ ಜನಪ್ರಿಯ ಬಂಡಾಯವನ್ನು ದಮನಿಸಲು ಪಲೆರ್ಮೊ ಮೇಲೆ ಬಾಂಬ್ ದಾಳಿ ನಡೆಸಿದವು. 1848–49ರಲ್ಲಿ ಇಟಲಿಯ ರಾಜ್ಯಗಳಲ್ಲಿ ಬಂಡವಾಳಶಾಹಿ ಕ್ರಾಂತಿಗೆ ಸೂಚನೆ ಕೊಡುವ ಬಂಡಾಯವಾಗಿತ್ತದು. ಅದೇ ವರ್ಷದ ಶರತ್ಕಾಲದಲ್ಲಿ ಮೆಸ್ಸಿನಾದಲ್ಲಿ ನಡೆದ ಕ್ರೂರ ಬಾಂಬ್ ದಾಳಿಯಿಂದಾಗಿ ಆತನಿಗೆ ಕಿಂಗ್ ಬೊಂಬಾ ಎಂಬ ಅಡ್ಡ ಹೆಸರು ಬಂತು.

ನೀವೆಲ್ಲ ಭಯದಿಂದ (ಸಂಸದೀಯ ಅರ್ಥದಲ್ಲಿ) ನಡುಗುವಿರಿ. ಯುದ್ಧದ ಹಕ್ಕನ್ನು ಚಲಾಯಿಸುವ ವಿದೇಶಿ ಸೇನೆಯೊಂದರಿಂದ ಅದು ನಡೆಯಿತೇ? ಇಲ್ಲ. ಅದರ ಸರಕಾರದಿಂದಲೇ ಆ ಸತತ ಬಾಂಬ್ ದಾಳಿ ನಡೆಯಿತು. ಸನ್ಮಾನ್ಯರೇ. ತನ್ನ ಹಕ್ಕನ್ನು ಚಲಾಯಿಸಲು ಅದು 48 ಗಂಟೆ ಕಾಲ ಬಾಂಬ್ ದಾಳಿ ನಡೆಸಿತು... ಈ ಬಗ್ಗೆ ಯುರೋಪ್ ಗೆ ಮನವಿ ಮಾಡಲು ನನಗೆ ಅವಕಾಶ ನೀಡಿ. ಇಂಥ ಕೃತ್ಯಗಳ ವಿರುದ್ಧ ಪ್ರಬಲ ಆಕ್ರೋಶ ವ್ಯಕ್ತಪಡಿಸುವ ಮೂಲಕ ಎದ್ದು ನಿಲ್ಲಲು ಹಾಗೂ ಅದು ಮಾರ್ದನಿಸಲು ಮಾನವಕುಲಕ್ಕೆ ಅದು ಉತ್ತಮ ಸೇವೆಯನ್ನು ಸಲ್ಲಿಸುತ್ತದೆ. ತನ್ನ ದೇಶಕ್ಕೆ ಸೇವೆ ಸಲ್ಲಿಸಿದ (ಥಿಯರ್ಸ್ ಎಂದಿಗೂ ಅದನ್ನು ಮಾಡಿಲ್ಲ) ರೀಜಂಟ್ ಎಸ್ಪರ್ಟೆರೋ ಬಂಡಾಯವನ್ನು ದಮನಿಸಲಿಕ್ಕಾಗಿ ಬಾರ್ಸಿಲೋನಾದ ಮೇಲೆ ಬಾಂಬ್ ದಾಳಿ ನಡೆಸಲು ಉದ್ದೇಶಿಸಿದಾಗ ಜಗತ್ತಿನ ಎಲ್ಲಾ ಕಡೆಗಳಿಂದ ಆಕ್ರೋಶದ ಕೂಗು ಕೇಳಿ ಬಂದಿತ್ತು".

ಅದಾದ 18 ತಿಂಗಳ ನಂತರ, ಫ್ರೆಂಚ್ ಸೇನೆ ರೋಮ್ ಮೇಲೆ ನಡೆಸಿದ ಸತತ ಬಾಂಬ್ ದಾಳಿ[5]ಯನ್ನು ಪ್ರಬಲವಾಗಿ ಸಮರ್ಥಿಸಿಕೊಂಡವರಲ್ಲಿ ಥಿಯರ್ಸ್ ಕೂಡ ಒಬ್ಬ. ವಾಸ್ತವವಾಗಿ, ಎಡೆಬಿಡದ ಬಾಂಬ್ ದಾಳಿಯನ್ನು 48 ಗಂಟೆಗಳಿಗೆ ಸೀಮಿತಗೊಳಿಸಿದ್ದು ಮಾತ್ರವೇ ದೊರೆ ಬೊಂಬಾನ ತಪ್ಪು ಎನ್ನುವಂತೆ ಕಾಣಿಸುತ್ತಿತ್ತು.

ಫೆಬ್ರವರಿ ಕ್ರಾಂತಿಗೆ ಕೆಲವೇ ದಿನಗಳ ಮುನ್ನ, ಅರಮನೆ ಹಾಗೂ ಐಶ್ವರ್ಯದಿಂದ ದೂರವಾಗಿ ದೀರ್ಘಕಾಲದ ದೇಶಾಂತರ ವಾಸದಿಂದ ಚಡಪಡಿಸುತ್ತಿದ್ದು ಗ್ವಿಜೋನಿಂದ ಖಂಡನೆಗೆ ಒಳಗಾದ ಹಾಗೂ ಭಾರೀ ಅಲ್ಲೋಲಕಲ್ಲೋಲ ಸಂಭವಿಸಲಿರುವ ಸುಳಿವನ್ನು ಅರಿತ, ತನಗೆ ಮಿರಾಬ್ಯೂ ಮೌಷೆ (ಮಿರಾಬ್ಯೂ ನೊಣ) ಎಂಬ ಅಡ್ಡ ಹೆಸರನ್ನು ಪಡೆಯಲು ಕಾರಣವಾದ ಹುಸಿ–ವೀರತನದ ಥಿಯರ್ಸ್ ಡೆಪ್ಯುಟಿಗಳ ಸಭೆಯಲ್ಲಿ ಹೀಗೆಂದು ಘೋಷಿಸಿದ: "ನಾನು ಫ್ರಾನ್ಸ್ ಮಾತ್ರವಲ್ಲ ಯುರೋಪ್‌ನ ಕ್ರಾಂತಿಯ ಪಕ್ಷಕ್ಕೆ ಸೇರಿದವನು. ಕ್ರಾಂತಿಯ ಸರಕಾರ ಮಿತಗಾಮಿಗಳ (ಮಾಡರೇಟ್) ಕೈಯಲ್ಲಿ ಇರಬೇಕೆಂಬುದು ನನ್ನ ಬಯಕೆ... ಆದರೆ ಆ ಸರಕಾರ ತೀವ್ರವಾದಿಗಳು (ರ್‍ಯಾಡಿಕಲ್ಸ್) ಸೇರಿದಂತೆ ಕಟ್ಟರ್‌ಪಂಥೀಯರ ಕೈಗಳಿಗೆ ಹೋದರೆ ನಾನಂತೂ ನನ್ನ ಗುರಿಯಿಂದ ಹಿಂದೆ ಸರಿಯುವುದಿಲ್ಲ. ನಾನು ಯಾವತ್ತೂ ಕ್ರಾಂತಿ ಪಕ್ಷದ ಪರವಾಗಿಯೇ ಇರುತ್ತೇನೆ". ಫೆಬ್ರವರಿ ಕ್ರಾಂತಿ ಬಂದೇ ಬಿಟ್ಟಿತು. ಕುಳ್ಳಗಿನ ಮನುಷ್ಯ ಕನಸು ಕಂಡಂತೆ ಗುಯಿಟ್ಸ್ಜೊ ಸಚಿವ ಸಂಪುಟ ಸ್ಥಾನದಲ್ಲಿ ಥಿಯರ್ಸ್ ಸಂಪುಟ ಅಧಿಕಾರಕ್ಕೆ ಬರುವ ಬದಲು, ಲೂಯಿ ಫಿಲಿಪ್‌ನ ರಾಜತಂತ್ರವನ್ನು ರದ್ದುಮಾಡಿ ಗಣತಂತ್ರ ವ್ಯವಸ್ಥೆ ಬಂತು. ಜನಪ್ರಿಯ ವಿಜಯದ ಮೊದಲ ದಿನ ಆತ ಜಾಗ್ರತೆಯಿಂದ ಅಡಗಿಕೊಂಡನು. ದುಡಿಯುವ ಜನರಿಗೆ ಅವನ ಬಗ್ಗೆ ಇದ್ದ ತಿರಸ್ಕಾರದಿಂದಾಗಿಯಷ್ಟೇ ಅವರ ದ್ವೇಷಕ್ಕೆ ಒಳಗಾಗಲಿಲ್ಲ

5 ಇಟಲಿ ಕ್ರಾಂತಿಯನ್ನು ದಮನಿಸಲು 1849 ಎಪ್ರಿಲ್‌ನಲ್ಲಿ ಫ್ರೆಂಚ್ ಪಡೆಗಳನ್ನು ಇಟಲಿಗೆ ಕಳಿಸಲಾಯಿತು. ಅವುಗಳು ಫ್ರೆಂಚ್ ಸಂವಿಧಾನವನ್ನು ಸಾರಾಸಗಟಾಗಿ ಉಲ್ಲಂಘಿಸಿ ಕ್ರಾಂತಿಕಾರಿ ರೋಮ್ ಮೇಲೆ ಸತತ ಬಾಂಬ್ ದಾಳಿ ನಡೆಸಿದವು. ತನ್ನ ಪಡೆಗಳು ಯಾವುದೇ ದೇಶದ ಜನರ ಸ್ವಾತಂತ್ರ್ಯವನ್ನು ಹರಣ ಮಾಡಲು ಫ್ರೆಂಚ್ ಸಂವಿಧಾನ ಅವಕಾಶ ನೀಡುವುದಿಲ್ಲ.

ಎಂಬುದನ್ನು ಆತ ಮರೆತಿದ್ದ. ಆದಾಗ್ಯೂ ಜೂನ್ ಹತ್ಯಾಕಾಂಡ (1848ರಲ್ಲಿ ಪ್ಯಾರಿಸ್ ದುಡಿಯುವ ಜನರ ಬಂಡಾಯವನ್ನು ದಮನ ಮಾಡಿದ ಸಂಗತಿಯಿದು) ಮುಗಿದು ಆತನ ಶೈಲಿಯ ಕಾರ್ಯಾಚರಣೆಗೆ ಅನುವು ಆಗುವವರೆಗೂ, ಆತ ಸಾರ್ವಜನಿಕವಾಗಿ ದಂತಕಥೆಯಾದ ತನ್ನ ಧೈರ್ಯದಿಂದ ಸಾರ್ವಜನಿಕ ವೇದಿಕೆಗಳಲ್ಲಿ ಕಾಣಿಸಿಕೊಳ್ಳಲು ಹಿಂಜರಿದ. ಆಗ ಆತ 'ಪಾರ್ಟಿ ಆಫ್ ಆರ್ಡರ್'[6] ಮತ್ತು ಪಾರ್ಲಿಮೆಂಟರಿ ರಿಪಬ್ಲಿಕನ್‌ನ ಪ್ರಮುಖ ಚಿಂತಕನಾಗಿ ಹೊರಹೊಮ್ಮಿದ. ಆಳುವ ವರ್ಗದ ಎಲ್ಲಾ ಪರಸ್ಪರ ವಿರೋಧಿ ಬಣಗಳು ಜನರನ್ನು ದಮನ ಮಾಡಲು ಒಂದಾಗಿ ಪಿತೂರಿ ಹೆಣೆದಿದ್ದವು. ಅಲ್ಲದೆ ತಮ್ಮ ತಮ್ಮದೇ ಆದ ರಾಜಪ್ರಭುತ್ವವನ್ನು ಸ್ಥಾಪಿಸಲು ಅವುಗಳೇ ಪರಸ್ಪರರ ವಿರುದ್ಧ ಪಿತೂರಿ ಮಾಡುತ್ತಿದ್ದವು. ಈಗಿನಂತೆ ಅಂದು ಕೂಡ, ಗಣರಾಜ್ಯದ ಕ್ರೋಢೀಕರಣಕ್ಕೆ ರಿಪಬ್ಲಿಕನ್‌ರೇ ಏಕೈಕ ಅಡ್ಡಿ ಎಂದು ಥಿಯರ್ಸ್ ಖಂಡಿಸಿದ. ನೇಣು ಹಾಕುವ ಮನುಷ್ಯ ಡಾನ್ ಕಾರ್ಲೋಸ್‌ಗೆ ಹೇಳಿದಂತೆ ಥಿಯರ್ಸ್ ರಿಪಬ್ಲಿಕನ್‌ರ ಬಗ್ಗೆ ಹೀಗೆ ಹೇಳಿದ: "ನಿನ್ನದೇ ಒಳಿತಿಗಾಗಿ ನಾನು ನಿನ್ನನ್ನು ಹತ್ಯೆ ಮಾಡುತ್ತೇನೆ". ಅಂದಿನಂತೆ ಈಗಲೂ ತನ್ನ ಗೆಲವಿನ ನಂತರ ಆತ "ಸಾಮ್ರಾಜ್ಯ ಸ್ಥಾಪನೆಯ ಕಾರ್ಯ ನೆರವೇರಿತು" ಎಂದು ಉದ್ಗರಿಸಬಹುದು.

ಸ್ವಾತಂತ್ರ್ಯ ಕುರಿತ ಆತನ ಬೂಟಾಟಿಕೆಯ ಉಪದೇಶಗಳು ಹಾಗೂ ತನ್ನನ್ನು ವಂಚಿಸಿ ಸಂಸದೀಯತ್ವದಿಂದ ಒದ್ದು ಹೊರಹಾಕಿದ ಲೂಯಿ ಬೋನಪಾರ್ಟೆ ಬಗ್ಗೆ ಹೊಂದಿರುವ ವೈಯಕ್ತಿಕ ದ್ವೇಷದ ಹೊರತಾಗಿಯೂ, ಫ್ರೆಂಚ್ ಪಡೆಗಳು ರೋಮ್ ವಶಪಡಿಸಿಕೊಂಡಿದ್ದರಿಂದ ಹಿಡಿದು ಪ್ರಷ್ಯಾ ಜೊತೆಗಿನ ಯುದ್ಧದವರೆಗಿನ ದ್ವಿತೀಯ ಸಾಮ್ರಾಜ್ಯದ ಎಲ್ಲಾ ಅಪಕೀರ್ತಿಕಾರಕ ಕೃತ್ಯಗಳಲ್ಲಿ ಈ ಕುಳ್ಳನ ಪಾತ್ರವಿತ್ತು. ಜರ್ಮನ್ ಏಕತೆಯ ವಿರುದ್ಧ ತನ್ನ ಉಗ್ರ ನಡೆಯ ಮೂಲಕ ಜರ್ಮನಿ ವಿರುದ್ಧ ಯುದ್ಧವನ್ನು ಪ್ರೇರೇಪಿಸಿದ್ದ. ತನ್ನ ಪುಟ್ಟ ಕೈಗಳಿಂದ ಪ್ರಥಮ ನೆಪೋಲಿಯನ್‌ನ ಖಡ್ಗವನ್ನು ಯುರೋಪ್ ಮುಂದೆ ಝಳಪಿಸುವ ಖಯಾಲಿ ಹೊಂದಿದ್ದ ಈತನ ವಿದೇಶಾಂಗ ನೀತಿಗಳು ಫ್ರಾನ್ಸ್ ಅತೀವ ಅವಮಾನ ಅನುಭವಿಸುವಲ್ಲಿ ಪರ್ಯವಸಾನ ಹೊಂದಿವೆ. ಅದು 1840ರ ಲಂಡನ್ ಸಮಾವೇಶವೇ ಇರಬಹುದು, 1871ರ ಪ್ಯಾರಿಸ್ ಶರಣಾಗತಿಯೇ ಇರಬಹುದು. ಬಿಸ್ಮಾರ್ಕ್‌ನ ವಿಶೇಷ ಅನುಮತಿಯೊಂದಿಗೆ ಪ್ಯಾರಿಸ್ ವಿರುದ್ಧ ಸೆಡಾನ್ ಮತ್ತು ಮೆಟ್ಝ್ ಬಂಧಿಗಳನ್ನು ಛೂಬಿಡುವ, ಪ್ರಸಕ್ತ ಆಂತರಿಕ ಯುದ್ಧ ಕೂಡ ಅದಕ್ಕೆ ಹೊರತಾದುದಲ್ಲ. ಪ್ರತಿಭಾವಂತ ಮತ್ತು ಉದ್ದೇಶದಲ್ಲಿ ರೂಪಾಂತರ ಮಾಡುವಲ್ಲಿ ನಿಪುಣನಾದರೂ, ಜಡ್ಡುಕಟ್ಟಿದ ಹಳೆಯ ಕಾಲದ ದಿನಚರಿ ಕ್ರಮಗಳಲ್ಲಿ ಈ ಮನುಷ್ಯನ ಇಡೀ ಜೀವನ ಸವೆದು ಹೋಯಿತು. ಆಧುನಿಕ ಸಮಾಜದ ತೀವ್ರವಾದ

---

6 ಪಾರ್ಟಿ ಆಫ್ ಆರ್ಡರ್: ಇದು 1848ರಲ್ಲಿ ಸ್ಥಾಪನೆಯಾದ ದೊಡ್ಡ, ಸಂಪ್ರದಾಯವಾದಿ ಬಂಡವಾಳಶಾಹಿಗಳ ಪಕ್ಷ. ಅದು ಫ್ರಾನ್ಸ್‌ನಲ್ಲಿನ ರಾಜಪ್ರಭುತ್ವ ಬೆಂಬಲಿಗ ಬಣಗಳಾದ ಲೆಜಿಟಿಮಿಸ್ಟ್ ಮತ್ತು ಓರ್ಲಿಯಾಂಟಿಸ್ಟ್‌ಗಳ ಮಿತ್ರಕೂಟ. 1849ರಿಂದ 1851 ಡಿಸೆಂಬರ್ 2ರ ಕ್ಷಿಪ್ರ–ಕ್ರಾಂತಿಯ ವರೆಗೆ ಅದು ದ್ವಿತೀಯ ಸಾಮ್ರಾಜ್ಯದ ಶಾಸನ ಸಭೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿತ್ತು. ಪಾರ್ಟಿ ಆಫ್ ಆರ್ಡರ್‌ನ ಜನ–ವಿರೋಧಿ ನೀತಿಗಳ ದಿವಾಳಿತನದ ಲಾಭ ಪಡೆದ ಲೂಯಿ ಬೋನಪಾರ್ಟೆ ಕೂಟ ದ್ವಿತೀಯ ಸಾಮ್ರಾಜ್ಯವನ್ನು ಸ್ಥಾಪಿಸಿತು.

ಅಂತಃಪ್ರವಾಹಗಳು ಕಾಣದೇ ಹೋದವು ಎಂಬುದೇ ಇದಕ್ಕೆ ಸ್ವಯಂ ಸಾಕ್ಷಿಯಾಗಿದೆ. ಆದರೆ ಅತಿ ಹೆಚ್ಚಾಗಿ ಮೇಲುಮೈಯಲ್ಲಿಯೇ ಎದ್ದು ಕಾಣುವಂಥ ಬದಲಾವಣೆಗಳು ಕೂಡ, ಮೆದುಳಿನ ಸತ್ವವೆಲ್ಲ ನಾಲಿಗೆಗೆ ಪಲಾಯನ ಮಾಡಿದ್ದರಿಂದಲೋ ಏನೋ ಈ ಹೇಸಿಗೆ ಹುಟ್ಟಿಸುವ ಮೆದುಳಿಗೆ ತಿಳಿಯುತ್ತಿರಲಿಲ್ಲ. ಹೀಗಾಗಿಯೇ, ಹಳೆಯ ಫ್ರೆಂಚ್ ರಕ್ಷಣಾತ್ಮಕ ವ್ಯವಸ್ಥೆಯಿಂದ ಒಂದಿಂಚೂ ಆಚೆ ಸರಿಯುವುದು ಧರ್ಮದ್ರೋಹವಾಗುತ್ತದೆ ಎಂದು ಖಂಡಿಸಲು ಆತನಿಗೆ ಆಯಾಸವೇ ಆಗುತ್ತಿರಲಿಲ್ಲ. ಆತ ಲೂಯಿ ಫಿಲಿಪ್ ಬಳಿ ಒಬ್ಬ ಸಚಿವನಾಗಿದ್ದಾಗ ರೇಲ್ವೆಯನ್ನು ಒಂದು ವಿಚಿತ್ರ ಕಾಡುಪ್ರಾಣಿ ಎಂದು ಜರಿದನು. ಅಂತೆಯೇ ಲೂಯಿ ಬೋನಪಾರ್ಟೆ ಕೆಳಗಡೆ ಪ್ರತಿಪಕ್ಷದಲ್ಲಿದ್ದಾಗ ಕೊಳೆತುಹೋದ ಫ್ರೆಂಚ್ ಸೇನಾ ವ್ಯವಸ್ಥೆಯನ್ನು ಸುಧಾರಿಸುವ ಪ್ರತಿಯೊಂದು ಪ್ರಯತ್ನವನ್ನೂ ಅಪವಿತ್ರ ಕಾರ್ಯ ಎಂದು ಆತ ಹೇಳಿದ. ತನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ಉಪಯೋಗಕ್ಕೆ ಬೀಳುವ ಕಾರ್ಯಸಾಧುವಾದ ಒಂದೇ ಒಂದು ಕ್ರಮವನ್ನೂ ಆತ ಕೈಗೊಳ್ಳಲಿಲ್ಲ. ಸಂಪತ್ತನ್ನು ಕೂಡಿಹಾಕುವ ದುರಾಸೆ ಹಾಗೂ ಅದು ಉತ್ಪಾದಿಸುವ ಜನರ ಬಗ್ಗೆ ದ್ವೇಷ ಕಾರುವುದರಲ್ಲಿ ಮಾತ್ರ ಆತ ಸ್ಥಿರಚಿತ್ತನಾಗಿದ್ದ. ಮೊದಲ ಬಾರಿಗೆ ಲೂಯಿ ಫಿಲಿಪ್‌ನ ಸಚಿವ ಸಂಪುಟ ಸೇರಿದಾಗ ಬಡವನಾಗಿದ್ದ ಥಿಯರ್ಸ್ ಅದರಿಂದ ಹೊರಬಂದಾಗ ಒಬ್ಬ ಮಿಲಿಯಾಧಿಪತಿಯಾಗಿದ್ದ. ಅದೇ ರಾಜನ ಕೆಳಗೆ ಕೊನೆಯ ಬಾರಿಗೆ ಸಚಿವನಾಗಿದ್ದ ವೇಳೆ (1840 ಮಾರ್ಚ್ 1) ಸರಕಾರದ ನಿಧಿಯನ್ನು ತಿಂದು ಹಾಕಿದ್ದಕ್ಕಾಗಿ ಡೆಪ್ಯುಟಿಗಳ ಸದನದಲ್ಲಿ ಸಾರ್ವಜನಿಕವಾಗಿ ಟೀಕೆಗೊಳಗಾದಾಗ ಕಣ್ಣೀರಿನೊಂದಿಗೆ ಉತ್ತರಿಸಿ ತೃಪ್ತನಾದನು. ಕಣ್ಣೀರನ್ನು ಬಳಸುವಲ್ಲಿ ಜೂಲ್ಸ್ ಫಾವ್ರ್, ಅಥವಾ ಯಾವುದೇ ಮೊಸಳೆಗಿಂತಲೂ ಆತ ನಿಷ್ಣಾತನು. ಬೊರ್ಡಾಕ್ಸ್‌ನಲ್ಲಿ, ಸಂಭಾವ್ಯ ಆರ್ಥಿಕ ಬಿಕ್ಕಟ್ಟಿನಿಂದ ಫ್ರಾನ್ಸನ್ನು ಪಾರು ಮಾಡಲು ಆತ ಕೈಗೊಂಡ ಮೊದಲ ಕ್ರಮವೆಂದರೆ ತನಗೆ ವಾರ್ಷಿಕ ಮೂರು ಮಿಲಿಯ ಆದಾಯ ಬರುವ ದತ್ತಿಯನ್ನು ಬರೆದುಕೊಂಡದ್ದು. 1860ರಲ್ಲಿ ತನ್ನ ಪ್ಯಾರಿಸಿನ ಮತದಾರರಿಗೆ ಅನಾವರಣಗೊಳಿಸಿದ 'ಮಿತವ್ಯಯ ಗಣರಾಜ್ಯ'ದ ಮೊದಲ ಹಾಗೂ ಕೊನೆಯ ಮಾತು ಅದಾಗಿತ್ತು. 1830 ರ ಡೆಪ್ಯುಟಿಗಳ ಸದನದಲ್ಲಿ ಥಿಯರ್ಸ್‌ನ ಸಹೋದ್ಯೋಗಿಯಾಗಿದ್ದ, ಸ್ವತಃ ಬಂಡವಾಳಶಹಿಯಾಗಿದ್ದ ಹಾಗೂ ಪ್ಯಾರಿಸ್ ಕಮ್ಯೂನ್‌ನ ಒಬ್ಬ ಶ್ರದಾವಂತ ಸದಸ್ಯನಾಗಿದ್ದ ಎಂ. ಬೀಸ್‌ಲೆ ಒಂದು ಸಾರ್ವಜನಿಕ ಭಿತ್ತಿಪತ್ರದಲ್ಲಿ ಥಿಯರ್ಸ್ ಅನ್ನು ಈ ರೀತಿಯಾಗಿ ಸಂಬೋಧಿಸಿದ್ದ: "ಶ್ರಮವನ್ನು ಬಂಡವಾಳದ ಗುಲಾಮನಾಗಿ ಮಾಡುವುದು ನಿನ್ನ ಸಾರ್ವಜನಿಕ ಜೀವನದ ಪ್ರಮುಖ ಭಾಗವಾಗಿದೆ. ಹೊಟೇಲ್ ದ ವಿಲ್ಲೆ ದಲ್ಲಿ ಶ್ರಮಜೀವಿಗಳ ಗಣರಾಜ್ಯ ಸ್ಥಾಪನೆಯಾದದ್ದನ್ನು ಕಂಡ ದಿನದಿಂದಲೇ 'ಇವರು ಕ್ರಿಮಿನಲ್‌ಗಳು!' ಎಂದು ಇಡೀ ಫ್ರಾನ್ಸ್‌ಗೆ ಕೂಗಿ ಹೇಳುವುದನ್ನು ನೀನು ನಿಲ್ಲಿಸಲಿಲ್ಲ". ಠಕ್ಕತನದಲ್ಲಿ ಪ್ರವೀಣ, ದ್ರೋಹದಲ್ಲಿ ಹಾಗೂ ವಚನಭಂಗದಲ್ಲಿ ಕಲಾನಿಪುಣ, ಎಲ್ಲಾ ರೀತಿಯ ಕುತ್ಸಿತ ತಂತ್ರಗಾರಿಕೆ, ಮೋಸದ ತಂತ್ರಗಳನ್ನು ಹೆಣೆಯುವಲ್ಲಿ ಕುಶಲ, ಸಂಸದೀಯ ಪಕ್ಷ–ಸಂಘರ್ಷಗಳನ್ನು ರೂಪಿಸುವಲ್ಲಿ ನಿಪುಣ. ಅಧಿಕಾರದಿಂದ ಹೊರಗಿದ್ದಾಗ ಕ್ರಾಂತಿ ಮಾಡಲು ಪ್ರೇರೇಪಿಸಲು, ಅಧಿಕಾರದಲ್ಲಿದ್ದಾಗ ಕ್ರಾಂತಿಯನ್ನು ಹೊಸಕಿ ಹಾಕಲು ಯಾವತ್ತೂ ಹೇಸದಿರುವುದು. ಆದರ್ಶಗಳ ಜಾಗದಲ್ಲಿ ವರ್ಗ ಪೂರ್ವಗ್ರಹಗಳು, ಹೃದಯದ ಜಾಗದಲ್ಲಿ ದುರಹಂಕಾರ. ಈ ರೀತಿಯಾಗಿ ಆತನ ಸಾರ್ವಜನಿಕ ಜೀವನ

ಎಷ್ಟು ಅಸಹ್ಯಕರವೋ ಖಾಸಗಿ ಬದುಕು ಕೂಡ ಅಷ್ಟೇ ಕುಖ್ಯಾತವಾದುದು. ಈಗ ಕೂಡ ಫ್ರೆಂಚ್ ಸಲ್ಲಾ (*ಪ್ರಾಚೀನ ರೋಂ ನಲ್ಲಿ ಒಬ್ಬ ನಿರಂಕುಶ ಅಧಿಪತಿ) ಪಾತ್ರವನ್ನು ನಿರ್ವಹಿಸುವಾಗಲೇ ತನ್ನ ಕುಕೃತ್ಯಗಳ ಡಾಂಭಿಕ ಪ್ರದರ್ಶನಕ್ಕೂ ಆತ ಹೇಸುವುದಿಲ್ಲ.

ಪ್ರಷ್ಯಾಗೆ ಪ್ಯಾರಿಸ್ ಶರಣಾಗಿದ್ದರಿಂದ, ಪ್ಯಾರಿಸ್ ಮಾತ್ರವಲ್ಲದೆ ಇಡೀ ಫ್ರಾನ್ಸ್ ಶತ್ರುಗಳ ಜೊತೆಗಿನ ದ್ರೋಹದ ದೀರ್ಘ ಸಮಯದಿಂದ ಮುಂದುವರಿದ ಪಿತೂರಿಗಳನ್ನು ಕೊನೆಗೊಳಿಸಿತು. ಸೆಪ್ಟೆಂಬರ್ ನಾಲ್ಕರಂದು ಅಧಿಕಾರ ಕಸಿದುಕೊಂಡವರು ಅದನ್ನು ಆರಂಭಿಸಿದ್ದ ಅದೇ ದಿನ ಟ್ರೊಚು ಇದನ್ನು ಹೇಳಿದ್ದರು. ಇನ್ನೊಂದೆಡೆ ಅದು ಪ್ರಷ್ಯಾದ ನೆರವಿನೊಂದಿಗೆ ಗಣರಾಜ್ಯ ಮತ್ತು ಪ್ಯಾರಿಸ್ ವಿರುದ್ಧ ನಡೆಸಬೇಕಾದ ಯುದ್ಧಕ್ಕೆ ನಾಂದಿ ಹಾಡಿತು. ಶರಣಾಗತಿಯ ರೂಪದಲ್ಲೇ ಬಲೆಯನ್ನು ಬೀಸಲಾಯಿತು. ಆ ಹೊತ್ತಿನಲ್ಲಿ ಮೂರನೇ ಒಂದಕ್ಕಿಂತ ಹೆಚ್ಚಿನ ಪ್ರದೇಶ ಶತ್ರುಗಳ ಕೈಯಲ್ಲಿತ್ತು, ಪ್ರಾಂತ್ಯಗಳಿಂದ ರಾಜಧಾನಿಯ ಸಂಪರ್ಕ ಕಡಿದು ಹೋಗಿತ್ತು. ಎಲ್ಲಾ ಸಂಪರ್ಕ ವ್ಯವಸ್ಥೆ ಅಸ್ತವ್ಯಸ್ತಗೊಂಡಿತ್ತು. ಇಂಥ ಸನ್ನಿವೇಶದಲ್ಲಿ, ತಯಾರಿಗೆ ಸಾಕಷ್ಟು ಕಾಲಾವಕಾಶ ನೀಡದೆ ಫ್ರಾನ್ಸ್‌ನ ಒಂದು ನಿಜವಾದ ಪ್ರಾತಿನಿಧಿಕ ಸರಕಾರವನ್ನು ಚುನಾಯಿಸುವುದು ಅಸಾಧ್ಯವಾಗಿತ್ತು. ಈ ಹಿನ್ನೆಲೆಯಲ್ಲಿ, ಎಂಟು ದಿನಗಳೊಳಗೆ ಒಂದು ರಾಷ್ಟ್ರೀಯ ಅಸೆಂಬ್ಲಿಯನ್ನು ಚುನಾಯಿಸಬೇಕೆಂದು ಶರಣಾಗತಿ ಕರಾರು ಪತ್ರ ಹೇಳಿತು. ಫ್ರಾನ್ಸ್‌ನ ಬಹಳಷ್ಟು ಭಾಗಗಳಲ್ಲಿ ಮುಂಬರಲಿರುವ ಚುನಾವಣೆಗಳ ಸುದ್ದಿ ಅದರ ಹಿಂದಿನ ದಿನವಷ್ಟೇ ಗೊತ್ತಾಗುವಂತಾಯಿತು. ಶಾಂತಿ ಅಥವಾ ಯುದ್ಧವನ್ನು ನಿರ್ಣಯಿಸುವ ಏಕೈಕ ಉದ್ದೇಶದಿಂದ ಈ ಅಸೆಂಬ್ಲಿಯನ್ನು ರಚಿಸುವುದೆಂದು ಪತ್ರದಲ್ಲಿ ಸುಸ್ಪಷ್ಟವಾಗಿ ಹೇಳಲಾಗಿತ್ತು. ಅಂತಿಮವಾಗಿ ಒಂದು ಶಾಂತಿ ಒಡಂಬಡಿಕೆ ಮಾಡಿಕೊಳ್ಳುವುದು ಅದರ ಗುರಿಯಾಗಿತ್ತು. ಕದನ ವಿರಾಮದ ಷರತ್ತುಗಳಿಂದಾಗಿ ಯುದ್ಧವನ್ನು ಮುಂದುವರಿಸಲು ಅಸಾಧ್ಯ ಎಂದು ಜನತೆ ಅಭಿಪ್ರಾಯ ಪಡುವುದು ಅನಿವಾರ್ಯವಾಯಿತು. ಅಲ್ಲದೆ ಬಿಸ್ಮಾರ್ಕ್ ಹೇರಿದ ಶಾಂತಿಯನ್ನು ಮಂಜೂರು ಮಾಡಲು ಫ್ರಾನ್ಸ್‌ನಲ್ಲಿನ ಅತ್ಯಂತ ಕೆಟ್ಟ ಜನರೇ ಅತ್ಯಂತ ಸೂಕ್ತ ಎಂದು ಭಾವಿಸಿದರು. ಈ ಮುನ್ನೆಚ್ಚರಿಕೆಗಳ ಬಗ್ಗೆ ತೃಪ್ತಿ ಪಡದೆ ಕದನವಿರಾಮದ ರಹಸ್ಯವು ಪ್ಯಾರಿಸ್‌ಗೆ ತಲುಪುವ ಮುನ್ನವೇ ಥಿಯರ್ಸ್ ಪ್ರಾಂತ್ಯಗಳಲ್ಲಿ ಚುನಾವಣಾ ಪ್ರಚಾರಕ್ಕೆ ಹೊರಟನು. ಅಂದಿನ ಸಾಟಿಯಿಲ್ಲದ ಬೊನಪಾರ್ಟೆವಾದಿಗಳ ಸ್ಥಾನವನ್ನು ಆಕ್ರಮಿಸಲಿಕ್ಕಾಗಿ ಓರ್ಲಿಯಾನಿಸ್ಟ್‌ಗಳ[7] ಜೊತೆ ಸೇರಬೇಕಾದ ಲೆಜಿಟಿಮಿಸ್ಟ್ ಪಕ್ಷವನ್ನು ಪುನಶ್ಚೇತನಗೊಳಿಸುವುದು ಆತನ ಉದ್ದೇಶವಾಗಿತ್ತು. ಅವರ ಬಗ್ಗೆ ಆತನಿಗೆ ಭಯವಿರಲಿಲ್ಲ. ಒಂದು ಆಧುನಿಕ ಫ್ರಾನ್ಸ್ ಸರಕಾರ ಅಸಾಧ್ಯವಾದ್ದರಿಂದ, ಪ್ರತಿಸ್ಪರ್ಧಿಗಳಷ್ಟೇ ತಿರಸ್ಕಾರಯೋಗ್ಯವಾದ,ಈ ಪಕ್ಷವೇಪ್ರತಿ–ಕ್ರಾಂತಿಯ ಸಾಧನವಾಗಲು ಯೋಗ್ಯವಿದೆ. ಥಿಯರ್ಸ್‌ನ ಮಾತುಗಳಲ್ಲೇ ಹೇಳುವುದಾದರೆ (1883 ಜನವರಿ

7 ಲೆಜಿಟಿಮಿಸ್ಟ್‌ರು: 1792ರ ವರೆಗೆ; ಹಾಗೂ ಪುನರುಜ್ಜೀವನ ಅವಧಿಯಲ್ಲಿ (1814–30) ಕೂಡ, ಫ್ರಾನ್ಸ್‌ನಲ್ಲಿ ಅಧಿಕಾರದಲ್ಲಿದ್ದ ಬರ್ಬೋನ್ಸ್‌ನ 'ಲೆಜಿಟಿಮೇಟ್' ರಾಜವಂಶದ ಬೆಂಬಲಿಗರನ್ನು ಲೆಜಿಟಿಮಿಸ್ಟ್ ಎನ್ನುತ್ತಾರೆ. ಓರ್ಲಿಯಾನ್ಸ್ ರಾಜವಂಶದ ಬೆಂಬಲಿಗರು ಓರ್ಲಿಯಾನಿಸ್ಟ್‌ರು. 1830ರ ಜುಲೈ ಕ್ರಾಂತಿಯ ನಂತರದಿಂದ ಅಧಿಕಾರದಲ್ಲಿದ್ದ ಓರ್ಲಿಯಾನ್ಸ್ ರಾಜವಂಶವನ್ನು 1848ರ ಕ್ರಾಂತಿ ಪದಚ್ಯುತಗೊಳಿಸಿತು.

5ರಂದು ಡೆಪ್ಯುಟಿಗಳ ಸದನದಲ್ಲಿ ಮಾಡಿದ ಭಾಷಣ) ಈ ಪಕ್ಷವು "ವಿದೇಶಿ ಆಕ್ರಮಣ, ಅಂತಃಕಲಹ ಮತ್ತು ಅರಾಜಕತೆಯ ಮೂರು ಸಂಪನ್ಮೂಲಗಳಿಗೆ ಯಾವತ್ತೂ ಸೀಮಿತವಾಗಿತ್ತು". ಅವರು ತಮ್ಮ ಸುದೀರ್ಘ ನಿರೀಕ್ಷೆಯ ಪೂರ್ವಾನ್ವಯದ ಸಹಸ್ರಮಾನದ ಆಗಮನವಾಗುವುದೆಂದು ದಿಟವಾಗಿಯೂ ನಂಬಿದ್ದಾರೆ. ವಿದೇಶಿ ಆಕ್ರಮಣದ ಹೆಜ್ಜೆಗಳು ಫ್ರಾನ್ಸನ್ನು ತುಳಿದು ಹಾಕುತ್ತಿವೆ. ಒಂದು ಸಾಮ್ರಾಜ್ಯದ ಪತನವಾಗುತ್ತಿದೆ. ಒಬ್ಬ ಬೊನಪಾರ್ಟೆಯ ಬಂಧನವಾಗುತ್ತಿದೆ. ಇಲ್ಲಿ ಎಲ್ಲರೂ ತಮಗೆ ತಾವೇ ಯಜಮಾನರು. ಇತಿಹಾಸದ ಚಕ್ರ ನಿಸ್ಸಂಶಯವಾಗಿಯೂ ಹಿಂದಕ್ಕೆ ತಿರುಗಿ, 1816ಕ್ಕೆ ಹೋಗಿ 'ಶಾಂಬ್ರ್ ಅಂತ್ರೂವಬಲ್'ನಲ್ಲಿ[8] ನಿಂತಿದೆ. 1848ರಿಂದ 1851ರ ವರೆಗಿನ ಗಣರಾಜ್ಯದ ಅಸೆಂಬ್ಲಿಗಳಲ್ಲಿ ಅವರು ತಮ್ಮ ಶಿಕ್ಷಿತ ಮತ್ತು ತರಬೇತಾದ ಸಂಸದೀಯ ಪಟುಗಳಿಂದ ಪ್ರತಿನಿಧಿತರಾಗುತ್ತಿದ್ದರು. ಈಗ ನುಗ್ಗಿ ಬಂದದ್ದು ಪಕ್ಷದ ಕಾರ್ಯಕರ್ತರ –ಫ್ರಾನ್ಸ್‌ನ ಎಲ್ಲ ಪೂರ್ಸೊನ್ಯಾಕ್[9]ರ– ಪಡೆಯಾಗಿತ್ತು.

ಬೋರ್ದೋನಲ್ಲಿ 'ರೂರಲ್‌ಗಳ'[10] ಈ ಅಸೆಂಬ್ಲಿ ಸಭೆ ಸೇರಿದ ತಕ್ಷಣವೇ, ಸಂಸದೀಯ ಚರ್ಚೆಯ ಗೌರವಕ್ಕೂ ಕಾಯದೆ ಶಾಂತಿಯ ಪ್ರಾಥಮಿಕ ಅಂಶಗಳಿಗೆ ತಕ್ಷಣವೇ ಸಮ್ಮತಿ ನೀಡಬೇಕೆಂದು ಥಿಯರ್ಸ್ ಸ್ಪಷ್ಟಪಡಿಸಿದ. ಗಣರಾಜ್ಯ ಮತ್ತು ಅದರ ಬಲಿಷ್ಠ ಕೋಟೆಯಾದ ಪ್ಯಾರಿಸ್ ವಿರುದ್ಧ ಯುದ್ಧ ಆರಂಭಿಸಲು ಪ್ರಶ್ಯಾ ಅನುಮತಿ ನೀಡಲು ಅದೊಂದೇ ಷರತ್ತಾಗಿತ್ತು. ವಾಸ್ತವವಾಗಿ, ಪ್ರತಿ–ಕ್ರಾಂತಿಯು ಸ್ವಲ್ಪವೂ ವಿಳಂಬ ಮಾಡುವಂತಿರಲಿಲ್ಲ. ದ್ವಿತೀಯ ಸಾಮ್ರಾಜ್ಯವು ರಾಷ್ಟ್ರೀಯ ಸಾಲವನ್ನು ದುಪ್ಪಟ್ಟುಗೊಳಿಸಿತ್ತು. ಎಲ್ಲಾ ದೊಡ್ಡ ಪಟ್ಟಣಗಳನ್ನು ಭಾರೀ ಸಾಲದ ಹೊರೆಗೆ ನೂಕಲಾಗಿತ್ತು. ಯುದ್ಧದಿಂದ ಸಾಲದ ಹೊರೆ ಅತಿಯಾಗಿ ಹೆಚ್ಚಿದೆ, ದೇಶದ ಸಂಪನ್ಮೂಲಗಳನ್ನು ದಯೆದಾಕ್ಷಿಣ್ಯವಿಲ್ಲದೆ ಹಾಳುಗೆಡವಿದೆ. ಈ ವಿನಾಶವನ್ನು

8 ಚೇಂಬರ್ ಇಂಟ್ರೊವೇಬಲ್ (ಸಾಟಿಯಿಲ್ಲದ ಸದನ): ಪುನರುಜ್ಜೀವನದ ಮೊದಲ ವರ್ಷಗಳಲ್ಲಿ; 1815–16ರಲ್ಲಿನ ಡೆಪ್ಯುಟಿಗಳ ಸದನ. ಇದರಲ್ಲಿ ತೀವ್ರವಾದಿ ಪ್ರತಿಗಾಮಿಗಳು ಇದ್ದರು.

9 ಪೌರ್‌ಸಿಯುಗ್ನಾಕ್: ಮೊಲಿಯೆರ್‌ನ ಹಾಸ್ಯ ನಾಟಕಗಳಲ್ಲಿನ ಒಂದು ಪಾತ್ರ. ಹಾಸ್ಯ ಪ್ರಜ್ಞೆಯಿಲ್ಲದ, ಸಂಕುಚಿತ ಮನೋಭಾವದ ಸಣ್ಣ ಭೂಮಾಲಿಕನನ್ನು (ಕುಲೀನರನ್ನು) ಆ ಪಾತ್ರ ಪ್ರತಿನಿಧಿಸುತ್ತದೆ.

10 ರೂರಲ್‌ಗಳ ಅಸೆಂಬ್ಲಿ– ನ್ಯಾಷನಲ್ ಅಸೆಂಬ್ಲಿ. ಬೋರ್ದೋನಲ್ಲಿ 1871 ಫೆಬ್ರವರಿ 12ರಂದು ಆರಂಭವಾದ ಈ ಸದನದಲ್ಲಿ ಶ್ರೀಮಂತರೇ (ರಾಯಲಿಸ್ಟ್) ಬಹುಸಂಖ್ಯಾತರಿದ್ದರು; ಒಟ್ಟು 750 ಡೆಪ್ಯುಟಿಗಳಲ್ಲಿ 450 ರಾಯಲಿಸ್ಟ್‌ಗಳೇ ಇದ್ದರು. ಅವರು ಭೂಮಾಲಿಕರು ಹಾಗೂ ಪಟ್ಟಣಗಳು ಹಾಗೂ ಹಳ್ಳಿಗಳ ಪ್ರತಿಗಾಮಿ ಶಕ್ತಿಗಳ ಪ್ರತಿನಿಧಿಗಳಾಗಿದ್ದರು. ಹಾಗಾಗಿ ಅದನ್ನು 'ರೂರಲ್‌ಗಳ ಅಸೆಂಬ್ಲಿ' ಅಥವಾ 'ಭೂಮಾಲಿಕರ ಸದನ' ಎಂದು ಹೇಳಲಾಗುತ್ತದೆ.

ಪೂರ್ಣಗೊಳಿಸಲಿಕ್ಕಾಗಿ ಫ್ರೆಂಚ್ ನೆಲದ ಮೇಲೆ ಅರ್ಧ ಮಿಲಿಯ ಸೈನಿಕರೊಂದಿಗೆ ಪ್ರಷ್ಯನ್ ಶೈಲಾಕ್ ಇದ್ದಾನೆ. ಸೈನಿಕರ ನಿರ್ವಹಣೆಗೆ ಆತನ ಭದ್ರತಾ ವೆಚ್ಚ (ಇಂಡೆಮ್ನಿಟಿ) ಐದು ಮಿಲಿಯಾರ್ಡ್ಸ್ ಆಗಿದ್ದು ಅದರ ಜೊತೆ ಇನ್ನೂ ಬಾಕಿಯಿರುವ ಕಂತುಗಳ ಮೇಲೆ ಶೇಕಡಾ ಐದರಷ್ಟು ಬಡ್ಡಿ ಹಣ ಇನ್ನಷ್ಟಾಗುತ್ತದೆ. ಇದನ್ನೆಲ್ಲ ಯಾರು ಕೊಡುತ್ತಾರೆ? ಯುದ್ಧವನ್ನು ಆರಂಭಿಸಿದ, ಸಂಪತ್ತನ್ನು ಕಿತ್ತುಕೊಂಡವರೇ ಯುದ್ಧದ ವೆಚ್ಚವನ್ನು ಅದರ ಉತ್ಪಾದಕರ ಹೆಗಲ ಮೇಲೆ ವರ್ಗಾಯಿಸಲು ಗಣರಾಜ್ಯವನ್ನು ಹಿಂಸಾತ್ಮಕವಾಗಿ ಉರುಳಿಸುವುದೇ ಏಕೈಕ ಮಾರ್ಗ ಎಂದು ಆಶಿಸಬಹುದು. ಈ ರೀತಿಯಾಗಿ, ಫ್ರಾನ್ಸ್‌ಗಾದ ಅಪಾರ ಹಾನಿಯು, ವಿದೇಶಿ ಆಕ್ರಮಣಕಾರರ ಕಣ್ಗಾವಲು ಹಾಗೂ ಆಶ್ರಯದ ನಡುವೆಯೇ, ಭೂಮಿ ಮತ್ತು ಬಂಡವಾಳದ ಈ ದೇಶಪ್ರೇಮಿ ಪ್ರತಿನಿಧಿಗಳನ್ನು,ಅಂತರ್ಯುದ್ಧವನ್ನು – ಗುಲಾಮರ ಮಾಲಿಕರ ಬಂಡಾಯವನ್ನು –ವಿದೇಶಿ ಯುದ್ಧದೊಂದಿಗೆ ಕಸಿ ಮಾಡಲು ಉತ್ತೇಜಿಸಿದೆ.

ಒಂದು ಮಹಾನ್ ತಡೆಗೋಡೆ ಈ ಪಿತೂರಿಗೆ ಅಡ್ಡವಾಗಿ ನಿಂತಿದೆ– ಅದುವೇ ಪ್ಯಾರಿಸ್. ಪ್ಯಾರಿಸ್ ಅನ್ನು ನಿಶ್ಶಸ್ತ್ರಗೊಳಿಸುವುದೇ ಯಶಸ್ಸಿನ ಮೊದಲ ಕೆಲಸ ಎಂದು ತಿಳಿದಿದ್ದ ಥಿಯರ್ಸ್ ಪ್ಯಾರಿಸ್‌ಗೆ ಶಸ್ತ್ರಗಳನ್ನು ಒಪ್ಪಿಸಿ ಶರಣಾಗುವಂತೆ ಕರೆ ನೀಡಿದ. 'ರೂರಲ್' ಅಸೆಂಬ್ಲಿಯ ರಿಪಬ್ಲಿಕನ್–ವಿರೋಧಿ ಉದ್ರಿಕ್ತ ಮತಪ್ರದರ್ಶನಗಳು ಮತ್ತು ಗಣರಾಜ್ಯದ ಕಾನೂನಾತ್ಮಕ ಸ್ಥಾನಮಾನ ಕುರಿತು ಸ್ವತಃ ಥಿಯರ್ಸ್‌ನ ಅಸ್ಪಷ್ಟ ನಿಲುನಿಂದಾಗಿ ಪ್ಯಾರಿಸ್ ಬಸವಳಿದು ಹೋಯಿತು. ಪ್ಯಾರಿಸ್ ಅದನ್ನುನಿಸ್ತೇಜಗೊಳಿಸುವ ಹಾಗೂ ರಾಜಧಾನಿ ಸ್ಥಾನಮಾನದಿಂದ ವಂಚಿಸುವ ಬೆದರಿಕೆಯಿಂದಾಗಿ ಸುಟ್ಟು ಸುಣ್ಣವಾಯಿತು. ಓರ್ಲಿಯಾನಿಸ್ಟ್ ರಾಯಭಾರಿಗಳ ನೇಮಕ, ಬಾಕಿಯಿರುವ ವಾಣಿಜ್ಯ ಬಿಲ್‌ಗಳು ಹಾಗೂ ಮನೆ ಬಾಡಿಗೆ ಕುರಿತ ದುಫೋ಼ರ್ ಕಾನೂನುಗಳು, ಪ್ಯಾರಿಸ್‌ನ ವಾಣಿಜ್ಯ ಮತ್ತು ಕೈಗಾರಿಕೆಯ ನಾಶ, ಪ್ರತಿಯೊಂದು ಊಹಿಸಬಹುದಾದ ಪ್ರತೀ ಪ್ರಕಟಣೆ ಮೇಲೆ ಪೂಯೆ–ಕೆರ್ತ್ಯೆ ಎರಡು ಸೆಂಟಿಮ್ ತೆರಿಗೆ, ಬ್ಲಾಂಕಿ ಮತ್ತು ಫ್ಲೌರೆನ್ಸ್‌ಗೆ ವಿಧಿಸಿದ ಮರಣದಂಡನೆ, ರಿಪಬ್ಲಿಕನ್ ಪತ್ರಿಕೆಗಳ ಮೇಲೆ ದೌರ್ಜನ್ಯ, ವರ್ಸೇಲ್ಸ್‌ಗೆ ರಾಷ್ಟ್ರೀಯ ಅಸೆಂಬ್ಲಿಯ ವರ್ಗಾವಣೆ, ಪಲಿಕಾವೊ ಘೋಷಿಸಿ ಸೆಪ್ಟೆಂಬರ್ ನಾಲ್ಕರಂದು ಮುಗಿದ ಮುತ್ತಿಗೆಯ ನವೀಕರಣ, ಪ್ಯಾರಿಸ್ ಗವರ್ನರ್ ಆಗಿ ದೆಸೆಂಬ್ರಿಸರ್ ಪಕ್ಷದ ವಿನೊಯ್ ನೇಮಕ, ಸಾಮ್ರಾಜ್ಯಶಾಹಿ ಪೊಲೀಸ್ ಅಧಿಕಾರಿ ವ್ಯಾಲೆಂಟಿನ್‌ನನ್ನು ಪ್ಯಾರಿಸ್‌ನ ಪೊಲೀಸ್ ಮುಖ್ಯಸ್ಥನಾಗಿ ನೇಮಿಸಿದ್ದು ಮತ್ತು ರಾಷ್ಟ್ರೀಯ ರಕ್ಷಣಾ ಪಡೆಯ (ನ್ಯಾಷನಲ್ ಗಾರ್ಡ್) ಮುಖ್ಯಸ್ಥನನ್ನಾಗಿ ಜನರಲ್ ಓರೆಲ್ ದ ಪ್ಯಾಲದೀನ್ ನನ್ನು ನೇಮಿಸಿದ್ದು –ಇವೆಲ್ಲದರಿಂದ ಪ್ಯಾರಿಸ್ ಜರ್ಝರಿತವಾಯಿತು.

ಥಿಯರ್ಸ್ ಮತ್ತು ಆತನ ಅಡಿಯಾಳಾದ ನ್ಯಾಷನಲ್ ಗಾರ್ಡ್‌ನ ಸದಸ್ಯರಿಗೆ ಈಗೊಂದು ಪ್ರಶ್ನೆ ಕೇಳಬೇಕಾಗಿದೆ. ಆರ್ಥಿಕ ಸಚಿವ ಎಂ. ಪೌಯೆರ್–ಕ್ವೆರ್ಟಿಯರ್‌ನ ಸಂಸ್ಥೆಯ ಮೂಲಕ ಥಿಯರ್ಸ್ ಎರಡು ಮಿಲಿಯಾರ್ಡ್ಸ್ ಸಾಲ ಪಡೆದಿದ್ದ ಎನ್ನುವುದು ಎಲ್ಲರಿಗೂ ಗೊತ್ತು. ಈಗ ಈ ಕೆಳಗಿನದ್ದು ಸತ್ಯವೋ ಅಲ್ಲವೋ:

1. ಥಿಯರ್ಸ್, ಜೂಲ್ಸ್ ಫಾವ್ರ್, ಅರ್ನೆಸ್ಟ್ ಪಿಕಾರ್ಡ್, ಪೂಯೆ–ಕೆರ್ತ್ಯೆ ಮತ್ತು ಜೂಲ್ಸ್ ಸೈಮನ್‌ಗೆ ಖಾಸಗಿಯಾಗಿ ಲಾಭ ಮಾಡಿಕೊಡುವ ಉದ್ದೇಶದಿಂದ ನೂರಾರು ಮಿಲಿಯನ್‌ಗಳನ್ನು ನುಂಗಿಹಾಕುವ ರೀತಿಯಲ್ಲಿ ವ್ಯವಹಾರವನ್ನು ನಡೆಸಲಾಗಿತ್ತಲ್ಲವೇ?
2. ಪ್ಯಾರಿಸ್ 'ಶಾಂತವಾಗುವವರೆಗೆ' ಹಣವನ್ನು ಪಾವತಿ ಮಾಡಬಾರದಿತ್ತಲ್ಲವೇ?

ಮೇಲಿನ ಎಲ್ಲಾ ಘಟನಾವಳಿಗಳಲ್ಲಿ, ಥಿಯರ್ಸ್ ಮತ್ತು ಜೂಲ್ಸ್ ಫಾವ್ರ್ ಇವರಿಗೆ ಯಾವುದೋ ಅತಿ ಪ್ರಮುಖ ಒತ್ತಡ ಇದ್ದಿರಲೇಬೇಕು. ಯಾಕೆಂದರೆ ಬೋರ್ದೋ ಅಸೆಂಬ್ಲಿಯ ಬಹುಮತದ ಹೆಸರಿನಲ್ಲಿ ಪ್ರಷ್ಯನ್ನರು ತಕ್ಷಣವೇ ಪ್ಯಾರಿಸನ್ನು ವಶಪಡಿಸಿಕೊಳ್ಳಲು ಯಾವುದೇ ನಾಚಿಕೆಯಿಲ್ಲದೆ ಥಿಯರ್ಸ್ ಮತ್ತು ಜೂಲ್ಸ್ ಫಾವ್ರ್ ಅನುಮತಿ ನೀಡಿದರು. ಆದರೆ ಬಿಸ್ಮಾರ್ಕ್ ಇಂಥ ಆಟ ಆಡಲಿಲ್ಲ. ಜರ್ಮನಿಗೆ ಹಿಂದಿರುಗಿದ ಮೇಲೆ ಆತ ತನ್ನ ಫ್ರಾಂಕ್‌ಫರ್ಟ್ ಅಭಿಮಾನಿಗಳಿಗೆ ತಿರಸ್ಕಾರದಿಂದ ಅದನ್ನು ಹೇಳಿದ್ದ.

## II.

ಶಸ್ತ್ರಸಜ್ಜಿತ ಪ್ಯಾರಿಸ್ ಪ್ರತಿ–ಕ್ರಾಂತಿ ಪಿತೂರಿಗಳ ದಾರಿಯಲ್ಲಿರುವ ಏಕೈಕ ಗಂಭೀರ ತಡೆಯಾಗಿತ್ತು. ಆದ್ದರಿಂದ ಪ್ಯಾರಿಸನ್ನು ನಿಶ್ಶಸ್ತ್ರಗೊಳಿಸಬೇಕಾಗಿತ್ತು. ಈ ವಿಚಾರದಲ್ಲಿ ಬೋರ್ದೋ ಅಸೆಂಬ್ಲಿಯ ಪ್ರಾಮಾಣಿಕತೆಯನ್ನು ಮೆಚ್ಚಲೇಬೇಕು. ಅದರ ರೂರಲ್‌ಗಳ ಅಬ್ಬರದ ಭಾಷಣ ಸಾಕಷ್ಟು ಕೇಳಿರದಿದ್ದರೆ, ದೆಸೆಂಬ್ರಿಸರ್ ಪಕ್ಷದ ವಿನೊಯ್, ಬೊನಾಪಾರ್ಟೆ ಪೋಲಿಸ್ ವ್ಯಾಲೆಂಟಿನ್ ಮತ್ತು ಜೆಸುಯಿತ್ ಜನರಲ್ ಓರೆಲ್ ದಿ ಪ್ಯಾಲೆದಿನ್‌ಈ ತ್ರಿವಳಿಗಳ ದಯೆಗೆ, ಥಿಯರ್ಸ್ ಪ್ಯಾರಿಸನ್ನು ಶರಣಾಗತವಾಗುವಂತೆ ಮಾಡಿದ್ದರ ಕುರಿತು ಯಾವ ಅನುಮಾನಗಳೂ ಇರುತ್ತಿರಲಿಲ್ಲ ಆದರೆ ಪ್ಯಾರಿಸ್ ನಿಶಸ್ತ್ರೀಕರಣದ ನಿಜವಾದ ಉದ್ದೇಶವನ್ನು ಅವಮಾನಕಾರಿಯಾಗಿ ಪ್ರದರ್ಶಿಸುತ್ತಲೇ,ಕಣ್ಣಿಗೆ ರಾಚುವ ನಗ್ನ ಸುಳ್ಳುಗಳ ಕಂತೆಯಾಗಿರುವ ಒಂದು ನೆಪವನ್ನು ಮುಂದಿಟ್ಟು ನಿಶ್ಶಸ್ತ್ರಗೊಳ್ಳುವಂತೆ ಪಿತೂರಿಗಾರರು ಸೂಚಿಸಿದರು. ಪ್ಯಾರಿಸ್ ನ್ಯಾಷನಲ್ ಗಾರ್ಡ್‌ನ ಫಿರಂಗಿ ದಳ ಪ್ರಭುತ್ವಕ್ಕೆ ಸೇರಿದ್ದಾಗಿದ್ದು ಅದನ್ನು ಪ್ರಭುತ್ವಕ್ಕೇ ಮರಳಿಸಬೇಕು ಎಂದು ಥಿಯರ್ಸ್ ಹೇಳಿದ. ಆದರೆ ವಾಸ್ತವ ಬೇರೆಯದೇ ಇತ್ತು. ಶರಣಾಗತಿಯ ಮೊದಲ ದಿನದಿಂದಲೇ, ಬಿಸ್ಮಾರ್ಕ್ ಬಂಧಿಗಳು ಫ್ರಾನ್ಸ್ ಶರಣಾಗತಿ ಬಗ್ಗೆ ಸಹಿ ಹಾಕಿದರೂ, ಪ್ಯಾರಿಸನ್ನು ಬಲಾತ್ಕಾರದಿಂದ ಮಣಿಸುವಸಲುವಾಗಿಯೇ ಅನೇಕ ಅಂಗರಕ್ಷಕರನ್ನು ತಮ್ಮ ಬಳಿ ಇರಿಸಿಕೊಂಡಿದ್ದರು. ಪ್ಯಾರಿಸ್ ಈ ಕುರಿತು ಎಚ್ಚರ ವಹಿಸಿತ್ತು. ನ್ಯಾಷನಲ್ ಗಾರ್ಡ್ ಮರುಸಂಘಟಿತಗೊಂಡಿತು ಹಾಗೂ ಕೆಲವು ಹಳೆಯ ಬೊನಪಾರ್ಟೆ ದಳಗಳನ್ನು ಬಿಟ್ಟರೆ ಇಡೀ ನ್ಯಾಷನಲ್ ಗಾರ್ಡ್ ಚುನಾಯಿಸಿದ ಕೇಂದ್ರ ಸಮಿತಿಯ ಸಂಪೂರ್ಣ ನಿಯಂತ್ರಣಕ್ಕೆ ತನ್ನನ್ನು ಒಪ್ಪಿಸಿಕೊಂಡಿತು. ಪ್ರಷ್ಯನ್ನರು ಪ್ಯಾರಿಸ್ ಪ್ರವೇಶಿಸುವ ಸಂದರ್ಭದಲ್ಲಿ, ಪ್ರಷ್ಯನ್ನರು ಆಕ್ರಮಿಸಿಕೊಳ್ಳಬೇಕಾಗಿದ್ದ ಪ್ರದೇಶಗಳಲ್ಲಿ ಕ್ಯಾಪಿಚುಲಾರ್ಡ್‌ಗಳು (ಪ್ರಷ್ಯಾಕ್ಕೆ ಶರಣಾದವರು) ದ್ರೋಹದಿಂದ ಬಿಟ್ಟು

ಹೋದ ಫಿರಂಗಿ ಮತ್ತು ಇತರ ಶಸ್ತ್ರಗಳನ್ನು (ಮಿಲ್ರಾಲ್ಯುಸ್) ಮೋಂತ್‌ಮಾರ್ತ್ರ್, ಬೆಲೆವೀಯ್, ಮತ್ತು ಲಾ ವಿಯ್ಯೇತ್ ಗೆ ತೆಗೆದುಕೊಂಡು ಹೋಗಲು ಕೇಂದ್ರ ಸಮಿತಿ ಕ್ರಮಗಳನ್ನು ಕೈಗೊಂಡಿತು. ಆ ಆಯುಧಗಳನ್ನು ನ್ಯಾಷನಲ್ ಗಾರ್ಡ್‌ನ ಚಂದಾದಿಂದ ಪಡೆಯಲಾಗಿತ್ತು. ಜನವರಿ 28ರ ಶರಣಾಗತಿ ವೇಳೆ ಅವರ ಖಾಸಗಿ ಆಸ್ತಿಯಾಗಿ ಅದನ್ನು ಅಧಿಕೃತವಾಗಿ ಮಾನ್ಯ ಮಾಡಿ ಶರಣಾಗತಿಯಿಂದ ಹೊರತುಪಡಿಸಲಾಯಿತು, ಹಾಗೂ ಅವನ್ನು ಗೆದ್ದ ವಿದೇಶಪಡೆಗಳಿಗೆ ಅಥವಾ ದೇಶೀಯ ಸರಕಾರ ಎರಡಕ್ಕೂ ಸೇರದವು ಎಂದು ನಿಗದಿಪಡಿಸಲಾಯಿತು. ಥಿಯರ್ಸ್ ಎಷ್ಟು ಹತಾಶನಾಗಿದ್ದನೆಂದರೆ ಅತಿ ಕ್ಷುಲ್ಲಕ ಕಾರಣವನ್ನೂ ಮುಂದಿಟ್ಟು ಪ್ಯಾರಿಸ್ ವಿರುದ್ಧ ಯುದ್ಧ ಸಾರಲು ಹಪಹಪಿಸುತ್ತಿದ್ದ ಆತ ನ್ಯಾಷನಲ್ ಗಾರ್ಡ್‌ನ ಫಿರಂಗಿ ದಳ ಸರಕಾರದ ಆಸ್ತಿ ಎಂದು ಸುಳ್ಳು ಹೇಳುವ ಮಟ್ಟಕ್ಕೆ ಇಳಿದಿದ್ದ!

ಫಿರಂಗಿಗಳನ್ನು (ಮೋಸದಿಂದ) ಕಿತ್ತುಕೊಂಡದ್ದು,ಪ್ಯಾರಿಸನ್ನು ತನ್ಮೂಲಕ ಸೆಪ್ಟೆಂಬರ್ ನಾಲ್ಕರ ಕ್ರಾಂತಿಯನ್ನು ನಿಶ್ಶಸ್ತ್ರಗೊಳಿಸುವ ತಂತ್ರದ ಭಾಗವಲ್ಲದೆ ಬೇರೇನೂ ಅಲ್ಲ. ಆದರೆ ಕ್ರಾಂತಿಯು ಫ್ರಾನ್ಸಿನ ಕಾನೂನುಬದ್ಧ ಸ್ಥಾನ ಪಡೆದಿತ್ತು. ಗೆಲವು ಸಾಧಿಸಿದವರು ಶರಣಾಗತಿಯ ಷರತ್ತುಗಳಲ್ಲಿ ಗಣರಾಜ್ಯ ಮತ್ತು ಅದರ ಕಾರ್ಯಗಳನ್ನು ಮಾನ್ಯ ಮಾಡಿದ್ದರು. ಶರಣಾಗತಿಯ ನಂತರ ಎಲ್ಲಾ ವಿದೇಶಿ ಶಕ್ತಿಗಳು ಅದನ್ನು ಮಾನ್ಯ ಮಾಡಿದ್ದವು ಹಾಗೂ ಗಣರಾಜ್ಯದ ಹೆಸರಿನಲ್ಲಿ ನ್ಯಾಷನಲ್ ಅಸೆಂಬ್ಲಿಯ ಸಭೆಯನ್ನು ಕರೆಯಲಾಯಿತು. ಬೋರ್ದೋನಲ್ಲಿ ಕೇಂದ್ರ ಹೊಂದಿರುವ ನ್ಯಾಷನಲ್ ಅಸೆಂಬ್ಲಿ ಮತ್ತು ಅದರ ಕಾರ್ಯಕಾರಿ ಮಂಡಳಿಗೆ ಪ್ಯಾರಿಸ್ ಶ್ರಮಜೀವಿಗಳ ಸೆಪ್ಟೆಂಬರ್ ನಾಲ್ಕರ ಕ್ರಾಂತಿಯೇ ಕಾನೂನುಸಮ್ಮತ ಅಧಿಕಾರಪತ್ರ (ಟೈಟಲ್) ಆಗಿತ್ತು. ಅಲ್ಲದಿದ್ದರೆ, 1869ರಫ್ರೆಂಚ್ ಆಡಳಿತದಡಿ– ಪ್ರಷ್ಯನ್ ಅಲ್ಲ– ಸಾರ್ವತ್ರಿಕ ಜನಮತದ ಮೂಲಕ ರೂಪಿತವಾದ,ಆದರೆ ಕ್ರಾಂತಿಯ ಅಸ್ತ್ರದಿಂದ ಬಲಾತ್ಕಾರವಾಗಿ ವಿಸರ್ಜಿಸಲ್ಪಟ್ಟ 'ಕೋರ್ ಲೆಜಿಸ್ಲಾಟಿಫ್'ಗೆ, ನ್ಯಾಷನಲ್ ಅಸೆಂಬ್ಲಿಯು ಸ್ಥಾನ ಬಿಟ್ಟು ಕೊಡಬೇಕಾಗುತ್ತಿತ್ತು. ಥಿಯರ್ಸ್ ಹಾಗೂ ಆತನ ರಜಾ–ಚೀಟಿ ಮನುಷ್ಯರು ಕೇಯೆನ್‌ಗೆ[11] ಗಡಿಪಾರಾಗುವುದರಿಂದ ಪಾರಾಗಲು, ಲೂಯಿ ಬೊನಪಾರ್ಟೆ ಸಹಿ ಮಾಡಿದ ಸುರಕ್ಷಿತ ಷರತ್ತುಗಳಿಗೆ ಶರಣಾಗಬೇಕಾಗುತ್ತಿತ್ತು. ಪ್ರಷ್ಯಾ ಜೊತೆ ಶಾಂತಿಯ ಷರತ್ತುಗಳನ್ನು ರೂಪಿಸುವ ಅಧಿಕಾರ ಹೊಂದಿದ ನ್ಯಾಷನಲ್ ಅಸೆಂಬ್ಲಿಯು ಕ್ರಾಂತಿಯ ಒಂದು ಫಲವಾಗಿತ್ತಷ್ಟೆ. ಕ್ಷಾಮದ ಭೀಕರತೆಯ ಮತ್ತು ಟ್ರೊಚುನ ಯೋಜನೆಗಳನ್ನು ಹೊರತಾಗಿಯೂ ದೀರ್ಘವಾಗಿ ಪ್ರತಿರೋಧಿಸಿದ, ಐದು ತಿಂಗಳ ಕಾಲ ಮುತ್ತಿಗೆಗೆ ಒಳಗಾದ ಸಶಸ್ತ್ರ ಪ್ಯಾರಿಸ್ಸೇ ಅದರ ನಿಜವಾದ ಮೂರ್ತ ರೂಪವಾಗಿತ್ತು. ಅದುವೇ ಪ್ರಾಂತಗಳಲ್ಲಿ ಪಟ್ಟುಬಿಡದ ದೀರ್ಘ ಹೋರಾಟದ ಆಧಾರವಾಗಿತ್ತು.ಬೋರ್ದೋನ ಬಂಡಾಯಗಾರ ಗುಲಾಮರ ಮಾಲಿಕರ ಅವಮಾನಕರ ಕೋರಿಕೆಯಂತೆ ಪ್ಯಾರಿಸ್, ಒಂದೋ ಈಗ ಶಸ್ತ್ರಗಳನ್ನು ಶರಣಾಗತಿಗೊಳಿಸಬೇಕು ಇಲ್ಲವೇ ಸೆಪ್ಟೆಂಬರ್ ನಾಲ್ಕರ ತನ್ನ ಕ್ರಾಂತಿಯು

---

11 ಕೇಯೆನ್: ದಕ್ಷಿಣ ಅಮೆರಿಕದ ಫ್ರೆಂಚ್ ಗಯಾನಾದ ರಾಜಧಾನಿ. ಫ್ರಾನ್ಸ್‌ನ ಒಂದು ವಸಾಹತಾಗಿದ್ದಾಗ ಗಡಿಪಾರಾದವರನ್ನು ಕಳಿಸಲು ಬಳಸುತ್ತಿದ್ದ ಸ್ಥಳ. (ಭಾರತದಲ್ಲಿ ಅಂಡಮಾನ್ ಇದ್ದಂತೆ–ಅನು).

ಲೂಯಿ ಬೊನಪಾರ್ಟೆಯಿಂದ ಆತನ ಪ್ರತಿಸ್ಪರ್ಧಿಗಳಿಗೆ ಸರಳ ಅಧಿಕಾರ ಹಸ್ತಾಂತರ ಎನ್ನುವುದನ್ನು ಒಪ್ಪಿಕೊಳ್ಳಬೇಕು; ಅಥವಾ ದ್ವಿತೀಯ ಸಾಮ್ರಾಜ್ಯವನ್ನು ಸೃಷ್ಟಿಸಿದ, ಹಾಗೂ ಅದರ ಆಶ್ರಯದಲ್ಲಿ ಕೊಳೆತು ನಾರುವ ಸ್ಥಿತಿಗೆ ಬಂದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಕ್ರಾಂತಿಕಾರಿಯಾಗಿ ಮೂಲೋತ್ಪಾಟನೆ ಮಾಡದಿದ್ದರೆ ಫ್ರಾನ್ಸನ್ನು ವಿನಾಶದಿಂದ ವಿಮೋಚನೆಗೊಳಿಸಲು ಸಾಧ್ಯವಿಲ್ಲ ಹಾಗೂ ಅದರ ಪುನರುಜ್ಜೀವನ ಅಸಾಧ್ಯ ಎಂದುಅದು, ಫ್ರಾನ್ಸಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಿರುವ ಚಾಂಪಿಯನ್ ಆಗಿ ದಿಟ್ಟವಾಗಿ ಮುಂದೆ ಬರಬೇಕು. ಐದು ತಿಂಗಳ ಕಾಲ ಕ್ಷಾಮದಿಂದ ತತ್ತರಿಸಿದ್ದರೂ ಪ್ಯಾರಿಸ್ ಅದರಿಂದ ಒಂದರೆ ಗಳಿಗೆಯೂ ವಿಚಲಿತವಾಗಲಿಲ್ಲ. ಫ್ರೆಂಚ್ ಪಿತೂರಿಗಾರರ ವಿರುದ್ಧ ಪ್ರತಿರೋಧವನ್ನು ಕಟ್ಟುವಲ್ಲಿನ ಎಲ್ಲಾ ಎಡರುತೊಡರುಗಳನ್ನು ವೀರೋಚಿತವಾಗಿ ಎದುರಿಸಲು ದೃಢ ನಿಶ್ಚಯ ಮಾಡಿತು. ತನ್ನದೇ ಕೋಟೆಗಳ ಮೇಲಿನಿಂದ ಪ್ರಷ್ಯನ್ ಫಿರಂಗಿಗಳು ಬೆಂಕಿಯುಗುಳುತ್ತಿದ್ದರೂ ಅದು ಧೃತಿಗೆಡಲಿಲ್ಲ. ಅಸೆಂಬ್ಲಿಯ ಪ್ರಚೋದನೆ, ಕಾರ್ಯಕಾರಿ ಮಂಡಳಿಯ ದುರಾಕ್ರಮಣಗಳು ಹಾಗೂ ಪ್ಯಾರಿಸ್ ಮತ್ತದರ ಸುತ್ತಮುತ್ತ ಪಡೆಗಳು ಜಮಾವಣೆಗೊಳ್ಳುತ್ತಿದ್ದರೂ ಕೇಂದ್ರ ಸಮಿತಿಯು, ಪ್ಯಾರಿಸನ್ನು ಅಂತರ್ಯುದ್ಧಕ್ಕೆ ದೂಡುವುದನ್ನು ತಡೆಯಲು ಶತಪ್ರಯತ್ನ ಮಾಡುತ್ತಾ ಕೇವಲ ರಕ್ಷಣಾತ್ಮಕ ಧೋರಣೆಗೆ ಅಂಟಿಕೊಂಡಿತು.

ಸಾರ್ಜೆಂಟ್‌ಗಳು ಹಾಗೂ ಕೆಲವು ರೆಜಿಮೆಂಟ್‌ಗಳ ಮುಖ್ಯಸ್ಥನನ್ನಾಗಿ ಮಾಡಿ ಮೊಂತ್‌ಮಾರ್ತ್ರೆ ಮೇಲೆ ಹಠಾತ್ ರಾತ್ರಿ ವೇಳೆಯಲ್ಲಿ ದಾಳಿ ಮಾಡಿ ಅಲ್ಲಿನ ನ್ಯಾಷನಲ್ ಗಾರ್ಡ್‌ನ ಫಿರಂಗಿ ದಳವನ್ನು ವಶಪಡಿಸಿಕೊಳ್ಳಲು ವಿನೊಯ್‌ನನ್ನು ಕಳಿಸುವ ಮೂಲಕ ಥಿಯರ್ಸ್ ಅಂತಃಕಲಹವನ್ನು ಆರಂಭಿಸಿದ. ನ್ಯಾಷನಲ್ ಗಾರ್ಡ್‌ನ ಪ್ರತಿರೋಧ ಮತ್ತು ಜನತೆಯ ಸೌಹಾರ್ದ ಕಾರ್ಯಾಚರಣೆಗಳಿಂದಾಗಿ ಈ ಪ್ರಯತ್ನ ಹೇಗೆ ವಿಫಲವಾಯಿತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ವಿಜಯದ ಬಗ್ಗೆ ಓರೆಲ್ ದ ಪ್ಯಾಲದಿನ್ ಮೊದಲೇ ಬುಲೆಟಿನ್ ಮುದ್ರಿಸಿ ಇಟ್ಟುಕೊಂಡಿದ್ದ ಹಾಗೂ ಕ್ಷಿಪ್ರಕ್ರಾಂತಿಯ ಬಗ್ಗೆ ತೆಗೆದುಕೊಳ್ಳುವ ಕ್ರಮಗಳ ಪ್ಲೆಕಾರ್ಡ್‌ಗಳನ್ನು ಥಿಯರ್ಸ್ ಆಗಲೇ ಸಿದ್ಧಪಡಿಸಿಟ್ಟುಕೊಂಡಿದ್ದ. ಈಗ ಅವುಗಳ ಬದಲಿಗೆ ನ್ಯಾಷನಲ್ ಗಾರ್ಡ್‌ನ ಶಸ್ತ್ರಾಸ್ತ್ರಗಳನ್ನು ಅದಕ್ಕೇ ಬಿಟ್ಟುಕೊಡುವ 'ಉದಾತ್ತ' ಘೋಷಣೆಯನ್ನು ಥಿಯರ್ಸ್ ಮಾಡಬೇಕಾಯಿತು. ನ್ಯಾಷನಲ್ ಗಾರ್ಡ್‌ನ ಸೈನಿಕರು ಬಂಡುಕೋರರ ವಿರುದ್ಧ ಸರಕಾರದ ಜೊತೆ ಕೈಜೋಡಿಸುವರೆಂಬ ತುಂಬು ಭರವಸೆ ತನಗಿದೆ ಎಂದು ಆತ ಹೇಳಿದ. ಆದರೆ ಮೂರು ಲಕ್ಷ ನ್ಯಾಷನಲ್ ಗಾರ್ಡ್ ಸೈನಿಕರ ಪೈಕಿ ಕೇವಲ ಮುನ್ನೂರು ಜನರು ಮಾತ್ರವೇ ತಮ್ಮ ವಿರುದ್ಧವೇ ತಿರುಗಿಬೀಳುವ ಥಿಯರ್ಸ್ ಮನವಿಗೆ ಓಗೊಟ್ಟರು. ಶ್ರಮಜೀವಿಗಳ ಮಾರ್ಚ್ 18ರ ವೀರೋಚಿತ ಕ್ರಾಂತಿ ನಿಸ್ಸಂಶಯವಾಗಿಯೂ ಪ್ಯಾರಿಸ್ ಜನರ ಮನಮುಟ್ಟಿತು. ಕೇಂದ್ರ ಸಮಿತಿಯು ಅದರ ಹಂಗಾಮಿ ಸರಕಾರವಾಗಿತ್ತು. ಪ್ರಭುತ್ವ ಮತ್ತು ಯುದ್ಧಕ್ಕೆ ಸಂಬಂಧಿಸಿದಂತೆ ಅದರ ಇತ್ತೀಚಿನ ಕೋಲಾಹಲಕಾರಿ ಕಾರ್ಯ ನಿರ್ವಹಣೆಗಳು ವಾಸ್ತವವೋ ಯಾವುದೋ ಗತಿಸಿಹೋದ ಕಾಲದ ಕನಸೋ ಎಂದು ಯುರೋಪ್ ಆವಾಕ್ಕಾಗಿ ಒಂದು ಕ್ಷಣ ಅನುಮಾನ ವ್ಯಕ್ತಪಡಿಸಿದವು.

ಮಾರ್ಚ್ 18ರಿಂದ ಆರಂಭಿಸಿ ವರ್ಸೆಲ್ಸ್ ಪಡೆಗಳು ಪ್ಯಾರಿಸ್ ಪ್ರವೇಶಿಸುವವರೆಗೆ ಶ್ರಮಜೀವಿಗಳ ಕ್ರಾಂತಿಯು, ಕ್ರಾಂತಿ ಮತ್ತು ಇನ್ನೂ ಹೆಚ್ಚಾಗಿ ಪ್ರತಿಕ್ರಾಂತಿಗಳಲ್ಲಿ ನಡೆಯುವಂಥ ಯಾವುದೇ ಹಿಂಸಾತ್ಮಕ ಕೃತ್ಯಗಳಿಂದ, ಮುಕ್ತವಾಗಿತ್ತು. ಜನರಲ್‌ಗಳಾದ ಲೆಕೊಮ್ತ್ ಮತ್ತು ಕ್ಲೆಮೆಂಟ್ ಥಾಮಸ್‌ರನ್ನು ಗಲ್ಲಿಗೇರಿಸಿದ್ದು ಹಾಗು ಪ್ಲಾಸ್ ವಾಂದೋಂ ಪ್ರಕರಣ ಹೊರತುಪಡಿಸಿದರೆ ಕ್ರಾಂತಿ–ವಿರೋಧಿಗಳು ಕ್ರಾಂತಿಯ ಬಗ್ಗೆ ಅರಚಿಕೊಳ್ಳಲು ಏನೂ ಇರಲಿಲ್ಲ.

ಮೊಂತ್‌ಮಾರ್ತ್ರ್ ವಿರುದ್ಧ ರಾತ್ರಿ ಕಾರ್ಯಾಚರಣೆಯಲ್ಲಿ ತೊಡಗಿದ್ದ ಬೊನಪಾರ್ಟೆಯ ಅಧಿಕಾರಿಗಳಲ್ಲಿ ಒಬ್ಬನಾದ ಜನರಲ್ ಲೆಕೊಮ್ತ್ ಪ್ಲೇಸ್ ಪಿಗಾಲೆಯಲ್ಲಿ ಜಮಾಯಿಸಿದ್ದ ನಿಶ್ಶಸ್ತ್ರ ಜನರ ಮೇಲೆ ಗುಂಡು ಹಾರಿಸುವಂತೆ 81ನೇ ಲೈನ್ ರೆಜಿಮೆಂಟ್‌ಗೆ ನಾಲ್ಕು ಬಾರಿ ಆಜ್ಞಾಪಿಸಿದ್ದ. ಅದಕ್ಕೆ ಸೈನಿಕರು ನಿರಾಕರಿಸಿದಾಗ ಅವರನ್ನು ಹೀನಾಯವಾಗಿ ನಿಂದಿಸಿದ್ದ. ಮಹಿಳೆಯರು ಮತ್ತು ಮಕ್ಕಳ ಮೇಲೆ ಗುಂಡು ಹಾರಿಸುವ ಬದಲು ಸೈನಿಕರು ಲೆಕೊಮ್ತ್ ಮೇಲೆಯೇ ಗುಂಡು ಹಾರಿಸಿದರು. ದುಡಿಯುವ ಜನರ ಶತ್ರುಗಳ ಅಡಿಯಲ್ಲಿ ಸೇನಾ ತರಬೇತಾದವರಲ್ಲಿ ರೂಢಿಗತವಾದ ಅಭ್ಯಾಸಗಳು, ಅವರು ಪಕ್ಷ ಬದಲಿಸಿದ ತಕ್ಷಣವೇ ಬಹುಶಃ ಬದಲಾಗುವುದಿಲ್ಲ. ಅದೇ ಸೈನಿಕರು ಕ್ಲೆಮೆಂಟ್ ಥಾಮಸ್‌ನನ್ನು ಗಲ್ಲಿಗೇರಿಸಿದರು.

ಸೈನ್ಯದ ಒಬ್ಬ ಮಾಜಿ (ಕ್ವಾರ್ಟರ್ ಮಾಸ್ಟರ್–ಸಾರ್ಜೆಂಟ್) ಅಧಿಕಾರಿ, ಅಸಂತುಷ್ಟ 'ಜನರಲ್' ಕ್ಲೆಮೆಂಟ್ ಥಾಮಸ್‌ನನ್ನು ಲೂಯಿ ಫಿಲಿಪ್ ಆಡಳಿತದ ಉತ್ತರಾರ್ಧದಲ್ಲಿ ರಿಪಬ್ಲಿಕನ್ ಪತ್ರಿಕೆ 'ಲ ನ್ಯಾಸೋನಾಲ್'[12] ಕಚೇರಿಗೆ ನಿಯೋಜಿಸಲಾಯಿತು. ಫೆಬ್ರವರಿ ಕ್ರಾಂತಿಯ ನಂತರ, ಅಧಿಕಾರಕ್ಕೆ ಬಂದ 'ನ್ಯಾಸೋನಾಲ್' ನ ಪ್ರತಿನಿಧಿಗಳು ಈ ಹಳೆಯ ಅಧಿಕಾರಿಯನ್ನು ಜೂನ್ ಹತ್ಯಾಕಾಂಡದ ವೇಳೆ ಜನರಲ್ ಆಗಿ ರೂಪಾಂತರಗೊಳಿಸಿದರು. ಜೂಲ್ಸ್ ಫಾವ್ರ್‌ಯಂತೆ ಈತ ಕೂಡ ಆ ಹತ್ಯಾಕಾಂಡದ ಸಂಚುಕೋರರಲ್ಲಿ ಒಬ್ಬನಾಗಿದ್ದ ಹಾಗೂ ಅತ್ಯಂತ ಕ್ರೂರ ಕೊಲೆಗಡುಕರಲ್ಲಿ ಒಬ್ಬನಾಗಿ ಆತ ಹೊರಹೊಮ್ಮಿದ. ಆನಂತರ ಆತ ಮತ್ತು ಆತನ ಜನರಲ್ ಪಟ್ಟ ಬಹಳ ಸಮಯದ ವರೆಗೆ ಮಾಯವಾಗಿತ್ತು. 1870 ನವೆಂಬರ್ ಒಂದರಂದು ಆತ ಪುನಃ ಪ್ರತ್ಯಕ್ಷನಾದ. ರಕ್ಷಣಾ ಸರಕಾರವು ಹೊಟೆಲ್ ದ ವಿಲ್ಲೆಯಲ್ಲಿ ಒತ್ತೆಯಾಳಾಗುವ ಒಂದು ದಿನದ ಮುಂಚೆ, ಅದು ಬ್ಲಾಂಕ್ವಿ, ಫ್ಲೌರೆನ್ಸ್ ಮತ್ತು ದುಡಿಯುವ ಜನರ ಇತರ ಪ್ರತಿನಿಧಿಗಳಿಗೆ ಪೆರೋಲ್ ನೀಡುವುದನ್ನು ಘೋಷಿಸಿತು. ಅವರಿಂದ ಕಸಿದುಕೊಳ್ಳಲಾದ ಅಧಿಕಾರವನ್ನು ಪ್ಯಾರಿಸ್ ಸ್ವತಂತ್ರವಾಗಿ ಆಯ್ಕೆ ಮಾಡುವ ಕಮ್ಯೂನ್ ಕೈ ಸೇರುವಂತಾಗಲು ಹೀಗೆ ಮಾಡಲಾಯಿತು. ತಮ್ಮ ಮಾತನ್ನು ಉಳಿಸಿಕೊಳ್ಳುವ ಬದಲು ಈಗ ಬೊನಪಾರ್ಟೆಯ ಕೊರ್ಸಿಕಾನ್ಸ್ ಸ್ಥಾನಕ್ಕೆ ಬಂದಿರುವ ಟ್ರೊಚುನ ಬ್ರೆಟೊನ್‌ಗಳನ್ನು ಪ್ಯಾರಿಸ್ ಮೇಲೆ ಛೂಬಿಟ್ಟರು. ಈ ರೀತಿಯ ವಚನಭಂಗದಿಂದ ಕೆಟ್ಟ ಹೆಸರನ್ನು ಪಡೆಯುವುದಕ್ಕೆ ಸಿದ್ಧರಿಲ್ಲದ ಜನರಲ್ ತಾಮಿಸೀರ್ ಮಾತ್ರವೇ ನ್ಯಾಷನಲ್ ಗಾರ್ಡ್‌ನ ಕಮಾಂಡರ್‌ಷಿಪ್–

12 'ಲೆ ನ್ಯಾಷನಲ್': 1830–51ರಲ್ಲಿ ಪ್ಯಾರಿಸ್‌ನಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ. ಬಂಡವಾಳಶಾಹಿ–ರಿಪಬ್ಲಿಕನ್ ಪಕ್ಷದ ಮುಖವಾಣಿ.

ಇನ್–ಚೀಫ್ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಅವರ ಸ್ಥಾನಕ್ಕೆ ಕ್ಲಿಮೆಂಟ್ ಥಾಮಸ್ ಮತ್ತೆ ಒಬ್ಬ ಜನರಲ್ ಆಗಿ ಬಂದ. ತಾನು ಜನರಲ್ ಆಗಿದ್ದ ಅವಧಿಯುದ್ದಕ್ಕೂ ಆತ ಯುದ್ಧ ಮಾಡಿದ; ಪ್ರಷ್ಯನ್ನರ ವಿರುದ್ಧ ಅಲ್ಲ, ಬದಲಿಗೆ ಪ್ಯಾರಿಸ್ ನ್ಯಾಷನಲ್ ಗಾರ್ಡ್ ವಿರುದ್ಧ. ಆತ ನ್ಯಾಷನಲ್ ಗಾರ್ಡ್ ಶಸ್ತ್ರಾಸ್ತ್ರಗಳನ್ನು ಹೊಂದುವುದನ್ನು ತಡೆದ, ಬಂಡವಾಳಶಾಹಿಗಳ ಪಡೆಗಳನ್ನು ದುಡಿಯುವ ಜನರ ಪಡೆಗಳ ವಿರುದ್ಧ ಎತ್ತಿಕಟ್ಟಿದ. ಟ್ರೊಚು 'ಯೋಜನೆ'ಗೆ ವಿರುದ್ಧವಾಗಿದ್ದ ಎಲ್ಲಾ ಅಧಿಕಾರಿಗಳನ್ನು ಹೊರಹಾಕಿದ. ಮತ್ತು ಯಾವ ಶ್ರಮಜೀವಿಗಳ ದಿಟ್ಟತನವು ಅವರ ಸ್ಥಾಪಿತ ವೈರಿಗಳನ್ನೇ ಚಕಿತಗೊಳಿಸಿತೋ ಅದೇ ಶ್ರಮಜೀವಿಗಳ ಪಡೆಗಳನ್ನು ನಿಷೇಧಿಸುವಂಥ ಹೇಡಿತನ ತೋರಿದ. ಪ್ಯಾರಿಸ್‌ನ ಶ್ರಮಜೀವಿಗಳ ವೈಯಕ್ತಿಕ ಶತ್ರು ಎಂಬ ಜೂನ್ ಮುಂಚಿನ ಪ್ರಾಮುಖ್ಯತೆಯನ್ನು ಮರಳಿ ಪಡೆದಿದ್ದಕ್ಕಾಗಿ ಕ್ಲಿಮೆಂಟ್ ಥಾಮಸ್ ಭಾರೀ ಹೆಮ್ಮೆ ಪಟ್ಟನು. ಮಾರ್ಚ್ 18ರ ಕೆಲವು ದಿನಗಳ ಮೊದಲಷ್ಟೇ ಥಾಮಸ್, 'ಪ್ಯಾರಿಸ್ ದಂಗೆಯ ಉತ್ಕೃಷ್ಟ ಮುಖಂಡರನ್ನು ಮುಗಿಸಿಬಿಡುವ' ತನ್ನದೇ ಆದ ಒಂದು ಯೋಜನೆಯನ್ನು ತನ್ನ ಯುದ್ಧ ಮಂತ್ರಿ 'ಲ ಫ್ಲೋ' ಮುಂದೆ ಮಂಡಿಸಿದ್ದ. ವಿನೊಯ್ ಸೋತು ಸುಣ್ಣವಾದ ನಂತರ ಒಬ್ಬ ಹವ್ಯಾಸಿ ಬೇಹುಗಾರನಂತೆ ಆತ ಕಾರ್ಯರಂಗದಲ್ಲಿ ಪ್ರತ್ಯಕ್ಷ ಕಾಣಿಸಿಕೊಳ್ಳಬೇಕಿತ್ತು. ಕ್ಲಿಮೆಂಟ್ ಥಾಮಸ್ ಮತ್ತು ಲೆಕೊಮ್ಟ್‌ರನ್ನು ಕೊಲ್ಲುವಲ್ಲಿ ಕೇಂದ್ರ ಸಮಿತಿ ಮತ್ತು ಪ್ಯಾರಿಸ್‌ನ ಕಾರ್ಮಿಕರ ಹೊಣೆ ಎಷ್ಟಿದೆಯೋ ಅದೇ ರೀತಿ ಲಂಡನ್ ಪ್ರವೇಶದ ದಿನ ಜನರನ್ನು ಕೊಂದು ಹಾಕಿದ ದುರಂತಕ್ಕೆ ವೇಲ್ಸ್ ರಾಜಕುಮಾರಿ ಹೊಣೆಯಾಗಿದ್ದಾಳೆ!

ಪ್ಲಾಸ್ ವಾಂದೋಂನಲ್ಲಿ ನಡೆದ ಹತ್ಯಾಕಾಂಡ ಒಂದು ಮಿಥ್ಯೆ ಎಂದು ಎಂ. ಥಿಯರ್ಸ್ ಮತ್ತು ರೂರಲ್ಸ್ ಸತತವಾಗಿ ಅಸೆಂಬ್ಲಿಯಲ್ಲಿ ಕಡೆಗಣಿಸಿದರು. ಅದರ ಪ್ರಚಾರವನ್ನು ಪೂರ್ತಿಯಾಗಿ ಯುರೋಪಿಯನ್ ಪತ್ರಿಕೋದ್ಯಮದ ಸೇವಕರ ಕೂಟಕ್ಕೆ ವಹಿಸಿದರು.ಮಾರ್ಚ್ 18ರ ವಿಜಯ ಕಂಡು 'ದಿ ಮೆನ್ ಆಫ್ ಆರ್ಡರ್', ಅಂದರೆ ಪ್ಯಾರಿಸ್‌ನ ಪ್ರತಿಗಾಮಿಗಳು ನಡುಗಿಹೋದರು. ಅವರ ಪಾಲಿಗೆ ಅದು ಕೊನೆಗೂ ಜನತೆಯ ಪ್ರತೀಕಾರ ಪರ್ವದ ಆರಂಭದ ಸೂಚನೆಯಾಗಿತ್ತು. 1848ರ ಜೂನ್‌ನಿಂದ 1871 ಜನವರಿ 22ರವರೆಗೆ ಅವರ ಕೈಗಳಿಂದ ಹತರಾದವರ ಭೂತಗಳು ಅವರ ಕಣ್ಣ ಮುಂದೆಯೇ ಎದ್ದು ನಿಂತಿವೆ. ಅವರು ಕಂಗಾಲಾಗಿರುವುದು ಅವರ ಏಕೈಕ ಶಿಕ್ಷೆಯಾಗಿತ್ತು. ಸಾರ್ಜೆಂಟ್ಸ್ ದ ವಿಲ್ಲಾಗಳನ್ನು ಕೂಡ ನಿಶ್ಶಸ್ತ್ರಗೊಳಿಸಿ ಕೊಠಡಿಯೊಳಗೆ ಕೂಡಿ ಹಾಕಬೇಕಾಗಿತ್ತು, ಆದರೆ ಹಾಗಾಗದೆ ಅವರು ವರ್ಸೆಲ್ಸ್‌ಗೆ ಸುರಕ್ಷಿತವಾಗಿ ಪಲಾಯನ ಮಾಡಲು ಪ್ಯಾರಿಸ್‌ನ ಬಾಗಿಲುಗಳು ವಿಶಾಲವಾಗಿ ತೆರೆದುಕೊಂಡಿದ್ದವು. ಮೆನ್ ಆಫ್ ಆರ್ಡರ್‌ಗಳನ್ನು ಕೂಡ ಯಾವುದೇ ಹಾನಿಯಿಲ್ಲದೆ ಹೋಗಲು ಬಿಟ್ಟದ್ದು ಮಾತ್ರವಲ್ಲ, ಅವರು ಒಟ್ಟುಗೂಡಿ ಪ್ಯಾರಿಸ್‌ನ ಕೇಂದ್ರಭಾಗದ ಒಂದಕ್ಕಿಂತ ಹೆಚ್ಚು ಭದ್ರಕೋಟೆಗಳನ್ನೇ ವಶಪಡಿಸಿಕೊಳ್ಳಲು ಅವರಿಗೆ ಅವಕಾಶ ನೀಡಲಾಯಿತು. ಕೇಂದ್ರ ಸಮಿತಿಯ ಈ ಅನುಗ್ರಹ – ಸಶಸ್ತ್ರ ಕಾರ್ಮಿಕರ ಔದಾರ್ಯ– 'ಪಾರ್ಟಿ ಆಫ್ ಆರ್ಡರ್' ನ ಅಭ್ಯಾಸಗಳಿಗೆ ತೀರಾ ವ್ಯತಿರಿಕ್ತವಾಗಿದ್ದವು. ಕಾರ್ಮಿಕ ವರ್ಗದ್ದು ಪ್ರಜ್ಞಾಪೂರ್ವಕ ದೌರ್ಬಲ್ಯದ ಲಕ್ಷಣವಷ್ಟೆ ಎಂದು ತಪ್ಪಾಗಿ ವ್ಯಾಖ್ಯಾನಿಸಲಾಯಿತು.ಹೀಗಾಗಿ, ವಿನೊಯ್ ಫಿರಂಗಿ ಮತ್ತಿತರ ಅಸ್ತ್ರಗಳಿಂದ ಸಾಧಿಸಲು ಆಗದ್ದನ್ನು ನಿಶ್ಶಸ್ತ್ರ ಮತಪ್ರದರ್ಶನದ

ಮರೆಯಲ್ಲಿ ಸಾಧಿಸುವ ಸರಳ ಯೋಜನೆ ಅವರದ್ದಾಗಿತ್ತು. ಮಾರ್ಚ್ 22ರಂದು ದೊಂಬಿಕೋರರ ಒಂದು ಗುಂಪು ಕ್ವಾರ್ಟರ್ಸ್ ಆಫ್ ಲಕ್ಸುರಿಯಿಂದ ಹೊರಟಿತು. ಅವರಲ್ಲಿ ಎಲ್ಲಾ ಬಗೆಯ ಜನರಿದ್ದು ಸಾಮ್ರಾಜ್ಯದ ಚಿರಪರಿಚಿತ ಮುಖಗಳಾದ ಹೀಕೆರೆನ್, ಕೊಯೆಟ್‌ಲೊಗನ್, ಹೆನ್ರಿ ದೆ ಪೇನ್ ಮತ್ತಿತರರು ಇದ್ದರು. ಒಂದು ಶಾಂತಿಯುತ ಮತಪ್ರದರ್ಶನ ನಡೆಸುವ ಹೆಸರಿನಲ್ಲಿ ಜಮಾಯಿಸಿದ್ದ ಅವರು ರಹಸ್ಯವಾಗಿ ಹಂತಕರ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾಗಿದ್ದರು. ಅವರು ಮುಂದೆ ಸಾಗುತ್ತಿದ್ದಂತೆ ದಾರಿಯಲ್ಲಿ ಸಿಕ್ಕ ಪಡೆಗಳನ್ನು ನಿಶ್ಶಸ್ತ್ರಗೊಳಿಸಿದರು. 'ಕೇಂದ್ರ ಸಮಿತಿಗೆ ಧಿಕ್ಕಾರ!, ಹಂತಕರಿಗೆ ಧಿಕ್ಕಾರ!, ನ್ಯಾಷನಲ್ ಅಸೆಂಬ್ಲಿ ಚಿರಾಯುವಾಗಲಿ!' ಎಂಬ ಘೋಷಣೆಗಳನ್ನು ಕೂಗುತ್ತಾ ರೂ ದ ಲ ಪೇ ನಿಂದ ಹೊರಬರುತ್ತಾ ಅಲ್ಲಿ ಹಾಕಿದ್ದ ಗೆರೆಯನ್ನು ದಾಟಲು ಪ್ರಯತ್ನಿಸಿದರು. ಈ ರೀತಿಯಾಗಿ ಪ್ಲಾಸ್ ವಾಂದೋಂ ನಲ್ಲಿರುವ ನ್ಯಾಷನಲ್ ಗಾರ್ಡ್ ಕೇಂದ್ರ ಕಚೇರಿಗೆ ಅಕಾಸ್ಮಾತ್ತಾಗಿ ಲಗ್ಗೆ ಹಾಕುವುದು ಅವರ ಉದ್ದೇಶವಾಗಿತ್ತು. ಅವರ ಗುಂಡುಗಳ ದಾಳಿಗೆ ಉತ್ತರವಾಗಿ ದೊಂಬಿ–ವಿರೋಧಿ ಕಾನೂನನ್ನು ಜಾರಿ ಮಾಡಲಾಗುವುದು ಎಂದು ಹೇಳಲಾಯಿತು. ಅದು ಪರಿಣಾಮಕಾರಿ ಆಗದಿದ್ದಾಗ ನ್ಯಾಷನಲ್ ಗಾರ್ಡ್‌ನ ಜನರಲ್ ಪ್ರತಿ–ದಾಳಿಗೆ ಆದೇಶಿಸಿದ. ಜೆರಿಖೊ ಗೋಡೆಗಳ ಮೇಲೆ ಜೊಷುವಾ ಕಹಳೆಗಳು ಪರಿಣಾಮ ಬೀರುವ ರೀತಿಯಲ್ಲೇ ತಮ್ಮ 'ಗೌರವಾರ್ಹತೆಯ' ಪ್ರದರ್ಶನವು ಪ್ಯಾರಿಸ್ ಕ್ರಾಂತಿಯ ಮೇಲೆ ಪರಿಣಾಮ ಬೀರುವುದೆಂದು ನಿರೀಕ್ಷಿಸಿದ್ದ ಒಣ ಪ್ರತಿಷ್ಠೆ ತೋರುವವವರ ಮೇಲೆ ಒಂದು ಸುತ್ತಿನ ಗುಂಡು ಬಿದ್ದ ಕೂಡಲೇ ಅವರು ಪಲಾಯನ ಮಾಡತೊಡಗಿದರು. ಈ ಗುಂಡುದಾಳಿಯ ಚಕಮಕಿಯಲ್ಲಿ ನ್ಯಾಷನಲ್ ಗಾರ್ಡ್‌ನ ಇಬ್ಬರು ಮೃತಪಟ್ಟರು ಹಾಗೂ ಒಂಬತ್ತು ಜನ ಗಾಯಗೊಂಡರು. ಗಾಯಾಳುಗಳಲ್ಲಿ ಕೇಂದ್ರ ಸಮಿತಿಯ ಒಬ್ಬ ಸದಸ್ಯ ಕೂಡ ಇದ್ದರು. ಅಲ್ಲೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ರಿವಾಲ್ವರ್‌ಗಳು, ಖಡ್ಗಗಳು, ಕತ್ತಿಗಳು ಮೊದಲಾದ ಶಸ್ತ್ರಾಸ್ತ್ರಗಳು ಅವರ 'ಶಾಂತಿಯುತ' ಮತಪ್ರದರ್ಶನದ 'ನಿಶ್ಶಸ್ತ್ರ' ಗುಣಕ್ಕೆ ಸಾಕ್ಷಿಯಾಗಿದ್ದವು. ರೋಮ್ ಮೇಲೆ ಫ್ರೆಂಚ್ ಪಡೆಗಳು ಮಹಘಾತುಕಕಾರಿ ಆಕ್ರಮಣ ನಡೆಸಿದ್ದನ್ನು ಪ್ರತಿಭಟಿಸಿ ನ್ಯಾಷನಲ್ ಗಾರ್ಡ್ 1849 ಜೂನ್ 13ರಂದು ನಿಜವಾಗಿಯೂ ಶಾಂತಿಯುತ ಮತಪ್ರದರ್ಶನ ನಡೆಸಿದಾಗ,ಆ ನಿಶ್ಶಸ್ತ್ರರ ಮೇಲೆ ಎಲ್ಲಾ ಕಡೆಗಳಿಂದ ದಾಳಿ ಮಾಡಿ ಅವರನ್ನು ಹೊಸಕಿ ಹಾಕಿದ್ದಕ್ಕಾಗಿ ಹಾಗೂ ಅವರನ್ನು ಕುದುರೆಗಳ ಕಾಲಡಿ ತುಳಿಸಿದ್ದಕ್ಕಾಗಿ ಪಾರ್ಟಿ ಆಫ್ ಆರ್ಡರ್‌ನ ಜನರಲ್ ಶಾಂಗಾರ್ನ್ಯೆ ಅನ್ನು ಹೊಗಳಲಾಯಿತು. ಅವನನ್ನು ಅನ್ನು ಸಮಾಜದ ರಕ್ಷಕ ಎಂದು ನ್ಯಾಷನಲ್ ಅಸೆಂಬ್ಲಿ ಮತ್ತು ಅದರಲ್ಲೂ ವಿಶೇಷವಾಗಿ ಥಿಯರ್ಸ್ ಶ್ಲಾಘಿಸಿದ. ಆಗ ಪ್ಯಾರಿಸ್ ಒಂದು ರೀತಿಯ ಮುತ್ತಿಗೆಗೆ ಒಳಗಾಗಿತ್ತು. ದೌರ್ಜನ್ಯದ ಅನೇಕ ಹೊಸ ಕಾನೂನುಗಳನ್ನು ದುಫೋರ್ ಅಸೆಂಬ್ಲಿಯಲ್ಲಿ ತರತುರಿಯಲ್ಲಿ ಅಂಗೀಕರಿಸಿದ. ಹೊಸ ಬಂಧನಗಳು ಹಾಗೂ ಹೊಸದಾಗಿ ಗಡಿಪಾರು ಮಾಡುವ ಮೂಲಕ ಭಯದ ವಾತಾವರಣವನ್ನು ಸೃಷ್ಟಿಸಲಾಯಿತು. ಆದರೆ ಕೆಳಹಂತದವರು ಇದನ್ನು ಬೇರೆ ರೀತಿಯಲ್ಲಿ ನಿಭಾಯಿಸಿದರು. ಕೇವಲ ಎರಡು ದಿನಗಳ ನಂತರ ಅಡ್ಮಿರಲ್ ಸೇಯ್‌ಸೆಟ್ ನೇತೃತ್ವದಲ್ಲಿ ಅವರು ಶಸ್ತ್ರಸಜ್ಜಿತಾಗಿ ಒಗ್ಗೂಡಲು ನೆರವಾಗುವ ರೀತಿಯಲ್ಲಿ 1871ರ ಕೇಂದ್ರ ಸಮಿತಿ 'ಶಾಂತಿಯುತ ಮತಪ್ರದರ್ಶನದ' ಹೀರೋಗಳನ್ನು ಅಲಕ್ಷಿಸಿದರು. ಈ ಸಶಸ್ತ್ರ ಪ್ರದರ್ಶನಕ್ಕೆ ಕಳಂಕಪ್ರಾಯವೆನ್ನುವಂತೆ ವರ್ಸೆಲ್ಸ್‌ನ ಕಾಲ್ತುಳಿತ ದುರಂತ ನಡೆಯಿತು.

ಮೊಂತ್‌ಮಾರ್ತ್ರ್ ಮೇಲಿನ ಘಾತುಕ ದಾಳಿಯ ಪ್ರಯತ್ನದ ಮೂಲಕ ಥಿಯರ್ಸ್ ಆರಂಭಿಸಿದ ಅಂತಃಕಲಹವನ್ನು ಮುಂದುವರಿಸಲು ಮನಸ್ಸಿಲ್ಲದ ಕೇಂದ್ರ ಸಮಿತಿ, ಈ ಬಾರಿ ವರ್ಸೆಲ್ಸ್‌ನತ್ತ ಏಕಾಏಕಿ ಮುನ್ನುಗ್ಗದಿರುವ ನಿರ್ಣಾಯಕ ತಪ್ಪೆಸಗಿದ ಅಪರಾಧ ಮಾಡಿತು. ಅದರಿಂದ ಸಂಪೂರ್ಣ ಅಸಹಾಯಕತೆ ಉಂಟಾಯಿತು ಹಾಗೂ ಆ ಮೂಲಕ ಥಿಯರ್ಸ್ ಮತ್ತು ರೂರಲ್‌ಗಳ ಪಿತೂರಿಗಳನ್ನು ಕೊನೆಗೊಳಿಸಲು ಆಗಲಿಲ್ಲ. ಅದರ ಬದಲು, ಕಮ್ಯೂನ್‌ಗೆ ಚುನಾವಣೆ ನಡೆಯುವ ದಿನವಾದ ಮಾರ್ಚ್ 26ರಂದು ಮತಪೆಟ್ಟಿಗೆ ಮೂಲಕ ತನ್ನ ಶಕ್ತಿಯನ್ನು ಪ್ರದರ್ಶಿಸಲು ಪಾರ್ಟಿ ಆಫ್ ಆರ್ಡರ್‌ಗೆ ಮತ್ತೆ ಅವಕಾಶ ನೀಡಲಾಯಿತು. ಆಗ ತಮ್ಮ ಮೇಲೆ ವಿಜಯ ಸಾಧಿಸಿದವರ ಜೊತೆಯಲ್ಲಿ ಪ್ಯಾರಿಸ್‌ನ ಮೇಯರ್ ಕಚೇರಿಗಳಲ್ಲಿ ಕುಳಿತು ಅವರು ಸಂಧಾನದ ಮಾತುಗಳನ್ನು ವಿನಿಮಯ ಮಾಡಿಕೊಂಡರು. ಆದರೆ ಅವರನ್ನು ಸಮಯಸಂದರ್ಭ ನೋಡಿ ನಾಶ ಮಾಡುವ ಬಗ್ಗೆ ಅವರು ಮನಸ್ಸಿನಲ್ಲೇ ಪ್ರತಿಜ್ಞೆ ಮಾಡಿಕೊಂಡಿದ್ದರು.

ಈಗ ನಾಣ್ಯದ ಇನ್ನೊಂದು ಮುಖ ನೋಡಿ. ಥಿಯರ್ಸ್, ಪ್ಯಾರಿಸ್ ವಿರುದ್ಧದ ಎರಡನೇ ಹೋರಾಟವನ್ನು ಎಪ್ರಿಲ್ ಆರಂಭದಲ್ಲಿ ಶುರು ಮಾಡಿದ. ವರ್ಸೆಲ್ಸ್‌ಗೆ ಕರೆತಂದ ಪ್ಯಾರಿಸ್‌ನ ಕೈದಿಗಳನ್ನು ಅಮಾನುಷ ದಬ್ಬಾಳಿಕೆಗೆ ಒಳಪಡಿಸಲಾಯಿತು. ಅರ್ನೆಸ್ಟ್ ಪಿಕಾರ್ಡ್ ತನ್ನ ಚೆಡ್ಡಿಯ ಜೇಬುಗಳಲ್ಲಿ ಕೈ ಹಾಕಿಕೊಂಡು ಅವರನ್ನು ಅಪಹಾಸ್ಯ ಮಾಡುತ್ತಿರುವಾಗ ಬಾಲ್ಕನಿಯಲ್ಲಿ ಥಿಯರ್ಸ್ ಮತ್ತು ಫಾವ್ರ್ ತಮ್ಮ ಗೌರವಾನ್ವಿತ ಪತ್ನಿಯರ ಮಧ್ಯೆ ನಿಂತು ವರ್ಸೆಲ್ಸ್ ಗುಂಪಿನ ದೌರ್ಜನ್ಯವನ್ನು ಶ್ಲಾಘಿಸುತ್ತಿದ್ದ. ಬಂಧಿತ ಸೈನಿಕರನ್ನು ಹಾಡಹಗಲೇ ಬರ್ಬರವಾಗಿ ಹತ್ಯೆ ಮಾಡಲಾಯಿತು; ಕಬ್ಬಿಣದ ಕುಲುಮೆಯ ಕೆಲಸಗಾರ, ನಮ್ಮ ವೀರ ಗೆಳೆಯ ಜನರಲ್ ದುವಲ್‌ರನ್ನು ಯಾವುದೇ ವಿಚಾರಣೆಯಿಲ್ಲದೆ ಗುಂಡಿಟ್ಟು ಸಾಯಿಸಲಾಯಿತು. ದ್ವಿತೀಯ ಸಾಮ್ರಾಜ್ಯದಲ್ಲಿ ತನ್ನ ಅನಿಯಂತ್ರಿತ ಕಾಮಕೇಳಿಗಳ ಪ್ರದರ್ಶನಕ್ಕೆ ಕುಖ್ಯಾತಳಾಗಿದ್ದ ಆತನ ಹೆಂಡತಿಯ ಪ್ರಿಯಕರನಾದ ಗ್ಯಾಲಿಫೆ (ಫ್ರೆಂಚ್ ಜನರಲ್ ಆದ ಈತನ ಪೂರ್ಣ ಹೆಸರು ಗ್ಯಾಸ್ತೋನ್ ಅಲೆಕ್ಸಾಂಡರ್ ಆಗಸ್ಟ್ ಮಾರ್ಕ್ವಿಸ್ ದ ಗ್ಯಾಲಿಫೆ) ನ್ಯಾಷನಲ್ ಗಾರ್ಡ್‌ನ ಒಂದು ಸಣ್ಣ ತುಕಡಿಯನ್ನು ನಿರ್ನಾಮ ಮಾಡಲು ತಾನು ಆದೇಶಿಸಿದ್ದಾಗಿ ಬಡಾಯಿ ಕೊಚ್ಚಿಕೊಂಡಿದ್ದಾನೆ. ಪ್ರತಿಯೊಬ್ಬ ಸೈನಿಕನನ್ನು ಗುಂಡಿಟ್ಟು ಸಾಯಿಸಲು ಆದೇಶ ನೀಡಿದ್ದಕ್ಕಾಗಿ ಪಲಾಯನಗೈದ ವಿನೊಯ್‌ನನ್ನು ಗ್ರಾಂಡ್ ಕ್ರಾಸ್ ಆಫ್ ಲಿಜನ್ ಆಫ್ ಹಾನರ್ ಆಗಿ ಥಿಯರ್ಸ್ ನೇಮಕ ಮಾಡಿದ. ಮಹಾನ್ ಚೇತನ ಹಾಗೂ ಕೆಚ್ಚೆದೆಯ ಫ್ಲೋರೆನ್ಸ್‌ರನ್ನು ಸಣ್ಣಸಣ್ಣ ಚೂರುಗಳಾಗಿ ಬರ್ಬರವಾಗಿ ಕೊಚ್ಚಿ ಹಾಕಿದ ಹೇಯ ದ್ರೋಹಕ್ಕೆ ಕಾಣಿಕೆಯಾಗಿ ಡೆಸ್ಮರೆ ಗೆ ಉನ್ನತ ಹುದ್ದೆ ನೀಡಲಾಯಿತು. 1870 ಅಕ್ಟೋಬರ್ 31ರಂದು ರಕ್ಷಣಾ ಸರಕಾರದ ಮುಖ್ಯಸ್ಥರ ಪ್ರಾಣಗಳನ್ನು ರಕ್ಷಿಸಿದ್ದ ವೀರ ಫ್ಲೋರೆನ್ಸ್. ಫ್ಲೋರೆನ್ಸ್‌ರನ್ನು ಹತ್ಯೆ ಮಾಡಿದ 'ಉತ್ತೇಜನಕಾರಿ ವಿವರಗಳನ್ನು' ಥಿಯರ್ಸ್ ನ್ಯಾಷನಲ್ ಅಸೆಂಬ್ಲಿಯಲ್ಲಿ ವಿಜಯೋತ್ಸಾಹದಿಂದ ಹಂಚಿಕೊಂಡ. ಟಾಮರ್‌ಲೇನ್‌ನ ಒಂದು ಭಾಗವನ್ನು ನಿರ್ವಹಿಸಲು ಅನುಮತಿ ಪಡೆದ ಸಂಸದೀಯ ಜಂಭದ ಟಾಮ್ ಥಂಬ್ ನಂತೆ ನಾಗರಿಕ ಯುದ್ಧದ (ಅಂಬುಲೆನ್ಸ್ ಹೋಗಲು ಅಗತ್ಯ ತಟಸ್ಥತೆ ಇತ್ಯಾದಿ) ಪ್ರತಿಯೊಂದು ಹಕ್ಕನ್ನು ಆತ ಬಂಡುಕೋರರಿಗೆ ನಿರಾಕರಿಸಿದ.

ಇದು ವೋಲ್ಟೇರ್ ಹೇಳಿದಂತೆ ಕೆಲ ಕಾಲ ಕೋತಿಗೆ ಹುಲಿಯ ಆರ್ಭಟ ಪ್ರದರ್ಶಿಸಲು ಅವಕಾಶ ಕೊಟ್ಟಂತಾಗಿತ್ತು. (ಟಿಪ್ಪಣಿ ನೋಡಿ)

ಪ್ರತೀಕಾರದ ದಾಳಿಗೆ ಆದೇಶ ನೀಡುವ ಹಾಗೂ ವರ್ಸೆಲ್ಸ್‌ನ ಡಕಾಯಿತರ ಕೂಟದ ಶೋಷಣೆಯಿಂದ ಪ್ಯಾರಿಸನ್ನು ರಕ್ಷಿಸುವುದು ತನ್ನ ಕರ್ತವ್ಯ ಎಂದು ಘೋಷಿಸಿದ ಕಮ್ಯೂನ್‌ನ ಎಪ್ರಿಲ್ 7ರ ಡಿಕ್ರಿ (ಆದೇಶ)ಯ ನಂತರ, "ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು" ಈ ರೀತಿಯಾಗಿ ಪ್ರತೀಕಾರದ ಒತ್ತಾಯ ಮುಂದಿಟ್ಟಾಗ, ಥಿಯರ್ಸ್ ಕೈದಿಗಳನ್ನು ಬರ್ಬರವಾಗಿ ಹಿಂಸಿಸುವುದನ್ನು ನಿಲ್ಲಿಸಲಿಲ್ಲ. ಅಲ್ಲದೆ ತನ್ನ ಬುಲೆಟಿನ್‌ಗಳಲ್ಲಿ ಅವರನ್ನು ಈ ರೀತಿಯಾಗಿ ಅವಮಾನಿಸಿದ: "ಕೆಳಮಟ್ಟಕ್ಕಿಳಿದ ಪ್ರಜಾಪ್ರಭುತ್ವದ ಮುಖಚರ್ಯೆಗಳು ಯಾವತ್ತೂ ಪ್ರಾಮಾಣಿಕ ಜನರ ನೇರದೃಷ್ಟಿಯನ್ನು ಎದುರಿಸಲಾರವು". ಪ್ರಾಮಾಣಿಕರೆಂದರೆ ಅವರು ಥಿಯರ್ಸ್ ಹಾಗೂ ಆತನ ರಜಾ-ಚೀಟಿಯ ಜನರಂತೆ ಪ್ರಾಮಾಣಿಕರು ಆಗಿದ್ದರು. ಆದಾಗ್ಯೂ ಕೈದಿಗಳನ್ನು ಗುಂಡಿಟ್ಟು ಸಾಯಿಸುವುದನ್ನು ಸ್ವಲ್ಪ ಕಾಲ ಅಮಾನತಿನಲ್ಲಿಡಲಾಯಿತು. ನ್ಯಾಷನಲ್ ಗಾರ್ಡ್‌ನ ಸೋಗಿನಲ್ಲಿ ಪ್ಯಾರಿಸ್‌ನಲ್ಲಿ ಬಂಧಿತರಾದ ಅವರ ಬೇಹುಗಾರರನ್ನು ಕೂಡ, ಬೆಂಕಿ ಚೆಂಡುಗಳನ್ನು ಹೊಂದಿದ ಸಾರ್ಜೆಂಟ್ ವಿಲ್ಲೆಗಳನ್ನು ಕೂಡ ಬಿಟ್ಟು ಬಿಟ್ಟದ್ದು ಗೊತ್ತಾದಾಗ, ಪ್ರತೀಕಾರದ ದಾಳಿ ಮಾಡಬೇಕೆಂಬ ಡಿಕ್ರಿಯು ಒಂದು ಬರೀ ಬೆದರಿಕೆ ಎಂಬುದು ಥಿಯರ್ಸ್ ಮತ್ತು ಆತನ ಡಿಸೆಂಬ್ರಿಸ್ಟ್‌ಗಳಿಗೆ ತಿಳಿಯಲಾರಂಭಿಸಿದಂತೆ, ಕೈದಿಗಳನ್ನು ಗುಂಡಿಟ್ಟು ಕೊಲ್ಲುವ ಇಡೀ ಪ್ರಕ್ರಿಯೆ ಸತತವಾಗಿ ಕೊನೆಯವರೆಗೆ ಮುಂದುವರಿಯಿತು. ನ್ಯಾಷನಲ್ ಗಾರ್ಡ್‌ಗಳು ಪಲಾಯನ ಮಾಡಿ ಆಶ್ರಯ ಪಡೆದ ಮನೆಗಳಿಗೆ ಪೊಲೀಸರು ಮುತ್ತಿಗೆ ಹಾಕಿ ಮನೆಯೊಳಗೆ ಪೆಟ್ರೋಲ್ ಸುರಿದು (ಈ ಯುದ್ಧದಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯ ವಿದ್ಯಮಾನ ನಡೆಯಿತು) ಕೊಳ್ಳಿಯಿಟ್ಟರು. ಸುಟ್ಟು ಕರಕಲಾದ ದೇಹಗಳನ್ನು ಆನಂತರ ಟೆರ್ನ್ಸ್‌ನ ಪ್ರೆಸ್‌ನ ಅಂಬುಲೆನ್ಸ್ ಹೊರ ತಂದಿತು. ಎಪ್ರಿಲ್ 25ರಂದು ಬೆಲ್ ಎಪ್ಪೈನ್‌ನಲ್ಲಿ ಅಶ್ವಾರೋಹಿ ಪೊಲೀಸರಿಗೆ ಶರಣಾದ ನಾಲ್ವರು ನ್ಯಾಷನಲ್ ಗಾರ್ಡ್ ಸೈನಿಕರನ್ನು ಆನಂತರ ಒಬ್ಬರಾದ ಮೇಲೆ ಒಬ್ಬರಂತೆ ಗುಂಡಿಟ್ಟು ಸಾಯಿಸಲಾಯಿತು. ಗ್ಯಾಲಿಫೆ ನ ಒಬ್ಬ ಬಂಟ ಕ್ಯಾಪ್ಟನ್ ಈ ನಾಲ್ವರನ್ನು ಸಾಯಿಸಿದ. ಈ ನಾಲ್ವರು ಬಲಿಪಶುಗಳಲ್ಲಿ ಒಬ್ಬರಾದ, ಸತ್ತಿದ್ದಾನೆಂದು ಭಾವಿಸಿ ಬಿಟ್ಟು ಹೋಗಲಾಗಿದ್ದ ಷೆಫರ್, ಅಂಥ ಪರಿಸ್ಥಿತಿಯಲ್ಲೂ ತೆವಳುತ್ತಾ ಹೋಗಿ ಪ್ಯಾರಿಸ್‌ನ ಹೊರಠಾಣೆಗಳನ್ನು ತಲುಪಿ ಕಮ್ಯೂನ್ ಆಯೋಗಕ್ಕೆ ನಡೆದ ವಿಚಾರಗಳನ್ನು ವಿವರಿಸಿದ. ಈ ಆಯೋಗದ ವರದಿಯ ಬಗ್ಗೆ ಯುದ್ಧ ಮಂತ್ರಿಗೆ ಟೋಲೇನ್ ಅಡ್ಡ ಪ್ರಶ್ನೆ ಕೇಳಿದಾಗ ರೂರಲ್‌ಗಳು ಗದ್ದಲವೆಬ್ಬಿಸಿ ಆತನ ಮಾತು ಕೇಳದಂತೆ ಮಾಡಿದರು ಹಾಗೂ ಸಚಿವ ಲೆ ಫ್ಲೋ ಉತ್ತರಿಸುವುದಕ್ಕೆ ತಡೆಯೊಡ್ಡಿದರು. ತಮ್ಮ 'ಮಹಾನ್' ಸೇನೆಯ ಕೃತ್ಯಗಳ ಬಗ್ಗೆ ಮಾತನಾಡುವುದು ಅವರಿಗೆ ಅವಮಾನಕರವಾಗಿತ್ತು. ಫೆಡರಲ್‌ಗಳನ್ನು ಬಯೋನೆಟ್‌ನಿಂದ ತಿವಿದು ಸಾಯಿಸುವ ಬಗ್ಗೆ ಪ್ರಕಟಿಸಿದ ಬುಲೆಟಿನ್‌ಗಳಲ್ಲಿನ ಥಿಯರ್ಸ್‌ನ ಹುಡುಗಾಟಿಕೆಯ ಮಾತುಗಳಿಂದ ಎಲ್ಲರೂ ಆಘಾತಗೊಂಡರು. ಅತಿಸೂಕ್ಷ್ಮವಲ್ಲದ 'ಲಂಡನ್ ಟೈಮ್ಸ್' ಕೂಡ ನಡುಗಿಹೋಯಿತು. ಪ್ಯಾರಿಸ್‌ನ ಬಾಂಬ್‌ದಾಳಿಕೋರರಿಂದ ನಡೆದ ಪ್ರಾಥಮಿಕ ದೌರ್ಜನ್ಯಗಳು ಮತ್ತು ವಿದೇಶಿ ಆಕ್ರಮಣಕಾರರ ರಕ್ಷಣೆಯಲ್ಲಿದ್ದ ಗುಲಾಮರ

ಯಜಮಾನರ ಬಂಡಾಯದ ಪ್ರಚೋದಕರ ಬಗ್ಗೆ ನೆನಪು ಮಾಡಿಕೊಳ್ಳಲು ಈಗ ಪ್ರಯತ್ನಿಸುವುದು ಹುಚ್ಚುತನವಾಗುತ್ತದೆ. ಈ ಎಲ್ಲಾ ಭಯಾನಕತೆಗಳ ನಡುವೆ, ತನ್ನ ಕುಳ್ಳಗಿನ ಭುಜದ ಮೇಲಿರುವ ಅಪಾರ ಸಂಸದೀಯ ಜವಾಬ್ದಾರಿಯನ್ನು ಮರೆತು ಅಸೆಂಬ್ಲಿಯು ಶಾಂತಿಯುತವಾಗಿ ಸಭೆಯನ್ನು ಮುಂದುವರಿಸುತ್ತದೆ ಎಂದು ತನ್ನ ಬುಲೆಟಿನ್‌ನಲ್ಲಿ ಕೊಚ್ಚಿಕೊಂಡ. ಈಗ ಡಿಸೆಂಬ್ರಿಸ್ಟ್ ಜನರಲ್‌ಗಳು, ಆಗ ಜರ್ಮನ್ ರಾಜಕುಮಾರರ ಜೊತೆ ಪಾನೋನ್ಮತ್ತ ಸ್ಥಿತಿಯಲ್ಲಿ 'ತನಗೆ ಏನೂ ತೊಂದರೆಯಿಲ್ಲ, ಲೆಕೊಮ್ಟ್ ಮತ್ತು ಕ್ಲಿಮೆಂಟ್ ಥಾಮಸ್‌ರ ಭೂತಗಳಿಂದಲೂ ತಾನು ಯಾವುದೇ ಆತಂಕಕ್ಕೆ ಒಳಗಾಗಿಲ್ಲ' ಎಂದು ಕೊಚ್ಚಿಕೊಳ್ಳುವ ಮೂಲಕ ಅದನ್ನು ರುಜುವಾತುಪಡಿಸಿದ ಕೂಡಾ.

## III.

ಮಾರ್ಚ್ 18ರ ಮುಂಜಾವಿನಲ್ಲಿ ಪ್ಯಾರಿಸ್ "ವಿವ್ ಲಾ ಕಮ್ಯೂನ್" ಘೋಷಣೆಗಳ ಅನುರಣದೊಂದಿಗೆ ಎಚ್ಚರಗೊಂಡಿತು. ಬಂಡವಾಳಶಾಹಿಯನ್ನು ಗೋಳು ಹೊಯ್ದುಕೊಳ್ಳುತ್ತಿರುವ ಈ ವಿಲಕ್ಷಣ ಪ್ರಾಣಿಕಮ್ಯೂನ್ ಅಂದರೆ ಏನು?

"ಆಳುವ ವರ್ಗಗಳ ವೈಫಲ್ಯಗಳು ಮತ್ತು ದ್ರೋಹಗಳ ನಡುವೆ ಸಾರ್ವಜನಿಕ ವ್ಯವಹಾರಗಳನ್ನು ತಮ್ಮ ಕೈಗಳಿಗೆ ತೆಗೆದುಕೊಳ್ಳುವ ಮೂಲಕ (ದೇಶವನ್ನು) ದುಸ್ಥಿತಿಯಿಂದ ರಕ್ಷಿಸುವ ಕಾಲ ಕೂಡಿ ಬಂದಿದೆ ಎಂದು ಪ್ಯಾರಿಸ್‌ನ ಶ್ರಮಜೀವಿಗಳು ಅರ್ಥ ಮಾಡಿಕೊಂಡಿದ್ದಾರೆ... ತಮ್ಮ ಭವಿಷ್ಯವನ್ನು ತಾವೇ ರೂಪಿಸಬಲ್ಲವರು ಎಂಬುದನ್ನು ತೋರಿಸಿಕೊಡುವುದು ತಮ್ಮ ಹೆಮ್ಮೆಯ ಕರ್ತವ್ಯ ಮತ್ತು ಪರಮೋಚ್ಛ ಹಕ್ಕು ಎಂಬುದನ್ನು ಅರ್ಥ ಮಾಡಿಕೊಂಡಿದ್ದಾರೆ..." ಎಂದು ಕೇಂದ್ರ ಸಮಿತಿಯ ಮಾರ್ಚ್ 18ರ ಪ್ರಣಾಳಿಕೆಯು ಹೇಳಿತ್ತು. ಆದರೆ ಕಾರ್ಮಿಕ ವರ್ಗವು ಸಿದ್ಧ ಪ್ರಭುತ್ವ ಯಂತ್ರವನ್ನು ಹಾಗೇ ಇಟ್ಟುಕೊಂಡು ತನ್ನದೇ ಉದ್ದೇಶಗಳಿಗೆ ಬಳಸಿಕೊಳ್ಳಲು ಆಗುವುದಿಲ್ಲ.

ಶ್ರಮದ ವ್ಯವಸ್ಥಿತ ಹಾಗೂ ಶ್ರೇಣೀಕೃತ ವಿಭಜನೆಯ ಯೋಜನೆಗಾಗಿ ಸಿದ್ಧಪಡಿಸಿದ, ಸರ್ವವ್ಯಾಪಿಯಾಗಿರುವ– ಸೇನೆ, ಪೊಲೀಸ್, ನೌಕರಶಾಹಿ, ಪುರೋಹಿತರು ಮತ್ತು ನ್ಯಾಯಾಂಗ – ಅಂಗಗಳನ್ನು ಹೊಂದಿರುವ ಕೇಂದ್ರೀಕೃತ ಪ್ರಭುತ್ವ ಅಧಿಕಾರವು ಪರಮಾಧಿಕಾರದ ಏಕಚಕ್ರಾಧಿಪತ್ಯದ ದಿನಗಳಿಂದ ಪಡಿಮೂಡಿ ಬಂದಿದ್ದಾಗಿದ್ದು ಊಳಿಗಮಾನ್ಯ ಸಮಾಜದ ವಿರುದ್ಧದ ಹೋರಾಟಗಳಲ್ಲಿ ಇನ್ನೂ ಎಳಸಾದ ಮಧ್ಯಮ ವರ್ಗದಸಮುದಾಯಕ್ಕೆ ಒಂದು ಪ್ರಬಲ ಆಯುಧವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದರೂ ಎಲ್ಲಾ ಬಗೆಯ ಮಧ್ಯಯುಗೀನ ಹೊಲಸುಗಳು, ಊಳಿಗಮಾನ್ಯ ಹಕ್ಕುಗಳು, ಸ್ಥಳೀಯ ಹಕ್ಕುಗಳು, ಮುನಿಸಿಪಲ್ ಮತ್ತು ಗಿಲ್ಡ್ ಏಕಸ್ವಾಮ್ಯಗಳು ಹಾಗೂ ಪ್ರಾಂತೀಯ ಸಂವಿಧಾನಗಳಿಂದಾಗಿ ಅದರ ಬೆಳವಣಿಗೆ ಸ್ಥಗಿತಗೊಂಡಿತ್ತು. ಹದಿನೆಂಟನೇ ಶತಮಾನದ ಫ್ರೆಂಚ್ ಕ್ರಾಂತಿ ಎಂಬ ಬೃಹತ್ ಪೊರಕೆ ಗತಕಾಲದ ಈ ಎಲ್ಲಾ ಪಳೆಯುಳಿಕೆಗಳನ್ನು ಗುಡಿಸಿಹಾಕಿದೆ. ತನ್ಮೂಲಕ, ಸ್ವತಃ ಆಧುನಿಕ ಫ್ರಾನ್ಸ್ ವಿರುದ್ಧ ಹಳೆಯ ಅರೆ–

ಊಳಿಗಮಾನ್ಯ ಯುರೋಪ್‌ನ ಮಿತ್ರಕೂಟದ ಯುದ್ಧಗಳ ಫಲಿತವಾದ ಪ್ರಥಮ ಸಾಮ್ರಾಜ್ಯದಡಿಯಲ್ಲಿ ನಿರ್ಮಿತವಾದ ಆಧುನಿಕ ಪ್ರಭುತ್ವದ ಭವನದ ಮೇಲ್‌ರಚನೆಯತ್ತ ಸಾಮಾಜಿಕ ಮಣ್ಣಿಗೆ ಇದ್ದಂಥ ಕೊನೆಯ ಅಡ್ಡಿಯನ್ನೂ ಏಕಕಾಲಕ್ಕೆ ತೊಡೆದುಹಾಕಿದೆ. ತದನಂತರ ಆಡಳಿತ ನಡೆಸಿದ, ಸಂಸದೀಯ ನಿಯಂತ್ರಣದಲ್ಲಿದ್ದ ಅಂದರೆ ಆಸ್ತಿವಂತ ವರ್ಗಗಳ ನೇರ ನಿಯಂತ್ರಣದಲ್ಲಿದ್ದ ಸರಕಾರ, ಬೃಹತ್ ರಾಷ್ಟ್ರೀಯ ಸಾಲವನ್ನು ಗುಡ್ಡೆ ಹಾಕಿತು ಮಾತ್ರವಲ್ಲದೆ ಜನರಿಗೆ ಹೊರಲಾರದ ತೆರಿಗೆ ಹೊರೆ ಹೊರಿಸಿತು. ಸ್ಥಾನಮಾನ, ಐಶ್ವರ್ಯ ಮತ್ತು ಆಶ್ರಯದ ತಡೆಹಿಡಿಯಲಾಗದ ಆಕರ್ಷಣೆಗಳಿಂದಾಗಿ ಅದು ಪರಸ್ಪರ ವಿರೋಧಿ ಬಣಗಳು ಹಾಗೂ ಆಳುವ ವರ್ಗಗಳ ಸಾಹಸವಾದಿಗಳ ನಡುವೆ ಚರ್ಚೆಯ ವಿಷಯವಾಯಿತು. ಮಾತ್ರವೇ ಅಲ್ಲದೆ ಸಮಾಜದ ಆರ್ಥಿಕ ಸ್ಥಿತಿಗಳ ಬದಲಾವಣೆಯೊಂದಿಗೆ ಅದರ ರಾಜಕೀಯ ಗುಣವೂ ಏಕಕಾಲದಲ್ಲಿ ಬದಲಾವಣೆಗೊಂಡಿತು. ಆಧುನಿಕ ಕೈಗಾರಿಕೆಗಳ ಬೆಳವಣಿಗೆ ಪ್ರಗತಿ ಸಾಧಿಸಿದ ವೇಗಕ್ಕೆ ಸಮಾನವಾಗಿ ಶ್ರಮ ಮತ್ತು ಬಂಡವಾಳ ನಡುವಿನ ವರ್ಗ ವೈರುಧ್ಯ ಹೆಚ್ಚಾಯಿತು ಹಾಗೂ ತೀವ್ರಗೊಂಡಿತು. ಪ್ರಭುತ್ವದ ಅಧಿಕಾರವು ಹೆಚ್ಚೆಚ್ಚಾಗಿ ಶ್ರಮದ ಮೇಲಿನ ಬಂಡವಾಳದ ರಾಷ್ಟ್ರೀಯ ಅಧಿಕಾರದ ಗುಣವನ್ನು, ಸಾಮಾಜಿಕ ಗುಲಾಮಿತನಕ್ಕಾಗಿ ಸಾರ್ವಜನಿಕ ಶಕ್ತಿ ಸಂಘಟಿತವಾದ ಗುಣವನ್ನು, ಒಂದು ವರ್ಗ ಸರ್ವಾಧಿಕಾರ ಯಂತ್ರದ ಗುಣವನ್ನು ಪಡೆದುಕೊಂಡಿತು. ವರ್ಗ ಸಂಘರ್ಷದಲ್ಲಿ ಒಂದು ಪ್ರಗತಿಪರ ಹಂತವನ್ನು ದಾಖಲಿಸಿದ ಪ್ರತಿಯೊಂದು ಕ್ರಾಂತಿಯ ನಂತರ ಪ್ರಭುತ್ವ ಅಧಿಕಾರದ ದಬ್ಬಾಳಿಕೆಯ ಗುಣ ಹೆಚ್ಚು ಹೆಚ್ಚಾಗಿ ಎದ್ದು ಕಾಣುತ್ತದೆ. ಭೂಮಾಲಿಕರಿಂದ ಬಂಡವಾಳಶಾಹಿಗಳಿಗೆ ಸರಕಾರ ಹಸ್ತಾಂತರವಾಗುವಲ್ಲಿ ಪರ್ಯಾವಸಾನಗೊಂಡ 1830ರ ಕ್ರಾಂತಿ, ಅದನ್ನು ಸ್ಪಷ್ಟವಾಗಿ ದುಡಿಯುವ ಜನರ ನೇರ ವಿರೋಧಿಯಾಗಿ ಪರಿವರ್ತಿಸಿತು. ಫೆಬ್ರವರಿ ಕ್ರಾಂತಿಯ ಹೆಸರಿನಲ್ಲಿ ಪ್ರಭುತ್ವದ ಅಧಿಕಾರವನ್ನು ಪಡೆದ ಬಂಡವಾಳಶಾಹಿ ರಿಪಬ್ಲಿಕನ್ನರು ಅದನ್ನು ಜೂನ್ ಹತ್ಯಾಕಾಂಡಗಳಿಗೆ ಬಳಸಿಕೊಂಡರು. 'ಸಾಮಾಜಿಕ' ಗಣರಾಜ್ಯವೆಂದರೆ ಅವರನ್ನು ಸಾಮಾಜಿಕವಾಗಿ ಅಧೀನಗೊಳಿಸುವುದನ್ನು ಖಾತರಿಪಡಿಸುವ ಗಣರಾಜ್ಯ ಎಂದು ದುಡಿಯುವ ವರ್ಗಕ್ಕೆ ಮನವರಿಕೆ ಮಾಡಿಕೊಡಲಿಕ್ಕಾಗಿ ಅವರು ಹೀಗೆ ಮಾಡಿದರು. ಬಂಡವಾಳಶಾಹಿ 'ರಿಪಬ್ಲಿಕನ್' ಸರಕಾರದ ಸಕಲ ಸೌಲಭ್ಯಗಳನ್ನು ಅನುಭವಿಸಿ ಆರಾಮ ಜೀವನ ನಡೆಸಬಹುದು ಎಂದು ಬಂಡವಾಳಶಾಹಿ ಹಾಗೂ ಭೂಮಾಲಿಕ ವರ್ಗದ ಉನ್ನತ ವಿಭಾಗಗಳಿಗೆ ಭರವಸೆ ನೀಡುವುದೂ ಅವರ ಉದ್ದೇಶವಾಗಿತ್ತು. ಏನಿದ್ದರೂ, ಜೂನ್‌ನ ಒಂದು ವೀರಕೃತ್ಯದ ಪ್ರಯತ್ನದನಂತರ,ಬೂರ್ಶ್ವಾ ರಿಪಬ್ಲಿಕನ್ನರು ಹಿಂದೆ ಸರಿದು 'ಪಾರ್ಟಿ ಆಫ್ ಆರ್ಡರ್'ನ್ನುಆಧರಿಸಬೇಕಾಯಿತು. 'ಪಾರ್ಟಿ ಆಫ್ ಆರ್ಡರ್' ಈಗ ಉತ್ಪಾದಕ ವರ್ಗಗಳಿಗೆ ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸುವ (ಉತ್ಪಾದನೆಯ ಫಲವನ್ನು) ವಶಪಡಿಸಿಕೊಳ್ಳುವ ವರ್ಗದ ಎಲ್ಲಾ ಪರಸ್ಪರ ವಿರೋಧಿ ಬಣಗಳು ಮತ್ತು ವಿಭಾಗಗಳ ಒಂದು ಕೂಟ. ಲೂಯಿ ಬೊನಪಾರ್ಟೆ ಅಧ್ಯಕ್ಷ ಆಗಿರುವ ಸಂಸದೀಯ ಗಣರಾಜ್ಯವು, ಅವರ ಜಂಟಿ ಸರಕಾರದ ಸೂಕ್ತ ಸ್ವರೂಪವಾಗಿದೆ. ಥಿಯರ್ಸ್ ಆಡಳಿತ ಘಂಟಾಘೋಷವಾಗಿ ಸಾರಿದ ವರ್ಗ ಭಯೋತ್ಪಾದನೆಯಾಗಿದೆ ಹಾಗೂ 'ತುಚ್ಛ ಜನಸಮೂಹಕ್ಕೆ' ಉದ್ದೇಶಪೂರ್ವಕ ಅವಮಾನವಾಗಿದೆ. ಎಂ. ಥಿಯರ್ಸ್ ಹೇಳುವಂತೆ ಆಳುವ ವರ್ಗಗಳ ವಿವಿಧ ವಿಭಾಗಗಳನ್ನು ಒಂದು

ವೇಳೆ 'ಸಂಸದೀಯ ಗಣರಾಜ್ಯ ಒಡೆದರೆ' ಆ ವರ್ಗ ಮತ್ತು ಅವರ ವಿಭಾಗಗಳ ಹೊರಗಿನ ಇಡೀ ಸಮಾಜದ ನಡುವೆ ದೊಡ್ಡ ಕಂದಕ ಉಂಟು ಮಾಡಬಹುದು. ಪ್ರಭುತ್ವ ಅಧಿಕಾರಕ್ಕೆ ಮಾಜಿ ಆಡಳಿತಗಳಡಿಯಲ್ಲಿಅಡೆತಡೆಗಳನ್ನು ಒಡ್ಡಿದ್ದ ಈಗಲೂ ತಡೆಯುತ್ತಿರುವ ಅವರದೇ ಆದ ವಿಭಜನೆಗಳನ್ನು ಅವರ ಒಕ್ಕೂಟದ ಮೂಲಕ ನಿವಾರಿಸಲಾಯಿತು. ಶ್ರಮಜೀವಿಗಳ ಉತ್ಕ್ರಾಂತಿಯ ಬೆದರಿಕೆಯ ಹಿನ್ನೆಲೆಯಲ್ಲಿ ಅವರು ಈಗ ಆ ಪ್ರಭುತ್ವದ ಅಧಿಕಾರವನ್ನು ಶ್ರಮದ ವಿರುದ್ಧ ಬಂಡವಾಳದ ರಾಷ್ಟ್ರೀಯ ಯುದ್ಧ–ಯಂತ್ರವನ್ನಾಗಿ ನಿರ್ದಯವಾಗಿ ಹಾಗೂ ದರ್ಪ ಮೆರೆಸುತ್ತಾ ಬಳಸಿದೆ. ಉತ್ಪಾದಕ ಜನಸಮೂಹದ ವಿರುದ್ಧದ ಸತತ 'ಧರ್ಮಯುದ್ಧ'ದಲ್ಲಿ ಅವರು ಕಾರ್ಯಾಂಗದ ದಬ್ಬಾಳಿಕೆಯ ಅಧಿಕಾರವನ್ನು ಹೆಚ್ಚಿಸಬೇಕಾಗುತ್ತದೆ ಮಾತ್ರವಲ್ಲದೆ ಅದೇ ಹೊತ್ತಿಗೆ ತಮ್ಮದೇ ಸಂಸದೀಯ ಭದ್ರಕೋಟೆಯಾದ ನ್ಯಾಷನಲ್ ಅಸೆಂಬ್ಲಿಯನ್ನು, ಮತ್ತು ಕಾರ್ಯಾಂಗದ ವಿರುದ್ಧವಾದ ಎಲ್ಲಾ ರಕ್ಷಣಾ ಮಾರ್ಗಗಳನ್ನು ಒಂದೊಂದಾಗಿ ಕಳೆದುಕೊಳ್ಳಬೇಕಾಗುತ್ತದೆ. ಕಾರ್ಯಾಂಗದ ಪಾತ್ರದಲ್ಲಿ ಬಂದ ಲೂಯಿ ಬೊನಪಾರ್ಟೆ ಅವರನ್ನೇ ಹೊರ ಕಳುಹಿಸಿದ. 'ಪಾರ್ಟಿ ಆಫ್ ಆರ್ಡರ್'ನ ಗಣರಾಜ್ಯದ ಸಹಜ ಕೂಸೇ ದ್ವಿತೀಯ ಸಾಮ್ರಾಜ್ಯವಾಗಿತ್ತು.

ಕ್ಷಿಪ್ರಕ್ರಾಂತಿಯ ಜನ್ಮಪತ್ರ, ಸಾರ್ವತ್ರಿಕ ಜನಮತದ ಒಪ್ಪಿಗೆ, ಮತ್ತು ರಾಜದಂಡವಾಗಿ ಖಡ್ಗಗಳೊಂದಿಗೆ, ಸಾಮ್ರಾಜ್ಯವು, ಬಂಡವಾಳ ಮತ್ತು ಶ್ರಮದ ಹೋರಾಟದಲ್ಲಿ ನೇರವಾಗಿ ಭಾಗವಹಿಸದ ಸಾಮೂಹಿಕ ಉತ್ಪಾದಕರ ದೊಡ್ಡ ವಿಭಾಗವಾದ ರೈತರ ಮೇಲೆ ಆಧರಿಸಿದೆ ಎಂದು ಹೇಳಿಕೊಂಡಿತು. ಸಂಸದೀಯವಾದವನ್ನು ಒಡೆದು, ಮತ್ತು ಆ ಮೂಲಕ ಸರಕಾರವು ಮುಚ್ಚುಮರೆಯಿಲ್ಲದೆ ಆಸ್ತಿವಂತ ವರ್ಗಗಳಿಗೆ ಗುಲಾಮ ಆಗುವುದನ್ನೂ ತಡೆಯುವ ಮೂಲಕ, ಕಾರ್ಮಿಕ ವರ್ಗವನ್ನುರಕ್ಷಿಸುವ ಸೋಗು ಹಾಕಿತು. ದುಡಿಯುವ ವರ್ಗದ ಮೇಲೆ ಆಸ್ತಿವಂತ ವರ್ಗದ ಆರ್ಥಿಕ ಅಧಿಪತ್ಯವನ್ನುಎತ್ತಿಹಿಡಿಯುವ ಮೂಲಕ ಆಸ್ತಿವಂತರ ವರ್ಗಗಳನ್ನು ರಕ್ಷಿಸುವುದಾಗಿ ಅದು ಹೇಳಿಕೊಂಡಿತು. ಹಾಗೂ ಅಂತಿಮವಾಗಿ, ಎಲ್ಲರಿಗೂ ರಾಷ್ಟ್ರೀಯ ವೈಭವದ ಮರೀಚಿಕೆಯ ಪುನರುಜ್ಜೀವನಕ್ಕಾಗಿ ಎಲ್ಲಾ ವರ್ಗಗಳನ್ನುಒಗ್ಗೂಡಿಸುವುದಾಗಿ ಕೊಚ್ಚಿಕೊಂಡಿತು. ವಾಸ್ತವವಾಗಿ, ಬಂಡವಾಳಶಾಹಿಗಳು ಅದಾಗಲೇ ಸೋತಿದ್ದ ಹಾಗೂ ಕಾರ್ಮಿಕ ವರ್ಗ ದೇಶವನ್ನು ಆಳುವ ಕಲೆಯನ್ನು ಇನ್ನೂ ಗಳಿಸದಿದ್ದ ಸಂದರ್ಭದಲ್ಲಿ,ಸಾಧ್ಯವಿದ್ದ , ಸರಕಾರದ ರೂಪ ಅದೊಂದೇ ಆಗಿತ್ತು. ಸಮಾಜದ ಸಂರಕ್ಷಕ ಎಂದು ಅದನ್ನು ಜಗತ್ತಿನಾದ್ಯಂತ ಶ್ಲಾಘಿಸಲಾಯಿತು. ಬಂಡವಾಳಶಾಹಿ ಸಮಾಜ ಅದರ ಪ್ರಭಾವದಡಿಯಲ್ಲಿ ರಾಜಕೀಯ ಚಿಂತೆಗಳಿಂದ ಸ್ವತಂತ್ರಗೊಂಡಿತು; ಸ್ವತಃ ತಾನೇ ನಿರೀಕ್ಷಿಸದಿದ್ದ ಅಭಿವೃದ್ಧಿಯನ್ನು ಸಾಧಿಸಿತು. ಅದರ ಕೈಗಾರಿಕೆ ಮತ್ತು ವಾಣಿಜ್ಯ ಅಗಾಧ ಪ್ರಮಾಣದಲ್ಲಿ ಬೆಳೆಯಿತು. ಹಣಕಾಸು ಅವ್ಯವಹಾರಗಳು ಉತ್ತುಂಗಕ್ಕೆ ತಲುಪಿದವು; ಆಮೋದಪ್ರಮೋದ, ಬೆಡಗು ಬಿನ್ನಾಣದಿಂದ ಕೂಡಿದ ಸಂಪತ್ತಿನ ಲಜ್ಜೆಗೇಡಿ ಪ್ರದರ್ಶನದಿಂದಾಗಿ ಜನಸಾಮಾನ್ಯರ ಸಂಕಷ್ಟಗಳು ಹೆಚ್ಚಾದವು. ಅದೇ ಹೊತ್ತಿಗೆ, ಸಮಾಜಕ್ಕಿಂತ ಬಹಳ ಎತ್ತರದಲ್ಲಿ ಹಾರಾಡುತ್ತಿದ್ದಂತಿದ್ದ ಪ್ರಭುತ್ವ ಅಧಿಕಾರವೇ ಸ್ವತಃ ಸಮಾಜದ ದೊಡ್ಡ ಹಗರಣವಾಯಿತು ಹಾಗೂ ಅದರ ಎಲ್ಲಾ ಭ್ರಷ್ಟಾಚಾರಗಳಿಗೆ

ಪ್ರಶಸ್ತ ತಾಣವಾಯಿತು. ಸ್ವತಃ ಕೊಳೆತು ನಾರುವ ತನ್ನ ಹಾಗೂ ತಾನು ರಕ್ಷಿಸಿದ ಸಮಾಜದ ನಾರುವಿಕೆಯು ಪ್ರಷ್ಯಾದ ಬಯೋನೆಟ್‌ಗಳಿಂದ ಬಯಲಾಯಿತು. ಪ್ರಷ್ಯಾವು ಆಡಳಿತದ ಸರ್ವೋನ್ನತ ಪೀಠವನ್ನುಪ್ಯಾರಿಸ್‌ನಿಂದ ಬರ್ಲಿನ್‌ಗೆ ವರ್ಗಾಯಿಸಲು ಉತ್ಸುಕವಾಗಿತ್ತು. ಸಾಮ್ರಾಜ್ಯಶಾಹಿಯು ಅತ್ಯಂತ ಕುಲಟೆ ಹಾಗೂ ಊಳಿಗಮಾನ್ಯ ಪದ್ಧತಿಯಿಂದ ತನ್ನನ್ನು ವಿಮೋಚನೆಗೊಳಿಸಲು ಇರುವ ಸಾಧನ ಎಂದು ಎಳಸು ಮಧ್ಯಮ ವರ್ಗ ಯಾವ ಪ್ರಭುತ್ವವನ್ನು ಕೊಂಡಾಡಲು ಆರಂಭಿಸಿತ್ತೋ, ಆ ಪ್ರಭುತ್ವದ ಅಧಿಕಾರದ ಅಂತಿಮ ಸ್ವರೂಪವಾಗಿತ್ತು.ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದ ಬಂಡವಾಳಶಾಹಿ ಸಮಾಜವು ಆ ಪ್ರಭುತ್ವವನ್ನು ಅಂತಿಮವಾಗಿ ಶ್ರಮವನ್ನು ಬಂಡವಾಳದ ಗುಲಾಮನನ್ನಾಗಿಸುವ ಸಾಧನವಾಗಿ ಪರಿವರ್ತಿಸಿತ್ತು.

ಸಾಮ್ರಾಜ್ಯಕ್ಕೆ ನೇರವಾಗಿಪ್ರತಿವಾದಿ(ಆಂಟಿ–ಥೀಸೀಸ್)ಯಾದದ್ದು ಕಮ್ಯೂನ್. 'ಸಾಮಾಜಿಕ ಗಣರಾಜ್ಯ'ದ ಘೋಷಣೆಯೊಂದಿಗೆ ಪ್ಯಾರಿಸ್‌ನ ದುಡಿಯುವ ಜನರು ಫೆಬ್ರವರಿ ಕ್ರಾಂತಿಗೆ ನಾಂದಿ ಹಾಡಿದ್ದರು. ಗಣರಾಜ್ಯವು ವರ್ಗ ಆಳ್ವಿಕೆಯ ರಾಜಪ್ರಭುತ್ವದ ಸ್ವರೂಪವನ್ನು ರದ್ದು ಪಡಿಸಿದ್ದು ಮಾತ್ರವಲ್ಲದೆ, ವರ್ಗ–ಆಳ್ವಿಕೆಯನ್ನೇ ಕೊನೆಗಾಣಿಸಲು ಯತ್ನಿಸಿದ ನಂತರದ ಈ ಘೋಷಣೆಯು, ಒಂದು ಅಸ್ಪಷ್ಟ ಆಶೋತ್ತರದ ಅಭಿವ್ಯಕ್ತಿಯಾಗಿತ್ತು.

ಸಾಮ್ರಾಜ್ಯ ತನಗೆ ಕೊಡ ಮಾಡಿದ್ದ ಅದೇ ಹಳೆಯ ಸರಕಾರಿ ಅಧಿಕಾರವನ್ನು ಮರುಸ್ಥಾಪಿಸಿ ಶಾಶ್ವತಗೊಳಿಸುವ ಪ್ರಯತ್ನ ನಡೆಸಿದ ಥಿಯರ್ಸ್ ಮತ್ತು ರೂರಲ್‌ಗಳ ವಿರುದ್ಧ, ಹಳೆಯ ಸರಕಾರಿ ಅಧಿಕಾರದ ಕೇಂದ್ರ ಪೀಠವಾದ, ಹಾಗೂ ಅದೇ ಹೊತ್ತಿಗೆ ಫ್ರೆಂಚ್ ದುಡಿಯುವ ವರ್ಗದ ಬಲಿಷ್ಟ ಸಾಮಾಜಿಕ ಕೇಂದ್ರವಾದ ಪ್ಯಾರಿಸ್, ಶಸ್ತ್ರಗಳನ್ನು ಹಿಡಿದು ಎದ್ದು ನಿಂತಿತು. ಪ್ಯಾರಿಸ್ ಪ್ರತಿರೋಧ ತೋರಬಹುದಾಗಿದ್ದು ಒಂದೇ ಕಾರಣಕ್ಕೆ. ಮುತ್ತಿಗೆಯ ಪರಿಣಾಮವಾಗಿ ಸೇನೆಯಿಂದ ಮುಕ್ತಿ ಸಿಕ್ಕಿತು ಹಾಗೂ ಅದರ ಜಾಗದಲ್ಲಿ, ಕಾರ್ಮಿಕರೇ ಅಧಿಕವಾಗಿದ್ದ ನ್ಯಾಷನಲ್ ಗಾರ್ಡ್ ಬಂದಿದ್ದೇ ಆ ಕಾರಣವಾಗಿದೆ. ಈ ವಾಸ್ತವವನ್ನು ಈಗ ಒಂದು ಸಂಸ್ಥೆಯನ್ನಾಗಿ ಪರಿವರ್ತಿಸಬೇಕು. ಹೀಗಾಗಿ, ಈಗಿರುವ ಸ್ಥಾಯೀ ಸೈನ್ಯವನ್ನು ಬಗ್ಗು ಬಡಿದು ಅದರ ಸ್ಥಾನದಲ್ಲಿ ಸಶಸ್ತ್ರ ಜನತೆಯನ್ನು ಪ್ರತಿಷ್ಠಾಪಿಸುವಂತೆ ತನ್ನ ಮೊದಲ ಆಜ್ಞೆ (ಡಿಕ್ರಿ)ಯಲ್ಲೇ ಕಮ್ಯೂನ್ ಹೇಳಿತು.

ನಗರದ ವಿವಿಧ ವಾರ್ಡ್‌ಗಳಲ್ಲಿ ಸಾಮೂಹಿಕ ಮತದಾನದ ಮೂಲಕ ಆಯ್ಕೆಯಾದ ಮುನಿಸಿಪಲ್ ಕೌನ್ಸಿಲರ್‌ಗಳನ್ನು ಒಳಗೊಂಡಂತೆ ಕಮ್ಯೂನ್ ಅನ್ನು ರಚಿಸಲಾಯಿತು. ಅವರು ಜವಾಬ್ದಾರರಾಗಿದ್ದು, ಅಲ್ಪ ಕಾಲದ ಸೂಚನೆಯ ಮೇರೆಗೆ ಅವರನ್ನು ಹಿಂತೆಗೆಯಬಹುದಾಗಿತ್ತು. ಸಹಜವಾಗಿಯೇ ಅದರ ಬಹುಸಂಖ್ಯಾತ ಸದಸ್ಯರು ಕಾರ್ಮಿಕರಾಗಿದ್ದರು ಅಥವಾ ಕಾರ್ಮಿಕ ವರ್ಗವನ್ನು ಪ್ರತಿನಿಧಿಸುವ ಮಾನ್ಯತೆ ಹೊಂದಿದ ಪ್ರತಿನಿಧಿಗಳಾಗಿದ್ದರು. ಕಮ್ಯೂನ್ ಏಕಕಾಲದಲ್ಲಿ ಒಂದು ಕಾರ್ಯಶೀಲ ಸಂಸ್ಥೆ, ಕಾರ್ಯಾಂಗ ಮತ್ತು ಶಾಸಕಾಂಗ ಎರಡೂ ಆಗಿತ್ತೇ ಹೊರತು ಸಂಸದೀಯ ಸಂಸ್ಥೆ ಆಗಿರಲಿಲ್ಲ. ಪೊಲೀಸ್ ವ್ಯವಸ್ಥೆ ಕೇಂದ್ರ ಸರಕಾರದ ಏಜೆಂಟ್ ಆಗಿ

ಮುಂದುವರಿಯುವ ಬದಲು ಅದರ ರಾಜಕೀಯ ಸ್ಥಾನಮಾನಗಳನ್ನು ಏಕಾಏಕಿ ಕಿತ್ತು ಹಾಕಲಾಯಿತು. ಪೊಲೀಸ್ ಅನ್ನು ಜವಾಬ್ದಾರಿಯುತ ಹಾಗೂ ಯಾವ ಕ್ಷಣದಲ್ಲಾದರೂ ವಾಪಸ್ ಕರೆಸಿಕೊಳ್ಳಬಹುದಾದ ಕಮ್ಯೂನ್‌ನ ಒಂದು ಅಂಗವನ್ನಾಗಿ ಮಾಡಲಾಯಿತು. ಆಡಳಿತದ ಇತರ ಎಲ್ಲಾ ವಿಭಾಗಗಳ ಅಧಿಕಾರಿಗಳಿಗೂ ಇದು ಅನ್ವಯವಾಯಿತು. ಕಮ್ಯೂನ್‌ನ ಸದಸ್ಯರಿಂದ ಮೊದಲ್ಗೊಂಡು ಸಾರ್ವಜನಿಕ ಸೇವೆಯನ್ನು ಕಾರ್ಮಿಕರ ಕೂಲಿಯಿಂದ ಮಾಡಬೇಕಾಗಿತ್ತು. ಪ್ರಭುತ್ವದ ಉನ್ನತ ಅಧಿಕಾರಿಗಳ ಎಲ್ಲಾ ಸ್ಥಾಪಿತ ಹಿತಗಳು ಮತ್ತು ಪ್ರಾತಿನಿಧಿಕ ಭತ್ಯೆಗಳನ್ನು ನಿಲ್ಲಿಸಲಾಯಿತು. ಅಷ್ಟು ಮಾತ್ರವೇಕೆ ಉನ್ನತ ಹುದ್ದೆಗಳನ್ನೇ ತೆಗೆದು ಹಾಕಲಾಯಿತು. ಸಾರ್ವಜನಿಕ ಕಾರ್ಯಭಾರಗಳನ್ನು ಕೇಂದ್ರ ಸರಕಾರದ ಸಂಸ್ಥೆಗಳ ಖಾಸಗಿ ಆಸ್ತಿಯಾಗಿ ಮಾಡಿಕೊಳ್ಳುವುದನ್ನು ನಿಷೇಧಿಸಲಾಯಿತು. ಮುನಿಸಿಪಲ್ ಆಡಳಿತ ಮಾತ್ರವಲ್ಲದೆ ಪ್ರಭುತ್ವ ಇದುವರೆಗೆ ಚಲಾಯಿಸಿದ್ದ ಎಲ್ಲಾ ಉಪಕ್ರಮಗಳನ್ನು ಕಮ್ಯೂನ್‌ನ ವಶಕ್ಕೆ ನೀಡಲಾಯಿತು.

ಹಳೆಯ ಸರಕಾರದ ಭೌತಿಕ ಬಲದ ಅಂಗಗಳಾದ ಸ್ಥಾಯೀ ಸೈನ್ಯ ಮತ್ತು ಪೊಲೀಸರಿಂದ ಮುಕ್ತಿ ಪಡೆದ ಮೇಲೆ, ಸ್ವಂತ ಸ್ವಾಮ್ಯದ ಸಂಸ್ಥೆಗಳಂತೆ ವರ್ತಿಸುತ್ತಿದ್ದ ಎಲ್ಲಾ ಚರ್ಚುಗಳನ್ನು ತೆಗೆದು ಹಾಕುವ ಹಾಗೂ ಅವುಗಳಿಗೆ ನೀಡುವ ಅನುದಾನವನ್ನು ನಿಲ್ಲಿಸುವ ಮೂಲಕ ದಬ್ಬಾಳಿಕೆಯ ಆಧ್ಯಾತ್ಮಿಕ ಶಕ್ತಿಯಾದ 'ಧರ್ಮಗುರು ಶಕ್ತಿ'ಯನ್ನು ಮುರಿದು ಹಾಕಲು ಕಮ್ಯೂನ್ ಕಾತರವಾಗಿತ್ತು. ಪಾದ್ರಿಗಳನ್ನು ಅವರ ಖಾಸಗಿ ಜೀವನಕ್ಕೆ ಮರಳಿ ಕಳಿಸಲಾಯಿತು. ಅಲ್ಲಿ ಅವರು ತಮ್ಮ ಪೂರ್ವಜರಾದ ಏಸುದೂತ ಸಂತರಂತೆಶ್ರದ್ಧಾಳುಗಳ ಭಿಕ್ಷೆಯಿಂದ ಜೀವನ ಸಾಗಿಸುವಂತೆ ಸೂಚಿಸಲಾಯಿತು. ಶಿಕ್ಷಣವನ್ನು ಉಚಿತವಾಗಿ ಪಡೆಯಲು ಅನುಕೂಲವಾಗುವಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಜನರಿಗೆ ಮುಕ್ತಗೊಳಿಸಲಾಯಿತು. ಶಿಕ್ಷಣದಲ್ಲಿ ಚರ್ಚ್ ಮತ್ತು ಪ್ರಭುತ್ವದ ಹಸ್ತಕ್ಷೇಪವನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಈ ರೀತಿಯಾಗಿ, ಶಿಕ್ಷಣವು ಎಲ್ಲರಿಗೂ ಸಿಗುವಂತೆ ಮಾಡಲಾಯಿತು ಮಾತ್ರವಲ್ಲದೆ, ವರ್ಗ ಪೂರ್ವಗ್ರಹ ಮತ್ತು ಸರಕಾರಿ ಬಲದಿಂದ ಬಂಧಿಯಾಗಿದ್ದ ವಿಜ್ಞಾನವನ್ನು ಆ ಸಂಕೋಲೆಗಳಿಂದ ಬಿಡುಗಡೆ ಮಾಡಲಾಯಿತು.

ನ್ಯಾಯಾಂಗದ ಅಧಿಕಾರಿಗಳನ್ನು ಅದರ ಸೋಗಲಾಡಿ ಸ್ವಾತಂತ್ರ್ಯದಿಂದ ಬಿಡುಗಡೆ ಮಾಡಬೇಕಾಗಿದೆ. ವಾಸ್ತವವಾಗಿ ಆ ಸ್ವಾತಂತ್ರ್ಯವು ಅವರು ಸತತವಾಗಿ ಆಡಳಿತ ನಡೆಸಿದ ಎಲ್ಲಾ ಸರಕಾರಗಳಿಗೆ ಅತ್ಯಂತ ವಿಧೇಯವಾಗಿರುವುದನ್ನು ಮರೆಮಾಚುವ ಮುಖವಾಡವಾಗಿದೆ. ಅವರು ಅದಕ್ಕೆ ನಿಷ್ಠರಾಗಿರುವ ಪ್ರತಿಜ್ಞೆಗಳನ್ನು ತೆಗೆದುಕೊಂಡಿದ್ದಾರೆ ಹಾಗೂ ಮುರಿದಿದ್ದಾರೆ. ಇತರೆ ಸಾರ್ವಜನಿಕ ಸೇವಕರಂತೆ ಮ್ಯಾಜಿಸ್ಟ್ರೇಟ್‌ಗಳು ಹಾಗೂ ನ್ಯಾಯಾಧೀಶರು ಕೂಡ ಆಯ್ಕೆಯಾಗಬೇಕು, ಜವಾಬ್ದಾರಿಯುತರಾಗಿರಬೇಕು ಹಾಗೂ ಅವರನ್ನು ವಾಪಸ್ ಕರೆಸಿಕೊಳ್ಳುವ ಅವಕಾಶವಿರಬೇಕು.

ಬಹುಶಃ ಪ್ಯಾರಿಸ್ ಕಮ್ಯೂನ್ ಫ್ರಾನ್ಸ್‌ನ ಎಲ್ಲಾ ಮಹಾನ್ ಕೈಗಾರಿಕಾ ಕೇಂದ್ರಗಳಿಗೆ ಒಂದು ಮಾದರಿಯಾಗಬೇಕು. ಪ್ಯಾರಿಸ್ ಮತ್ತು ದ್ವಿತೀಯ ಹಂತದ ಕೇಂದ್ರಗಳಲ್ಲಿ ಒಮ್ಮೆ ಕಮ್ಯೂನ್ ಆಡಳಿತ ಸ್ಥಾಪನೆಯಾದ ಮೇಲೆ ಪ್ರಾಂತ್ಯಗಳಲ್ಲಿ ಕೂಡ ಹಳೆಯ ಕೇಂದ್ರೀಕೃತ ಸರಕಾರ ಉತ್ಪಾದಕರ ಸ್ವಯಮಾಡಳಿತಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ.

ದೂರದ ಅತಿ ಸಣ್ಣ ತಾಂಡಾಗಳಲ್ಲಿ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕೂಡ ಕಮ್ಯೂನ್ ರಾಜಕೀಯ ಸ್ವರೂಪವಾಗಿರಬೇಕು, ಸ್ಥಾಯೀ ಸೇನೆಯ ಸ್ಥಾನದಲ್ಲಿ ಅತ್ಯಲ್ಪ ಸೇವಾವಧಿಯ ರಾಷ್ಟ್ರೀಯ ಸೇನೆ ಇರಬೇಕು ಎಂಬುದಾಗಿ, ಪೂರ್ಣವಾಗಿ ರೂಪಿಸಲು ಸಮಯವಿಲ್ಲದಿದ್ದರೂ ತಾನು ರೂಪಿಸಿದ ರಾಷ್ಟ್ರೀಯ ಸಂಘಟನೆ ಕುರಿತ ಒಂದು ಕಚ್ಚಾ ನೀಲನಕ್ಷೆಯಲ್ಲಿ ಕಮ್ಯೂನ್ ಸ್ಪಷ್ಟವಾಗಿ ಹೇಳಿದೆ. ಪ್ರತಿ ಜಿಲ್ಲೆಯ ಗ್ರಾಮೀಣ ಕಮ್ಯೂನ್‌ಗಳು ಪ್ರತಿನಿಧಿ ಸಭೆಯ ಮೂಲಕ ತಮ್ಮ ಸಾಮಾನ್ಯ ವ್ಯವಹಾರ ಆಡಳಿತವನ್ನು ನಡೆಸಬೇಕು. ಹಾಗೂ ಈ ಜಿಲ್ಲಾ ಪ್ರತಿನಿಧಿ ಸಭೆಗಳು ಪ್ಯಾರಿಸ್‌ನಲ್ಲಿರುವ ರಾಷ್ಟ್ರೀಯ ನಿಯೋಗಕ್ಕೆ ತಮ್ಮ ಡೆಪ್ಯುಟಿಗಳನ್ನು ಕಳಿಸಬೇಕು. ಇಂಥ ಪ್ರತಿಯೊಬ್ಬ ಪ್ರತಿನಿಧಿಯೂ ವಾಪಸ್ ಕರೆಸಿಕೊಳ್ಳುವ ನಿಯಮಕ್ಕೆ ಹಾಗೂ ತಾನು ಪ್ರತಿನಿಧಿಸುವ ಕ್ಷೇತ್ರದ ಔಪಚಾರಿಕ ಸೂಚನೆಗಳನ್ನು ಪಾಲಿಸಲು ಬದ್ಧರಾಗುವ ನಿಯಮಕ್ಕೆ ಒಳಪಟ್ಟಿರಬೇಕು. ಆ ನಂತರವೂ ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿ ಉಳಿಯುವ ಕೆಲವು ಪ್ರಮುಖ ಕಾರ್ಯಗಳನ್ನು ದಮನಿಸಬಾರದು, ದಮನಿಸಲಾಗುವೆಂದು ಉದ್ದೇಶಪೂರ್ವಕವಾಗಿ ತಪ್ಪಾಗಿ ಹೇಳಲಾಗಿದೆ. ಹಾಗೆ ಮಾಡುವುದರ ಬದಲು ಆ ಕೆಲಸಗಳನ್ನು ಕಮ್ಯೂನ್ ಸ್ವತಃ ತಾನೇ ನಿರ್ವಹಿಸಬೇಕು. ಆದ್ದರಿಂದ ಕಟ್ಟುನಿಟ್ಟಿನ ಜವಾಬ್ದಾರಿಯುತ ಸಂಸ್ಥೆಗಳಾಗಬೇಕು. ದೇಶದ ಏಕತೆಯನ್ನು ಒಡೆಯಬಾರದು; ಅದಕ್ಕೆ ವ್ಯತಿರಿಕ್ತವಾಗಿ ಕಮ್ಯೂನ್ ಸಂವಿಧಾನದ ಮೂಲಕ ಅದನ್ನು ಸಂಘಟಿಸಬೇಕು. ಆ ಒಗ್ಗಟ್ಟಿನಿಂದ ಸ್ವತಂತ್ರವಾದ ಹಾಗೂ ದೇಶಕ್ಕಿಂತಲೂ ಶ್ರೇಷ್ಠವಾದ ಮೂರ್ತರೂಪವೆಂದು ಹೇಳಿಕೊಳ್ಳುವ, ತಾನೇ ಒಂದು ಪರಾವಲಂಬಿ ದುರ್ಮಾಂಸವಾದ ಪ್ರಭುತ್ವ ಅಧಿಕಾರವನ್ನು ನಾಶಮಾಡುವುದನ್ನು ನಿಜವಾಗಿಸಲು ಅದನ್ನು ಸಂಘಟಿಸಬೇಕು. ಹಳೆಯ ಸರಕಾರಿ ಅಧಿಕಾರದ ದಮನಕಾರಿ ಅಂಗಗಳನ್ನು ಕತ್ತರಿಸಿ ಬಿಸಾಕುವ ಜೊತೆಜೊತೆಯಲ್ಲೇ, ಸಮಾಜಕ್ಕಿಂತ ತಾವೇ ಮೇಲೆ ಎಂದು ಮೆರೆದಾಡುವ ಅಂಗಗಳಿಂದ ಕಾನೂನುಬದ್ಧ ಕಾರ್ಯಗಳನ್ನು ಕಿತ್ತುಕೊಳ್ಳಬೇಕು ಹಾಗೂ ಅವುಗಳನ್ನು ಸಮಾಜದ ಜವಾಬ್ದಾರಿಯುತ ಸಂಸ್ಥೆಗಳಿಗೆ ವಹಿಸಬೇಕು. ಆಳುವ ವರ್ಗದ ಯಾವ ಪ್ರತಿನಿಧಿ ಸಂಸತ್ತಿನಲ್ಲಿ ಜನರನ್ನು ಪ್ರತಿನಿಧಿಸಬೇಕು ಎಂಬುದನ್ನು ಮೂರು ಅಥವಾ ಆರು ವರ್ಷಕ್ಕೊಮ್ಮೆ ನಿರ್ಧರಿಸುವ ಬದಲು, ಕಮ್ಯೂನ್‌ಗಳಲ್ಲಿ ರೂಪಿಸುವ ಸಾರ್ವತ್ರಿಕ ಜನಮತ ವ್ಯವಸ್ಥೆಯಿಂದ ಜನರಿಗೆ ಉತ್ತಮ ಸೇವೆ ಲಭ್ಯವಾಗುತ್ತದೆ. ವೈಯಕ್ತಿಕ ಮತದಾನ ವ್ಯವಸ್ಥೆಯಿಂದ ಪ್ರತಿಯೊಬ್ಬ ಉದ್ಯೋಗದಾತನಿಗೆ ತನ್ನ ವ್ಯವಹಾರಕ್ಕೆ ಅನುಕೂಲವಾದ ಕಾರ್ಮಿಕರು ಮತ್ತು ಮ್ಯಾನೇಜರಗಳನ್ನು ಆಯ್ಕೆ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ವ್ಯಕ್ತಿಗಳಂತೆ ಕಂಪೆನಿಗಳು ಕೂಡ, ನಿಜವಾದ ವ್ಯಾಪಾರದ ವಿಷಯದಲ್ಲಿ ಯಾವ ಸೂಕ್ತ ವ್ಯಕ್ತಿಯನ್ನು ಯಾವ ಸೂಕ್ತ ಸ್ಥಾನದಲ್ಲಿ ಇರಿಸಬೇಕೆಂದು ಯೋಚಿಸುತ್ತವೆ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ವಿಚಾರ. ಹಾಗೂ ಯಾರಾದರೂ ತಪ್ಪು ಮಾಡಿದರೆ ತಕ್ಷಣವೇ ಅದಕ್ಕೆ ಪರಿಹಾರವನ್ನೂ ಕಂಡುಕೊಳ್ಳುತ್ತವೆ ಎಂಬುದೂ ತಿಳಿದಿರುವ ಸಂಗತಿ. ಇನ್ನೊಂದೆಡೆ, ಶ್ರೇಣಿಬದ್ಧ

ಅಧಿಕಾರ ಪ್ರದಾನ ವ್ಯವಸ್ಥೆಯು ಸಾರ್ವತ್ರಿಕ ಜನಮತವನ್ನು ಅತಿಕ್ರಮಿಸುವುದಕ್ಕಿಂತ ಕಮ್ಯೂನ್‌ನ ಸ್ಪೂರ್ತಿಗೆ ಪರಕೀಯವಾದುದು ಇನ್ನೇನೂ ಇರಲಾರದು.[13]

ಪೂರ್ಣವಾಗಿ ಹೊಸದಾದ ಐತಿಹಾಸಿಕ ಸೃಷ್ಟಿಗಳನ್ನು, ಹಳೆಯ ಹಾಗೂ ಇನ್ನೂ ಹೇಳಬೇಕೆಂದರೆ ಸಾಮಾಜಿಕ ಜೀವನದ ನಿಷ್ಕ್ರಿಯ ರೂಪಗಳ (ಹೊಸ ರೂಪಗಳಿಗೆ ಹಳೆಯ ರೂಪಗಳ ಜೊತೆ ಹಲವು ಸಾಮ್ಯಗಳಿರಬಹುದಾದರೂ) ಪಡಿರೂಪ ಎಂದು ತಪ್ಪಾಗಿ ತಿಳಿಯುವುದು, ಸಾಮಾನ್ಯ ರೂಢಿಯಾಗಿದೆ. ಹೀಗಾಗಿ, ಆಧುನಿಕ ಪ್ರಭುತ್ವ ಅಧಿಕಾರವನ್ನು ಒಡೆದುಹಾಕುವ ಈ ಹೊಸ ಕಮ್ಯೂನ್, ಮಧ್ಯಯುಗದ ಕಮ್ಯೂನ್‌ಗಳ ಮರುಸೃಷ್ಟಿ ಎಂದು ತಪ್ಪಾಗಿ ತಿಳಿಯಲಾಗಿದೆ. ಮಧ್ಯಯುಗದ ಕಮ್ಯೂನ್‌ಗಳು ಪ್ರಭುತ್ವಕ್ಕೂ ಮೊದಲೇ ಬಂದಿದ್ದರೂ, ಆನಂತರದಲ್ಲಿ ಅವು ಅದೇ ಪ್ರಭುತ್ವದ ಉಪಸ್ತರ (ಸಬ್‌ಸ್ಟ್ರಾಟಮ್) ಆಗಿಬಿಟ್ಟವು. ಮಾಂಟೆಸ್‌ಕ್ಯೂ ಮತ್ತು ಗಿರೊಂದಿನ್‌ಗಳು ಕನಸು ಕಂಡಂತೆ ದೇಶವನ್ನು ಚಿಕ್ಕ ರಾಜ್ಯಗಳ ಒಕ್ಕೂಟವನ್ನಾಗಿ ಒಡೆಯುವುದು ಕಮ್ಯೂನ್‌ನ ಸಂವಿಧಾನದ ಉದ್ದೇಶ ಎಂದು ತಪ್ಪಾಗಿ ತಿಳಿಯಲಾಯಿತು. ಮೂಲತಃ ರಾಜಕೀಯ ಬಲದಿಂದ ತರಲಾಗಿದ್ದ ಮಹಾನ್ ದೇಶಗಳ ಒಗ್ಗಟ್ಟು, ಈಗ ಸಾಮಾಜಿಕ ಉತ್ಪಾದನೆಯ ಪ್ರಬಲ ಸಹಕಾರಣವಾಗಿದೆ. ಪ್ರಭುತ್ವ ಅಧಿಕಾರಕ್ಕೆ ಕಮ್ಯೂನಿನ ವಿರೋಧವನ್ನು ಅತಿ–ಕೇಂದ್ರೀಕರಣದ ವಿರುದ್ಧದ ಪ್ರಾಚೀನ ಹೋರಾಟದ ಅತಿಶಯ ಸ್ವರೂಪ ಎಂಬುದಾಗಿ ತಪ್ಪು ತಿಳಿಯಲಾಗಿದೆ. ಕೆಲವು ವಿಶಿಷ್ಟ ಐತಿಹಾಸಿಕ ಸನ್ನಿವೇಶಗಳು ಫ್ರಾನ್ಸ್‌ನಂತೆ ಬಂಡವಾಳಶಾಹಿ ವಿಧಾನದ ಸರಕಾರದ ಶಾಸ್ತ್ರೀಯ ಬೆಳವಣಿಗೆಯನ್ನು ತಡೆದಿರಬಹದು ಹಾಗೂ ಇಂಗ್ಲೆಂಡ್‌ನಲ್ಲಿ ಆದಂತೆ ಭ್ರಷ್ಟ ಚರ್ಚ್ ಆಡಳಿತಗಾರರು, ಸ್ವಾರ್ಥಿ ಕೌನ್ಸಿಲರ್‌ಗಳು ಹಾಗೂ ಪಟ್ಟಣಗಳಲ್ಲಿನ ದುಷ್ಟ ಕಾನೂನು ಸಂರಕ್ಷಕರು ಹಾಗೂ ಕೌಂಟಿಗಳಲ್ಲಿ ಅಕ್ಷರಶಃ ವಂಶಪಾರಂಪರಿಕ ಮ್ಯಾಜಿಸ್ಟ್ರೇಟ್‌ಗಳು, ಮಹಾನ್ ಕೇಂದ್ರೀಯ್ರ ಪ್ರಭುತ್ವ ಅಂಗಗಳನ್ನು ಪೂರ್ಣಗೊಳಿಸಲು ಅವಕಾಶ ನೀಡಿರಬಹುದು. ಕಮ್ಯೂನ್ ಸಂವಿಧಾನವು ಇದುವರೆಗೆ ಪ್ರಭುತ್ವದ ಪರಾವಲಂಬಿಗಳು ಹೀರಿಕೊಂಡಿದ್ದ ಹಾಗೂ ಸಮಾಜದ ಮುಕ್ತ ಚಲನೆಗೆ ತಡೆಯೊಡ್ಡಿದ್ದ ಎಲ್ಲಾ ಶಕ್ತಿಗಳನ್ನು ಸಾಮಾಜಿಕ ಸಂಸ್ಥೆಗೆ ಮರಳಿಸಬಹುದಿತ್ತು. ಈ ಒಂದೇ ಒಂದು ಕೆಲಸದ ಮೂಲಕ ಅದು ಫ್ರಾನ್ಸ್‌ನ ಮರುಹುಟ್ಟನ್ನು ಆರಂಭಿಸಬಹುದಿತ್ತು. ಲೂಯಿ ನೆಪೋಲಿಯನ್ ಅಡಿಯಲ್ಲಿ 'ಪಟ್ಟಣಗಳ ಮೇಲೆ ಹಳ್ಳಿಗಳ ಆಡಳಿತ' ಎಂಬುದಾಗಿ ಮೋಸದಿಂದ ಮಾರ್ಪಾಟಾದ, ಆದರೆ ಅದಕ್ಕೆ ಮೊದಲು ಲೂಯಿ ಫಿಲಿಪ್ ಆಡಳಿತದಲ್ಲಿ ದೇಶದ ಮೇಲೆ ತಾನು ಬೀರಿದ್ದ ಪ್ರಭಾವವನ್ನು ಮರುಸ್ಥಾಪಿಸುವ ಯತ್ನವಾಗಿ,ಫ್ರೆಂಚ್ ಪ್ರಾಂತೀಯ ಮಧ್ಯಮ ವರ್ಗವು ಕಮ್ಯೂನನ್ನು ಕಂಡಿತು. ವಾಸ್ತವವಾಗಿ, ಕಮ್ಯೂನ್ ಸಂವಿಧಾನವು ಗ್ರಾಮೀಣ ಉತ್ಪಾದಕರನ್ನು ಅವರ ಜಿಲ್ಲೆಗಳ ಕೇಂದ್ರೀಯ ಪಟ್ಟಣಗಳ ಬೌದ್ಧಿಕ ನಾಯಕತ್ವದ ಅಡಿಯಲ್ಲಿ ತಂದಿತು. ಈ ರೀತಿ ಮಾಡಿದ್ದರಿಂದ ಅವರಿಗೆ ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ

13 ಇನ್‌ವೆಸ್ಟಿಟ್ಯುರ್: ಮಧ್ಯ ಯುಗದಲ್ಲಿ ಊಳಿಗಮಾನ್ಯ ದಣಿಗಳು ಸಾಮಂತರಿಗೆ ಜಮೀನನ್ನು ವಿಧಿವತ್ತಾಗಿ ವಹಿಸಿಕೊಡುವ ಅಥವಾ ಕ್ರೈಸ್ತ ಪಾದ್ರಿಗಳನ್ನು ಪ್ರತಿಷ್ಠಾಪಿಸುವ ಪದ್ಧತಿ. ಈ ಪದ್ಧತಿಯಲ್ಲಿ ಲೌಕಿಕ ಅಧಿಕಾರ ಶ್ರೇಣಿಯ ಮತ್ತು ಆಧ್ಯಾತ್ಮಿಕ ರಂಗದಲ್ಲಿ ಕೆಳಸ್ತರದಲ್ಲಿರುವವರು ಉನ್ನತ ಸ್ತರದಲ್ಲಿರುವವರನ್ನು ಅವಲಂಬಿಸುವುದು ರೂಢಿಯಾಗಿತ್ತು.

ಪಟ್ಟಣದ ಕಾರ್ಮಿಕರ ರೂಪದಲ್ಲಿ ಸಹಜ ಟ್ರಸ್ಟಿಗಳು ಸಿಕ್ಕಂತಾಯಿತು. ಕಮ್ಯೂನ್‌ನ ಅಸ್ತಿತ್ವವೇ ಸ್ಥಳೀಯ ಮುನಿಸಿಪಲ್ ಸ್ವಾತಂತ್ರ್ಯವನ್ನು ಒಳಗೊಂಡಿತ್ತು, ಆದರೆ ಈಗ ರದ್ದು ಮಾಡಲಾದ ಪ್ರಭುತ್ವದ ಅಧಿಕಾರಕ್ಕೆ ತಡೆಯಾಗಿ ಅಲ್ಲ. ಕಮ್ಯೂನಿನ ಆಶೋತ್ತರಗಳನ್ನು, 1791ರ ಫ್ರೆಂಚ್ ಮುನಿಸಿಪಲ್ ಸಂಸ್ಥೆಯ ವಿಡಂಬನೆಯಂತಿರುವ, ಸ್ಥಳೀಯ ಪಟ್ಟಣ ಸರಕಾರಗಳನ್ನು ಪ್ರಷ್ಯನ್ ಪ್ರಭುತ್ವದ ಪೊಲೀಸ್ ವ್ಯವಸ್ಥೆಯ ಆನುಷಂಗಿಕ ಗಾಲಿಚಕ್ರದ ಮಟ್ಟಕ್ಕೆ ಇಳಿಸಿದ, ಪ್ರಶ್ಯನ್ ಮುನಿಸಿಪಲ್ ಸಂವಿಧಾನಕ್ಕೆ ಹೋಲಿಸುವುದು, ಬಿಸ್ಮಾರ್ಕ್‌ನ ತಲೆಗೆ ಮಾತ್ರವೇ ಹೊಳೆಯಬಹುದು! ಯುದ್ಧ ಹಾಗೂ ರಕ್ತಪಾತದ ತಂತ್ರಗಳನ್ನು ಹೆಣೆಯುವುದರಿಂದ ದೂರವಿದ್ದಾಗ, ತನ್ನ ಹಳೆಯ ವ್ಯವಹಾರವನ್ನೇ ಪುನಾರಂಭಿಸುವ ಆಕಾಂಕ್ಷೆ ಹೊಂದಿದ, ತೀವ್ರ ಬುದ್ಧಿಮತ್ತೆ ಹೊಂದಿದ, 'ಬರ್ಲಿನ್ ಪಂಚ್'ಗೆ[14] ತನ್ನ ಕೊಡುಗೆಯನ್ನು ನೀಡಿದ ಬಿಸ್ಮಾರ್ಕ್‌ನಿಂದ ಇನ್ನೇನನ್ನೂ ತಾನೇ ನಿರೀಕ್ಷಿಸಲಾದೀತು?

ಬಂಡವಾಳಶಾಹಿ ಕ್ರಾಂತಿಗಳ 'ಅಗ್ಗದ ಸರಕಾರ' ಎಂಬ ಹಿಡಿ–ನುಡಿಯನ್ನು ಕಮ್ಯೂನ್, ಖರ್ಚಿನ ದೊಡ್ಡ ಬಾಬತ್ತುಗಳಾದ ಸೇನೆ ಮತ್ತು ಪ್ರಭುತ್ವದ ಕಾರ್ಯಭಾರ ನಾಶ ಮಾಡುವ ಮೂಲಕ, ಸಾಕಾರಗೊಳಿಸಿತು. ಅದರ ಅಸ್ತಿತ್ವವೇ, ರಾಜಪ್ರಭುತ್ವ ಅಸ್ತಿತ್ವದಲ್ಲಿಲ್ಲದಿರುವುದರ ಪೂರ್ವಾನುಮಾನದ ಮೇಲೆ ಆಧರಿಸಿದೆ. ಕನಿಷ್ಟಪಕ್ಷ ಯುರೋಪ್‌ನಲ್ಲಾದರೂ ರಾಜಪ್ರಭುತ್ವವು, ಸಾಮಾನ್ಯ ಹೊಣೆಗಾರಿಕೆ ಮತ್ತು ವರ್ಗ ಆಳ್ವಿಕೆಯ ಅನಿವಾರ್ಯ ಸೋಗು ಆಗಿರುತ್ತದೆ. ಅದು ಗಣರಾಜ್ಯಕ್ಕೆ ನಿಜವಾದ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬುನಾದಿಯನ್ನು ಒದಗಿಸಿತು. ಆದರೆ ಅಗ್ಗದ ಸರಕಾರವಾಗಲೀ 'ನೈಜ ಗಣರಾಜ್ಯ'ವಾಗಲೀ ಅದರ ಅಂತಿಮ ಗುರಿಯಲ್ಲ. ಅವುಗಳು ಕೇವಲ ಅದರ ಅನುಷಂಗಿಕಗಳಷ್ಟೇ.

ಕಮ್ಯೂನನ್ನು ಅನೇಕಾನೇಕ ರೀತಿಗಳಲ್ಲಿ ವ್ಯಾಖ್ಯಾನಿಸಲಾಗಿದೆ ಮತ್ತು ವಿವಿಧ ಹಿತಾಸಕ್ತಿಗಳು ಅದು ತಮ್ಮ ಪರವಾಗಿದೆ ಎಂದು ಅರ್ಥೈಸಿವೆ. ಇವುಗಳನ್ನೆಲ್ಲಾ ಗಮನಿಸಿದರೆ, ಹಿಂದಿನ ಎಲ್ಲಾ ವಿಧದ ಸರಕಾರಗಳು ಸ್ಪಷ್ಟವಾಗಿ ದಮನಕಾರಿಯಾಗಿದ್ದು ಕಮ್ಯೂನ್ ಸಾದ್ಯಂತವಾಗಿ ಒಂದು ಬಹುವಿಶಾಲ ರಾಜಕೀಯ ರೂಪ ಎಂದು ತೋರುತ್ತದೆ. ಕಮ್ಯೂನ್‌ನ ನಿಜವಾದ ಗುಟ್ಟು ಇರುವುದೇ ಇಲ್ಲಿ. ಇದೊಂದು ಅತ್ಯಗತ್ಯವಾಗಿ ದುಡಿಯುವ ಜನರ ಸರಕಾರ; ಅದು ಶೋಷಿಸುವ ವರ್ಗದ ವಿರುದ್ಧ ಉತ್ಪಾದಕ ಶಕ್ತಿಗಳ ಹೋರಾಟದ ಉತ್ಪನ್ನವಾಗಿದೆ. ಶ್ರಮದ ಆರ್ಥಿಕ ವಿಮೋಚನೆಯನ್ನು ನಿರ್ವಹಿಸಲು ಬೇಕಾದ ರಾಜಕೀಯ ರೂಪವನ್ನು ಅದು ಕೊನೆಗೂ ಕಂಡುಹಿಡಿದಿದೆ.

ಈ ಕೊನೆಯ ಅಂಶದ ಹೊರತಾಗಿ, ಕಮ್ಯೂನ್ ಸಂವಿಧಾನವು ಒಂದು ಅಸಾಧ್ಯ ಹಾಗೂ ಭ್ರಾಮಕವಾಗಿರುತ್ತಿತ್ತು. ಉತ್ಪಾದಕರ ರಾಜಕೀಯ ಆಳ್ವಿಕೆಯು, ಅವರ ಸಾಮಾಜಿಕ ಗುಲಾಮಿತನದ ಮುಂದುವರಿಕೆಯೊಂದಿಗೆ ಸಹ–ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ವರ್ಗಗಳ ಅಸ್ತಿತ್ವ ನೆಲೆನಿಂತಿರುವ ಆರ್ಥಿಕ ಬುನಾದಿಗಳನ್ನು ಬುಡಮೇಲು ಮಾಡಲು, ಆ ಮೂಲಕ ವರ್ಗ–ಆಡಳಿತವನ್ನು ಕೊನೆಗೊಳಿಸಲು ಕಮ್ಯೂನ್ ಒಂದು

14'ಕ್ಲಾಡರಾಡಸ್ಚ್': ಜರ್ಮನಿಯ ವ್ಯಂಗ್ಯ (ವಿಡಂಬನೆ) ಪತ್ರಿಕೆ. ಬರ್ಲಿನ್‌ನಲ್ಲಿ 1848ರಿಂದ ಪ್ರಕಟವಾಯಿತು. 'ಪಂಚ್' ವಾರಪತ್ರಿಕೆ 1841ರಿಂದ ಲಂಡನ್‌ನಲ್ಲಿ ಪ್ರಕಟವಾಯಿತು.

ಸನ್ನೆಗೋಲಾಗಿ ಕಾರ್ಯ ನಿರ್ವಹಿಸುತ್ತದೆ. ಶ್ರಮದ ವಿಮೋಚನೆಯಿಂದ ಪ್ರತಿಯೊಬ್ಬ ಮನುಷ್ಯನು ಕಾರ್ಮಿಕನಾಗುತ್ತಾನೆ, ಮತ್ತು ಉತ್ಪಾದಕ ಶ್ರಮವು ಒಂದು ವರ್ಗ ಗುಣವಿಶೇಷವಾಗಿರುವುದು ಕೊನೆಯಾಗುತ್ತದೆ.

ಇದೊಂದು ವಿಚಿತ್ರ ವಾಸ್ತವ. ಶ್ರಮಜೀವಿಗಳ ವಿಮೋಚನೆಯ ಕುರಿತಂತೆ ಕಳೆದ ಅರವತ್ತು ವರ್ಷಗಳ ಕಾಲ ದೊಡ್ಡ ದೊಡ್ಡ ಮಾತುಗಳು ಹಾಗೂ ಸಾಹಿತ್ಯದ ಹೊರತಾಗಿಯೂ, ಶ್ರಮಜೀವಿಗಳು ಎಲ್ಲಾದರೂ ಈ ವಿಷಯವನ್ನು ದೃಢ ನಿಶ್ಚಯದಿಂದ ತಮ್ಮ ಕೈಗೆ ತೆಗೆದುಕೊಂಡ ಕೂಡಲೇ, ಹಾಲಿ ಸಮಾಜವನ್ನುಸಮರ್ಥಿಸಿಕೊಳ್ಳುವ ಮಾತುಗಳು ಅದರಮುಖವಾಣಿಗಳಿಂದ ಏಳುತ್ತವೆ.ಈ ಸಮಾಜದಲ್ಲಿಬಂಡವಾಳ (ಭೂಮಾಲಿಕ ಈಗ ಬಂಡವಾಳದ ವಿಶ್ರಾಂತ ಪಾಲುದಾರ). ಮತ್ತು ಕೂಲಿ–ಗುಲಾಮಗಿರಿಯ ಎರಡು ಧ್ರುವಗಳಿದ್ದಾಗ್ಯೂ, ಬಂಡವಾಳಶಾಹಿ ಸಮಾಜವು ತನ್ನ ವಿರೋಧಗಳು ಇನ್ನೂ ಬೆಳವಣಿಗೆ ಹೊಂದದೆ ತಾನು ಇನ್ನೂ ಪರಿಶುದ್ಧವಾಗಿದೆಯೇನೋ ಎನ್ನುವ ರೀತಿಯಲ್ಲಿ, ತನ್ನ ಭ್ರಮೆಗಳು ಇನ್ನೂ ಒಡೆದಿಲ್ಲ ಎನ್ನುವ ರೀತಿಯಲ್ಲಿ, ಅದರ ಜಾರತನದ ವಾಸ್ತವಗಳು ಇನ್ನೂ ಬಹಿರಂಗವಾಗದೆ ಉಳಿದಿವೆ ಎನ್ನುವಂತೆ ಈ ಮುಖವಾಣಿಗಳು ವರ್ತಿಸುತ್ತವೆ. ಎಲ್ಲಾ ನಾಗರಿಕತೆಗಳ ಮೂಲವಾದ ಆಸ್ತಿಯನ್ನು ತೊಡೆದು ಹಾಕುವುದು ಕಮ್ಯೂನಿನ ಉದ್ದೇಶವಾಗಿದೆ ಎಂದು ಅವರು ಉದ್ಗರಿಸುತ್ತಾರೆ! ಹೌದು ಸನ್ಮಾನ್ಯರೇ, ಬಹುಜನರ ಶ್ರಮವು ಕೆಲವೇ ಜನರ ಆಸ್ತಿಯಾಗಿ ಪರಿವರ್ತನೆಹೊಂದುವ ಆ ವರ್ಗ–ಆಸ್ತಿಯನ್ನು ತೊಡೆದುಹಾಕುವುದು ಕಮ್ಯೂನಿನ ಉದ್ದೇಶವಾಗಿದೆ. ಕಿತ್ತುಕೊಳ್ಳುವವರಿಂದ ಕಿತ್ತುಕೊಳ್ಳುವುದು ಅದರ ಉದ್ದೇಶ. ಈಗ ಶ್ರಮವನ್ನು ಗುಲಾಮೀಕರಿಸುವ ಹಾಗೂ ಶೋಷಿಸುವ ಪ್ರಮುಖ ಸಾಧನಗಳಾದ – ಉತ್ಪಾದನಾ ಸಾಧನ, ಭೂಮಿ ಮತ್ತು ಬಂಡವಾಳ – ಇವುಗಳನ್ನು ಮುಕ್ತ ಹಾಗೂ ಸಹಯೋಗಿ(ಅಸೋಸೊಯೆಟಿವ್) ಶ್ರಮದ ಬರಿಯ ಸಾಧನಗಳಾಗಿಪರಿವರ್ತಿಸಿ,ವೈಯಕ್ತಿಕ ಆಸ್ತಿಯನ್ನು ನಿಜವಾಗಿಸುವುದು ಅದರ ಬಯಕೆಯಾಗಿದೆ. ಆದರೆ ಅದು ಕಮ್ಯೂನಿಸಂ, 'ಅಸಾಧ್ಯ' ಕಮ್ಯೂನಿಸಂ! ಯಾಕೆಂದರೆ ಸದ್ಯದ ವ್ಯವಸ್ಥೆಯನ್ನು ಮುಂದುವರಿಸುವ ಅಸಾಧ್ಯತೆಯನ್ನು ಗ್ರಹಿಸುವಷ್ಟು ಬುದ್ಧಿವಂತರಾದ ಆಳುವ ವರ್ಗಗಳ ಸದಸ್ಯರು (ಅವರು ದೊಡ್ಡ ಸಂಖ್ಯೆಯಲ್ಲಿದ್ದಾರೆ) ಸಹಕಾರಿ ಉತ್ಪಾದನೆಯ ಪ್ರಖರ ಪ್ರತಿಪಾದಕರಾಗಿದ್ದಾರೆ. ಸಹಕಾರಿ ಉತ್ಪಾದನೆಯು ಒಂದು ಬೂಟಾಟಿಕೆ ಹಾಗೂ ಮೋಹಜಾಲ ಆಗದಿರಬೇಕಾದರೆ; ಅದು ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರಿ ನಿಲ್ಲಬೇಕಾದರೆ; ಒಂದು ಸಾಮಾನ್ಯ ಯೋಜನೆಯನ್ವಯ ಸಂಯುಕ್ತ ಸಹಕಾರಿ ಸಂಘಗಳು ರಾಷ್ಟ್ರೀಯ ಉತ್ಪಾದನೆಯನ್ನು ನಿಯಂತ್ರಿಸಿ, ಆ ಮೂಲಕ ಅದನ್ನು ತಮ್ಮದೇ ನಿಯಂತ್ರಣಕ್ಕೆ ಪಡೆಯಬೇಕಾದರೆ, ಬಂಡವಾಳಶಾಹಿ ಉತ್ಪಾದನೆಯ ಮಾರಕ ಫಲಿತಗಳಾದ ಸತತ ಅರಾಜಕತೆ ಮತ್ತು ಕಾಲಕಾಲದ ಸಂಕ್ಷೋಭೆಗಳನ್ನು ಅಂತ್ಯಗೊಳಿಸಬೇಕಾದರೆ, ಸನ್ಮಾನ್ಯರೇ, ಅದು ಕಮ್ಯೂನಿಸಂ ಅಲ್ಲದೆ, ಅದೂ 'ಕಾರ್ಯಸಾಧ್ಯ' ಕಮ್ಯೂನಿಸಂ ಅಲ್ಲದೆ ಬೇರೇನು ಆಗಿರಲು ಸಾಧ್ಯ,?

ದುಡಿಯುವ ಜನರು ಕಮ್ಯೂನ್‌ನಿಂದ ಪವಾಡಗಳೇನನ್ನೂ ನಿರೀಕ್ಷಿಸಲಿಲ್ಲ. 'ಜನತೆಯ ಆದೇಶವನ್ನು' ಜಾರಿ ಮಾಡಲು ಸಿದ್ಧ ಕಾಲ್ಪನಿಕ ಸ್ವರ್ಗ (ಯುಟೋಪಿಯಾ) ಅವರ ಬಳಿ ಇರಲಿಲ್ಲ. ತಮ್ಮ ವಿಮೋಚನೆ ಮತ್ತು ಅದರ ಜೊತೆಯಲ್ಲೇ ಪ್ರಸಕ್ತ ಸಮಾಜ ತನ್ನದೇ

ಆರ್ಥಿಕ ಚಾಲಕಶಕ್ತಿಯಿಂದಾಗಿ (ಏಜೆನ್ಸಿ),ಪ್ರಬಲವಾದ ಸೆಳೆತದೊಂದಿಗೆ ಸಾಧಿಸಲು ಪ್ರವೃತ್ತವಾಗಿರುವ ಉನ್ನತ ಸ್ವರೂಪದ ವಿಮೋಚನೆಯನ್ನು ಮಾಡಬೇಕಾದರೆ, ತಾವು ಸುದೀರ್ಘ ಹೋರಾಟಗಳನ್ನು ಹಾದು ಹೋಗಬೇಕು, ಐತಿಹಾಸಿಕ ಪ್ರಕ್ರಿಯೆಯ ಸರಣಿಯನ್ನು ದಾಟಿ ಹೋಗಬೇಕು, ಸನ್ನಿವೇಶಗಳು ಹಾಗೂ ಜನರನ್ನು ಬದಲಾಯಿಸಬೇಕಾಗುತ್ತದೆ ಎಂಬುದು ಅವರಿಗೆ ಗೊತ್ತಿದೆ. ಸಾಕಾರಗೊಳಿಸಲು ಅವರ ಬಳಿ ಆದರ್ಶಗಳೇನೂ ಇಲ್ಲ, ಆದರೆ ಕುಸಿಯುತ್ತಿರುವ ಹಳೆಯ ಬಂಡವಾಳಶಾಹಿ ಸಮಾಜ ಗರ್ಭೀಕರಿಸಿಕೊಂಡಿರುವ ನವ ಸಮಾಜದ ಘಟಕಗಳನ್ನು ಸ್ವತಂತ್ರಗೊಳಿಸಲು ಅವರು ಸನ್ನದ್ಧರಾಗಿದ್ದಾರೆ. ತಮ್ಮ ಐತಿಹಾಸಿಕ ಕಾರ್ಯಭಾರದ ಬಗ್ಗೆ ಸಂಪೂರ್ಣ ಪ್ರಜ್ಞೆ ಹಾಗೂ ಅದನ್ನು ಸಾಧಿಸಲು ವೀರೋಚಿತ ನಿಶ್ಚಯ ಹೊಂದಿರುವ ಕಾರ್ಮಿಕ ವರ್ಗಕ್ಕೆ, ಪೆನ್ ಹಾಗೂ ಶಾಯಿ ಬಾಟಲಿ ಹೊಂದಿರುವ ಸಭ್ಯರಲ್ಲಿ ಸಭ್ಯರು ಕಕ್ಕುವ ಒರಟು ನಿಂದನೆಗಳು ಹಾಗೂ ಬೋಳೆ ಹಳಸಲು ನುಡಿಗಳಿಗೆ ಮತ್ತು ಗೊಡ್ಡು ಧೋರಣೆಗಳನ್ನು ವೈಜ್ಞಾನಿಕ ಅಸ್ಖಲಿತತೆಯ ಸೋಗಿನೊಂದಿಗೆ ದೇವವಾಣಿಯಂತೆ ಸುರಿಸುವ ಶುಭ ಚಿಂತಕ ಬಂಡವಾಳಶಾಹಿ ಸಿದ್ಧಾಂತಿಗಳ ನೀತಿಬೋಧಕ ಪ್ರೋತ್ಸಾಹಗಳಿಗೆ, ನಕ್ಕು ಮುಂದೆ ಸಾಗುವ ಸಾಮರ್ಥ್ಯವಿದೆ.

ಪ್ಯಾರಿಸ್ ಕಮ್ಯೂನ್ ಕ್ರಾಂತಿಯ ನಿರ್ವಹಣೆಯನ್ನು ಸ್ವತಃ ತನ್ನ ಕೈಗೆ ತೆಗೆದುಕೊಂಡಾಗ, ಸಾಮಾನ್ಯ ಕಾರ್ಮಿಕರು ತಮ್ಮ 'ಸಹಜ ಮೇಲಧಿಕಾರಿಗಳ' ಸರಕಾರಿ ಅಧಿಕಾರವನ್ನು ಉಲ್ಲಂಘಿಸುವ ಧೈರ್ಯ ತೋರಿದರು ಹಾಗೂ ಅತ್ಯಂತ ಕಷ್ಟಕರ ಸನ್ನಿವೇಶಗಳಲ್ಲಿ ತಮ್ಮ ತಮ್ಮ ಕೆಲಸಗಳನ್ನು ವಿನಯಪೂರ್ವಕವಾಗಿ, ಪ್ರಜ್ಞಾಪೂರ್ವಕವಾಗಿ ಹಾಗೂ ದಕ್ಷತೆಯಿಂದ ಮಾಡಿದರು. ತುಂಬಾ ವೈಜ್ಞಾನಿಕವಾಗಿ (ಪ್ರೊಫೆಸರ್ ಹಕ್ಸ್‌ಲೇ. 1871ರ ಜರ್ಮನ್ ಆವೃತ್ತಿಗೆ ಟಿಪ್ಪಣಿ) ಲೆಕ್ಕಹಾಕಿ ನಿಗದಿಪಡಿಸಿದ ಒಂದು ಮೆಟ್ರೊಪಾಲಿಟನ್ ಶಾಲಾ ಮಂಡಳಿಯ ಕಾರ್ಯದರ್ಶಿ ಪಡೆಯುವ ವೇತನದ ಐದನೇ ಒಂದು ಭಾಗದಷ್ಟು ಗರಿಷ್ಠ ಸಂಬಳಕ್ಕೆ ಅವರು ದುಡಿದರು. ಇವೆಲ್ಲಾ ಆಗುತ್ತಿರುವಾಗ, ಹೋಟೆಲ್ ದ ವಿಲ್ಲೆ ಮೇಲೆ ಕಾರ್ಮಿಕ ಗಣರಾಜ್ಯದ ಕ್ರಾಂತಿಯ ಸಂಕೇತವಾದ ಕೆಂಬಾವುಟ ಹಾರಾಡುತ್ತಿದ್ದ ನೋಟ ಕಂಡು ಹಳೆಯ ಜಗತ್ತು ಕೋಪೋದ್ರೇಕದಿಂದ ನಡುಗಿ ಹೋಯಿತು.

ಅಷ್ಟಾದರೂ, ಶ್ರೀಮಂತ ಬಂಡವಾಳಶಾಹಿಗಳನ್ನು ಹೊರತುಪಡಿಸಿ ಅಂಗಡಿ ಮಾಲಿಕರು, ವರ್ತಕರು, ವ್ಯಾಪಾರಿಗಳು ಸೇರಿದಂತೆ ಪ್ಯಾರಿಸ್‌ನ ಮಧ್ಯಮವರ್ಗದ ಬಹುತೇಕ ವಿಭಾಗಗಳು ಕೂಡ ಸಾಮಾಜಿಕ ಮುನ್ನಡೆಯನ್ನು ಇಡುವ ಸಾಮರ್ಥ್ಯ ಹೊಂದಿರುವ ಏಕೈಕ ವರ್ಗವೆಂದರೆ ಅದು ದುಡಿಯುವ ವರ್ಗ ಎಂದು ಬಹಿರಂಗವಾಗಿಯೇ ಮಾನ್ಯ ಮಾಡಿದಂಥ ಪ್ರಪ್ರಥಮ ಕ್ರಾಂತಿ ಇದಾಗಿದೆ. ಮಧ್ಯಮ ವರ್ಗದವರ ಮಧ್ಯೆ ಆಗಾಗ ವಿವಾದಕ್ಕೆ ಕಾರಣವಾಗುವ ಸಾಲಗಾರ–ಸಾಲಿಗ ಖಾತೆಗಳ ವಿಚಾರದಲ್ಲಿ ಒಂದು ವ್ಯಾವಹಾರಿಕ ಇತ್ಯರ್ಥ ಏರ್ಪಡಿಸಿ ಕಮ್ಯೂನ್ ಅವರನ್ನು ರಕ್ಷಿಸಿತು. ಸಾಲ ಮರುಪಾವತಿಯನ್ನು ಮೂರು ವರ್ಷ ಕಾಲ ಮುಂದೂಡುವ ಆಜ್ಞೆಯನ್ನು ಕಮ್ಯೂನ್ ಎಪ್ರಿಲ್ 18ರಂದು ಹೊರಡಿಸಿತು. ಮಧ್ಯಮ ವರ್ಗದ ಅದೇ ವಿಭಾಗವನ್ನು, ಕಾರ್ಮಿಕರ 1848 ಜೂನ್ ಬಂಡಾಯವನ್ನು ದಮನಿಸಲು ನೆರವಾದ ನಂತರ, ಆಗಿನ ಸಂವಿಧಾನ ರಚನಾ ಸಭೆಯು ಅವರನ್ನು ಸಾಲಗಾರರಿಗೆ ಹಿಂದೆಮುಂದೆ ನೋಡದೆ

ಬಲಿ ನೀಡಿತ್ತು. ಅವರು ಈಗ ಕಾರ್ಮಿಕ ವರ್ಗಕ್ಕೆ ಬೆಂಬಲ ನೀಡಲು ಅದೊಂದೇ ಕಾರಣವಲ್ಲ. ಕಮ್ಯೂನ್, ಇಲ್ಲವೇ ಯಾವ ಹೆಸರಿನಲ್ಲಾದರೂ ಮತ್ತೆ ತಲೆಯೆತ್ತಬಹುದಾದ ಸಾಮ್ರಾಜ್ಯ– ಇವುಗಳ ನಡುವೆ ಕಮ್ಯೂನ್ ಒಂದೇ ಪರ್ಯಾಯ ಎಂದು ಅವರು ಭಾವಿಸಿದ್ದಾರೆ. ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡು, ಆರ್ಥಿಕ ಅವ್ಯವಹಾರಗಳ ಮೂಲಕ ಸಾಮ್ರಾಜ್ಯ ಅವರನ್ನು ಆರ್ಥಿಕವಾಗಿ ನಾಶ ಮಾಡಿತ್ತು. ಬಂಡವಾಳದ ಕೇಂದ್ರೀಕರಣದ ಕೃತಕ ವೇಗಕ್ಕೆ ಅದು ನೀಡಿದ ಕುಮ್ಮಕ್ಕಿನಿಂದ ಹಾಗೂ ತಮ್ಮದೇ ವಿಭಾಗದವರಿಂದ ಲೂಟಿ ಮಾಡಿ ಅವರಿಗೆ ಆರ್ಥಿಕವಾಗಿ ವಿನಾಶ ತಂದೊಡ್ಡಿತ್ತು. ಅದು ಅವರನ್ನು ರಾಜಕೀಯವಾಗಿ ದಮನಿಸಿತ್ತು. ತನ್ನ ಕಾಮಕೇಳಿಗಳ ಮೂಲಕ ಅವರನ್ನು ನೈತಿಕವಾಗಿ ಆಘಾತಪಡಿಸಿತ್ತು. ಅವರ ಮಕ್ಕಳ ಶಿಕ್ಷಣವನ್ನು ಮತಧಾರ್ಮಿಕ ಪಂಥದ ಮೂರ್ಖ ಸೋದರರಿಗೆ (ಫ್ರೆರ್ ಇಗ್ನೊರಾಂತಾನ್) ಒಪ್ಪಿಸುವ ಮೂಲಕ ಅವರ ವೋಲ್ಟೇರಿಯಾನಿಸಂಗೆ (ಕ್ರಿಶ್ಚಿಯನ್ ಧಾರ್ಮಿಕ ನಂಬಿಕೆಗಳ ಕುರಿತು ಸಂಶಯ ವ್ಯಕ್ತಪಡಿಸುವ ವೋಲ್ಟೇರ್ ತತ್ವಗಳು) ಅವಮಾನ ಮಾಡಿತ್ತು. ಸಾಮ್ರಾಜ್ಯವೇ ಅದೃಶ್ಯವಾಗುವಂಥ ಯುದ್ಧಕ್ಕೆ ದುಡುಕಿನಿಂದ ಮುನ್ನುಗ್ಗುವಂತೆ ಫ್ರೆಂಚ್ ಜನರನ್ನು ತಳ್ಳಿ, ಅವರಲ್ಲಿ ತಾವು ಫ್ರೆಂಚರು ಎಂಬ ರಾಷ್ಟ್ರೀಯ ಭಾವನೆಯ ಕುರಿತೇ ಅಸಹ್ಯ ಹುಟ್ಟುವಂತೆ ಮಾಡಿತ್ತು. ವಾಸ್ತವವಾಗಿ, ಬೊನಪಾರ್ಟೆವಾದಿಗಳು ಮತ್ತು ಬಂಡವಾಳಶಾಹಿ ಸ್ವೇಚ್ಛಾಚಾರಿಗಳು ಪ್ಯಾರಿಸ್‌ನಿಂದ ದೊಡ್ಡ ಪ್ರಮಾಣದಲ್ಲಿ ಹೊರಹೋದ ನಂತರ, ಶುದ್ಧ ಮಧ್ಯಮ ವರ್ಗ ಪಕ್ಷ ಪಾರ್ಟಿ ಆಫ್ ಆರ್ಡರ್ 'ಯೂನಿಯನ್ ರಿಪಬ್ಲಿಕೇನ್' ಹೆಸರಿನಲ್ಲಿ ಹೊಸ ರೂಪ ಪಡೆದು ಹೊರಬಂದಿತು ಹಾಗೂ ತಮ್ಮನ್ನು ಕಮ್ಯೂನ್‌ನಲ್ಲಿ ದಾಖಲು ಮಾಡಿಕೊಂಡು ಅದನ್ನು ಥಿಯರ್ಸ್‌ನ ಉದ್ದೇಶಪೂರ್ವಕ ತಪ್ಪುಗ್ರಹಿಕೆಯ ವಿರುದ್ಧ ರಕ್ಷಿಸಿತು. ಮಧ್ಯಮ ವರ್ಗದ ಈ ಮಹಾನ್ ಸಂಸ್ಥೆಯ ಕೃತಜ್ಞತೆ ಪ್ರಸಕ್ತ ಕಠಿಣ ಪರೀಕ್ಷೆಯಲ್ಲಿ ಗೆಲ್ಲುತ್ತದೋ ಇಲ್ಲವೋ ಎಂಬುದನ್ನು ಕಾಲವೇ ತೋರಿಸಬೇಕು.

'ತನ್ನ ವಿಜಯ ಅವರ ಏಕೈಕ ಆಶಾಕಿರಣ' ಎಂದು ರೈತರಿಗೆ ಕಮ್ಯೂನ್ ಹೇಳಿದ್ದು ತುಂಬಾ ಸರಿಯಾಗಿತ್ತು. ವರ್ಸೇಲ್ಸ್‌ನಲ್ಲಿ ಹೆಣೆದ ಮತ್ತು ಮಹಾನ್ ಯುರೋಪಿಯನ್ ಕೂಲಿ ಬರಹಗಾರರು ಪುನರುಚ್ಚರಿಸಿದ ಎಲ್ಲಾ ಸುಳ್ಳುಗಳ ಕಂತೆಗಳ ಪೈಕಿ ರೂರಲ್‌ಗಳು ಫ್ರೆಂಚ್ ರೈತರನ್ನು ಪ್ರತಿನಿಧಿಸುತ್ತಾರೆ ಎಂಬುದು ಘೋರ ಸುಳ್ಳುಗಳಲ್ಲಿ ಒಂದಾಗಿದೆ. 1815ರ ನಂತರ, ಯಾರಿಗಾಗಿ ಮಿಲಿಯಾರ್ಡ್‌ಗಟ್ಟಲೆ ಖಾತರಿ (ಇಂಡೆಮ್ನಿಟಿ) ಕೊಡಬೇಕಾಗಿತ್ತೋ ಆ ಫ್ರೆಂಚ್ ರೈತನ ಪ್ರೀತಿ ಬಗ್ಗೆ ಮಾತ್ರ ಯೋಚಿಸಿ. ಫ್ರೆಂಚ್ ರೈತರ ದೃಷ್ಟಿಯಲ್ಲಿ ದೊಡ್ಡ ಭೂಮಾಲಿಕರ ಅಸ್ತಿತ್ವವೇ, 1789ರ ಅವರ ವಿಜಯದ ಮೇಲಿನ ಅತಿಕ್ರಮಣವೇ ಆಗಿರುತ್ತದೆ. 1848ರಲ್ಲಿ ಬಂಡವಾಳಶಾಹಿಯು, ರೈತನ ಪುಟ್ಟ ಜಾಗದ ಮೇಲೆ 45 ಸೆಂಟ್ ಹೆಚ್ಚುವರಿ ತೆರಿಗೆ ಹೊರಿಸಿತ್ತು; ಆದರೆ ಆಗ ಕ್ರಾಂತಿಯ ಹೆಸರಿನಲ್ಲಿ ಅದನ್ನು ಮಾಡಲಾಗಿತ್ತು. ಅದೇ ಈಗ, ಪ್ರಷ್ಯನ್ನರಿಗೆ ನೀಡಬೇಕಾದ ಐದು ಮಿಲಿಯಾರ್ಡ್ಸ್ ಖಾತರಿಯ (ಇಂಡೆಮ್ನಿಟಿ) ಹೊರೆಯನ್ನು ಮುಖ್ಯವಾಗಿ ರೈತರ ಹೆಗಲ ಮೇಲೆ ವರ್ಗಾಯಿಸಲಿಕ್ಕಾಗಿ ಕ್ರಾಂತಿಯ ವಿರುದ್ಧ ಅದು ಅಂತರ್ಯುದ್ಧ ಸಾರಿದೆ. ಆದರೆ, ಯುದ್ಧದ ಖರ್ಚನ್ನು ಯುದ್ಧವನ್ನು ನಿಜವಾಗಿ ಆರಂಭಿಸಿದವರೇ ನೀಡುವಂತೆ ಮಾಡಲಾಗುವುದು ಎಂದು ತನ್ನ ಮೊದಲ ಕೆಲವು ಘೋಷಣೆಗಳಲ್ಲಿ ಕಮ್ಯೂನ್ ಸ್ಪಷ್ಟಪಡಿಸಿದೆ. ಕಮ್ಯೂನ್ ರೈತನಿಗೆ ರಕ್ತತೆರಿಗೆಯಿಂದ ಮುಕ್ತಿ ನೀಡಬಹುದಿತ್ತು, ಒಂದು

ಅಗ್ಗದ ಸರಕಾರವನ್ನು ನೀಡಬಹುದಿತ್ತು. ಆತನ ಪ್ರಸಕ್ತ ರಕ್ತಹೀರುವವರನ್ನು, ನೋಟರಿ, ವಕೀಲ, ಕಾರ್ಯನಿರ್ವಾಹಕ ಮತ್ತು ನ್ಯಾಯಾಂಗದ ಇತರ ಅಧಿಕಾರಿಗಳನ್ನು ರೈತರಿಂದ ಆಯ್ಕೆಯಾದ ಹಾಗೂ ರೈತರಿಗೆ ಉತ್ತರದಾಯಿಯಾದ ಕಮ್ಯೂನ್‌ನ ವೇತನದಾರ ಪ್ರತಿನಿಧಿಗಳನ್ನಾಗಿ ಪರಿವರ್ತಿಸಬಹುದಿತ್ತು. ಗ್ರಾಮೀಣ ಪೊಲೀಸ್ ಮತ್ತು ಪೊಲೀಸ್ ಅಧಿಕಾರಿಯ ಸರ್ವಾಧಿಕಾರದಿಂದ ಆತನನ್ನು ಮುಕ್ತಗೊಳಿಸಬಹುದಿತ್ತು. ಪಾದ್ರಿಯ ಅಸಂಬದ್ಧ ಬೋಧನೆಗಳ ಬದಲು ರೈತರಿಗೆ ಶಾಲಾ ಶಿಕ್ಷಕರಿಂದ ಜ್ಞಾನ ಬೋಧನೆ ಮಾಡಿಸಬಹುದಿತ್ತು. ಎಲ್ಲಕ್ಕಿಂತ ಮೇಲಾಗಿ ಫ್ರೆಂಚ್ ರೈತ ಒಬ್ಬ ಗಣನೀಯ ವ್ಯಕ್ತಿ. ಪಾದ್ರಿಯ ವೇತನವು, ತೆರಿಗೆ ಸಂಗ್ರಾಹಕರು ಸುಲಿಗೆ ಮಾಡುವ ಬದಲು, ಧರ್ಮ ಗುರುಗಳ (ಪ್ಯಾರಿಶನರ್) ತಕ್ಷಣದ ಧಾರ್ಮಿಕ ಅಂತಃಬೋಧೆಯ ಮೇಲೆ ಮಾತ್ರವೇ ಅವಲಂಬಿಸಿರಬೇಕು ಎಂಬುದು ರೈತನ ಸಕಾರಣ ಲೆಕ್ಕಾಚಾರವಾಗಿದೆ. ಅವು ಕಮ್ಯೂನ್ ಆಡಳಿತ –ಕೇವಲ ಆ ಆಡಳಿತ– ಫ್ರೆಂಚ್ ರೈತರಿಗೆ ಕೊಡಲು ಹೊರಟಿದ್ದ ಮಹಾನ್ ವರಗಳಾಗಿವೆ. ಕಮ್ಯೂನ್ ಮಾತ್ರವೇ ಪರಿಹರಿಸಲು ಸಮರ್ಥವಾದ, ಹಾಗೂ ರೈತರ ಪರವಾಗಿ ಇತ್ಯರ್ಥಪಡಿಸಬೇಕಾದ ಕೆಲವು ಸಂಕೀರ್ಣ ಆದರೆ ಪ್ರಮುಖವಾದ ಸಮಸ್ಯೆಗಳ ಬಗ್ಗೆ ವಿಷದವಾಗಿ ಹೇಳುವುದು ಇಲ್ಲಿ ಅನಗತ್ಯವೆನಿಸುತ್ತದೆ. ರೈತನ ಜಮೀನಿನ ಮೇಲೆ ದೆವ್ವದಂತೆ ಬಿದ್ದಿರುವ ಸಾಲದ ಕರಾರುಪತ್ರ, ಅದರ ಮೇಲೆ ದಿನವೂ ಬೆಳೆಯುತ್ತಿರುವ ಗ್ರಾಮೀಣ ಶ್ರಮಜೀವಿ, ಆಧುನಿಕ ಕೃಷಿ ಮತ್ತು ಬಂಡವಾಳಶಾಹಿ ಕೃಷಿಯ ಸ್ಪರ್ಧೆಯಿಂದಾಗಿ ಆಗುತ್ತಿರುವ ಬೆಳವಣಿಗೆಯ ಫಲವಾಗಿ, ಆತನ ಮೇಲೆ ಹೆಚ್ಚೆಚ್ಚು ವೇಗದಲ್ಲಿ ನಡೆಯುತ್ತಿರುವ ಬಲವಂತದ ಶೋಷಣೆ– ಇವೇ ಆ ವಿಷಯಗಳು.

ಫ್ರೆಂಚ್ ರೈತರು ಲೂಯಿ ಬೊನಪಾರ್ಟೆಯನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದರು; ಆದರೆ ಪಾರ್ಟಿ ಆಫ್ ಆರ್ಡರ್ ಸಾಮ್ರಾಜ್ಯವನ್ನು ಸೃಷ್ಟಿಸಿತು. 1849 ಮತ್ತು 1850ರಲ್ಲಿ ಆರಂಭಿಸಿದಂತೆ ತನ್ನ ಮೇಯರನ್ನು ಸರಕಾರದ ಪೊಲೀಸ್ ಅಧಿಕಾರಿಯ ವಿರುದ್ಧ, ಶಾಲಾ ಶಿಕ್ಷಕನನ್ನು ಸರಕಾರಿ ಪಾದ್ರಿಯ ವಿರುದ್ಧ ಹಾಗೂ ಸ್ವತಃ ತನ್ನನ್ನು ಸರಕಾರದ ಪೋಲಿಸರ ವಿರುದ್ಧ ನಿಲ್ಲಿಸುವುದರ ಮೂಲಕ ಫ್ರೆಂಚ್ ರೈತರು ನಿಜವಾಗಿಯೂ ಏನನ್ನು ಬಯಸುತ್ತಾರೆ ಎಂದು ತೋರಿಸಿಕೊಟ್ಟಿದ್ದಾರೆ. 1850ರ ಜನವರಿ ಮತ್ತು ಫೆಬ್ರವರಿಯಲ್ಲಿ 'ಪಾರ್ಟಿ ಆಫ್ ಆರ್ಡರ್' ಮಾಡಿದ ಎಲ್ಲಾ ಕಾನೂನುಗಳು ರೈತರ ವಿರುದ್ಧದ ಅಪ್ಪಟ ದಬ್ಬಾಳಿಕೆಯ ಕ್ರಮಗಳಾಗಿದ್ದವು. ರೈತ ಒಬ್ಬ ಬೊನಪಾರ್ಟೆವಾದಿಯಾಗಿದ್ದ, ಯಾಕೆಂದರೆ ಎಲ್ಲಾ ಅನುಕೂಲಗಳು ರೈತರಿಗೆ ಸಿಗುವಂತೆ ಮಾಡಿದ ಮಹಾನ್ ಕ್ರಾಂತಿ, ಆತನ ಕಣ್ಣುಗಳಲ್ಲಿ, ನೆಪೋಲಿಯನ್‌ನಲ್ಲಿ ಮೂರ್ತಿವೆತ್ತಿದೆ. ದ್ವಿತೀಯ ಸಾಮ್ರಾಜ್ಯದಡಿ ಬೇಗನೆ ಕುಸಿಯುತ್ತಿರುವ ಈ ಭ್ರಮೆ (ರೂರಲ್‌ಗಳಿಗೆ ಸಹಜವಾದ ವಿರೋಧಕ್ಕೆ ಅನುಗುಣವಾಗಿ), ಭೂತಕಾಲದ ಈ ಪೂರ್ವಗ್ರಹ, ರೈತರ ಜೀವಂತ ಹಿತಾಸಕ್ತಿಗಳು ಮತ್ತು ತುರ್ತು ಅವಶ್ಯಕತೆಗಳಿಗೆ ಕಮ್ಯೂನ್‌ನ ಆಕರ್ಷಣೆಯನ್ನು ಹೇಗೆ ತಡೆದುಕೊಂಡೀತು?

ಪ್ರಾಂತ್ಯಗಳ ಜೊತೆ ಕಮ್ಯೂನ್‌ನ ಮೂರು ತಿಂಗಳ ಮುಕ್ತ ಸಂವಹನದಿಂದ ರೈತರು ಬಂಡೇಳುತ್ತಾರೆ –ನಿಜ ಹೇಳಬೇಕೆಂದರೆ ಇದು ಅವರ ಪ್ರಮುಖ ಅನುಮಾನವಾಗಿತ್ತು– ಎಂಬುದು ರೂರಲ್‌ಗಳಿಗೆ ಗೊತ್ತಿತ್ತು. ಹೀಗಾಗಿ ಬಂಡಾಯ ಹರಡುವುದನ್ನು

ತಡೆಯುವ ಉದ್ದೇಶದಿಂದ ಪ್ಯಾರಿಸ್ ಸುತ್ತಮುತ್ತ ಪೊಲೀಸ್ ತಡೆಗೋಡೆ ರಚಿಸಲು ಅವರು ಕಾತರರಾಗಿದ್ದರು.

ಈ ರೀತಿಯಾಗಿ ಕಮ್ಯೂನ್ ಫ್ರೆಂಚ್ ಸಮಾಜದ ಎಲ್ಲಾ ಆರೋಗ್ಯಕರ ಅಂಶಗಳ ನಿಜವಾದ ಪ್ರತಿನಿಧಿಯಾದರೆ ಮತ್ತು ಆ ಕಾರಣಕ್ಕಾಗಿ ನೈಜವಾದ ರಾಷ್ಟ್ರೀಯ ಸರಕಾರವಾದರೆ, ಅದೇ ಹೊತ್ತಿಗೆ ಅದು ಶ್ರಮದ ವಿಮೋಚನೆಯ ಚಾಂಪಿಯನ್ ಆಗಿ, ಸುಸ್ಪಷ್ಟವಾಗಿ ಅಂತರರಾಷ್ಟ್ರೀಯವಾಗಿ, ದುಡಿಯುವ ಜನರ ಸರಕಾರವೂ ಹೌದು. ಜರ್ಮನಿಗೆ ಎರಡು ಫ್ರೆಂಚ್ ಪ್ರಾಂತ್ಯಗಳನ್ನು ಗೆದ್ದುಕೊಟ್ಟ ಪ್ರಷ್ಯನ್ ಸೇನೆಯ ಕಣ್ಣ ಮುಂದೆ ಕಮ್ಯೂನ್ ಇಡೀ ಜಗತ್ತಿನಾದ್ಯಂತದ ದುಡಿಯುವ ಜನರನ್ನು ಫ್ರಾನ್ಸ್‌ಗೆ ಗೆದ್ದುಕೊಟ್ಟಿದೆ.

ದ್ವಿತೀಯ ಸಾಮ್ರಾಜ್ಯ ಕಾಸ್ಮೊಪಾಲಿಟನ್ ವಂಚನೆಯ ಪರ್ವ ಕಾಲವಾಗಿದ್ದು, ಸ್ವಚ್ಛಂದ ಕಾಮಕೇಳಿಯಲ್ಲಿ ಮತ್ತು ಫ್ರೆಂಚ್ ಜನರನ್ನು ಲೂಟಿ ಮಾಡಿದ ಸಂಪತ್ತಿನಲ್ಲಿ ತಮಗೂ ಪಾಲು ಕೇಳಿಕೊಂಡು ಎಲ್ಲಾ ದೇಶಗಳ ಲಂಪಟರು ಧಾವಿಸಿದರು. ಇಂಥ ಕ್ಷಣದಲ್ಲೂ ಥಿಯರ್ಸ್‌ನ ಬಲಗೈ ಗೆನೆಸ್ಕೊ ಆಗಿದ್ದು, ರಷ್ಯನ್ ಬೇಹುಗಾರ ಮಾರ್ಕೊವ್‌ಸ್ಕಿ ಎಡಗೈ ಆಗಿದ್ದಾನೆ. ಒಂದು ಅಮರ ಉದ್ದೇಶಕ್ಕಾಗಿ ಬಲಿದಾನ ಮಾಡಿದವರೆಂದು ಎಲ್ಲಾ ಮೃತ ವಿದೇಶಿಯರನ್ನು ಕಮ್ಯೂನ್ ಗೌರವಿಸಿತು. ಬಂಡವಾಳಶಾಹಿಯ ದ್ರೋಹದಿಂದಾಗಿ ಸೋತ ವಿದೇಶಿ ಯುದ್ಧ ಮತ್ತು ವಿದೇಶಿ ಆಕ್ರಮಣಕಾರರ ಜೊತೆ ಶಾಮೀಲಾಗಿ ಪ್ರಚೋದಿಸಿದ ಅಂತಃಕಲಹದ ನಡುವೆ, ಫ್ರಾನ್ಸ್‌ನಲ್ಲಿ ಜರ್ಮನಿಗಳ ವಿರುದ್ಧ ಪೊಲೀಸ್ ದಾಳಿಗಳನ್ನು ಸಂಘಟಿಸುವ ಮೂಲಕ ತನ್ನ ದೇಶಪ್ರೇಮವನ್ನು ಪ್ರದರ್ಶಿಸಲು ಬಂಡವಾಳಶಾಹಿ ಬಿಡುವು ಮಾಡಿಕೊಂಡಿತ್ತು. ಕಮ್ಯೂನ್ ಜರ್ಮನಿಯ ಒಬ್ಬ ಕಾರ್ಮಿಕನನ್ನು ಕಾರ್ಮಿಕ ಸಚಿವನನ್ನಾಗಿ ಮಾಡಿದೆ. ಬಂಡವಾಳಶಾಹಿ ಥಿಯರ್ಸ್, ಎರಡನೇ ಸಾಮ್ರಾಜ್ಯ ಸಹಾನುಭೂತಿ ತೋರಿಸುವುದಾಗಿ ಗಟ್ಟಿಯಾಗಿ ಘೋಷಿಸುವ ಮೂಲಕ ಪೋಲಂಡನ್ನು ನಿರಂತರವಾಗಿ ಮರುಳುಗೊಳಿಸಿತು. ಆದರೆ ಪೋಲಂಡಿಗೆ ದ್ರೋಹ ಬಗೆದು ರಷ್ಯಾದ ಪರವಾದ ಪಾತ್ರವನ್ನು ನಿರ್ವಹಿಸಿತು. ಪೋಲೆಂಡ್ ಪುತ್ರರನ್ನು ಪ್ಯಾರಿಸ್ ರಕ್ಷಕರ ಮುಂಚೂಣಿಯಲ್ಲಿಡುವ ಮೂಲಕ ಪೋಲೆಂಡ್‌ನ ಧೀರ ಪುತ್ರರನ್ನು ಕಮ್ಯೂನ್ ಗೌರವಿಸಿದೆ. ಹೊಸ ಇತಿಹಾಸದ ಆಗಮನವನ್ನು ಸಾರುವುದರ ಸಂಕೇತವಾಗಿ, ಒಂದೆಡೆ ಗೆದ್ದ ಪ್ರಷ್ಯನ್ನರು ಹಾಗೂ ಇನ್ನೊಂದೆಡೆ ಬೊನಪಾರ್ಟೆ ಜನರಲ್‌ಗಳ ದೃಷ್ಟಿಗಳ ನಡುವೆ ಕಮ್ಯೂನ್, ಸೈನ್ಯದ ವೈಭವದ ಘೋರ ಸಂಕೇತವಾದ ವಾಂದೋಂ ಸ್ತಂಭವನ್ನು[15] ಪ್ರಜ್ಞಾಪೂರ್ವಕವಾಗಿ ಕೆಡವಿ ಹಾಕಿತು.

ಕಮ್ಯೂನಿನ ಕ್ರಿಯಾಶೀಲ ಅಸ್ತಿತ್ವವೇ ಅದರ ಮಹಾನ್ ಸಾಮಾಜಿಕ ಕ್ರಮವಾಗಿದೆ. ಅದರ ವಿಶೇಷ ಕ್ರಮಗಳಲ್ಲಿ 'ಜನರಿಂದ' 'ಜನರ ಸರಕಾರ'ದ ಪ್ರವೃತ್ತಿಯನ್ನು ಕಾಣಬಹುದಿತ್ತು. ಕೂಲಿ ಬೇಕರಿಯವರ ರಾತ್ರಿ ಪಾಳಿ ನಿಷೇಧ, ಹತ್ತು ಹಲವು

15 ನೆಪೋಲಿಯನ್‌ನ ಫ್ರಾನ್ಸ್ ಜಯ ಸಾಧಿಸಿದ ಸ್ಮರಣಾರ್ಥ ಪ್ಯಾರಿಸ್‌ನ ಪ್ಲಾಸ್ ವಾಂದೋಂನಲ್ಲಿ 'ವೆಂಡೊಮ್ ಸ್ತಂಭ' ವನ್ನು 1806ರಲ್ಲಿ ಸ್ಥಾಪಿಸಲಾಯಿತು. 1871 ಮೇ 16ರಂದು ಪ್ಯಾರಿಸ್ ಕಮ್ಯೂನ್ ನಿರ್ಣಯದನ್ವಯ ಅದನ್ನು ಉರುಳಿಸಲಾಯಿತು.

ನೆವಗಳನ್ನೊಡ್ಡಿ ದಂಡದ ಹೆಸರಲ್ಲಿ ಕಾರ್ಮಿಕರ ವೇತನ ಕಡಿತ ಮಾಡುವ ಮೂಲಕ ಹಣವನ್ನು ಲಪಟಾಯಿಟಿಸುವ. ಉದ್ಯೋಗದಾತರ ಕ್ರಮಗಳ ನಿಷೇಧ; ಆ ಮೂಲಕ ಉದ್ಯೋಗದಾತರೇ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳ ಪಾತ್ರವನ್ನು ಭಾಗಶಃ ವಹಿಸುವ ಸಾಮಾನ್ಯ ಪ್ರಕ್ರಿಯೆಗೆ ತಡೆ – ಇಂತಹ ಸಾಮಾಜಿಕ ಕ್ರಮಗಳಾಗಿದ್ದವು. ಸಂಬಂಧಪಟ್ಟ ಬಂಡವಾಳಶಾಹಿಗಳು ತಪ್ಪಿಸಿಕೊಂಡಿರಲಿ ಅಥವಾ ಉತ್ಪಾದನೆಯನ್ನು ಮುಚ್ಚಲು ಮುಂದಾಗಲಿ, ಅಂಥವರ ಮುಚ್ಚಲಾಗಿರುವ ವರ್ಕ್‌ಶಾಪ್‌ಗಳು ಮತ್ತು ಕಾರ್ಖಾನೆಗಳನ್ನು ಪರಿಹಾರ ರೂಪವಾಗಿ ಕಾರ್ಮಿಕರ ಸಂಘಗಳ ವಶಕ್ಕೆ ಒಪ್ಪಿಸಬೇಕೆನ್ನುವುದು ಅಂಥ ಇನ್ನೊಂದು ಪ್ರಮುಖ ಸಾಮಾಜಿಕ ಕ್ರಮವಾಗಿದೆ.

ಕಮ್ಯೂನಿನ ಆರ್ಥಿಕ ಕ್ರಮಗಳಲ್ಲಿನ ಸೂಕ್ಷ್ಮವಿವೇಚನೆ ಹಾಗೂ ಸಂಯಮಗಳು ಗಮನಾರ್ಹವಾಗಿದ್ದು, ಒಂದು ಮುತ್ತಿಗೆಗೆ ಒಳಗಾದ ಪಟ್ಟಣದ ಸ್ಥಿತಿಗೆ ಹೊಂದುವಂತಿದ್ದವು. ಹೌಸ್‌ಮನ್ (ದ್ವಿತೀಯ ಸಾಮ್ರಾಜ್ಯದ ಅವಧಿಯಲ್ಲಿ ಸಿಯನ್ ಅಂದರೆ ಪ್ಯಾರಿಸ್ ನಗರ ಇಲಾಖೆಯ ಸಚಿವನಾಗಿದ್ದ ಬ್ಯಾರನ್ ಹೌಸ್‌ಮ್ಯಾನ್. ಕಾರ್ಮಿಕರ ಬಂಡಾಯಗಳನ್ನು ಹತ್ತಿಕ್ಕುವ ಸಲುವಾಗಿ ಇಡೀ ನಗರದ ವಿನ್ಯಾಸದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದ. ವಿ.ಐ.ಲೆನಿನ್ ಸಂಪಾದಿಸಿದ ರಷ್ಯನ್ ಆವೃತ್ತಿಗೆ ಬರೆದ ಟಿಪ್ಪಣಿ) ರಕ್ಷಣೆಯಡಿ ದೊಡ್ಡ ಹಣಕಾಸು ಕಂಪೆನಿಗಳು ಮತ್ತು ಗುತ್ತಿಗೆದಾರರು ಪ್ಯಾರಿಸ್ ನಗರವನ್ನು ಅಗಾಧ ದರೋಡೆಗೆ ಒಳಪಡಿಸಿದ್ದನ್ನು ಪರಿಗಣಿಸಿದರೆ, ಓರ್ಲಿಯಾನ್ಸ್ ಕುಟುಂಬದ ವಿರುದ್ಧ ಲೂಯಿ ನೆಪೋಲಿಯನ್ ಮುಟ್ಟುಗೋಲು ಹಾಕಬೇಕಾದ್ದಕ್ಕಿಂತಲೂ ಹೆಚ್ಚಿನ, ಅವರ ಆಸ್ತಿಯನ್ನು ಕಮ್ಯೂನ್ ಮುಟ್ಟುಗೋಲು ಹಾಕಬಹುದಾಗಿತ್ತು. ಹೊಹೆನ್‌ರ್‍ಝುಲ್ಲೋರ್ನ್ ಮತ್ತು ಇಂಗ್ಲಿಷ್ ಅಲ್ಪಜನಾಧಿಪತಿಗಳು(ಒಲಿಗಾರ್ಕಿ) ಚರ್ಚ್ ಲೂಟಿಯಿಂದ ಉತ್ತಮ ಮೊತ್ತವನ್ನು ಪಡೆಯುವ ವ್ಯವಹಾರ ಕುದುರಿಸಿದ್ದು, ಕಮ್ಯೂನ್ ಅವರಿಗೆ ಇತ್ಯರ್ಥ ಮೊತ್ತವಾಗಿ 8000 ಫ್ರಾಂಕ್ ಮಾತ್ರ ಕೊಡುವ ಘೋಷಣೆ ಮಾಡಿದ್ದರಿಂದ ಅವರಿಬ್ಬರೂ ಆಘಾತಗೊಂಡರು.

ಸ್ವಲ್ಪ ಹುರುಪು ಮತ್ತು ಬಲವನ್ನು ಮರಳಿ ಪಡೆದ ವರ್ಸೇಲ್ಸ್ ಸರಕಾರ ಕಮ್ಯೂನ್‌ನ ವಿರುದ್ಧ ಅತ್ಯಂತ ಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸಿತು. ಫ್ರಾನ್ಸ್‌ನಾದ್ಯಂತ ಮುಕ್ತ ಅಭಿವ್ಯಕ್ತಿಯನ್ನು ದಮನ ಮಾಡಿತು. ದೊಡ್ಡ ಪಟ್ಟಣಗಳ ಪ್ರತಿನಿಧಿಗಳ ಸಭೆಗಳನ್ನೂ ಅದು ನಿಷೇಧಿಸಿತು. ದ್ವಿತೀಯ ಸಾಮ್ರಾಜ್ಯವನ್ನೂ ಮೀರಿಸುವ ರೀತಿಯಲ್ಲಿ ವರ್ಸೇಲ್ಸ್ ಮತ್ತು ಫ್ರಾನ್ಸ್‌ನ ಇತರ ಭಾಗಗಳನ್ನು ಬೇಹುಗಾರಿಕೆಗೆ ಒಳಪಡಿಸಿತು. ಪ್ಯಾರಿಸ್‌ನಲ್ಲಿ ಮುದ್ರಣಗೊಂಡ ಎಲ್ಲಾ ಪತ್ರಿಕೆಗಳನ್ನು ಸುಟ್ಟು ಹಾಕಲಾಯಿತು. ಪ್ಯಾರಿಸ್‌ನಿಂದ ಹೋಗುವ ಹಾಗೂ ಪ್ಯಾರಿಸ್‌ಗೆ ಬರುವ ಎಲ್ಲಾ ಮಾಹಿತಿಗಳನ್ನು ಸೋಸಲಾಯಿತು. ಪ್ಯಾರಿಸ್ ಬಗ್ಗೆ ಒಂದೇ ಒಂದು ಮಾತೂ ಪ್ರಸ್ತಾವವಾಗದಂತೆ ನ್ಯಾಷನಲ್ ಅಸೆಂಬ್ಲಿಯಲ್ಲಿ ಅಭೂತಪೂರ್ವ ಗದ್ದಲವನ್ನು ಎಬ್ಬಿಸಲಾಯಿತು. ಆ ಗದ್ದಲ 1816ರ ಚೇಂಬರ್ ಅಂತ್ರೂವೆಬಲ್ ನಲ್ಲೂ ಕೂಡ ಕಂಡು ಕೇಳರಿಯದ್ದಾಗಿತ್ತು. ಹೊರಗಡೆ ವರ್ಸೆಲ್ಸ್‌ನಿಂದ ಬರ್ಬರ ಯುದ್ಧ ಹಾಗೂ ಒಳಗಡೆ ಭ್ರಷ್ಟಾಚಾರ ಮತ್ತು ಪಿತೂರಿಗಳ ಕುರಿತು ಅದರ ಪ್ರಯತ್ನಗಳು– ಇಂಥ ಸನ್ನಿವೇಶದಲ್ಲಿ ಶಾಂತಿಯ ಅವಧಿಯಲ್ಲಿ ತೋರಿದ್ದ ಉದಾರವಾದದ ಎಲ್ಲಾ ರೀತಿಯ ಸಭ್ಯತೆ ಹಾಗೂ ಚಹರೆಗಳನ್ನು ಉಳಿಸಿಕೊಳ್ಳುವ

ಮೂಲಕ ಕಮ್ಯೂನ್ ನಾಚಿಕೆಯಿಲ್ಲದೆ ದ್ರೋಹ ಬಗೆದಂತಾಗಲಿಲ್ಲವೇ? ಕಮ್ಯೂನ್ ಸರಕಾರವು ಎಂ. ಥಿಯರ್ಸ್ ಸರಕಾರದಂತೆ ಆಗಿದ್ದಿದ್ದರೆ, ವರ್ಸೆಲ್ಸ್‌ನಲ್ಲಿ ಕಮ್ಯೂನ್ ಪತ್ರಿಕೆಗಳನ್ನು ದಮನ ಮಾಡಿದ್ದಕ್ಕಿಂತ ಪ್ಯಾರಿಸ್‌ನಲ್ಲಿ 'ಪಾರ್ಟಿ ಆಫ್ ಆರ್ಡರ್'ನ ಪತ್ರಿಕೆಗಳನ್ನು ದಮನ ಮಾಡುವ ಹೆಚ್ಚು ಸಂದರ್ಭಗಳು ಬರುತ್ತಿರಲಿಲ್ಲ.

ಅದೇ ಹೊತ್ತಿಗೆ ಅವರು ಚರ್ಚ್ ಫ್ರಾನ್ಸ್‌ನ ವಿಮೋಚನೆಗೆ ಇರುವ ಏಕೈಕ ಮಾರ್ಗ ಎಂದು ಘೋಷಿಸಿದ್ದು, ಪಿಕ್‌ಪಸ್ ಸನ್ಯಾಸಿನಿಯರ ವಸತಿಗೃಹ, (ಪಿಕ್‌ಪಸ್‌ನಲ್ಲಿ ಸನ್ಯಾಸಿಯರನ್ನು ಬಂದೀಖಾನೆಗಳಲ್ಲಿ ಅನೇಕ ವರ್ಷಗಳ ಕಾಲ ಕೂಡಿಹಾಕಿದ್ದರು, ಅವರನ್ನು ಕ್ರೂರವಾಗಿ ಹಿಂಸಿಸಲಾಗಿತ್ತು.) ಹಾಗೂ ಸೇಂಟ್ ಲಾರೆಂಟ್ ಚರ್ಚ್‌ನ (ಸ್ಯೆಂಟ್ ಲಾರೆಂಟ್ ನಲ್ಲಿ ಹೂತಿಟ್ಟಿದ್ದ ಶವಗಳು ಕಂಡುಬಂದಿದ್ದವು.) ವಿಶಿಷ್ಟ ರಹಸ್ಯಗಳನ್ನು ನಾಸ್ತಿಕ ಕಮ್ಯೂನ್ ಕಂಡು ಹಿಡಿದಿದ್ದು ಬಹುಶಃ ರೂರಲ್‌ಗಳಿಗೆ ಇರಿಸುಮುರಿಸಿನ ವಿಚಾರವೇ ಹೌದು. ವಿಲ್‌ಹೆಲ್ಮ್ಸ್‌ಹೋಲ್ ಸಿಗರೇಟುಗಳನ್ನು ಸುಡುತ್ತ, ಯುದ್ಧಗಳನ್ನು ಸೋಲುವ, ಶರಣಾಗತಿ ಒಪ್ಪಂದಗಳಿಗೆ ಸಹಿ ಹಾಕುವ 'ವಿಶಿಷ್ಟಸಾಮರ್ಥ್ಯ'ವನ್ನು ಗುರುತಿಸಿ ಬೊನಪಾರ್ಟೆವಾದಿ ಜನರಲ್‌ಗಳ ಮೇಲೆ ಥಿಯರ್ಸ್ ಮಹಾನ್ ಪದಕ (ಗ್ರಾಂಡ್ ಕ್ರಾಸ್)ಗಳ ಸುರಿಮಳೆಗೈದಿದ್ದ. ಆದರೆ ಕಮ್ಯೂನ್ ತನ್ನ ಜನರಲ್‌ಗಳನ್ನು ಕರ್ತವ್ಯ ನಿರ್ಲಕ್ಷ್ಯದ ಅನುಮಾನ ಬಂದಾಗಲೆಲ್ಲ ವಜಾ ಮಾಡಿ ಬಂಧಿಸಿದ್ದುಥಿಯರ್ಸ್ ಬಗ್ಗೆ ಇರುವ ಒಂದು ವ್ಯಂಗ್ಯವಾಗಿದೆ. ಸುಳ್ಳು ಹೆಸರು ಹೇಳಿ ಸೇರಿದ್ದ ಒಬ್ಬ ಸದಸ್ಯನನ್ನು ಕಮ್ಯೂನ್ ವಜಾ ಮಾಡಿ ಬಂಧಿಸಿತ್ತು. ಆತ ಸರಳ ದಿವಾಳಿತನಕ್ಕಾಗಿ ಲಿಯಾನ್ಸ್‌ನಲ್ಲಿ ಆರು ದಿನಗಳ ಜೈಲುವಾಸ ಶಿಕ್ಷೆ ಅನುಭವಿಸಿದ. ಆಗ ಇನ್ನೂ ಫ್ರಾನ್ಸಿನ ವಿದೇಶ ಸಚಿವನಾಗಿದ್ದ, ಫ್ರಾನ್ಸನ್ನು ಬಿಸ್ಮಾರ್ಕ್‌ಗೆ ಮಾರಾಟ ಮಾಡುತ್ತಿದ್ದ; ಹಾಗೂ ಬೆಲ್ಜಿಯಮ್‌ನ ಆ ಆದರ್ಶ ಸರಕಾರಕ್ಕೆ ಇನ್ನೂ ಆದೇಶಗಳನ್ನು ನೀಡುತ್ತಿದ್ದ ಮೋಸಗಾರ ಜೂಲ್ಸ್ ಫಾವ್ರ್‌ಗೆ ಮಾಡಿದ ಉದ್ದೇಶಪೂರ್ವಕ ಅವಮಾನವಲ್ಲವೇ ಇದು?ತಾನು ತಪ್ಪೇ ಮಾಡದ ಸರಕಾರ ಎಂದು ಹೇಳಿಕೊಳ್ಳುವುದು ಎಲ್ಲಾ ಹಳೆಯ ಸರಕಾರಗಳ ಲಾಂಛನ. ಆದರೆ ಬಹುಶಃ ಕಮ್ಯೂನ್ ಸರಕಾರ ಆ ರೀತಿಯ ಸೋಗಿನ ನಟನೆ ಮಾಡಲಿಲ್ಲ. ಅದು ತನ್ನ ಎಲ್ಲಾ ಕಾರ್ಯಗಳು ಹಾಗೂ ಮಾತುಗಳನ್ನು ಪ್ರಕಟಿಸಿತು, ತನ್ನ ಎಲ್ಲಾ ಕುಂದು–ಕೊರತೆಗಳನ್ನು ಸಾರ್ವಜನಿಕರಿಗೆ ತಿಳಿಯಪಡಿಸಿತು.

ಪ್ರತಿಯೊಂದು ಕ್ರಾಂತಿಯಲ್ಲೂ ಅದಕ್ಕೆ ಸಂಬಂಧಿಸಿದ ನಿಜವಾದ ಜನರ ಜೊತೆ ಬೇರೆಯೇ ಛಾಪಿನ ಜನರೂ ಸೇರಿಕೊಂಡಿರುತ್ತಾರೆ. ಅವರಲ್ಲಿ ಕೆಲವರು ಹಿಂದಿನ ಕ್ರಾಂತಿಗಳಲ್ಲಿ ಬದುಕುಳಿದವರಾಗಿರುತ್ತಾರೆ ಹಾಗೂ ಪ್ರಸಕ್ತ ಚಳವಳಿಯ ಬಗ್ಗೆ ಯಾವುದೇ ಒಳನೋಟವಿಲ್ಲದೆ ಹಿಂದಿನ ಕ್ರಾಂತಿಯ ಭಕ್ತರಾಗಿರುತ್ತಾರೆ. ಆದರೆ ತಮ್ಮ ಪ್ರಾಮಾಣಿಕತೆ ಹಾಗೂ ಧೈರ್ಯದ ಜನಪ್ರಿಯತೆ ಅಥವಾ ಪರಂಪರಾಗತ ಪ್ರಭಾವವನ್ನು ಉಳಿಸಿಕೊಂಡಿರುತ್ತಾರೆ. ಇತರರು ಕೇವಲ ಕಿರುಚಾಡುವವರು; ಅಂದಂದಿನ ಸರಕಾರದ ವಿರುದ್ಧ ವರ್ಷದಿಂದ ವರ್ಷಕ್ಕೆ ಹೇಳಿದ್ದನ್ನೇ ಒದರುವ ಭಾಷಣದ ಬಲ ಹೊಂದಿರುವ ಅವರು ಉತ್ಕೃಷ್ಟ ಕ್ರಾಂತಿಕಾರಿಗಳ ಯಶಸ್ಸಿನೊಳಗೆ ನುಸುಳಿರುತ್ತಾರೆ. ಮಾರ್ಚ್ 18ರ ನಂತರ ಇಂಥ ಕೆಲವು ಜನರು ಕೂಡ ಪ್ರತ್ಯಕ್ಷರಾದರು ಹಾಗೂ ಕೆಲವು ಪ್ರಕರಣಗಳಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಲು ಪ್ರಯತ್ನಿಸಿದರು. ಹಿಂದಿನ ಪ್ರತಿಯೊಂದು

ಕ್ರಾಂತಿಯ ಬೆಳವಣಿಗೆಗೆ ಈ ರೀತಿಯ ಜನರು ಹೇಗೆ ಅಡ್ಡಿಪಡಿಸಿದರೋ, ಅದೇ ರೀತಿಯಲ್ಲಿತ್ತು ತಮ್ಮ ಶಕ್ತಿಗೆ ಅನುಸಾರವಾಗಿ ಅವರು ಈ ಕ್ರಾಂತಿಯಲ್ಲೂ ಕಾರ್ಮಿಕ ವರ್ಗದ ಕಾರ್ಯಾಚರಣೆಗಳಿಗೆ ಅಡ್ಡಿಪಡಿಸಿದರು. ಅಂಥವರು ಅನಿವಾರ್ಯ ಅನಿಷ್ಟ. ಕಾಲ ಸರಿದಂತೆ ಇಂಥವರು ಕಳಚಿಕೊಳ್ಳುತ್ತಾರೆ. ಆದರೆ ಕಮ್ಯೂನ್‌ಗೆ ಅಷ್ಟು ಸಮಯ ಸಿಗಲಿಲ್ಲ.

ಪ್ಯಾರಿಸ್‌ನಲ್ಲಿ ಕಮ್ಯೂನ್ ತಂದೊಡ್ಡಿದ ಬದಲಾವಣೆ ಅದ್ಭುತವಾಗಿತ್ತು! ದ್ವಿತೀಯ ಸಾಮ್ರಾಜ್ಯದ ಡೌಲಿನ ಬೆಡಗಿನ ಪ್ಯಾರಿಸಿನ ಯಾವೊಂದು ಕುರುಹೂ ಉಳಿದಿಲ್ಲ. ಪ್ಯಾರಿಸ್ ಬ್ರಿಟಿಷ್ ಭೂಮಾಲಿಕರು, ಐರಿಷ್ ಅಬ್ಸಂಟೀಸ್[16] (ತಮ್ಮ ಹೊಲಗಳಿಂದ ದೂರವೇ ಉಳಿಯುವ ಜಮೀನ್ದಾರರು), ಅನಿವಾಸಿ ಜಮೀನ್ದಾರರು, ಅಮೆರಿಕದ ಮಾಜಿ ಗುಲಾಮರೊಡೆಯರು ಹಾಗೂ ನಿಷ್ಪ್ರಯೋಜಕ ಜನರು, ರಷ್ಯಾದ ಮಾಜಿ ಜೀತಗಾರರೊಡೆಯರು ಮತ್ತು ವಲಾಷಿಯನ್ ತುಡುಗು ಹುಡುಗರು ಸಂಧಿಸುವ ಸ್ಥಳವಾಗಿ ಉಳಿದಿಲ್ಲ. ಶವಾಗಾರಗಳಲ್ಲಿ ಹೆಣಗಳಿಲ್ಲ, ರಾತ್ರಿ ವೇಳೆಯ ದರೋಡೆಗಳಿಲ್ಲ. ದರೋಡೆಗಳು ತುಂಬಾ ಅಪರೂಪವಾಗಿದ್ದವು. ನಿಜ ಹೇಳಬೇಕೆಂದರೆ 1848 ಫೆಬ್ರವರಿ ನಂತರ ಇದೇ ಮೊದಲ ಬಾರಿಗೆ ಪ್ಯಾರಿಸ್ ರಸ್ತೆಗಳು ಸುರಕ್ಷಿತವಾಗಿದ್ದವು, ಅದೂ ಯಾವುದೇ ರೀತಿಯ ಪೊಲೀಸರ ಓಡಾಟವಿಲ್ಲದೆ. "ಹತ್ಯೆಗಳು, ಕಳ್ಳತನ ಮತ್ತು ವೈಯಕ್ತಿಕ ಹಲ್ಲೆಗಳ ಕುರಿತ ಯಾವುದೇ ಸುದ್ದಿಯನ್ನೂ ನಾವು ಕೇಳುತ್ತಿಲ್ಲ. ಪೊಲೀಸರು ತಮ್ಮ ಜೊತೆಯಲ್ಲಿ ತಮ್ಮ ಕನ್ಸರ್ವೇಟಿವ್ ಗೆಳೆಯರನ್ನೂ ವರ್ಸೆಲ್ಸ್‌ಗೆ ಎಳೆದುಕೊಂಡು ಹೋಗಿದ್ದಾರೇನೋ ಅಂತನಿಸುತ್ತದೆ" ಎಂದು ಕಮ್ಯೂನ್‌ನ ಒಬ್ಬ ಸದಸ್ಯ ಉದ್ಗರಿಸಿದ. ಜಾರೆಯರಿಗೆ ತಮ್ಮ ಸಂರಕ್ಷಕರಾದ – ಕುಟುಂಬಗಳನ್ನು, ಧರ್ಮ, ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಆಸ್ತಿಪಾಸ್ತಿ ತೊರೆದು – ಪಲಾಯನ ಮಾಡಿದ್ದ ಪುರುಷರ ವಾಸನೆ ಮತ್ತೆ ಹೊಡೆಯಹತ್ತಿತ್ತು.(The cocottes had refound the scent of their protectors—the absconding men of family, religion, and, above all, of property.) ಅವರ ಜಾಗದಲ್ಲಿ ಪ್ರಾಚೀನ ವೀರ, ಉದಾತ್ತ ಮತ್ತು ಸಮರ್ಪಣಭಾವದ ಮಹಿಳೆಯರ ರೀತಿಯಲ್ಲಿ ನಿಜವಾದ ಪ್ಯಾರಿಸ್ ಮಹಿಳೆಯರು ಮತ್ತೆ ಗಟ್ಟಿತನ ಪ್ರದರ್ಶಿಸಿದರು. ಕೆಲಸ, ಚಿಂತನೆ, ಹೋರಾಟ, ರಕ್ತಪಾತ– ನವಸಮಾಜದ ಕಾವಿನಲ್ಲಿ ಎಲ್ಲವನ್ನೂ ಮರೆತ, ಬಾಗಿಲಲ್ಲಿ ನರಭಕ್ಷಕರು ಕಾಯುತ್ತಿರುವುದನ್ನೂ ಮರೆತ, ತನ್ನ ಐತಿಹಾಸಿಕ ಮುನ್ನೆಡೆಯ ಉತ್ಸಾಹದಲ್ಲಿ ಪ್ಯಾರಿಸ್ ಹೊಳೆಯುತ್ತಿತ್ತು.

ಈ ಹೊಸ ಜಗತ್ತಿಗೆ ಪ್ರತಿಯಾಗಿ, ವರ್ಸೆಲ್ಸ್‌ನಲ್ಲಿನ ಹಳೆಯ ಜಗತ್ತನ್ನು ಗಮನಿಸಿ: ಲೆಜಿಟಿಮಿಸ್ಟರು ಮತ್ತು ಓರ್ಲಿಯಾನಿಸ್ಟರು;ಅಸೆಂಬ್ಲಿಯಲ್ಲಿ ತಮ್ಮ ಇರುವಿಕೆಯ ಲಾಭವನ್ನು ಪಡೆದು, ಗುಲಾಮರೊಡೆಯರ ಬಂಡಾಯಕ್ಕೆ ಸಮ್ಮತಿಸಿ, ತಮ್ಮ ಸಂಸದೀಯ ಗಣರಾಜ್ಯದ ನಿರ್ವಹಣೆಗಾಗಿ ಅಹಂಕಾರದ ಮಾತಿನ ಮೋಡಿಗಾರ ನಾಯಕರ ಮೇಲೆ ಅವಲಂಬಿಸಿರುವ ಮತ್ತು ಷುದ ಪಾಮ್‌ನಲ್ಲಿ (ನ್ಯಾಷನಲ್ ಅಸೆಂಬ್ಲಿ 1789ರಲ್ಲಿ ತನ್ನ ಪ್ರಸಿದ್ಧ ನಿರ್ಣಯವನ್ನು ಅಂಗೀಕರಿಸಿದ ಟೆನ್ನಿಸ್ ಅಂಗಳ)

16 ಅಬ್ಸೆಂಟೀಸ್ (ಗೈರಾಗುವವರು): ಹೊಲಗಳಿಗೆ ಎಂದೂ ಭೇಟಿ ನೀಡದ ಭೂಮಾಲಿಕರು. / ಕೃಷಿ ಮಾಡದ ಭೂಮಾಲಿಕರು.

ಘೋರ ಸಭೆಗಳನ್ನು ನಡೆಸಿ 1789ನ್ನು ವಿಡಂಬಿಸುವ, ಕೊನೆಯಲ್ಲಿ ಬರುವ ಹಳಸಿದ ರಿಪಬ್ಲಿಕನರು – ಮುಂತಾದ ದೇಶವೆಂಬ ಹೆಣವನ್ನು ಹರಿದು ತಿನ್ನಲು ಸೇರಿರುವ ಎಲ್ಲಾ ಗತಿಸಿದ ಆಳ್ವಿಕೆಗಳ ನರಭಕ್ಷಕ ಪಿಶಾಚಿಗಳು. ಫ್ರಾನ್ಸ್‌ನಲ್ಲಿ ಸತ್ತಿರುವ ಎಲ್ಲವುಗಳ ಪ್ರತಿನಿಧಿಯಾದ ಈ ಅಸೆಂಬ್ಲಿಯು, ಲೂಯಿ ಬೊನಪಾರ್ಟೆಯ ಜನರಲ್‌ಗಳ ಖಡ್ಗಗಳ ಆಸರೆಯಲ್ಲಷ್ಟೇ, ಜೀವಂತವಿದೆಯೆಂದು ತೋರಿಕೆಯಾಡುತ್ತಿದೆ. ಪ್ಯಾರಿಸ್ ಅಂದರೆ ಎಲ್ಲವೂ ಸತ್ಯ, ವರ್ಸೆಲ್ಸ್ ಅಂದರೆ ಎಲ್ಲವೂ ಸುಳ್ಳು; ಹಾಗೂ ಆ ಸುಳ್ಳನ್ನು ಥಿಯರ್ಸ್‌ನ ಬಾಯಿಯಿಂದ ಹೊರಡಿಸಲಾಗಿದೆ.

ಸಿಯೆನ್–ಎ–ವಾಸ್ ನ ಮೇಯರುಗಳ ನಿಯೋಗಕ್ಕೆ ಥಿಯರ್ಸ್ ಹೀಗೆ ಹೇಳಿದ: "ನಾನು ಯಾವತ್ತೂ ಮುರಿಯದ ಮಾತಿನ ಮೇಲೆ ನೀವು ಅವಲಂಬಿಸಬಹುದು!". "ಇದು ಫ್ರಾನ್ಸ್ ಎಂದೂ ಕಾಣದಂಥ ಅತ್ಯಂತ ಮುಕ್ತವಾಗಿ ಆಯ್ಕೆಯಾದ ಮತ್ತು ಅತ್ಯಂತ ಉದಾರ ಅಸೆಂಬ್ಲಿ" ಎಂದು ಆತ ಅಸೆಂಬ್ಲಿಗೆ ಹೇಳಿದ. "ಇದು ಇಡೀ ಜಗತ್ತಿನ ಶ್ಲಾಘನೆ ಗಳಿಸಿದ ಸೈನ್ಯ. ಫ್ರಾನ್ಸ್ ಹಿಂದೆಂದೂ ಕಾಣದಂಥ ಅತ್ಯುತ್ತಮ ಸೇನೆ" ಎಂಬುದಾಗಿ ಆತ ತನ್ನ ಅಸಂಗತ ಮಿಶ್ರಣದ ಸೈನ್ಯವನ್ನುದ್ದೇಶಿಸಿ ಹೇಳಿದ. ಪ್ಯಾರಿಸ್ ಮೇಲೆ ನಡೆದ ಸತತ ಗುಂಡಿನ ದಾಳಿ ಒಂದು ಮಿಥ್ಯೆ ಎಂಬುದಾಗಿ ಪ್ರಾಂತ್ಯಗಳಿಗೆ ಹೇಳಿದ: "ಕೆಲವು ಫಿರಂಗಿಗಳು ಬೆಂಕಿಯುಗುಳಿದರೆ ಅದು ವರ್ಸೆಲ್ಸ್ ಸೇನೆಯ ಕೆಲಸವಲ್ಲ, ಆದರೆ ತಾವು ಹೋರಾಟ ನಡೆಸುತ್ತಿದ್ದೇವೆಂದು ನಂಬಿಸುವವರಾದರೂ ಮುಖ ತೋರಿಸುವ ಧೈರ್ಯವಿಲ್ಲದ ಕೆಲವು ಬಂಡುಕೋರರ ಕೃತ್ಯವದು" ಎಂದು ಹೇಳಿದ. "ವರ್ಸೆಲ್ಸ್‌ನ ಫಿರಂಗಿದಳ ಪ್ಯಾರಿಸ್ ಮೇಲೆ ಬಾಂಬ್ ದಾಳಿ ಮಾಡುವುದಿಲ್ಲ, ಆದರೆ ಸತತವಾಗಿ ಫಿರಂಗಿ ದಾಳಿ ನಡೆಸುತ್ತದೆ" ಎಂದು ಆತ ಮತ್ತೆ ಪ್ರಾಂತ್ಯಗಳಿಗೆ ಹೇಳಿದ. ವರ್ಸೆಲ್ಸ್ ಮಾಡಿದ್ದೆಂದು ಹೇಳಲಾಗುವ ತೋರಿಕೆಯ ಗಲ್ಲು ಮತ್ತು ದಬ್ಬಾಳಿಕೆಗಳು (!) ಬರೀ ಕಲ್ಪನೆ ಎಂದು ಪ್ಯಾರಿಸ್‌ನ ಆರ್ಚ್‌ಬಿಷಪ್‌ಗೆ ಆತ ಹೇಳಿದ. 'ಪ್ಯಾರಿಸನ್ನು ದಬ್ಬಾಳಿಕೆಗೊಳಪಡಿಸುವ ಅಡಗಿಕೊಂಡಿರುವ ಸರ್ವಾಧಿಕಾರಿಗಳಿಂದ ಪ್ಯಾರಿಸನ್ನು ಬಿಡುಗಡೆಗೊಳಿಸುವುದಷ್ಟೇ ನನ್ನ ಉದ್ದೇಶ' ಎಂದಾತ ಪ್ಯಾರಿಸ್‌ಗೆ ಹೇಳಿದ. 'ಪ್ಯಾರಿಸ್‌ನ ಕಮ್ಯೂನ್ ಬೆರಳೆಣಿಕೆಯಷ್ಟು ಕ್ರಿಮಿನಲ್‌ಗಳ ಕೂಟ' ಎಂದೂ ಆತ ಬಡಬಡಿಸಿದ.

ಎಂ. ಥಿಯರ್ಸ್‌ನ ಪ್ಯಾರಿಸ್, ಅಸಹ್ಯ ಜನಸ್ತೋಮದ ಪ್ಯಾರಿಸ್ ಆಗಿರಲಿಲ್ಲ. ಆದರೆ ಪ್ರೇತ ಪ್ಯಾರಿಸ್ ಆಗಿತ್ತು. ಫ್ರಾಂಕ್ ಫ್ಲಿಲರ್ಸ್ (ಪ್ಯಾರಿಸಿನಿಂದ ಓಡಿಹೋಗಿದ್ದ ಬಂಡವಳಿಗರಿಗೆ ನೀಡಲಾಗಿದ್ದ ಅಡ್ಡ ಹೆಸರು)ನ ಪ್ಯಾರಿಸ್ ಆಗಿತ್ತು. ಬೂಲ್ವಾಗಳಲ್ಲಿ ಅಡ್ಡಾಡುತ್ತಿದ್ದ ಹೆಂಗಸರು, ಗಂಡಸರು, ಶ್ರೀಮಂತರು, ಬಂಡವಾಳಶಾಹಿಗಳು, ಗಿಲ್ಡ್‌ದಾರರು, ಸೋಮಾರಿ ಪ್ಯಾರಿಸ್, ಅದರ ಕಾಲಾಳುಗಳು, ಸಾಹಿತ್ಯಿಕ ಸ್ವೇಚ್ಛಾಚಾರಿಗಳು ಹಾಗೂ ವರ್ಸೆಲ್ಸ್, ಸೇಂಟ್–ಡೆನಿಸ್ ರೂಯಿಲ್ ಮತ್ತು ಸೇಂಟ್ ಜರ್ಮೇನ್‌ನಲ್ಲಿ ಅದರ ಜಾರೆಯರ ಆಗಮನ; ಅಂತರ್ಯುದ್ಧವನ್ನು ಒಪ್ಪಿಕೊಳ್ಳಬಹುದಾದ ಮಾರ್ಗಚ್ಯುತಿ ಎಂದು ಪರಿಗಣಿಸುತ್ತಾ, ನಡೆಯುತ್ತಿರುವ ಯುದ್ಧಗಳನ್ನು ಟೆಲಿಸ್ಕೋಪ್‌ನಲ್ಲಿ ನೋಡುತ್ತಾ, ಫಿರಂಗಿಗಳ ಸುತ್ತುಗಳನ್ನು ಎಣಿಸುತ್ತಾ; ಮತ್ತು ಸ್ವತಃ ತಮ್ಮ ಮತ್ತು ತಮ್ಮ ವೇಶ್ಯೆಯರ ಗೌರವದ ಹೆಸರಿನಲ್ಲಿ ಬಯ್ಯುವ, ಪ್ರದರ್ಶನವು ಪೋರ್ಟ್ ಸೇಂಟ್ ಮಾರ್ಟಿನ್‌ನಲ್ಲನದ್ದಕ್ಕಿಂತ ಹೆಚ್ಚು ಉತ್ತಮವಾಗಿದೆ. ಬಿದ್ದ ಜನರು

ನಿಜವಾಗಿಯೂ ಸತ್ತವರು, ಗಾಯಾಳುಗಳ ಆಕ್ರಂದನ ಉತ್ತಮ ಉದ್ದೇಶದ್ದೇ; ಮತ್ತು ಅಷ್ಟು ಮಾತ್ರವಲ್ಲದೆ ಇಡೀ ವಿಚಾರ ತೀರಾ ಐತಿಹಾಸಿಕವಾದುದು.

ಇದು ಥಿಯರ್ಸ್‌ನ ಪ್ಯಾರಿಸ್. ಕೊಬ್ಲೆಂಜ್ ನಿರ್ಗಮನದ ನಂತರದದ ಕಲೋನ್ ನ ಫ್ರಾನ್ಸ್‌ನಂತಿದೆ.

## IV.

ಪ್ಯಾರಿಸನ್ನು ಪ್ರಷ್ಯನ್ನರು ವಶಪಡಿಸಿಕೊಳ್ಳಲು ಅವಕಾಶ ಮಾಡಿಕೊಡುವ ಮೂಲಕ ಪ್ಯಾರಿಸನ್ನು ದಮನಿಸಲು ಗುಲಾಮರೊಡೆಯರು ಮಾಡಿದ ಪಿತೂರಿಯ ಮೊದಲ ಯತ್ನವನ್ನು, ಅದನ್ನು ತಿರಸ್ಕರಿಸುವ ಮೂಲಕ ಬಿಸ್ಮಾರ್ಕ್ ವಿಫಲಗೊಳಿಸಿದ. ಮಾರ್ಚ್ 18ರ ಎರಡನೇ ಪ್ರಯತ್ನದಲ್ಲಿ ಸೈನ್ಯ ಸೊತು ಸುಣ್ಣವಾಗಿ ಸರಕಾರ ವರ್ಸೆಲ್ಸ್‌ಗೆ ಪಲಾಯನಗೈಯುವಲ್ಲಿ ಪರ್ಯಾವಸಾನಗೊಂಡಿತು. ಈ ಸರಕಾರ ಇಡೀ ಆಡಳಿತವನ್ನು ಒಡೆದು ತನ್ನ ಹಾದಿಯನ್ನು ಅನುಸರಿಸಲು ಆದೇಶಿಸಿತ್ತು. ಪ್ಯಾರಿಸ್‌ನೊಂದಿಗೆ ಶಾಂತಿ–ಮಾತುಕತೆಯ ಸೋಗಿನಲ್ಲಿ, ಅದರ ವಿರುದ್ಧ ಯುದ್ಧ ತಯಾರಿ ನಡೆಸಲು ಥಿಯರ್ಸ್ ಕಾಲಾವಕಾಶ ಮಾಡಿಕೊಂಡ. ಆದರೆ ಆತನಿಗೆ ಒಂದು ಸೇನೆ ಎಲ್ಲಿಂದ ಸಿಗಬೇಕು? ಅಳಿದುಳಿದ ರೆಜಿಮೆಂಟ್‌ಗಳು ಸಂಖ್ಯೆಯಲ್ಲಿ ದುರ್ಬಲವಾಗಿದ್ದವು ಹಾಗೂ ಅಷ್ಟು ಸುರಕ್ಷಿತವೂ ಆಗಿರಲಿಲ್ಲ. ನ್ಯಾಷನಲ್ ಗಾರ್ಡ್ ಮತ್ತು ಸ್ವಯಂಸೇವಕರ ಮೂಲಕ ವರ್ಸೆಲ್ಸ್‌ಗೆ ಸಹಾಯ ಮಾಡಬೇಕೆಂದು ಆತ ಪ್ರಾಂತ್ಯಗಳಿಗೆ ಮಾಡಿಕೊಂಡ ಮೊದಲ ಮನವಿಯನ್ನು ಸಾರಾಸಗಟಾಗಿ ತಿರಸ್ಕರಿಸಲಾಯಿತು. ಬ್ರಿಟ್ಟನ್ ಮಾತ್ರವೇ, ತಮ್ಮ ತೊಡುಗೆಗಳ ಎದೆ ಭಾಗದ ಮೇಲೆ ಬಿಳಿ ಬಟ್ಟೆಯಿಂದ ಏಸು ಕ್ರಿಸ್ತನ ಹೃದಯವನ್ನು ಚಿತ್ರಿಸಿಕೊಂಡು, 'ವಿವ್‌ಲ ರ್‍ವಾ!' (ದೊರೆ ಚಿರಾಯುವಾಗಲಿ!) ಎಂದು ಘೋಷಣೆ ಕೂಗುತ್ತಾ ಬಿಳಿ ಧ್ವಜದಡಿ ಹೋರಾಡುತ್ತಿದ್ದ ಕೆಲವು ಷೋವಿನ್[17]ಗಳನ್ನು ಒದಗಿಸಿತು. ಹೀಗಾಗಿ ಥಿಯರ್ಸ್ ಆತುರಾತುರವಾಗಿ ನಾವಿಕರು, ಪದಾತಿ ದಳ, ಪಾಂಟಿಫಿಕಲ್ ಝುಯಾವ್[18], ವೆಲೆಂಟಿನ್‌ನ ಪೊಲೀಸರು ಮತ್ತು ಪೀತ್ರಿಯ ಸಾರ್ಜೆಂಟ್ಸ್ ದವೀಯ್ ಹಾಗೂ ಮೂಷಾರ್ಡ್‌ಗಳನ್ನೊಳಗೊಂಡ ಒಂದು ಅಸಮಂಜಸ ಮಿಶ್ರಣದ ಪಡೆಯನ್ನು ರೂಪಿಸುವ ಅನಿವಾರ್ಯತೆಗೆ ಒಳಗಾದನು. ಅಂತರ್ಯುದ್ಧ ಮುಂದುವರಿಯಲಷ್ಟೆ ಸಾಕಾಗುವ ಹಾಗೂ ವರ್ಸೆಲ್ಸ್ ಸರಕಾರ ಪ್ರಷ್ಯಾದ ಮೇಲೆ ಅವಲಂಬಿಸುವಂತೆ ಮಾಡಲು

17 ಷೌಹಾನ್: ಇದು ವರ್ಸೆಲ್ಸ್ ಸೇನೆಯ ಪ್ರತಿಗಾಮಿ ವಿಭಾಗಕ್ಕೆ ಪ್ಯಾರಿಸ್ ಕಮ್ಯೂನಾರ್ಡ್‌ಗಳು ಇಟ್ಟ ಹೆಸರು. 18ನೇ ಶತಮಾನದ ಕೊನೆಯಲ್ಲಿ ನಡೆದ ಫ್ರೆಂಚ್ ಬಂಡವಾಳಶಾಹಿ ಕ್ರಾಂತಿಯ ವೇಳೆ ವಾಯವ್ಯ ಫ್ರಾನ್ಸ್‌ನಲ್ಲಿ ಪ್ರತಿ–ಕ್ರಾಂತಿಯಲ್ಲಿ ಭಾಗವಹಿಸಿದ್ದರು.

18 ಝೊವೆಸ್: ಫ್ರೆಂಚ್ ಲಘು ಪದಾತಿದಳ. ಆಲ್ಜೀರಿಯಾದ ಒಂದು ಬುಡಕಟ್ಟಿನ ಹೆಸರು ಇದರ ಆಕರ ಮೂಲ. 19ನೇ ಶತಮಾನದಲ್ಲಿ ಆಲ್ಜೀರಿಯಾದ ಸ್ಥಳೀಯ ಜನರು ಮೊದಲ ಝೊವೆ ತುಕಡಿಗಳನ್ನು ರಚಿಸಿದ್ದರು. ಕ್ರಮೇಣವಾಗಿ, ಫ್ರಾನ್ಸ್ ಅವರನ್ನು ನೇಮಕ ಮಾಡಿಕೊಂಡಿತು. ಆದರೆ ಅವರ ಮೂಲ ಪೌರ್ವಾತ್ಯ (ಓರಿಯೆಂಟಲ್) ಸಮವಸ್ತ್ರವನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು.

ಸಾಕಾಗುವಷ್ಟು ಮಾತ್ರ ಸಾಮ್ರಾಜ್ಯಶಾಹಿ ಯುದ್ಧ ಕೈದಿಗಳನ್ನು ಬಿಸ್ಮಾರ್ಕ್ ಕಂತುಗಳಲ್ಲಿ ಒದಗಿಸಿರದಿದ್ದರೆ, ಥಿಯರ್ಸ್‌ನ ಈ ಸೇನೆ ಯಾವ ರೀತಿಯಲ್ಲೂ ಪರಿಣಾಮಕಾರಿ ಆಗಿರುತ್ತಿರಲಿಲ್ಲ. ಯುದ್ಧದ ವೇಳೆಯೇ ವರ್ಸೆಲ್ಸ್ ಪೊಲೀಸರು ವರ್ಸೆಲ್ಸ್ ಸೇನೆಯನ್ನೂ ನೋಡಿ ಕೊಳ್ಳಬೇಕಾಗಿತ್ತು. ಅದೇ ರೀತಿ ಪೊಲೀಸರು ಎಲ್ಲಾ ಅಪಾಯಕಾರಿ ಸ್ಥಳಗಳಲ್ಲಿ ತಮ್ಮನ್ನು ಒಡ್ಡಿಕೊಳ್ಳಬೇಕಾಗಿತ್ತು. ಸೋತುಹೋದ ಕೋಟೆಗಳನ್ನು ವಶಕ್ಕೆ ಪಡೆಯದೆ ಅವನ್ನು ಖರೀದಿಸಲಾಯಿತು. ತನ್ನ ಯುದ್ಧತಂತ್ರದ ಬುದ್ಧಿಮತ್ತೆ ಹಾಗೂ ತನ್ನ ಬಳಿಯಿರುವ ಬಯೋನೆಟ್‌ಗಳಿಂದ ಪ್ಯಾರಿಸ್ ಪ್ರತಿರೋಧವನ್ನು ನಿಗ್ರಹಿಸಲು ಆಗುವುದಿಲ್ಲ ಎಂಬುದನ್ನು ಥಿಯರ್ಸ್‌ಗೆ ಫೆಡರಲ್‌ಗಳ ವೀರತ್ವ ಮನವರಿಕೆ ಮಾಡಿತು.

ಏತನ್ಮಧ್ಯೆ, ಪ್ರಾಂತ್ಯಗಳೊಂದಿಗಿನ ಆತನ ಸಂಬಂಧ ಹೆಚ್ಚೆಚ್ಚು ಕಷ್ಟವಾಯಿತು. ಥಿಯರ್ಸ್ ಮತ್ತು ಆತನ ರೂರಲ್‌ಗಳಿಗೆ ಖುಷಿ ಕೊಡುವ ಸಮ್ಮತಿಯ ಒಂದೇ ಒಂದು ಭಾಷಣವೂ ಬರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಗಣರಾಜ್ಯಕ್ಕೆ ಸ್ಪಷ್ಟ ಮಾನ್ಯತೆ ಕೊಡುವ, ಕಮ್ಯೂನ್‌ನ ಸ್ವಾತಂತ್ರ್ಯವನ್ನು ಒಪ್ಪುವ ಹಾಗೂ ಅಧಿಕಾರ ಕಳೆದುಕೊಂಡ ನ್ಯಾಷನಲ್ ಅಸೆಂಬ್ಲಿಯನ್ನು ಬರ್ಖಾಸ್ತುಗೊಳಿಸುವ ಆಧಾರದಲ್ಲಿ ಪ್ಯಾರಿಸ್‌ನೊಂದಿಗೆ ಗೌರವಪೂರ್ವಕ ಸಂಧಾನ ಮಾತುಕತೆ ನಡೆಸುವ ಕುರಿತ ನಿಯೋಗಗಳು ಮತ್ತು ಭಾಷಣಗಳು ಎಲ್ಲಾ ಕಡೆಗಳಿಂದ ಹರಿದು ಬಂದವು. ಅದು ಎಷ್ಟರ ಮಟ್ಟಿಗಿತ್ತೆಂದರೆ, ಇಂಥ 'ಸಂಧಾನದ ಕರೆಗಳನ್ನು' ಅಪರಾಧ ಎಂದು ಪರಿಗಣಿಸುವಂತೆ ಆದೇಶಿಸಿ ಥಿಯರ್ಸ್‌ನ ಕಾನೂನು ಸಚಿವ ದ್ಯುಫೋರ್ ಎಪ್ರಿಲ್ 23ರಂದು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ಸುತ್ತೋಲೆ ಹೊರಡಿಸಿದ! ತನ್ನ ಪ್ರಯತ್ನಗಳಿಗೆ ಫಲ ಸಿಗದಿದ್ದರಿಂದ ಹತಾಶನಾದ ಥಿಯರ್ಸ್, ತಾನೇ ನ್ಯಾಷನಲ್ ಅಸೆಂಬ್ಲಿಗೆ ಸೂಚಿಸಿದ ಹೊಸ ಮುನಿಸಿಪಲ್ ಕಾನೂನಿನ ಪ್ರಕಾರ ದೇಶದಾದ್ಯಂತ ಎಪ್ರಿಲ್ 30ರಂದು ಮುನಿಸಿಪಲ್ ಚುನಾವಣೆಗಳನ್ನು ನಡೆಸಲು ಆದೇಶಿಸುವ ಮೂಲಕ ತನ್ನ ತಂತ್ರವನ್ನು ಬದಲಾಯಿಸಿದ. ಪೊಲೀಸ್ ಅಧಿಕಾರಿಗಳ ಜೊತೆ ಒಳಸಂಚು, ದಬ್ಬಾಳಿಕೆಗಳಿಂದ, ಪ್ರಾಂತ್ಯಗಳ ಮೂಲಕ ನ್ಯಾಷನಲ್ ಅಸೆಂಬ್ಲಿಗೆ ಎಂದೂ ಇಲ್ಲದಿದ್ದ ನೈತಿಕ ಅಧಿಕಾರವನ್ನು ಕೊಡುವ ಹಾಗೂ ಪ್ಯಾರಿಸನ್ನು ಗೆಲ್ಲಲು ಬೇಕಾದ ದೈಹಿಕ ಪಡೆಗಳನ್ನು ಕೊನೆಗೂ ಪ್ರಾಂತ್ಯಗಳಿಂದ ಪಡೆಯುವ ಮೂಲಕ ಉಲ್ಲಾಸಭರಿತನಾದನು.

ತನ್ನ ಬುಲೆಟಿನ್‌ಗಳಲ್ಲಿ ಸ್ತುತಿಸಿಕೊಂಡ, ಪ್ಯಾರಿಸ್ ವಿರುದ್ಧದ ಡಕಾಯಿತ–ಯುದ್ಧ ಮತ್ತು ಫ್ರಾನ್ಸಿನಾದ್ಯಂತ ಆತನ ಸಚಿವರು ಹಿಂಸಾಚಾರ ಭಯದ ವಾತಾವರಣ ಹರಿಯಬಿಡಲು ನಡೆಸಿದ ಯತ್ನಗಳ ನಡುವೆ ಥಿಯರ್ಸ್ ಒಂದಕ್ಕಿಂತ ಹೆಚ್ಚು ಉದ್ದೇಶವಿಟ್ಟುಕೊಂಡು ಆರಂಭದಿಂದಲೂ ಸಂಧಾನದ ನಾಟಕವಾಡಲು ಉತ್ಸುಕನಾಗಿದ್ದ. ಪ್ರಾಂತ್ಯಗಳಿಗೆ ವಂಚಿಸುವುದು, ಪ್ಯಾರಿಸ್‌ನ ಮಧ್ಯಮ ವರ್ಗವನ್ನು ಪುಸಲಾಯಿಸುವುದು, ಥಿಯರ್ಸ್‌ನ ವಿಶ್ವಾಸದ ಮರೆಯಲ್ಲಿ ಪ್ಯಾರಿಸ್ ವಿರುದ್ಧದ ದ್ರೋಹವನ್ನು ಮರೆಮಾಚಲು ನ್ಯಾಷನಲ್ ಅಸೆಂಬ್ಲಿಯಲ್ಲಿ ಕಟ್ಟಾ ರಿಪಬ್ಲಿಕನ್‌ರಿಗೆ ಅವಕಾಶ ಮಾಡಿಕೊಡುವುದು ಅದರ ಉದ್ದೇಶ. ಮಾರ್ಚ್ 21ರಂದು ಇನ್ನೂ ಒಂದು ಸೇನೆಯನ್ನು ಹೊಂದದಿದ್ದಾಗ, "ಏನೇ ಆದರೂ ನಾನು ಪ್ಯಾರಿಸ್‌ಗೆ ಸೇನೆ ಕಳಿಸುವುದಿಲ್ಲ" ಎಂದು ಆತ ನ್ಯಾಷನಲ್ ಅಸೆಂಬ್ಲಿಯಲ್ಲಿ ಘೋಷಿಸಿದ. ಮಾರ್ಚ್ 27ರಂದು ಆತ ಮತ್ತೆ ಈ ರೀತಿ ಹೇಳಿದ: "ಗಣರಾಜ್ಯ ಒಂದು

ಆಗಲೇ ಸಾಧಿತವಾದ ವಿಚಾರ. ಅದನ್ನು ಉಳಿಸಿಕೊಳ್ಳಲು ನಾನು ದೃಢ ಸಂಕಲ್ಪ ಮಾಡಿದ್ದೇನೆ". ವಾಸ್ತವವಾಗಿ ಆತ ಲಿಯೋನ್ಸ್ ಮತ್ತು ಮಾರ್ಸೆಲ್ಸ್‌ನಲ್ಲಿ ಗಣರಾಜ್ಯದ ಹೆಸರಿನಲ್ಲಿ ಕ್ರಾಂತಿಯನ್ನು ದಮನಿಸಿದ್ದ. (1871 ಮಾರ್ಚ್ 18ರ ಕೆಲವು ದಿನಗಳ ನಂತರ ಕಮ್ಯೂನ್ ಘೋಷಿಸುವ ಉದ್ದೇಶದಿಂದ ಲಿಯೋನ್ಸ್ ಮತ್ತು ಮಾರ್ಸೆಲ್ಸ್‌ನಲ್ಲಿ ಕ್ರಾಂತಿ ಭುಗಿಲೆದ್ದಿತು. ಥಿಯರ್ಸ್ ಸರಕಾರ ಆ ಚಳವಳಿಯನ್ನು ದಮನಿಸಿತು). ಅತ್ತ ವರ್ಸೆಲ್ಸ್‌ನಲ್ಲಿ ಆತನ ರೂರಲ್‌ಗಳ ಘರ್ಜನೆಯಿಂದಾಗಿ ಗಣರಾಜ್ಯವನ್ನು ಪ್ರಸ್ತಾವಿಸುವ ಪ್ರಯತ್ನವೇ ಕರಗಿ ಹೋಯಿತು. ಈ ಕಾರ್ಯಾಚರಣೆಯ ನಂತರ, ಆತ 'ಸಾಧಿತವಾದ ವಿಚಾರ'ವನ್ನು ಕಾಲ್ಪನಿಕ ವಿಚಾರ ಎಂಬುದಾಗಿ ಕರೆದ. ಓರ್ಲಿಯಾನ್ಸ್ ರಾಜಕುಮಾರರಿಗೆ ಈಗ ಕಾನೂನಿನ ನಗ್ನ ಉಲ್ಲಂಘನೆ ಮಾಡಿ ಡ್ರೂಕ್ಸ್‌ನಲ್ಲಿ ಸಂಚು ಮಾಡಲು ಅನುಮತಿ ನೀಡಿದರು. ಸಮಯ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಧ್ವನಿ ಮತ್ತು ಬಣ್ಣವನ್ನು ಬದಲಾಯಿಸಿದರೂ ಪ್ಯಾರಿಸ್ ಮತ್ತು ಪ್ರಾಂತ್ಯಗಳಿಂದ ಬಂದ ನಿಯೋಗಗಳಿಗೆ ನೀಡಿದ ರಿಯಾಯಿತಿ, ಲೆಕೊಮ್ತ್ ಮತ್ತು ಕ್ಲಿಮೆಂಟ್ ಥಾಮಸ್‌ನ ಕೊಲೆ ಪ್ರಕರಣದಲ್ಲಿ 'ಸಿಲುಕಿಸಲಾದ ಕೆಲವೇ ಕ್ರಿಮಿನಲ್‌ಗಳ' ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವ ಮುಂದಿನ ಅವಕಾಶವನ್ನು ಮಿತಿಗೊಳಿಸುವುದಕ್ಕಿಂತ ಹೆಚ್ಚಿನ ಕೆಲಸವನ್ನೇನನ್ನೂ ಮಾಡಲಿಲ್ಲ. 1830ರಲ್ಲಿ ಲೂಯಿ ಫಿಲಿಪ್ ವಿಚಾರದಲ್ಲಿ ಥಿಯರ್ಸ್ ಮಾಡಿದಂತೆ ಎಂ. ಥಿಯರ್ಸ್‌ನನ್ನು ಸಂಭಾವ್ಯ ಅತ್ಯುತ್ತಮ ರಿಪಬ್ಲಿಕ್ ಎಂದು ಪ್ಯಾರಿಸ್ ಮತ್ತು ಫ್ರಾನ್ಸ್ ನಿಶ್ಶರ್ತವಾಗಿ ಒಪ್ಪಿಕೊಳ್ಳುತ್ತವೆ ಎಂಬ ನಂಬಿಕೆಯ ಮೇಲೆ ಹೀಗೆ ಮಾಡಲಾಯಿತು. ಈ ರಿಯಾಯಿತಿಗಳಿಗೆ ಕೂಡ ಅಸೆಂಬ್ಲಿಯಲ್ಲಿ ತನ್ನ ಸಚಿವರ ಮೂಲಕ ಅನುಮಾನಗಳನ್ನು ವ್ಯಕ್ತಪಡಿಸಿದ. ಕಾರ್ಯಾಚರಿಸಲು ದಫೌರ್ ಇದ್ದ. ಹಳೆಯ ಓರ್ಲಿಯಾನಿಸ್ಟ್ ವಕೀಲನಾದ ದಫೌರ್ ಯಾವಾಗಲೂ ಮುತ್ತಿಗೆಯ ಪರವಾಗಿಯೇ ಇದ್ದ– ಈಗ 1871ರಲ್ಲಿ ಥಿಯರ್ಸ್‌ನ ಕೆಳಗಡೆ, 1839ರಲ್ಲಿ ಲೂಯಿ ಫಿಲಿಪ್ ಮತ್ತು 1849ರಲ್ಲಿ ಲೂಯಿ ಬೊನಪಾರ್ಟೆ ಅಧ್ಯಕ್ಷರಾಗಿದ್ದಾಗ ಮಾಡಿದಂತೆ. ಅಧಿಕಾರದಿಂದ ಹೊರಗಿದ್ದಾಗ ಪ್ಯಾರಿಸ್‌ನ ಬಂಡವಾಳಶಾಹಿಗಳ ಪರವಾಗಿ ವಾದಿಸಿ ಭಾಗ್ಯ ಖುಲಾಯಿಸಿಕೊಂಡನು; ಸ್ವತಃ ತಾನೇ ರೂಪಿಸಿದ ಕಾನೂನುಗಳ ವಿರುದ್ಧ ವಾದಿಸಿ ರಾಜಕೀಯ ಬಂಡವಾಳ ಮಾಡಿಕೊಂಡನು. ಈಗ ಆತ ಪ್ಯಾರಿಸ್ ಪತನದ ನಂತರ, ರಿಪಬ್ಲಿಕನ್ ಸ್ವಾತಂತ್ರ್ಯದ ಕೊನೆಯ ಪಳೆಯುಳಿಕೆಗಳನ್ನೂ ಮೂಲೋತ್ಪಾಟನೆ ಮಾಡಲು ನ್ಯಾಷನಲ್ ಅಸೆಂಬ್ಲಿಯಲ್ಲಿ ಹಲವು ದಬ್ಬಾಳಿಕೆಯ ಕಾನೂನುಗಳನ್ನು ಆತುರದಿಂದ ಮಂಡಿಸಿದ. ಮಾತ್ರವಲ್ಲದೆ ಕೋರ್ಟ್ ಮಾರ್ಷಲ್‌ಗಳ ನಿಧಾನ ಪ್ರಕ್ರಿಯೆಯನ್ನು ಸಂಕ್ಷಿಪ್ತಗೊಳಿಸುವ ಮೂಲಕ ಹಾಗೂ ಗಡಿಪಾರಿನ ಕರಾಳ ಕಾನೂನನ್ನು ರೂಪಿಸುವ ಮೂಲಕ ಪ್ಯಾರಿಸ್‌ನ ಭವಿಷ್ಯದ ಮುನ್ಸೂಚನೆ ನೀಡಿದ. 1848ರ ಕ್ರಾಂತಿ, ರಾಜಕೀಯ ಅಪರಾಧಗಳಿಗೆ ಮರಣ ದಂಡನೆ ವಿಧಿಸುವುದನ್ನು ರದ್ದುಪಡಿಸಿ ಅದರ ಜಾಗದಲ್ಲಿ ಗಡಿಪಾರು ನಿಯಮವನ್ನು ಜಾರಿಗೊಳಿಸಿತ್ತು. ಲೂಯಿ ಬೊನಪಾರ್ಟೆ ಕನಿಷ್ಠ ತಾತ್ವಿಕವಾಗಿಯಾದರೂ, ಗಲ್ಲು ಶಿಕ್ಷೆಯನ್ನು ಪುನಃ ಜಾರಿಗೊಳಿಸುವ ಧೈರ್ಯವನ್ನು ತೋರಲಿಲ್ಲ. ರೂರಲ್ ಅಸೆಂಬ್ಲಿ ಪ್ಯಾರಿಸ್ ಜನರು ಬಂಡುಕೋರರಲ್ಲ, ಹಂತಕರು ಎಂದು ಹೇಳುವ ಧೈರ್ಯವನ್ನು ಇನ್ನೂ ಮಾಡಿಲ್ಲ. ಆದ್ದರಿಂದ ಅದು ದಫೌರ್‌ನ ಗಡಿಪಾರಿನ ಹೊಸ ಕಾನೂನಿನ ವಿರುದ್ಧ ಸೇಡು ತೀರಿಸಿಕೊಳ್ಳುವ ಸಾಧ್ಯತೆಯ

ಭವಿಷ್ಯಕ್ಕೆ ಸೀಮಿತಗೊಂಡಿದೆ. ಈ ಎಲ್ಲಾ ಸನ್ನಿವೇಶಗಳಲ್ಲಿ ಥಿಯರ್ಸ್ ತಾನು ಬಯಸಿದಂತೆ ಆಗದಿದ್ದರೆ ಸಂಧಾನದ ಪರಿಹಾಸ್ಯದ ಕಾಮಿಡಿ ಜೊತೆ ಹೋಗಲಾರ. ಕುಟಿಲೋಪಾಯವನ್ನು ಅರ್ಥ ಮಾಡಿಕೊಳ್ಳಲಾಗದ ಅಥವಾ ಅದರ ಬೂಟಾಟಿಕೆ, ಪರಸ್ಪರ ಹೊಂದಾಣಿಕೆ ಇಲ್ಲದ ಮಾತು ಮತ್ತು ಕಾಲಹರಣದ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲಾಗದ ರೂರಲ್‌ಗಳಿಂದ ಕೋಪಾವೇಶದ ಚೀರಾಟ ಉಂಟಾಗುತ್ತದೆ.

ಎಪ್ರಿಲ್ 30ರ ಮುನಿಸಿಪಲ್ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಥಿಯರ್ಸ್ ಎಪ್ರಿಲ್ 27ರಂದು ತನ್ನ ಮಹಾನ್ ಸಂಧಾನಗಳ ನಾಟಕದ ಪೈಕಿ ಒಂದನ್ನು ಪ್ರದರ್ಶಿಸಿದ. ಕೃತಕ ಭಾವನಾತ್ಮಕತೆಯೊಂದಿಗೆ ಅಸೆಂಬ್ಲಿಯ ಟ್ರಿಬ್ಯೂನ್‌ನಿಂದ ಆತ ಹೀಗೆ ಘೋಷಿಸಿದ: "ಗಣರಾಜ್ಯದ ವಿರುದ್ಧ ಬೇರೆ ಯಾವುದೇ ಪಿತೂರಿಯಿಲ್ಲ, ಪ್ಯಾರಿಸ್‌ನಿಂದ ಮಾತ್ರ ಗಣರಾಜ್ಯದ ವಿರುದ್ಧ ಪಿತೂರಿ ನಡೆಯುತ್ತಿದೆ. ಅದು ಫ್ರೆಂಚ್ ರಕ್ತ ಚೆಲ್ಲಲು ನಮ್ಮನ್ನು ಪ್ರೇರೇಪಿಸುತ್ತದೆ. ಇದನ್ನು ನಾನು ಮತ್ತೆ ಮತ್ತೆ ಪುನರುಚ್ಚರಿಸುತ್ತೇನೆ. ಹಿಡಿದುಕೊಂಡಿರುವ ಅಸ್ತ್ರಗಳು ಆ ದುಷ್ಟ ಕೈಗಳಹಿಡಿತದಿಂದ ಬಿದ್ದು ಹೋಗಲಿ, ಸಣ್ಣ ಸಂಖ್ಯೆಯ ಕ್ರಿಮಿನಲ್‌ಗಳನ್ನು ಹೊರತುಪಡಿಸಿ, ಶಾಂತಿಯ ದಂಡನೆಯ ಮೂಲಕ ಅದನ್ನು ಒಂದೇ ಸಲ ತಡೆಯಲಾಗುವುದು". ರೂರಲ್‌ಗಳ ಉಗ್ರ ಅಡ್ಡಿಯ ನಡುವೆ ಆತ ಅಸೆಂಬ್ಲಿಯಲ್ಲಿ ಮುಂದುವರೆದು ಹೇಳಿದ. "ಸನ್ಮಾನ್ಯರೇ, ಹೇಳಿ, ನಾನು ತಪ್ಪು ಮಾಡಿದ್ದೇನೆಯೇ? ಕ್ರಿಮಿನಲ್‌ಗಳು ಬೆರಳೆಣಿಕೆಯಷ್ಟೇ ಇದ್ದಾರೆ ಎಂದು ನಾನು ಸತ್ಯ ಹೇಳಬಹುದಿತ್ತು ಎಂಬ ಬಗ್ಗೆ ನಿಮಗೆ ನಿಜವಾಗಿಯೂ ವಿಷಾದವಾಗುತ್ತದೆಯೇ? ಕ್ಲಿಮೆಂಟ್ ಥಾಮಸ್ ಮತ್ತು ಜನರಲ್ ಲೆಕೊಮ್ತ್ ರ ರಕ್ತ ಹರಿಸುವ ಸಾಮರ್ಥ್ಯವಿದ್ದವರು ಅಪವಾದವಾಗಿರುವ ಕೆಲವೇ ಕೆಲವರು ಎನ್ನುವುದು ನಮ್ಮ ದುರಾದೃಷ್ಟಗಳ ನಡುವೆ ಅದೃಷ್ಟವಲ್ಲವೇ?"

ಏನಿದ್ದರೂ ತಾನು ಒಬ್ಬ ಎಚ್ಚರಿಕೆಯ ಸಂಸದೀಯ ಹಾಡು ಎಂದು ಥಿಯರ್ಸ್ ತನ್ನ ಬಗ್ಗೆ ಹೇಳಿಕೊಂಡಿದ್ದನ್ನು ಫ್ರಾನ್ಸ್ ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. 35,000 ಕಮ್ಯೂನ್‌ಗಳು ಆಯ್ಕೆ ಮಾಡಿದ್ದ ಏಳು ಲಕ್ಷ ಮುನಿಸಿಪಲ್ ಕೌನ್ಸಿಲರ್‌ಗಳಲ್ಲಿ ಸಂಯುಕ್ತ ಲೆಜಿಟಿಮಿಸ್ಟ್‌ಗಳು, ಓರ್ಲಿಯಾನಿಸ್ಟ್‌ಗಳು ಮತ್ತು ಬೊನಪಾರ್ಟೆವಾದಿಗಳು 8000ದಷ್ಟೂ ಇರಲಿಲ್ಲ. ಅದರ ನಂತರ ನಡೆದ ಪೂರಕ ಚುನಾವಣೆಗಳು ಇನ್ನೂ ಹೆಚ್ಚು ನಿರ್ಣಾಯಕವಾಗಿ ಅವರಿಗೆ ಪ್ರತಿಕೂಲವಾಗಿತ್ತು. ಹೀಗೆ ಅವಶ್ಯವಾಗಿ ಬೇಕಾದ ದೈಹಿಕ ಬಲವನ್ನು ಪ್ರಾಂತ್ಯಗಳಿಂದ ಪಡೆಯುವ ಬದಲು, ನ್ಯಾಷನಲ್ ಅಸೆಂಬ್ಲಿಯು ದೇಶದ ಸಾರ್ವತ್ರಿಕ ಜನಮತದ ಅಭಿವ್ಯಕ್ತಿ ಎಂಬ ಕಟ್ಟಕಡೆಯ ನೈತಿಕ ಬಲವನ್ನೂ ಅದು ಕಳೆದುಕೊಂಡಿತು. ಅವನ ಕಸಿವಿಸಿಯನ್ನು ಪೂರ್ಣಗೊಳಿಸುವಂತೆ, ವರ್ಸೆಲ್ಸ್‌ನಲ್ಲಿರುವ ಅಸೆಂಬ್ಲಿಯ ಅಧಿಕಾರವನ್ನು ಕಿತ್ತುಕೊಂಡು ಬೋರ್ದೋನಲ್ಲಿ ಒಂದು ಪ್ರತಿ–ಅಸೆಂಬ್ಲಿ ರಚಿಸುವುದಾಗಿ ಫ್ರಾನ್ಸ್‌ನ ಎಲ್ಲಾ ನಗರಗಳ ಹೊಸದಾಗಿ ಆಯ್ಕೆಯಾದ ಮುನಿಸಿಪಲ್ ಕೌನ್ಸಿಲ್‌ಗಳು ಬೆದರಿಕೆ ಹಾಕಿದವು.

ದೀರ್ಘ ಸಮಯದಿಂದ ನಿರೀಕ್ಷಿಸುತ್ತಿದ್ದ ನಿರ್ಣಾಯಕ ಕಾರ್ಯಾಚರಣೆಯ ಘಳಿಗೆ ಕೊನೆಗೂ ಬಿಸ್ಮಾರ್ಕ್‌ಗೆ ಒದಗಿ ಬಂತು. ಖಚಿತ ಶಾಂತಿಯ ಇತ್ಯರ್ಥಕ್ಕಾಗಿ ಫ್ರಾಂಕ್‌ಫರ್ಟ್‌ಗೆ ಸಂಪೂರ್ಣಾಧಿಕಾರವುಳ್ಳ ರಾಯಭಾರಿಗಳನ್ನು ಕಳಿಸುವಂತೆ ಬಿಸ್ಮಾರ್ಕ್ ಮೊದಲೇ

ಥಿಯರ್ಸ್‌ಗೆ ಹೇಳಿ ಕಳಿಸಿದ. ತನ್ನ ಯಜಮಾನನ ಆಜ್ಞೆಯನ್ನು ನಿಷ್ಠೆಯಿಂದ ಪಾಲಿಸಿದ ಥಿಯರ್ಸ್, ಪೂಯೆ–ಕೆರ್ತ್ಯೆ ಬೆಂಬಲದೊಂದಿಗೆ ತನ್ನ ಬಂಟ ಜೂಲ್ಸ್ ಫಾವ್ರ್‌ನನ್ನು ಕೂಡಲೇ ಕಳಿಸಿದ. ರೊಯೆನ್‌ನ ಒಬ್ಬ ಪ್ರಮುಖ ಹತ್ತಿ–ಸ್ಪಿನ್ನರ್ ಆಗಿದ್ದ ಪೂಯೆ–ಕೆರ್ತ್ಯೆ, ಎರಡನೇ ಸಾಮ್ರಾಜ್ಯದ ಉತ್ಸಾಹಿ ಹಾಗೂ ಗುಲಾಮೀ ಬೆಂಬಲಿಗನಾಗಿದ್ದು ಇಂಗ್ಲೆಂಡ್ ಜೊತೆಗಿನ ವಾಣಿಜ್ಯ ಒಪ್ಪಂದ ತನ್ನ ವ್ಯವಹಾರಕ್ಕೆ ಪ್ರತಿಕೂಲವಾಗಿದ್ದರೂ, ಸಾಮ್ರಾಜ್ಯದಲ್ಲಿ ಯಾವುದೇ ತಪ್ಪನ್ನು ಕಂಡಿರಲಿಲ್ಲ. ಆದರೆ ಬೋರ್ದೋನಲ್ಲಿ ಥಿಯರ್ಸ್‌ನ ಆರ್ಥಿಕ ಸಚಿವನಾಗಿ ನೇಮಕಗೊಳ್ಳುತ್ತಲೇ ಆ 'ಅಪವಿತ್ರ' ಒಪ್ಪಂದವನ್ನು ಪೂಯೆ–ಕೆರ್ತ್ಯೆ ಖಂಡಿಸಿದ. ಅದನ್ನು ರದ್ದು ಪಡಿಸುವ ಸುಳಿವನ್ನು ನೀಡಿದ. ಅಲ್ಲದೆ ಬಿಸ್ಮಾರ್ಕ್‌ನನ್ನು ಲೆಕ್ಕಿಸದೆ ಅಲ್ಸೇಸ್ ವಿರುದ್ಧ ಹಳೆಯ ರಕ್ಷಣಾತ್ಮಕ ತೆರಿಗೆಗಳನ್ನು ತಕ್ಷಣದಿಂದಲೇ ಜಾರಿಗೊಳಿಸುವ ಪ್ರಯತ್ನವನ್ನೂ ಮಾಡಿದ. ಹಿಂದಿನ ಅಂತರರಾಷ್ಟ್ರೀಯ ಒಪ್ಪಂದಗಳು ತನ್ನ ಹಾದಿಯಲ್ಲಿ ಅಡ್ಡಿ ಬರುವುದಿಲ್ಲ ಎಂದು ಆತ ಹೇಳಿದ. ರುಯೆನ್‌ನಲ್ಲಿ ಕೂಲಿ ಕಡಿಮೆ ಮಾಡಲು ಪ್ರತಿ–ಕ್ರಾಂತಿ ಒಂದು ಸಾಧನ ಹಾಗೂ ಫ್ರಾನ್ಸ್‌ನಲ್ಲಿರುವ ತನ್ನ ಸಾಮಗ್ರಿಗಳ ಬೆಲೆ ಹೆಚ್ಚಳವಾಗಲು ಫ್ರೆಂಚ್ ಪ್ರಾಂತ್ಯಗಳ ಶರಣಾಗತಿ ಒಂದು ಸಾಧನ ಎಂದು ಪರಿಗಣಿಸಿದ್ದ ಈ ಮನುಷ್ಯನನ್ನು ಜೂಲ್ಸ್ ಫಾವ್ರ್‌ಯ ಅಂತಿಮ ಹಾಗೂ ಮುಕುಟಪ್ರಾಯ ದ್ರೋಹದಲ್ಲಿ ಸಹಾಯ ಮಾಡಲು ಮೊದಲೇ ಗೊತ್ತು ಮಾಡಲಾಗಿತ್ತೇ?

ಪೂರ್ಣಾಧಿಕಾರವಿದ್ದ ರಾಯಭಾರಿಗಳ ಈ ಅಪೂರ್ವ ಜೋಡಿ ಫ್ರಾಂಕ್‌ಫರ್ಟ್‌ಗೆ ಬರುತ್ತಲೇ ಬಿಸ್ಮಾರ್ಕ್ ಆತುರದಿಂದ ಅವರನ್ನು ಭೇಟಿ ಮಾಡಿದ. ಸಾಮ್ರಾಜ್ಯವನ್ನು ಪುನಃ ಪ್ರತಿಷ್ಠಾಪಿಸುವುದು ಅಥವಾ ತನ್ನದೇ ಶಾಂತಿ ಷರತ್ತುಗಳನ್ನು ಬೇಷರತ್ತಾಗಿ ಒಪ್ಪುವುದು– ಈ ಎರಡು ಉದ್ಧಟ ಪರ್ಯಾಯಗಳೊಂದಿಗೆ ಭೇಟಿಯಾದನು. ಯುದ್ಧ ಕಪ್ಪ (ಇಂಡೆಮ್ನಿಟಿ)ವನ್ನು ಪಾವತಿಸುವ ಅವಧಿಯ ಅಂತರವನ್ನು ಕಡಿತ ಮಾಡುವುದು ಮತ್ತು ಫ್ರಾನ್ಸ್‌ನಲ್ಲಿನ ಪರಿಸ್ಥಿತಿ ಬಗ್ಗೆ ಬಿಸ್ಮಾರ್ಕ್‌ಗೆ ಸಮಾಧಾನವಾಗುವವರೆಗೆ ಪ್ರಷ್ಯನ್ ಪಡೆಗಳು ಪ್ಯಾರಿಸ್ ಕೋಟೆಗಳ ಹಿಡಿತವನ್ನು ಮುಂದುವರಿಸಬೇಕು ಎನ್ನುವುದು ಆ ಷರತ್ತುಗಳಲ್ಲಿ ಸೇರಿದ್ದವು. ಈ ರೀತಿಯಾಗಿ ಫ್ರಾನ್ಸ್‌ನ ಆಂತರಿಕ ರಾಜಕೀಯದಲ್ಲಿ ಪ್ರಷ್ಯಾ ಸರ್ವೋನ್ನತ ಸಂಧಾನಕಾರನನ್ನಾಗಿ ಮಾಡಲಾಯಿತು! ಇದಕ್ಕೆ ಪ್ರತಿಫಲವಾಗಿ ಪ್ಯಾರಿಸ್‌ನ ನಾಶಕ್ಕೆ ಬಂಧಿತ ಬೊನಪಾರ್ಟೆ ಸೇನೆಯನ್ನು ಛೂಬಿಡಲು ಮತ್ತು ಅವರಿಗೆ ಸಾಮ್ರಾಟ ವಿಲಿಯಮ್ಸ್‌ನ ಪಡೆಗಳ ನೆರವನ್ನು ಒದಗಿಸಲು ಆತ ಮುಂದಾದ. ಪ್ಯಾರಿಸ್‌ನಲ್ಲಿ 'ಶಾಂತಿ ಸ್ಥಾಪಿಸಿದ' ಮೇಲೆ ಕಪ್ಪದ ಪ್ರಥಮ ಕಂತನ್ನು ನೀಡಬಹುದು ಎಂದು ಒಪ್ಪುವ ಮೂಲಕ ಆತ ತನ್ನ ಪ್ರಾಮಾಣಿಕತೆಯನ್ನು ಸಾಬೀತು ಪಡಿಸಿದ. ಈ ಗಾಳ ಹೇಗಿತ್ತೆಂದರೆ ಥಿಯರ್ಸ್ ಮತ್ತು ಆತನ ಪೂರ್ಣಾಧಿಕಾರದ ರಾಯಭಾರಿಗಳು ಅದನ್ನು ಸುಲಭವಾಗಿ ನುಂಗಿದರು. ಮೇ 10ರಂದು ಅವರು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು ಮತ್ತು ವರ್ಸೆಲ್ಸ್ ಅಸೆಂಬ್ಲಿ ಅದನ್ನು ಮೇ 18ರಂದು ಅಂಗೀಕರಿಸಿತು.

ಪ್ಯಾರಿಸ್ ಹತ್ಯಾಕಾಂಡದ ಸಿದ್ಧತೆಗಳಿಗೆ ಒಂದು ಪಿಳ್ಳೆ ನೆವವನ್ನು ಆತನ ರಿಪಬ್ಲಿಕನ್ ಸಾಧನಗಳು ನಿರೀಕ್ಷಿಸುತ್ತಿರುವಾಗ, ಶಾಂತಿ ಒಡಂಬಡಿಕೆ ಪೂರ್ಣಗೊಳ್ಳುವ ಹಾಗೂ ಬೊನಪಾರ್ಟೆವಾದಿ ಕೈದಿಗಳ ಆಗಮನದ ಮಧ್ಯಂತರದಲ್ಲಿ ತನ್ನ ಸಂಧಾನದ ಕಾಮಿಡಿಯನ್ನು ಪುನಾರಂಭಿಸುವುದು ಹೆಚ್ಚು ಅಗತ್ಯ ಎಂದು ಥಿಯರ್ಸ್ ಭಾವಿಸಿದ.

“ಬಂಡುಕೋರರು ಯಾವಾಗ ಶರಣಾಗತಿಗೆ ನಿರ್ಧಾರ ಮಾಡುತ್ತಾರೋ, ಆಗ ಜನರಲ್‌ಗಳಾದ ಕ್ಲಿಮೆಂಟ್ ಥಾಮಸ್ ಮತ್ತು ಲೆಕೊಮ್ಟ್ ಕೊಲೆಗಾರರನ್ನು ಹೊರತುಪಡಿಸಿ, ಉಳಿದ ಎಲ್ಲರಿಗೂ ಪ್ಯಾರಿಸ್ ಬಾಗಿಲುಗಳನ್ನು ಒಂದು ವಾರ ಕಾಲ ವಿಶಾಲವಾಗಿ ತೆರೆಯಬೇಕು” ಎಂದು ಮೇ 8ರಂದು ಭೇಟಿ ಮಾಡಿದ ಮಧ್ಯಮ ವರ್ಗದ ಸಂಧಾನಕಾರರ ನಿಯೋಗವೊಂದಕ್ಕೆ ಥಿಯರ್ಸ್ ಹೇಳಿದ.

ಕೆಲವು ದಿನಗಳ ನಂತರ, ಈ ಭರವಸೆಗಳ ಬಗ್ಗೆ ರೂರಲ್‌ಗಳು ಭಾವಾವೇಶದಿಂದ ಪ್ರಶ್ನಿಸಿದಾಗ ಯಾವುದೇ ವಿವರಣೆ ನೀಡಲು ಆತ ನಿರಾಕರಿಸಿದನಾದರೂ ಅವರಿಗೆ ಈ ಮಹತ್ವದ ಸುಳಿವನ್ನು ನೀಡಿದ. “ಸಹನೆಯಿಲ್ಲದ, ಅತಿ ಆತುರದ ಜನರು ನಿಮ್ಮಲ್ಲಿದ್ದಾರೆ. ಅವರು ಇನ್ನೂ ಎಂಟು ದಿನ ಕಾಯಬೇಕು. ಈ ಎಂಟು ದಿನಗಳ ಕೊನೆಯಲ್ಲಿ ಯಾವ ಅಪಾಯವೂ ಇರುವುದಿಲ್ಲ. ಕಾರ್ಯಭಾರವು ಅವರವರ ಧೈರ್ಯ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿರುತ್ತದೆ”. ತಾನು ಶೀಘ್ರವೇ ಪ್ಯಾರಿಸ್ ಪ್ರವೇಶಿಸುವುದಾಗಿ ಮ್ಯಾಕ್‌ಮೋಹನ್ ಭರವಸೆ ನೀಡಿದ ತಕ್ಷಣವೇ ‘ಕಾನೂನನ್ನು ಕೈಯಲ್ಲಿಟ್ಟುಕೊಂಡು ಪ್ಯಾರಿಸ್ ಪ್ರವೇಶಿಸುವುದಾಗಿ, ಸೈನಿಕರ ಪ್ರಾಣಗಳನ್ನು ಬಲಿ ನೀಡಿದ ಹಾಗೂ ಸಾರ್ವಜನಿಕ ಸ್ಮಾರಕಗಳನ್ನು ನಾಶ ಮಾಡಿದ ದರಿದ್ರರ ಪೂರ್ಣ ಪ್ರಾಯಶ್ಚಿತ್ತಕ್ಕೆ ಒತ್ತಾಯಿಸುತ್ತೇನೆ’ ಎಂದು ಅಸೆಂಬ್ಲಿಯಲ್ಲಿ ಘೋಷಿಸಿದ. “ನಾಶವಾಯಿತೆಂದು ಪ್ಯಾರಿಸ್ ಬಗ್ಗೆ ನಾನು ಕನಿಕರಿಸುವುದಿಲ್ಲ! ಮನಸ್ಸಿಗೆ ತೃಪ್ತಿಯಾಗುವವರೆಗೆ ಪ್ಯಾರಿಸ್ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ಬೊನಪಾರ್ಟೆವಾದಿ ಗುಂಪಿಗೆ ಸರಕಾರದ ಅನುಮತಿಯಿರುವುದಾಗಿ ಹೇಳುತ್ತೇನೆ” ಎಂದು ತನ್ನ ನಿರ್ಧಾರದ ಕ್ಷಣ ಸಮೀಪಿಸುತ್ತಿದ್ದಂತೆ ಆತ ಅಸೆಂಬ್ಲಿಗೆ ಹೇಳಿದ. ಕೊನೆಗೂ ದ್ರೋಹದ ಪರಿಣಾಮವಾಗಿ ಮೇ 21ರಂದು ಪ್ಯಾರಿಸ್ ಬಾಗಿಲುಗಳನ್ನು ಜನರಲ್ ದೂಯೇಗೆ ತೆರೆದಾಗ, ತನ್ನ ಸಂಧಾನ ಕಾಮಿಡಿಯ ‘ಗುರಿ’ ಏನು ಎಂಬುದನ್ನು ಥಿಯರ್ಸ್ ಮೇ 22ರಂದು ರೂರಲ್‌ಗಳಿಗೆ ಹೇಳಿದ. “ನಾವು ನಮ್ಮ ಗುರಿಯನ್ನು ತಲುಪುತ್ತಿದ್ದೇವೆ ಎಂದು ನಾನು ನಿಮಗೆ ಕೆಲವು ದಿನಗಳ ಹಿಂದೆ ಹೇಳಿದ್ದೆ. ಗುರಿಯನ್ನು ತಲುಪಿದ್ದೇವೆ ಎಂದು ಹೇಳಲು ಇಂದು ಬಂದಿದ್ದೇನೆ. ಕೊನೆಗೂ ಕಾನೂನು, ನ್ಯಾಯ ಮತ್ತು ನಾಗರಿಕತೆಗೆ ಜಯ ಸಿಕ್ಕಿದೆ” ಎಂದು ಆತ ಹೇಳಿದ.

ಹೌದು. ಬಂಡವಾಳಶಾಹಿ ವ್ಯವಸ್ಥೆಯ ಗುಲಾಮರು ಮತ್ತು ಕತ್ತೆಚಾಕರಿ ಮಾಡುವವರು ತಮ್ಮ ಯಜಮಾನರ ವಿರುದ್ಧ ಬಂಡೆದ್ದಾಗಲೆಲ್ಲ ಬಂಡವಾಳಶಾಹಿ ವ್ಯವಸ್ಥೆಯ ನಾಗರಿಕತೆ ಮತ್ತು ನ್ಯಾಯ ಪ್ರಖರವಾಗಿ ಹೊರಬರುತ್ತದೆ. ಆಗ ಈ ನಾಗರಿಕತೆ ಮತ್ತು ನ್ಯಾಯ ಯಾವುದೇ ಮುಖವಾಡವಿಲ್ಲದ ಬರ್ಬರತೆ ಹಾಗೂ ಕಾನೂನುಬಾಹಿರ ಪ್ರತೀಕಾರವಾಗಿ ಧುತ್ತೆಂದು ಎದ್ದು ನಿಲ್ಲುತ್ತದೆ. ಶೋಷಕ ಮತ್ತು ಉತ್ಪಾದಕರ ನಡುವಿನ ವರ್ಗ ಹೋರಾಟದಲ್ಲಿ ಪ್ರತಿಯೊಂದು ಹೊಸ ಬಿಕ್ಕಟ್ಟು ಇದನ್ನು ಇನ್ನೂ ಹೆಚ್ಚು ಪ್ರಖರವಾಗಿ ಹೊರ ತರುತ್ತದೆ. ಬಂಡವಾಳಶಾಹಿಯ 1848ರ ಜೂನ್ ದಬ್ಬಾಳಿಕೆಗಳು ಕೂಡ 1871ರ ಕುಖ್ಯಾತ ದೌರ್ಜನ್ಯಗಳ ಮುಂದೆ ಮಂಕಾಗುತ್ತವೆ. ವರ್ಸೆಲ್ಸ್‌ನವರ ಪ್ರವೇಶದ ನಂತರ ಎಂಟು ದಿನಗಳ ಕಾಲ ಪ್ಯಾರಿಸ್‌ನ ಪುರುಷರು, ಮಹಿಳೆಯರು ಮತ್ತು ಮಕ್ಕಳು ನಡೆಸಿದ ಸ್ವಯಂ-ತ್ಯಾಗದ ವೀರತ್ವದಿಂದ ನಡೆಸಿದ ಹೋರಾಟ ಅವರ ಧ್ಯೇಯವನ್ನು ಸುಸ್ಪಷ್ಟವಾಗಿ ತೋರಿಸುತ್ತದೆ. ಮಹಾನ್ ನಾಗರಿಕತೆಯ

ಬಾಡಿಗೆ ಬಂಟರಾಗಿ ಸೈನಿಕರು ಪೈಶಾಚಿಕ ಕೃತ್ಯಗಳನ್ನು ಎಸಗಿ ಆ ನಾಗರಿಕತೆಯ ಸಹಜ ಚೇತನವನ್ನು ಪ್ರತಿಬಿಂಬಿಸಿದರೆ, ಪ್ಯಾರಿಸ್ ಜನರು ನಡೆಸಿದ ಮಹೋನ್ನತ ಹೋರಾಟ ಅವರ ಮಹಾನ್ ಧ್ಯೇಯವನ್ನು ಬಿಂಬಿಸುತ್ತದೆ. ಆಹಾ... ತಾನು ಮಾಡಿದ ಯುದ್ಧದ ನಂತರ ಹೆಣಗಳ ರಾಶಿಯಿಂದ ಹೊರಬರುವುದು ಹೇಗೆಂಬ ದೊಡ್ಡ ಸಮಸ್ಯೆಯಿಂದ ಒದ್ದಾಡುವ ಎಂತಹ ವೈಭವೋಪೇತ ನಾಗರಿಕತೆ!

ಥಿಯರ್ಸ್‌ನ ನಡವಳಿಕೆ ಮತ್ತು ಆತನ ರಕ್ತಪಿಪಾಸುತನಕ್ಕೆ ಸಾದೃಶ್ಯ ಅರಿಯಲು ನಾವು ರೋಮ್‌ನ ಸುಲ್ಲಾ ಮತ್ತು ಎರಡು ತ್ರಿ–ಪ್ರಭುತ್ವ (ಅಧಿಕಾರತ್ರಯ–ಟ್ರೈಮ್‌ವಿರೇಟ್) ದ ಕಾಲಕ್ಕೆ ಹೋಗಬೇಕು. ಅದೇ ಮೈನಡುಗಿಸುವ ಸಾರಾಸಗಟು ಹತ್ಯಾಕಾಂಡ; ಹತ್ಯಾಕಾಂಡದಲ್ಲಿ ವಯಸ್ಸು ಹಾಗೂ ಲಿಂಗದ ಬಗ್ಗೆ ಅದೇ ಅಗೌರವ; ಕೈದಿಗಳನ್ನು ಹಿಂಸಿಸುವ ಅದೇ ವಿಧಾನ; ಅದೇ ರೀತಿಯ ಗಡಿಪಾರು– ಆದರೆ ಈ ಬಾರಿ ಇಡೀ ವರ್ಗದ ಗಡಿಪಾರು; ಅಡಗಿಕೊಂಡ ನಾಯಕರಲ್ಲಿ ಒಬ್ಬರೂ ತಪ್ಪಿಸಿಕೊಳ್ಳದಂತೆ ಬೇಟೆಯಾಡಲು ಅದೇ ಬರ್ಬರ ವಿಧಾನ; ರಾಜಕೀಯ ಮತ್ತು ಖಾಸಗಿ ವೈರಿಗಳ ಬಗ್ಗೆ ಅದೇ ಖಂಡನೆ; ಕಲಹಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲದ ಅಮಾಯಕ ಅಪರಿಚಿತರ ಹತ್ಯೆಯಲ್ಲೂ ಅದೇ ರೀತಿಯ ನಿರ್ಲಿಪ್ತತೆ. ಆದರೆ ಗಡಿಪಾರು ಮಾಡಿದವರನ್ನು ಗುಂಪುಗುಂಪಾಗಿ ಯಮಲೋಕಕ್ಕೆ ಕಳಿಸಲು ರೋಮನ್‌ರ ಬಳಿ ಯಂತ್ರ ಬಂದೂಕುಗಳಿರಲಿಲ್ಲ. ಅವರ "ಕೈಗಳಲ್ಲಿ ಕಾನೂನು ಇರಲಿಲ್ಲ" ಅಥವಾ ಅವರ ತುಟಿಗಳ ಮೇಲೆ "ನಾಗರಿಕತೆ"ಯ ಕೂಗು ಇರಲಿಲ್ಲ ಎನ್ನುವುದೇ ಅಲ್ಲಿದ್ದ ಒಂದೇ ಒಂದು ವ್ಯತ್ಯಾಸವಾಗಿತ್ತು.

ಈ ಎಲ್ಲಾ ಭಯಾನಕತೆಗಳ ನಂತರವೂ ಸ್ವತಃ ಬಂಡವಾಳಶಾಹಿಯ ಪತ್ರಿಕೆಗಳೇ ಬಣ್ಣಿಸಿದ ಬಂಡವಾಳಶಾಹಿ ನಾಗರಿಕತೆಯ ಇನ್ನೊಂದು ಮುಖವನ್ನೂ ನೋಡಿ!

"ಅನತಿ ದೂರದಲ್ಲಿ ಇನ್ನೂ ಕೇಳುತ್ತಿರುವ ಕೆಲವೇ ಗುಂಡೇಟಿನ ಸದ್ದು ಮತ್ತು ಪೇರ್‌ಲಶೇಸ್‌ ನ ಸಮಾಧಿ ಕಲ್ಲುಗಳ ನಡುವೆ ಯಾರದೇ ಶುಶ್ರೂಷೆಯಿಲ್ಲದೆ ನರಳುತ್ತಾ ಸಾಯುತ್ತಿರುವ ಗಾಯಾಳುಗಳು ಒಚಿದೆಡೆ; ಮತ್ತೊಂದೆಡೆ ಮದ್ಯಾರಾಧಕರು, ಬಿಲಿಯಾರ್ಡ್ ಮತ್ತು ಡೊಮಿನೋಸ್ ಆಟದಲ್ಲಿ ನಿರತರಾದವರಿಂದ ಕೆಫೆಗಳು ತುಂಬಿ ತುಳುಕುತ್ತಿರುವುದನ್ನು ನೋಡಲು ಅಸಹ್ಯವಾಗುತ್ತದೆ" ಎಂದು ಲಂಡನ್ ಟೋರಿ ಪತ್ರಿಕೆಯೊಂದರ ಪ್ಯಾರಿಸ್ ಬಾತ್ಮಿದಾರ ವರದಿ ಮಾಡಿದ. "ಸಮಾಧಿ ಗುಹೆಗಳ ಅಸ್ತವ್ಯಸ್ತ ಹಾದಿಯಲ್ಲಿ 6000 ಬಂಡುಕೋರರು ಹತಾಶೆಯ ನೋವಿನಿಂದ ಅಲೆದಾಡುತ್ತಿದ್ದರು ಹಾಗೂ ಆತುರಾತುರವಾಗಿ ಬೀದಿಗೆ ಬಂದ ಅಸಂಖ್ಯಾತ ಹತಭಾಗ್ಯರನ್ನು ಯಂತ್ರ ಬಂದೂಕುಗಳಿಂದ ಕೊಲ್ಲಲಾಯಿತು. ಸಾಲು ಮರಗಳುಳ್ಳ ವಿಶಾಲ ಬೀದಿಗಳಲ್ಲಿ ವಿಷಯಲಂಪಟ ಮಹಿಳೆಯರ ಓಡಾಟ, ಮತ್ತು ರಾತ್ರಿಯ ನೀರವತೆಯನ್ನು ಕೆಡಿಸುವ ಸೊಗಸುಗಾರ ರೆಸ್ಟೋರಾಗಳ ಕ್ಯಾಬಿನ್‌ಗಳಿಂದ ಕೇಳಿ ಬರುವ ಸಂಭ್ರಮಾಚರಣೆಯ ಸದ್ದು ವಾಕರಿಕೆ ಬರಿಸುತ್ತದೆ" ಎಂದು ತನ್ನ ವರದಿಯಲ್ಲಿ ಹೇಳಿದ. ಕಮ್ಯೂನ್ ದಮನ ಮಾಡಿದ ವರ್ಸೆಲ್‌ವಾದಿ ಪತ್ರಿಕೆ 'ಜರ್ನಲ್ ಡೆ ಪ್ಯಾರಿಸ್'ನಲ್ಲಿ ಎಂ. ಎಡ್ವರ್ಡ್ ಹರ್ವೆ ಹೀಗೆ ಬರೆದ: "ಪ್ಯಾರಿಸ್‌ನ ಜನರು(!) ನಿನ್ನೆ ವ್ಯಕ್ತಡಿಸಿದ ತೃಪ್ತಿ ತೀರಾ (ಕ್ಷುಲ್ಲಕ)

ತಿಳಿಗೇಡಿತನದ್ದಾಗಿತ್ತು. ಅದು ಕಾಲ ಕಳೆದಂತೆ ಇನ್ನಷ್ಟು ಜಾಸ್ತಿಯಾಗುತ್ತದೆಂಬುದು ನಮ್ಮ ಭೀತಿಯಾಗಿದೆ. ಪ್ಯಾರಿಸ್ ಈಗ ಉತ್ಸವದ ಕಳೆಯಲ್ಲಿದ್ದು ಅದು ಸೂಕ್ತ ಸ್ಥಳದಲ್ಲಿಲ್ಲ, ಹಾಗೂ ನಮ್ಮನ್ನು ಪ್ಯಾರಿಸಿಯನ್ಸ್ ದ ಲದೆಕದಾನ್ಸ್ (ಅಧಃಪತನದ ಪ್ಯಾರಿಸಿಗರು) ಎಂದು ಕರೆಯದಿರಬೇಕಾದರೆ ಈ ರೀತಿಯ ವಿಚಾರ ಕೊನೆಗೊಳ್ಳಬೇಕು". ಅವರು ಆನಂತರ ಟ್ಯಾಸಿಟಸ್‌ರ ಈ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ: "ಆ ಭಯಾನಕ ಹೋರಾಟದ ಮರುದಿನ, ಇನ್ನೂ ಅದು ಪೂರ್ಣಗೊಳ್ಳುವ ಮುನ್ನವೇ, ಅಧಃಪತನಗೊಂಡ ಹಾಗೂ ಭ್ರಷ್ಟ ರೋಮ್, ತನ್ನ ದೇಹವನ್ನು ನಾಶಮಾಡುತ್ತಿರುವ ಹಾಗೂ ಆತ್ಮವನ್ನು ಭ್ರಷ್ಟಗೊಳಿಸುತ್ತಿರುವ ವೈಭೋಗದ ಕೆಸರಿನಲ್ಲಿ ಮತ್ತೆ ಹೊರಳಾಡಲು ಆರಂಭಿಸಿತು– ಅಲ್ಲಿ ಹೋರಾಟಗಳು ಮತ್ತು ಗಾಯಗಳು; ಇಲ್ಲಿ ಸ್ನಾನಗೃಹಗಳು ಹಾಗೂ ರೆಸ್ಟೋರಾಗಳು". ಎಂ. ಹರ್ವೆ ಪ್ರಸ್ತಾವಿಸಿದ "ಪ್ಯಾರಿಸ್‌ನ ಜನರು" ಎಂ. ಥಿಯರ್ಸ್‌ನ ಪ್ಯಾರಿಸ್‌ನ ಜನರು ಎಂದು ಹೇಳಲು ಮಾತ್ರ ಮರೆತಿದ್ದಾರೆ. ವರ್ಸೆಲ್ಸ್, ಸೇಂಟ್–ಡೆನಿಸ್, ರುಯೆಲ್ ಮತ್ತು ಸೇಂಟ್ ಜರ್ಮನ್‌ನಿಂದ ಮರಳುತ್ತಿರುವ ಫ್ರಾಂಕ್ಸ್ ಫ಼ಿಲರ್‌ಗಳು– ಅವರು "ಅಧಃಪತನದ" ಪ್ಯಾರಿಸಿಗರು.

ಒಂದು ಹೊಸ ಹಾಗೂ ಉತ್ತಮ ಸಮಾಜಕ್ಕಾಗಿ ಹೋರಾಡುವ ಬಲಿದಾನದ ವೀರಾಗ್ರಣಿ (ಚಾಂಪಿಯನ್)ಗಳ ಮೇಲಿನ ಎಲ್ಲಾ ರಕ್ತಸಿಕ್ತ ವಿಜಯಗಳಲ್ಲಿ, ಶ್ರಮದ ಗುಲಾಮತನವನ್ನು ಆಧರಿಸಿದ ಆ ದುರುಳ ನಾಗರಿಕತೆ ತನ್ನ ಬಲಿಪಶುಗಳ ನರಳಾಟವು, ಜಗತ್ತಿನಾದ್ಯಂತ ಪ್ರತಿಧ್ವನಿಸುವ ಅಪನಿಂದೆಯ ಅರಚಾಟದಲ್ಲಿ ಮುಳುಗಿ ಹೋಗುವಂತೆ ಮಾಡುತ್ತದೆ. ಶ್ರಮಜೀವಿಗಳ ಪ್ರಶಾಂತ ಪ್ಯಾರಿಸ್ ಕಮ್ಯೂನ್ ಇದ್ದಕ್ಕಿದ್ದಂತೆ 'ವ್ಯವಸ್ಥೆಯ' ಬೇಟೆನಾಯಿಗಳ ಗೊಂದಲದ ಗೂಡಾಗಿ ಬದಲಾಯಿತು. ಈ ಅಗಾಧ ಬದಲಾವಣೆ, ಎಲ್ಲಾ ದೇಶಗಳ ಬಂಡವಾಳಶಾಹಿಗಳಿಗೆ ಏನನ್ನು ಸಾಬೀತು ಮಾಡುತ್ತದೆ? ಯಾಕೆ, ಕಮ್ಯೂನ್ ನಾಗರಿಕತೆಯ ವಿರುದ್ಧ ಸಂಚು ಹೂಡಿತು!ಇತಿಹಾಸದಲ್ಲೇ ಅಭೂತಪೂರ್ವ ರೀತಿಯಲ್ಲಿ ಪ್ಯಾರಿಸ್‌ನ ಅಸಂಖ್ಯಾತ ಜನರು ಕಮ್ಯೂನ್‌ಗಾಗಿ ಸ್ವಯಂಪ್ರೇರಿತರಾಗಿ ಪ್ರಾಣಾರ್ಪಣೆ ಮಾಡಿದರು. ಅದು ಏನನ್ನು ಸಾಬೀತು ಮಾಡುತ್ತದೆ. ಯಾಕೆ, ಕಮ್ಯೂನ್, ಬೆರಳೆಣಿಕೆಯ ಕ್ರಿಮಿನಲ್‌ಗಳು ಅಧಿಕಾರ ಕಿತ್ತುಕೊಂಡದ್ದು ಆಗಿತ್ತು, ಸ್ವತಃ ಜನರದ್ದೇ ಸರಕಾರವೇ ಆಗಿರಲಿಲ್ಲ?! ಪ್ಯಾರಿಸ್‌ನ ಮಹಿಳೆಯರು ತಡೆಗೋಡೆಗಳ ಬಳಿ ಮತ್ತು ವಧಾಪೀಠದ ಮೇಲೆ ಸಂತೋಷದಿಂದ ಪ್ರಾಣ ತ್ಯಾಗ ಮಾಡಿದರು. ಇದು ಏನನ್ನು ಸಾಬೀತುಪಡಿಸುತ್ತದೆ? ಯಾಕೆ, ಕಮ್ಯೂನ್ ದೆವ್ವ ಅವರನ್ನು ಮೆಗರೇಸ್ ಮತ್ತು ಹೆಕೇಟ್‌ಗಳನ್ನಾಗಿ[19] ಪರಿವರ್ತಿಸಿತು! ನಿಸ್ಸಂಶಯವಾಗಿಯೂ ಪ್ರಭಾವಶಾಲಿಯಾದ ಎರಡು ತಿಂಗಳಲ್ಲಿ ಕಮ್ಯೂನ್‌ನ ಮಂದಗಾಮಿತನಕ್ಕೆ ತನ್ನ ರಕ್ಷಣೆಗಾಗಿ ಅದು ನಡೆಸಿದ ವೀರತ್ವ ಮಾತ್ರವೇ ಸಾಟಿಯಾಗಬಲ್ಲದು. ಇದು ಸಾಬೀತು ಪಡಿಸುವುದೇನನ್ನು? ಯಾಕೆ?, ಕಮ್ಯೂನ್ ಹಲವು ತಿಂಗಳ ಕಾಲ ಮಂದಗಾಮಿತ್ವ ಮತ್ತು ಮಾನವತೆಯ ಪರದೆಯಡಿ, ತನ್ನ ನೋವಿನ ಸಂದರ್ಭದಲ್ಲಿ ಹರಿಯಬಿಡಲಿಕ್ಕಾಗಿ ತನ್ನ ಪೈಶಾಚಿಕ ರಕ್ತಪಿಪಾಸುತನಗಳನ್ನು ಜಾಗ್ರತೆಯಾಗಿ ಅಡಗಿಸಿಟ್ಟಿತ್ತು!

19 ಮೆಗೆರಾ ಮತ್ತು ಹೆಕಟಾ: ಪ್ರಾಚೀನ ಗ್ರೀಕ್ ಪುರಾಣದಲ್ಲಿ ಬರುವ ಅನಿಷ್ಟ ಹಾಗೂ ಮಾಂತ್ರಿಕ ಕಲೆಯ ದೇವತೆ.

ದುಡಿಯುವ ಜನರ ಪ್ಯಾರಿಸ್, ತನ್ನ ವೀರೋಚಿತ ಸ್ವಯಂ–ಮಾರಣಹೋಮದ ಕಾರ್ಯಗಳ ಬೆಂಕಿಯಲ್ಲಿ ಕಟ್ಟಡಗಳು ಮತ್ತು ಸ್ಮಾರಕಗಳನ್ನು ಒಳಪಡಿಸಿತು. ಶ್ರಮಜೀವಿಗಳ ಜೀವಂತ ದೇಹ ಹರಿದು ಛಿದ್ರವಾಗುತ್ತಿದ್ದಾಗ, ಅದರ ಆಡಳಿತಗಾರರು ಯಾವುದೇ ಹಾನಿಯಾಗದ ತಮ್ಮ ನಿವಾಸಗಳಿಗೆ ಮರಳುವುದನ್ನು ನಿರೀಕ್ಷಿಸಿರುವಂತಿಲ್ಲ. 'ಕಿಚ್ಚಿಡಲಾಗುತ್ತಿದೆ!' ಎಂದು ಕೂಗಾಡಿದ ವರ್ಸೆಲ್ಸ್ ಸರಕಾರ, ಅದನ್ನು ಪಿಸುಮಾತಿನಲ್ಲಿ ತನ್ನೆಲ್ಲಾ ಏಜೆಂಟರಿಗೆ, ಅತ್ಯಂತ ಒಳನಾಡಿನ ಹಾಡಿಗಳಿಗೂ ತಲುಪಿಸುತ್ತಿದೆ. ಶತ್ರುಗಳನ್ನು ಎಲ್ಲೇ ಕಂಡರೂ ಕೊಳ್ಳಿಯಿಡುವ ವೃತ್ತಿಪರರು ಎಂಬ ಅನುಮಾನದ ಮೇಲೆ ಅವರನ್ನು ಬೇಟೆಯಾಡಲು ಅದು ಹೀಗೆ ಮಾಡಿತು. ಕದನದ ನಂತರ ನಡೆದ ಸಾರಾಸಗಟು ನರಮೇಧವನ್ನು ಸಂತೃಪ್ತಿಯಿಂದ ನೋಡಿದ ಜಗತ್ತಿನೆಲ್ಲೆಡೆಯ ಬಂಡವಾಳಶಾಹಿಗಳು, ಇಟ್ಟಿಗೆ ಮತ್ತು ಗಾರೆ ಅಪವಿತ್ರಗೊಂಡ ಭಯಾನಕತೆಯನ್ನು ಕಂಡು ನಡುಗಿ ಹೋದರು!

ಸರಕಾರ ತನ್ನ ನಿಷ್ಕಪಟಿ ಜನರಿಗೆ 'ಕೊಲ್ಲುವ, ಸುಡುವ ಮತ್ತು ನಾಶ ಮಾಡುವ' ಸರಕಾರಿ–ಲೈಸೆನ್ಸ್ ಗಳನ್ನು ಕೊಡುವುದೆಂದರೆ ಅದು ಕಿಚ್ಚಿಡುವುದಕ್ಕೆ ಅನುಮತಿಯೆಂದು ಅರ್ಥವೇ? ಬ್ರಿಟಿಷ್ ಪಡೆಗಳು ವಾಷಿಂಗ್ಟನ್‌ನಲ್ಲಿನ 'ಕ್ಯಾಪಿಟಲ್'ಗೆ ಹಾಗೂ ಚೈನಾ ಸಾಮ್ರಾಟನ ಬೇಸಿಗೆ ಅರಮನೆಗೆ ಸ್ವೇಚ್ಛಾಚಾರದಿಂದ ಕೊಳ್ಳಿಯಿಟ್ಟಾಗ ಅದು ಕಿಚ್ಚಿಡುವುದಲ್ಲವೇ? ಪ್ರಷ್ಯನ್ನರು ಮಿಲಿಟರಿ ಉದ್ದೇಶಕ್ಕೆ ಆಗಿರದೆ ಕೇವಲ ಪ್ರತೀಕಾರ ತೀರಿಸಿಕೊಳ್ಳುವ ಸಲುವಾಗಿ ಪೆಟ್ರೋಲ್ ಸುರಿದು ಶಾತೋದಾನ್‌ನಂಥ ಪಟ್ಟಣಗಳು ಮತ್ತು ಅಸಂಖ್ಯಾತ ಹಳ್ಳಿಗಳನ್ನು ಸುಟ್ಟುಹಾಕಿದ್ದು, ಅದು ಕಿಚ್ಚಿಡುವುದಲ್ಲವೇ? ಜನರಿದ್ದ ಮನೆಗಳಿಗೆ ಮಾತ್ರ ಬೆಂಕಿಯಿಡುವುದು ತನ್ನ ಬಯಕೆ ಎಂಬ ನೆಪದ ಮೇಲೆ ಆರು ವಾರದ ಅವಧಿಯಲ್ಲಿ ಪ್ಯಾರಿಸ್ ಮೇಲೆ ಥಿಯರ್ಸ್ ಬಾಂಬ್ ದಾಳಿ ನಡೆಸಿದ್ದು ಕಿಚ್ಚಿಡುವುದಲ್ಲವೇ? –ಯುದ್ಧದಲ್ಲಿ ಕೊಳ್ಳಿಯಿಡುವಿಕೆ ಬೇರಾವುದೇ ಕಾನೂನುಸಮ್ಮತ ಶಸ್ತ್ರದಂತೆ ಒಂದು ಅಸ್ತ್ರವೇ ಆಗಿದೆ. ಶತ್ರುಗಳ ವಶದಲ್ಲಿದ್ದ ಕಟ್ಟಡಗಳಿಗೆ ಬೆಂಕಿ ಹಾಕುವ ಸಲುವಾಗಿ ಅವುಗಳ ಮೇಲೆ ಶೆಲ್ ದಾಳಿ ನಡೆಸಲಾಯಿತು. ಆ ಕಟ್ಟಡಗಳ ರಕ್ಷಕರು ಅಲ್ಲಿಂದ ತೆರಳಬೇಕಾದ ಸಂದರ್ಭ ಬಂದರೆ, ಆಕ್ರಮಣಕಾರರು ಕಟ್ಟಡವನ್ನು ಬಳಸುವುದನ್ನು ತಡೆಯುವ ಉದ್ದೇಶದಿಂದ ಅವರೇ ಸ್ವತಃ ಆ ಕಟ್ಟಡಗಳಿಗೆ ಬೆಂಕಿ ಹಾಕುತ್ತಾರೆ. ಸುಟ್ಟು ಹೋಗುವುದು ಜಗತ್ತಿನ ಎಲ್ಲಾ ಸೇನೆಗಳ ಯುದ್ಧಗಳಲ್ಲಿ ಅವುಗಳ ಎದುರಿಗಿರುವ ಕಟ್ಟಡಗಳ ಅನಿವಾರ್ಯ ಕರ್ಮವಾಗಿದೆ. ಆದರೆ ಗುಲಾಮರೊಡೆಯರ ವಿರುದ್ಧ ಗುಲಾಮರು ನಡೆಸುವ ಸಮರದಲ್ಲಿ, ಇತಿಹಾಸದಲ್ಲಿ ಏಕೈಕ ಸಮರ್ಥನೀಯ ಯುದ್ಧದಲ್ಲಿ, ಈ ವಿಧಾನಕ್ಕೆ ಸ್ಥಾನವಿಲ್ಲ! ಕಮ್ಯೂನ್ ಬೆಂಕಿಯನ್ನು ಕಟ್ಟುನಿಟ್ಟಾಗಿ ಕೇವಲ ಒಂದು ಆತ್ಮರಕ್ಷಣಾ ಸಾಧನವನ್ನಾಗಿ ಬಳಸಿತು. ಹಾಸ್‌ಮ್ಯಾನ್ ಫಿರಂಗಿಗಳ ಬೆಂಕಿಗೆ ಮುಕ್ತಗೊಳಿಸಿದ ಉದ್ದ, ನೇರವಾದ ರಸ್ತೆಗಳಲ್ಲಿ ವರ್ಸೆಲ್ಸ್ ಪಡೆಗಳನ್ನು ತಡೆಯಲು ಒಂದು ಅಸ್ತ್ರವನ್ನಾಗಿ ಕಮ್ಯೂನ್ ಬೆಂಕಿಯನ್ನು ಬಳಸಿತು; ತಮ್ಮ ಹಿಮ್ಮೆಟ್ಟುವಿಕೆಯನ್ನು ರಕ್ಷಿಸಿಕೊಳ್ಳಲು ವರ್ಸೆಲ್ಸ್ ಹೇಗೆ ಅದನ್ನು ಬಳಸಿತೋ ಅದೇ ರೀತಿಯಲ್ಲಿ ಕಮ್ಯೂನ್ ಕೂಡ ಬೆಂಕಿಯನ್ನು ಬಳಸಿತು. ಕಮ್ಯೂನ್ ಬೆಂಕಿಯಿಂದ ಎಷ್ಟು ಕಟ್ಟಡಗಳು ನಾಶವಾದವೋ ಕನಿಷ್ಟ ಅಷ್ಟು ಕಟ್ಟಡಗಳು ಅವರು ಮುನ್ನಡೆಯಲ್ಲಿ ಬಳಸಿದ ಶೆಲ್‌ಗಳಿಂದ ನಾಶವಾದವು. ಯಾವ ಕಟ್ಟಡಗಳು ರಕ್ಷಣಾತ್ಮಕ ಕಾರಣಕ್ಕೆ

ಬೆಂಕಿಗೆ ಆಹುತಿಯಾದವೋ ಯಾವ ಕಟ್ಟಡಗಳು ಆಕ್ರಮಣದಿಂದ ನಾಶವಾದವೋ ಎನ್ನುವುದು ಈಗಲೂ ವಿವಾದದ ಸಂಗತಿಯಾಗಿದೆ. ವರ್ಸೆಲ್ಸ್ ಪಡೆಗಳು ಬಂಧಿಗಳನ್ನು ಸಾರಾಸಗಟಾಗಿ ಕೊಲ್ಲಲು ಆರಂಭಿಸಿದವೋ ಆಗ ಮಾತ್ರವೇ ರಕ್ಷಣಾತ್ಮಕವಾಗಿ ಬೆಂಕಿಯಿಡುವ ಕೃತ್ಯಕ್ಕೆ ಕಮ್ಯೂನ್ ಮುಂದಾಯಿತು. ಅಲ್ಲದೆ, ಪರಿಸ್ಥಿತಿ ವಿಕೋಪಕ್ಕೆ ಹೋದರೆ ಪ್ಯಾರಿಸ್‌ನ ಪಳೆಯುಳಿಕೆಗಳ ಮಧ್ಯೆ ತಾವೇ ಸ್ವತಃ ಹೂತುಹೋಗುತ್ತೇವೆ ಮತ್ತು ಪ್ಯಾರಿಸನ್ನು ಎರಡನೇ ಮಾಸ್ಕೋಮಾಡುತ್ತೇವೆ ಎಂದು ಕಮ್ಯೂನ್ ತುಂಬಾ ಮುಂಚೆಯೇ ಸಾರ್ವಜನಿಕರ ಗಮನಕ್ಕೆ ತಂದಿತ್ತು. ರಾಷ್ಟ್ರೀಯರಕ್ಷಣಾ ಸರಕಾರವೂ ಸಹ ಹೀಗೆ ಹೇಳಿತ್ತು, ಆದರೆ ತನ್ನ ದ್ರೋಹದ ಸೋಗನ್ನು ಮರೆಮಾಚಲಷ್ಟೆ ಅದು ಆ ರೀತಿ ಮಾಡಿತ್ತು. ಈ ಉದ್ದೇಶಕ್ಕಾಗಿ ಟ್ರೋಚು ಅವರಿಗೆ ಪೆಟ್ರೋಲ್ ದೊರಕಿಸಿದ. ಎದುರಾಳಿಗಳು ಪ್ಯಾರಿಸ್ ಜನರ ಜೀವಕ್ಕಿಂತ ಪ್ಯಾರಿಸ್‌ನ ತಮ್ಮ ಕಟ್ಟಡಗಳ ಬಗ್ಗೆಯೇ ಹೆಚ್ಚು ಕಾಳಜಿ ಹೊಂದಿದ್ದಾರೆ ಎಂಬುದು ಕಮ್ಯೂನ್‌ಗೆ ಗೊತ್ತಿತ್ತು. ಇನ್ನೊಂದೆಡೆ ಸೇಡಿನ ವಿಚಾರದಲ್ಲಿ ತನ್ನಷ್ಟು ನಿರ್ದಯಿ ಯಾರೂ ಇಲ್ಲ ಎಂದು ಥಿಯರ್ಸ್ ಅವರಿಗೆ ಎಚ್ಚರಿಕೆ ನೀಡಿದ್ದ. ಒಂದು ಕಡೆ ಆತ ತನ್ನ ಸೇನೆಯನ್ನು ಸನ್ನದ್ಧಗೊಳಿಸಿದ ಹಾಗೂ ಇನ್ನೊಂದೆಡೆ ಪ್ರಷ್ಯನ್ನರು ತಮ್ಮ ಬಲೆಯನ್ನು (ಟ್ರ್ಯಾಪ್) ಬಿಗಿಗೊಳಿಸಿದ ತಕ್ಷಣವೇ ಥಿಯರ್ಸ್ "ನಾನು ನಿರ್ದಯಿಯಾಗಿರುತ್ತೇನೆ! ಪ್ರಾಯಶ್ಚಿತ್ತ ಪೂರ್ಣಗೊಳ್ಳುತ್ತದೆ ಹಾಗೂ ನ್ಯಾಯ ಕಠಿಣವಾಗಿರುತ್ತದೆ" ಎಂದು ಘೋಷಿಸಿದ. ಪ್ಯಾರಿಸ್‌ನ ದುಡಿಯುವ ಜನರ ಕೃತ್ಯ ವಿಧ್ವಂಸಕತೆಯೆಂದಾದರೆ ಅದು ಸ್ವ-ರಕ್ಷಣೆಗಾಗಿ ಹತಾಶ ವಿಧ್ವಂಸಕತೆಯಾಗಿದೆ. ಅನ್ಯಧರ್ಮೀಯರ ಪ್ರಾಚೀನ ಅಮೂಲ್ಯ ಕಲಾಸಂಪತ್ತಿನ ಮೇಲೆ ಕ್ರೈಸ್ತರು ನಡೆಸಿದ ವಿಜಯೋತ್ಸವದ ವಿಧ್ವಂಸಕತೆಯಂತಲ್ಲ ಈ ದೊಂಬಿ. ಕ್ರೈಸ್ತರ ಆ ವಿಧ್ವಂಸಕ ಕೃತ್ಯವು ಉದಯವಾಗುತ್ತಿರುವ ಒಂದು ಹೊಸ ಸಮಾಜ ಮತ್ತು ಕುಸಿಯುತ್ತಿರುವ ಹಳೆಯ ಸಮಾಜದ ನಡುವಿನ ಸಮರದಲ್ಲಿ ಅನಿವಾರ್ಯ ಹಾಗೂ ಪೂರಕವಾದ ಕೃತ್ಯವಾಗಿತ್ತು. ಇತಿಹಾಸಕಾರ ಅದನ್ನೂ ಸಮರ್ಥಿಸಿಕೊಂಡಿದ್ದಾನೆ. ಐತಿಹಾಸಿಕ ಪ್ಯಾರಿಸನ್ನು ನೆಲಸಮಗೊಳಸಿ ಅದನ್ನು ಪ್ರವಾಸಿಗರ ತಾಣದ ಪ್ಯಾರಿಸ್ ಆಗಿ ಪರಿವರ್ತಿಸುವ ಹಾಸ್‌ಮ್ಯಾನ್‌ನ ವಿಧ್ವಂಸಕತೆಗಿಂತ ಕಡಿಮೆ ಪ್ರಮಾಣದ್ದಾಗಿತ್ತು!

ಆದರೆ ಕಮ್ಯೂನ್ 64 ಒತ್ತೆಯಾಳುಗಳನ್ನು- ಅದರಲ್ಲಿ ಪ್ಯಾರಿಸ್‌ನ ಆರ್ಚ್‌ಬಿಷಪ್ ಪ್ರಮುಖನಾಗಿದ್ದ- ಮರಣದಂಡನೆಗೆ ಗುರಿಪಡಿಸಿತು! ಬಂಡವಾಳಶಾಹಿ ಮತ್ತದರ ಸೇನೆಯು ಯುದ್ಧದ ನಿಯಮದಿಂದ ಬಹಳ ದೀರ್ಘ ಸಮಯದಿಂದ ಮಾಯವಾಗಿದ್ದ ಒಂದು ಪದ್ಧತಿಯನ್ನು 1848 ಜೂನ್‌ನಲ್ಲಿ ಮರುಸ್ಥಾಪಿಸಿತು- ತಮ್ಮ ಅಸಹಾಯಕ ಕೈದಿಗಳನ್ನು ಗುಂಡಿಟ್ಟು ಸಾಯಿಸುವುದೇ ಆ ಪದ್ಧತಿ. ಈ ಬರ್ಬರ ಪದ್ಧತಿಯನ್ನು ಆಗಿನಿಂದ ಯುರೋಪ್ ಮತ್ತು ಭಾರತದ ಎಲ್ಲಾ ಜನಪ್ರಿಯ ಸರಕಾರಗಳ ದಬ್ಬಾಳಿಕೆಗಾರರು ಚಾಚೂ ತಪ್ಪದೆ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ; ಆ ಮೂಲಕ 'ನಾಗರಿಕತೆಯ ನಿಜವಾದ ಪ್ರಗತಿ'ಯನ್ನು ಒಳಗೊಂಡಿರುವುದನ್ನು ಅವರು ಸಾಬೀತುಪಡಿಸುತ್ತಿದ್ದಾರೆ! ಇನ್ನೊಂದೆಡೆ, ಫ್ರಾನ್ಸ್‌ನಲ್ಲಿ ಪ್ರಷ್ಯನ್ನರು, ಮುಗ್ಧ ಜನರನ್ನು ಒತ್ತೆಯಾಳುಗಳನ್ನಾಗಿಸುವ ಪದ್ಧತಿಯನ್ನು ಮತ್ತೆ ಆರಂಭಿಸಿದ್ದಾರೆ. ಈ ರೀತಿಯಾಗಿ ಒತ್ತೆಯಾಳುಗಳಾಗಿ ಸೆರೆಯಾದ ಜನರು ತಮ್ಮ ಪ್ರಾಣಗಳಿಂದ ಇತರರು

ಮಾಡಿದ ಕೃತ್ಯಗಳಿಗೆ ಉತ್ತರವನ್ನೂ ಹೇಳಬೇಕಾಗಿತ್ತು. ನಾವೇ ನೋಡಿರುವಂತೆ, ಸಂಘರ್ಷದ ಆರಂಭದಿಂದಲೂ ಕಮ್ಯೂನಿನ ಬಂಧಿಗಳನ್ನು ಗುಂಡಿಟ್ಟು ಸಾಯಿಸುವ ಅಮಾನವೀಯ ಪದ್ಧತಿಯನ್ನು ಥಿಯರ್ಸ್ ಜಾರಿಗೊಳಿಸಿದ್ದಾನೆ. ಅವರ ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ, ಪ್ರಷ್ಯನ್ನರು ಅನುಸರಿಸುತ್ತಿದ್ದ ಒತ್ತೆಯಾಳು ಹಿಡಿದಿಡುವ ಪದ್ಧತಿಗೆ ಕಮ್ಯೂನ್ ಮೊರೆಹೋಯಿತು. ವರ್ಸೆಲ್ಸ್‌ನವರು ಕೈದಿಗಳನ್ನು ಗುಂಡಿಟ್ಟು ಸಾಯಿಸುವುದು ಮುಂದುವರಿದಂತೆ ಅದು ಪದೇ ಪದೇ ಒತ್ತೆಯಾಳುಗಳ ಪ್ರಾಣಕ್ಕೆ ಎರವಾಗುತ್ತಿತ್ತು. ಮ್ಯಾಕ್‌ಮೋಹನ್ ನ ಪ್ರೇಟರ್‌ಗಳು[20] (ರೋಮನ್ ಚಕ್ರಾಧಿಪತಿ ಅಥವಾ ಸೇನಾಧಿಪತಿಯ ಅಂಗರಕ್ಷಕರು) ನರಮೇಧದ ಮೂಲಕ ಪ್ಯಾರಿಸ್ ಪ್ರವೇಶದ ಸಂಭ್ರಮವನ್ನು ಆಚರಿಸಿದ್ದು, ಆ ನರಮೇಧದ ನಂತರ ಅವರನ್ನು ಎಷ್ಟು ಕಾಲವೆಂದು ಬಿಟ್ಟು ಬಿಡುವುದು? ಬಂಡವಾಳಶಾಹಿ ಸರಕಾರಗಳ ಭಯಾನಕತೆಯ ಮೇಲಿನ ಒತ್ತೆಯಾಳು ಮಾಡುವ ಕೊನೆಯ ತಡೆಯನ್ನು ಕೂಡ, ಕೇವಲ ಒಂದು ತೋರಿಕೆಯಾಗಿಡಲು ಸಾಧ್ಯವೇ? ಆರ್ಚ್‌ಬಿಷಪ್ ಡರ್ಬೋಯ್‌ನ ನಿಜವಾದ ಕೊಲೆಗಾರ ಥಿಯರ್ಸ್. ಆಗ ಥಿಯರ್ಸ್‌ನ ವಶದಲ್ಲಿದ್ದ ಒಬ್ಬ ಬ್ಲಾಂಕ್ವಿಯ ಬದಲಿಯಾಗಿ ಆರ್ಚ್‌ಬಿಷಪ್ ಮತ್ತು ಇನ್ನೂ ಅನೇಕ ಪಾದ್ರಿಗಳನ್ನು ಬಿಡಲು ಸಿದ್ಧ ಎಂದು ಕಮ್ಯೂನ್ ಹಲವು ಸಲ ಹೇಳಿತ್ತು. ಆದರೆ ಹಟಮಾರಿ ಥಿಯರ್ಸ್ ಆ ಪ್ರಸ್ತಾಪವನ್ನು ತಿರಸ್ಕರಿಸಿದ. ಬ್ಲಾಂಕ್ವಿಯನ್ನು ಬಿಟ್ಟರೆ ಕಮ್ಯೂನ್‌ಗೆ ಒಬ್ಬ ಚಿಂತಕ–ನಾಯಕನನ್ನು ಕೊಟ್ಟಂತಾಗುವುದೆಂದು ಆತನಿಗೆ ತಿಳಿದಿತ್ತು. ಆರ್ಚ್‌ಬಿಷಪ್ ಹೆಣದ ರೂಪದಲ್ಲಿ ತನ್ನ ಉದ್ದೇಶ ಸಾಧನೆಗೆ ನೆರವಾಗಬಹುದು ಎಂಬುದು ಆತನ ಲೆಕ್ಕಾಚಾರವಾಗಿತ್ತು. ಕಾವೆನ್ಯಾಕ್ ಪೂರ್ವೋದಾಹರಣೆಯಂತೆ ಆತ ವರ್ತಿಸಿದ. 1848 ಜೂನ್‌ನಲ್ಲಿ ಕಾವೆನ್ಯಾಕ್ ಮತ್ತು ಆತನ ಆರ್ಡರ್‌ನ ಸೈನಿಕರು ಆರ್ಚ್‌ಬಿಷಪ್ ಹತ್ಯೆಗೆ ಬಂಡುಕೋರರೇ ಕಾರಣರು ಎಂದು ಕೂಗಾಡಿ ಬಂಡುಕೋರರಿಗೆ ಕಳಂಕ ತಂದಿರಲಿಲ್ಲವೇ! ಆರ್ಡರ್‌ನ ಸೈನಿಕರೇ ಆರ್ಚ್‌ಬಿಷಪ್‌ರನ್ನು ಕೊಂದಿದ್ದು ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆಗ ಸ್ಥಳದಲ್ಲಿ ಹಾಜರಿದ್ದ ಆರ್ಚ್‌ಬಿಷಪ್‌ರ ವಿಕಾರ್–ಜನರಲ್ ಷಾಕ್ ಮೆ ಅದಾದ ತಕ್ಷಣವೇ ಆ ಬಗೆಗಿನ ಸಾಕ್ಷಿಯನ್ನು ಅವರಿಗೆ ಒದಗಿಸಿದ್ದ.

ತಮ್ಮ ಬಲಿಪಶುಗಳ ವಿರುದ್ಧ ಪ್ರಚೋದಿಸಿ ರಕ್ತದೋಕುಳಿ ಮಾಡಲು, ಈ ರೀತಿಯ ಅಪಪ್ರಚಾರ ನಡೆಸಲು ಪಾರ್ಟಿ ಆಫ್ ಆರ್ಡರ್ ಯಾವತ್ತೂ ಹೇಸುವುದಿಲ್ಲ, ಹಿಂಜರಿಯುವುದಿಲ್ಲ. ನಮ್ಮ ಕಾಲದ ಬಂಡವಾಳಗಾರ ತಾನು ಹಿಂದಿನ ಕಾಲದ ರಾಜಮಹಾರಾಜರ ಕಾನೂನುಬದ್ಧ ವಾರಸುದಾರ ಎಂದು ಪರಿಗಣಿಸುತ್ತಾನೆ, ತನ್ನ ಕೈಯಲ್ಲಿನ ಪ್ರತಿಯೊಂದು ಅಸ್ತ್ರ ಸಾಮಾನ್ಯ ಜನರ ವಿರುದ್ಧ ಬಳಸುವುದು ನ್ಯಾಯಸಮ್ಮತ; ಆದರೆ ಸಾಮಾನ್ಯ ಜನರ ಕೈಯಲ್ಲಿ ಯಾವುದೇ ರೀತಿಯ ಆಯುಧ ಇರುವುದೇ ಅಪರಾಧ ಎಂದು ಭಾವಿಸುತ್ತಾನೆ ಎಂಬುದನ್ನು ಇದು ಸಾಬೀತುಪಡಿಸುತ್ತದೆ.

---

20 ಪ್ರೆಟೋರಿಯನ್: ಪ್ರಾಚೀನ ರೋಮ್ ಜನರಲ್ ಅಥವಾ ಸಾಮ್ರಾಟನ ಅಂಗರಕ್ಷಕರು. ಜನರಲ್ ಅಥವಾ ಸಾಮ್ರಾಟನೇ ಇಟ್ಟುಕೊಳ್ಳುತ್ತಿದ್ದ ಈ ಅಂಗರಕ್ಷಕರಿಗೆ ವಿಶೇಷ ಸವಲತ್ತುಗಳು ಸಿಗುತ್ತಿದ್ದವು. ಇಲ್ಲಿ ಪ್ರೆಟೋರಿಯನ್ ಅಂದರೆ ವರ್ಸೆಲ್ಸ್ ಸೇನೆ.

ಅಂತರ್ಯುದ್ಧವನ್ನು ಬಳಸಿ ಕ್ರಾಂತಿಯನ್ನು ದಮನಿಸಲು ವಿದೇಶಿ ಆಕ್ರಮಣಕಾರರ ಸಹಾಯದೊಂದಿಗೆ ಆಳುವ ವರ್ಗಗಳು ನಡೆಸಿದ ಪಿತೂರಿ ಪ್ಯಾರಿಸ್ ಹತ್ಯಾಕಾಂಡದೊಂದಿಗೆ ಅಂತ್ಯವಾಯಿತು; ಸೆಪ್ಟೆಂಬರ್ ನಾಲ್ಕರಂದು ಸೇಂಟ್ ಕ್ಲೌಡ್ ಗೇಟ್ ಮೂಲಕ ಮ್ಯಾಕ್‌ಮೋಹನ್‌ನ ಪ್ರೇಟರ್‌ಗಳು ಬಂದಾಗಲೇ ಈ ಪಿತೂರಿ ಆರಂಭವಾಗಿತ್ತು ಎಂದು ನಾವು ಅಂದೇ ಗುರುತಿಸಿದ್ದೆವು. ಪ್ಯಾರಿಸ್‌ನ ವಿನಾಶ ಕಂಡು ಬಿಸ್ಮಾರ್ಕ್ ಹಿರಿಹಿರಿ ಹಿಗ್ಗಿದ. ಬಹುಶಃ ಇದು ಮಹಾನ್ ನಗರಗಳನ್ನು ನಾಶಮಾಡಬೇಕೆಂದು 1849ರಲ್ಲಿ ತಾನಿನ್ನೂ ಪ್ರಷ್ಯಾದ ಶಾಂತ್ರ್ ಅಂತ್ರೂವಬಲ್‌ನ ಒಬ್ಬ ಸಾಮಾನ್ಯ ರೂರಲ್ ಆಗಿದ್ದಾಗ ಕಂಡಿದ್ದ ಕನಸಿನ ಮೊದಲ ಕಂತು ಎಂದು ಆತ ಭಾವಿಸಿದ್ದ. ಆತ ಪ್ಯಾರಿಸ್ ಶ್ರಮಜೀವಿಗಳ ಕಳೇಬರಗಳನ್ನು ಕಂಡು ಸಂತೋಷದಿಂದ ಕುಣಿದಾಡಿದ. ಬಿಸ್ಮಾರ್ಕ್ ಪಾಲಿಗೆ ಇದು ಕ್ರಾಂತಿಯ ಅಂತ್ಯ ಮಾತ್ರವಲ್ಲ, ವಾಸ್ತವವಾಗಿ ಫ್ರಾನ್ಸ್ ಸರಕಾರದಿಂದಲೇ ಶಿರಚ್ಛೇದಗೊಂಡ ಫ್ರಾನ್ಸ್‌ನ ವಿನಾಶವೂ ಆಗಿತ್ತು. ಎಲ್ಲಾ ಯಶಸ್ವಿ ಮುತ್ಸದ್ದಿಗಳ ಟೊಳ್ಳುತನದ ಗುಣಕ್ಕೆ ಅನುಗುಣವಾಗಿ ಆತ ಈ ಅಗಾಧ ಐತಿಹಾಸಿಕ ಘಟನೆಯ ಮೇಲ್ಮೈಯನ್ನಷ್ಟೆ ಕಂಡಿದ್ದ. ವಿಜಯಿಯಾದ ಯಾವುದೇ ಆಕ್ರಮಣಕಾರರು, ತಾನು ಜಯ ಸಾಧಿಸಿದ ಸರಕಾರದ ಪರವಾಗಿ, ಪೊಲಿಸ್ ಮಾತ್ರವಲ್ಲದೆ ಬಾಡಿಗೆ ಹಂತಕರ ಕೆಲಸ ಮಾಡಿ ವಿಜಯ ಸಾಧಿಸಿದ, ಅಪರೂಪದ ದೃಶ್ಯವನ್ನು ಇತಿಹಾಸ ಯಾವತ್ತಾದರೂ ಪ್ರದರ್ಶಿಸಿದ್ದಿದೆಯೇ? ಪ್ರಷ್ಯಾ ಮತ್ತು ಪ್ಯಾರಿಸ್ ಕಮ್ಯೂನ್ ನಡುವೆ ಯುದ್ಧ ಇರಲೇ ಇಲ್ಲ. ಅದಕ್ಕೆ ಬದಲಾಗಿ, ಕಮ್ಯೂನ್ ಶಾಂತಿ ಷರತ್ತುಗಳನ್ನು ಒಪ್ಪಿತ್ತು ಹಾಗೂ ತಟಸ್ಥವಾಗಿರುವುದಾಗಿ ಪ್ರಷ್ಯಾ ಘೋಷಿಸಿತ್ತು. ಹಾಗಾಗಿ ಪ್ರಷ್ಯಾ ಆಕ್ರಮಣಕ್ಕೊಳಗಾದ ದೇಶವಾಗಿರಲಿಲ್ಲ. ಅದು ಒಬ್ಬ ಹಂತಕನ, ಅದರಲ್ಲೂ ಹೇಡಿ ಹಂತಕನ ಪಾತ್ರ ನಿರ್ವಹಿಸಿತ್ತು; ಯಾಕೆಂದರೆ ಅದರಲ್ಲಿ ಅಪಾಯ ಇರಲಿಲ್ಲ, ಒಬ್ಬ ಬಾಡಿಗೆ ಹಂತಕನ ಪಾತ್ರ ನಿರ್ವಹಿಸಿತು, ಯಾಕೆಂದರೆ ಪ್ಯಾರಿಸ್ ಪತನವಾದ ಮೇಲೆ ರಕ್ತ–ಮೌಲ್ಯವಾಗಿ (ಬ್ಲಡ್–ಮನಿ) 500 ಮಿಲಿಯ ಬಗ್ಗೆ ಮೊದಲೇ ನಿಶ್ಚಯವಾಗಿತ್ತು. ಈ ರೀತಿಯಾಗಿ 'ದೈವಸಂಕಲ್ಪ'ದಂತೆ, ಶ್ರದ್ಧಾವಂತ ಹಾಗೂ ನೈತಿಕ ಜರ್ಮನ್ ನಾಸ್ತಿಕ ಹಾಗೂ ವಿಷಯಲಂಪಟತೆಯ ಫ್ರಾನ್ಸ್ ಪ್ರಾಯಶ್ಚಿತ್ತ ಮಾಡಿಕೊಳ್ಳುವಂತೆ ಮಾಡಿದ, ಯುದ್ಧದ ನಿಜ ಗುಣ ಕೊನೆಗೂ ಬಯಲಾಗಿತ್ತು! ಹಳೆಯ ಜಗತ್ತಿನ ವಕೀಲರು ಅರ್ಥ ಮಾಡಿಕೊಂಡಂತೆ, ರಾಷ್ಟ್ರಗಳ ಕಾನೂನಿನ ಈ ಸಾಟಿಯಿಲ್ಲದ ಉಲ್ಲಂಘನೆಯು, ಘಾತುಕ ಪ್ರಷ್ಯನ್ ಸರಕಾರವು ಕಾನೂನುಬಾಹಿರ ರಾಷ್ಟ್ರ ಸೇಂಟ್ ಪೀಟರ್ಸ್‌ಬರ್ಗ್ ಸಚಿವ ಸಂಪುಟದ ಸಾಧನ ಮಾತ್ರವಾಗಿ ಉಳಿದಿದೆ ಎಂದು ಘೋಷಿಸುವಂತೆ ಯುರೋಪ್‌ನ 'ನಾಗರಿಕ' ಸರಕಾರಗಳನ್ನು ಎಚ್ಚರಿಸುವ ಬದಲು, ಪ್ಯಾರಿಸ್ ಸುತ್ತ ಹಾಕಿರುವ ದುಪ್ಪಟ್ಟು ಬೇಲಿಯನ್ನು ದಾಟಿ ತಪ್ಪಿಸಿಕೊಳ್ಳುವ ಕೆಲವು ಬಲಿಪಶುಗಳನ್ನು ವರ್ಸೆಲ್ಸ್‌ನಲ್ಲಿ ಗಲ್ಲಿಗೇರಿಸುವವನ ಕೈಗೆ ಒಪ್ಪಿಸಬೇಕೋ ಬೇಡವೋ ಎಂದು ಪರಿಶೀಲಿಸುವುದನ್ನು ಮಾತ್ರ ಪ್ರಚೋದಿಸಿದೆ!

ಆಧುನಿಕ ಯುಗದ ಅತಿ ಭೀಕರ ಯುದ್ಧ ಮುಗಿದ ನಂತರ, ವಿಜಯಿಚೂದವರು ಹಾಗೂ ಪರಾಭವಗೊಂಡವರು ಶ್ರಮಜೀವಿಗಳ ಹತ್ಯಾಕಾಂಡವನ್ನು ಸಹಯೋಗದಲ್ಲಿ ನಡೆಸಿದರು. ಸಾಟಿಯಿಲ್ಲದ ಈ ಘಟನೆಯು, ಬಿಸ್ಮಾರ್ಕ್ ಯೋಚಿಸುವಂತೆ, ಹೊಸ

ಸಮಾಜದ ವಿಪ್ಲವದ ಅಂತಿಮ ದಮನ ಅಲ್ಲ, ಆದರೆ ಬಂಡವಾಳಶಾಹಿ ಸಮಾಜ ಕಸದ ಬುಟ್ಟಿಗೆ ಉದುರಿ ಬೀಳುವ ವಿದ್ಯಮಾನವಾಗಿದೆ. ಹಳೆಯ ಸಮಾಜವುಇನ್ನೂ ಮಾಡಬಹುದಾದ ಅತ್ಯಂತ ಸಾಹಸಿ ಪ್ರಯತ್ನವೆಂದರೆ, ಅದು ರಾಷ್ಟ್ರೀಯ ಯುದ್ಧವಷ್ಟೆ. ವರ್ಗಗಳ ಹೋರಾಟವನ್ನು ಮುಂದೂಡಲು, ಹಾಗೂ ಆ ವರ್ಗ ಹೋರಾಟ ಅಂತರ್ಯುದ್ಧವಾಗಿ ಸ್ಫೋಟಗೊಳ್ಳುತ್ತಲೇ, ಅದನ್ನು ಪಕ್ಕಕ್ಕಿಡುವ ಉದ್ದೇಶ ಹೊಂದಿದ ಸರಕಾರದ ಒಂದು ಮೋಸವಷ್ಟೇ ಅದು ಎನ್ನುವುದು ಈಗ ರುಜುವಾತಾಗಿದೆ. ಒಂದು ರಾಷ್ಟ್ರೀಯ ಸಮವಸ್ತ್ರದ ಮರೆಯಲ್ಲಿ ಇನ್ನೂ ಹೆಚ್ಚು ಕಾಲ ಇರಲು ವರ್ಗ ಆಳ್ವಿಕೆಗೆ ಈಗ ಸಾಧ್ಯವಿಲ್ಲ. ಶ್ರಮಜೀವಿಗಳ ವಿರುದ್ಧ ರಾಷ್ಟ್ರೀಯ ಸರಕಾರಗಳು ಒಂದಾಗಿರುತ್ತವೆ!

1871ರ ವ್ಹಿಟ್–ಭಾನುವಾರದ ನಂತರ, ಫ್ರಾನ್ಸ್‌ನ ದುಡಿಯುವ ಜನರು ಹಾಗೂ ಅವರ ಉತ್ಪಾದನೆಯನ್ನು ಕಿತ್ತುಕೊಳ್ಳುವವರ ನಡುವೆ ಶಾಂತಿಯಾಗಲೀ ಕದನ ವಿರಾಮವಾಗಲೀ ಸಾಧ್ಯವಿಲ್ಲ. ಬಾಡಿಗೆ ಸೈನ್ಯವೊಂದರ ಕಠಿಣ ಕೈಗಳು ಸಾಮಾನ್ಯ ದಬ್ಬಾಳಿಕೆಯಲ್ಲಿ ಉಭಯ ವರ್ಗಗಳನ್ನು ಸ್ವಲ್ಪ ಕಾಲ ಕಟ್ಟಿ ಹಾಕಬಹುದು. ಆದರೆ ಈ ಯುದ್ಧವು ಹೆಚ್ಚೆಚ್ಚು ಬೆಳೆಯುತ್ತಿರುವ ಆಯಾಮಗಳಲ್ಲಿ ಪದೇ ಪದೇ ಸ್ಫೋಟಗೊಳ್ಳಲೇಬೇಕು; ಅಂತಿಮವಾಗಿ, ಬೆರಳೆಣಿಕೆಯ ಶೋಷಕರು ಅಥವಾ ಅಪಾರ ದುಡಿಯುವ ಬಹುಸಂಖ್ಯಾತರು– ಇವರಲ್ಲಿ ಯಾರು ಗೆಲವು ಸಾಧಿಸುತ್ತಾರೆ ಎನ್ನುವುದರಲ್ಲಿ ಅನುಮಾನವೇ ಬೇಡ. ಫ್ರೆಂಚ್ ಕಾರ್ಮಿಕ ವರ್ಗ ಮಾತ್ರವೇ ಆಧುನಿಕ ಶ್ರಮಜೀವಿಗಳ ಮುಂಚೂಣಿ ಕಾವಲುಗಾರನಾಗಿದೆ.

ಪ್ಯಾರಿಸ್ ಮುಂದೆ ವರ್ಗ ಆಡಳಿತದ ಅಂತರ್ರಾಷ್ಟ್ರೀಯ ಗುಣದ ಬಗ್ಗೆ ಯುರೋಪಿಯನ್ ಸರಕಾರಗಳು ಈ ರೀತಿಯಾಗಿ ಸಾಕ್ಷ್ಯ ಹೇಳುತ್ತಿರುವಾಗ ಅವರು, ಈ ಎಲ್ಲಾ ದುರಂತಗಳಿಗೆ ಸಂಘಟನೆಯೇ ಸ್ಫೂರ್ತಿ ಚಿಲುಮೆ ಎಂದು, ಬಂಡವಾಳದ ಜಾಗತಿಕ ಪಿತೂರಿ ವಿರುದ್ಧ ಶ್ರಮದ ಪ್ರತಿ–ಸಂಘಟನೆಯಾದ ಅಂತರರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯನ್ನು ಖಂಡಿಸುತ್ತಾರೆ. ಸಂಘವು ಶ್ರಮಿಕರ ವಿಮೋಚನೆಗಾರ ಎಂದು ನಟಿಸುತ್ತಿರುವ ಸರ್ವಾಧಿಕಾರಿ ಎಂದು ಥಿಯರ್ಸ್ ಜರಿದ. ಫ್ರೆಂಚ್ ಇಂಟರ್‌ನ್ಯಾಷನಲ್ ಮತ್ತು ವಿದೇಶಗಳಲ್ಲಿನ ಇಂಟರ್‌ನ್ಯಾಷನಲ್‌ಗಳ ನಡುವಿನ ಎಲ್ಲಾ ಸಂಪರ್ಕಗಳನ್ನು ಕಡಿದು ಹಾಕುವಂತೆ ಪಿಕಾರ್ಡ್ ಆದೇಶಿಸಿದ. 1835ರಲ್ಲಿ ಥಿಯರ್ಸ್‌ನ ಮಮ್ಮೀಕೃತ ಸಹಚರನಾಗಿದ್ದ ಕೌಂಟ್ ಫೋಬೇರ್, ಅಂತರ್ರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯು ಎಲ್ಲಾ ನಾಗರಿಕ ಸರಕಾರಗಳ ಅತಿ ದೊಡ್ಡ ಸಮಸ್ಯೆಯಾಗಿದ್ದು ಅದನ್ನು ಕಿತ್ತೊಗೆಯಬೇಕೆಂದು ಕರೆ ನೀಡಿದ. ರೂರಲ್‌ಗಳು ಅದರ ವಿರುದ್ಧ ಘರ್ಜಿಸಿದರು ಹಾಗೂ ಯುರೋಪ್‌ನ ಇಡೀ ಪತ್ರಿಕಾ ಮಾಧ್ಯಮ ಅದಕ್ಕೆ ದನಿ ಸೇರಿಸಿತು. "ನ್ಯಾಷನಲ್ ಗಾರ್ಡ್‌ನ ಕೇಂದ್ರ ಸಮಿತಿಯ ಸದಸ್ಯರು, ಹಾಗೂ ಕಮ್ಯೂನ್‌ನ ಹೆಚ್ಚಿನ ಸದಸ್ಯರು ಅರತರರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯ ಅತ್ಯಂತ ಕ್ರಿಯಾಶೀಲ, ಬುದ್ಧಿವಂತ ಮತ್ತು ಶಕ್ತಿಶಾಲಿ ಮಿದುಳುಗಳು;... ಅಪ್ಪಟ ಪ್ರಾಮಾಣಿಕರು, ಸತ್ಯಸಂಧರು, ಬುದ್ಧಿವಂತರು, ಸಮರ್ಪಣಾ ಮನೋಭಾವದವರು, ಶುದ್ಧ ಮತ್ತು ಒಳ್ಳೆಯತನಕ್ಕೆ ಸಂವಾದಿ ಪದದಂತೆ ಇರುವವರು" ಎಂಬುದಾಗಿ ನಮ್ಮ ಸಂಘಕ್ಕೆ ತೀರಾ ಹೊರಗಿನವರಾದ, ಗೌರವಾನ್ವಿತ ಫ್ರೆಂಚ್ ಲೇಖಕರೊಬ್ಬರು

ಹೇಳಿದ್ದಾರೆ. ಅಂತರರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆ ಒಂದು ರೀತಿಯಲ್ಲಿ ಪಿತೂರಿ ಹೂಡುತ್ತದೆ, ಬೇರೆ ಬೇರೆ ದೇಶಗಳಲ್ಲಿ ಸ್ಫೋಟಗಳನ್ನು ನಡೆಸುವಂತೆ ಅದರ ಕೇಂದ್ರ ಸಮಿತಿ ಕಾಲ ಕಾಲಕ್ಕೆ ಆದೇಶಗಳನ್ನು ನೀಡುತ್ತದೆ ಎಂದು ಆರೋಪಿಸುವುದು ಪೋಲೀಸ್–ಬುದ್ಧಿಯ ಬಂಡವಾಳಶಾಹಿ ತಲೆಗೆ ಸಹಜವಾಗಿಯೇ ಇದೆ. ವಾಸ್ತವವಾಗಿ, ನಾಗರಿಕ ಜಗತ್ತಿನ ವಿವಿಧ ದೇಶಗಳ ಅತ್ಯಂತ ಮುಂದುವರಿದ ದುಡಿಯುವ ಜನರ ನಡುವೆ ಅಂತರರಾಷ್ಟ್ರೀಯ ಬಾಂಧವ್ಯ ಬೆಸೆಯುವುದು ನಮ್ಮ ಸಂಘದ ಉದ್ದೇಶವಲ್ಲದೆ ಬೇರೇನೂ ಅಲ್ಲ. ವರ್ಗ ಹೋರಾಟವು ಎಲ್ಲೇ ಆಗಲಿ ಯಾವ ಸ್ವರೂಪದಲ್ಲೇ ಆಗಲಿ ಅಥವಾ ಎಂಥಾ ಪರಿಸ್ಥಿತಿಗಳಲ್ಲೇ ಆಗಲಿ ಯಾವುದೇ ಸ್ಥಿರತೆಯನ್ನು ಪಡೆದುಕೊಂಡಾಗ ನಮ್ಮ ಸಂಘಟನೆಯ ಸದಸ್ಯರು ಅದರ ಮುಂಚೂಣಿಯಲ್ಲಿ ನಿಲ್ಲುವುದು ಸ್ವಾಭಾವಿಕವೇ ಆಗಿದೆ. ಯಾವ ಮಣ್ಣಿನಿಂದ ಅದು ಬೆಳೆಯುತ್ತದೋ ಅದುವೇ ಆಧುನಿಕ ಸಮಾಜ. ಎಷ್ಟೇ ನರಮೇಧಗಳಿಂದ ಅದನ್ನು ನಿರ್ಮೂಲ ಮಾಡಲಾಗದು. ಅದನ್ನು ನಿರ್ಮೂಲ ಮಾಡಬೇಕೆಂದರೆ, ಸ್ವತಃ ತಮ್ಮ ಪರಾವಲಂಬಿ ಅಸ್ತಿತ್ವಕ್ಕೆ ಆಧಾರವಾದ ಶ್ರಮದ ಮೇಲಿನ ಬಂಡವಾಳದ ಸರ್ವಾಧಿಕಾರವನ್ನು ಸರಕಾರಗಳು ಮೂಲೋತ್ಪಾಟನೆ ಮಾಡಬೇಕಾಗುತ್ತದೆ.

ದುಡಿಯುವ ಜನರ ಪ್ಯಾರಿಸನ್ನು, ಅದರ ಕಮ್ಯೂನ್‌ನೊಂದಿಗೆ, ಒಂದು ನವ ಸಮಾಜದ ಮಹಾನ್ ಹರಿಕಾರ ಎಂದು ಸದಾ ಕಾಲ ಸ್ಮರಿಸಲಾಗುತ್ತದೆ. ಅದರ ಹುತಾತ್ಮರು ದುಡಿಯುವ ಜನರ ವಿಶಾಲ ಹೃದಯಗಳಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ಚಾರಿತ್ರಿಕ ಶಿಲುಬೆಗೆ ಜಡಿಯಲಾದ ಪ್ಯಾರಿಸ್ ಕಮ್ಯೂನಿನ ವಿನಾಶಕರಪರವಾಗಿ ಪಾದ್ರಿಗಳು ಎಷ್ಟೇ ಪ್ರಾರ್ಥನೆ ಮಾಡಿದರೂ, ಅವು ಅವರ ಪಾಪವನ್ನು ತೊಳೆಯಲಾರವು. (Its exterminators history has already nailed to that eternal pillory from which all the prayers of their priest will not avail to redeem them.)

ಲಂಡನ್, ಮೇ 30, 1871

## ಅನುಬಂಧಗಳು

### 1.

“ಅವೆನ್ಯೂ ಉರಿಚ್‌ನಲ್ಲಿ, ರಸ್ತೆಗೆ ಅಭಿಮುಖವಾದ ಪಾದಚಾರಿ ರಸ್ತೆಯಲ್ಲಿ ಐದು ಅಥವಾ ಆರು ಜನರುಳ್ಳ ಸಾಲುಗಳನ್ನಾಗಿ ಕೈದಿಗಳನ್ನು ನಿಲ್ಲಿಸಲಾಯಿತು. ಜನರಲ್ ಮಾರ್ಕ್ವಿದ ಗ್ಯಾಲಿಫೆ ಮತ್ತು ಆತನ ಸಿಬ್ಬಂದಿ ಕುದುರೆಗಳಿಂದ ಇಳಿದು ಸಾಲಿನ ಎಡಗಡೆಯಿಂದ ಪರಿಶೀಲನೆ ಆರಂಭಿಸಿದರು. ನಿಧಾನವಾಗಿ ನಡೆಯುತ್ತಾ ಕಣ್ಣು ಹಾಯಿಸುತ್ತಿದ್ದ ಜನರಲ್ ಅಲ್ಲೊಮ್ಮೆ ಇಲ್ಲೊಮ್ಮೆ ನಿಂತು ಯಾರದಾದರೂ ಭುಜದ ಮೇಲೆ ಮೊಟಕುತ್ತಿದ್ದ ಅಥವಾ ಹಿಂದಿನ ಸಾಲಿನಲ್ಲಿದ್ದ ಯಾರಾದರೊಬ್ಬರನ್ನು ಸನ್ನೆ ಮಾಡಿ ಕರೆಯುತ್ತಿದ್ದ. ಹೆಚ್ಚಿನ ಪ್ರಕರಣಗಳಲ್ಲಿ ಇನ್ನಷ್ಟು ಚರ್ಚೆ ಇಲ್ಲದೆ ಈ ರೀತಿಯಾಗಿ ಆಯ್ಕೆಯಾದ ವ್ಯಕ್ತಿಗಳನ್ನು ರಸ್ತೆಯ ಮಧ್ಯಕ್ಕೆ ಕರೆದೊಯ್ದು ಅಲ್ಲಿ ತಕ್ಷಣವೇ ಇನ್ನೊಂದು ಸಣ್ಣ ಪೂರಕ ಸಾಲುಗಳನ್ನು ರಚಿಸಲಾಗುತ್ತಿತ್ತು... ಅಲ್ಲಿ ಸಾಕಷ್ಟು ತಪ್ಪುಗಳಿದ್ದವು

ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಕುದುರೆ ಮೇಲಿನ ಒಬ್ಬ ಅಧಿಕಾರಿ, ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯನ್ನು ಜನರಲ್ ಗ್ಯಾಲಿಫೆ ಗೆ ತೋರಿಸಿ ಅವರು ನಿರ್ದಿಷ್ಟ ಅಪರಾಧ ಮಾಡಿದ್ದಾರೆ ಎಂದು ಹೇಳಿದ. ಸಾಲಿನಿಂದ ತಕ್ಷಣವೇ ಹೊರಗೆ ಓಡಿಬಂದ ಆ ಮಹಿಳೆ ಮೊಣ ಕಾಲೂರಿ ಕುಳಿತು ಕೈಗಳನ್ನು ಬೀಸುತ್ತಾ ತಾನು ಅಮಾಯಕಳು ಎಂದು ಪರಿಪರಿಯಾಗಿ ದೈನ್ಯದಿಂದ ವಿವರಿಸಿ ಪ್ರತಿಭಟಿಸಿದಳು. ಸ್ವಲ್ಪ ಹೊತ್ತು ಕದಲದೇ ನಿಂತ ಜನರಲ್ ಮುಖ ಗಂಟಿಕ್ಕಿಕೊಂಡು ಕುಹಕದಿಂದ ಹೀಗೆ ಹೇಳಿದ: "ಮೇಡಂ, ನಾನು ಪ್ಯಾರಿಸ್‌ನ ಎಲ್ಲಾ ರಂಗ ಮಂದಿರಗಳಿಗೆ ಹೋಗಿದ್ದೇನೆ. ನಿನ್ನ ನಟನೆ ನನ್ನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ..' ತನ್ನ ನೆರೆಮನೆಯವರಿಗಿಂತ ಎದ್ದುಕಾಣುವಂತೆ ಉದ್ದ, ಕೊಳಕು, ಶುದ್ಧ, ಪ್ರಾಯ ಅಥವಾ ಕುರೂಪವಾಗಿ ಕಾಣಿಸಿಕೊಳ್ಳುವುದು ಒಳ್ಳೆಯದಲ್ಲ. ತನ್ನ ಮೂಗು ಮುರಿದಿದೆ ಎನ್ನುವ ಕಾರಣಕ್ಕೆ ಈ ಜಗತ್ತಿನ ಅನಿಷ್ಟಗಳಿಂದ ಮುಕ್ತಿ ಪಡೆಯಬೇಕೆಂದು ಹೇಳಿದ ಮನುಷ್ಯನೊಬ್ಬ ವಿಶೇಷವಾಗಿ ನನ್ನ ಮನಸ್ಸಿಗೆ ಥಟ್ಟನೆ ಹೊಳೆದ... ಈ ರೀತಿಯಾಗಿ ಸುಮಾರು ನೂರು ಜನರನ್ನು ಆಯ್ಕೆ ಮಾಡಿ ಗುಂಡು ಹಾರಿಸುವ ತಂಡಕ್ಕೆ ಹೇಳಲಾಯಿತು. ಸಾಲಿನಲ್ಲಿದ್ದವರು ಅವರನ್ನು ಹಿಂದೆ ಬಿಟ್ಟು ಮುಂದೆ ಸಾಗತೊಡಗಿದರು. ಅದಾದ ಕೆಲವೇ ನಿಮಿಷಗಳಲ್ಲಿ ನಮ್ಮ ಹಿಂದಿನಿಂದ ಗುಂಡು ಹಾರಾಟದ ಸದ್ದು ಆರಂಭವಾಯಿತು, ಮತ್ತು ಅದು ಕಾಲು ಗಂಟೆಗೂ ಹೆಚ್ಚು ಕಾಲ ಮುಂದುವರಿಯಿತು. ಅದು ಆಯ್ದು ಶಿಕ್ಷೆಗೊಳಪಡಿಸಿದ ಹತಭಾಗ್ಯರನ್ನು ಮರಣದಂಡನೆಗೆ ಒಳಪಡಿಸಿದ್ದಾಗಿತ್ತು". ('ಡೇಲಿ ನ್ಯೂಸ್'[21]ನ ಪ್ಯಾರಿಸ್ ವರದಿಗಾರ).

"ದ್ವಿತೀಯ ಸಾಮ್ರಾಜ್ಯದ ಕಾಮಕೇಳಿಗಳಲ್ಲಿ ತನ್ನ ಕಾಮೋನ್ಮತ್ತತೆಯನ್ನು ನಾಚಿಕೆಯಿಲ್ಲದೆ ಪ್ರದರ್ಶಿಸಲು ಕುಖ್ಯಾತಿ ಪಡೆದ ಹೆಂಡತಿಯ ಉಪಪತಿಯಾಗಿದ್ದ" ಈ ಗ್ಯಾಲಿಫೆ ಯುದ್ಧದ ಸಮಯದಲ್ಲಿ ಫ್ರೆಂಚ್ 'ಆನ್‌ಸೈನ್ ಪಿಸ್ತೂಲ್' ಎಂಬ ಹೆಸರು ಪಡೆದಿದ್ದ.

ಒಂದು ಶ್ರದ್ಧಾಪೂರ್ಣ ಪತ್ರಿಕೆಯಾಗಿದ್ದ ಹಾಗೂ ಯಾವುದೇ ಭಾವೋದ್ರೇಕದ ಸುದ್ದಿಗಳಿಗೆ ಎಂದೂ ಬಲಿಬೀಳದ 'ದಿ ತಾಂಪ್ಸ್'[22] ಕೂಡ ಅಸಮರ್ಪಕವಾಗಿ ಕೊಲ್ಲಲಾದ ಹಾಗೂ ಇನ್ನೂ ಪ್ರಾಣ ಇರುವಾಗಲೇ ಹೂತುಹಾಕಲಾದ ಜನರ ಭೀಭತ್ಸ ಕತೆಗಳನ್ನು ಪ್ರಕಟಿಸಿತು. ಸೇಂಟ್ ಜಾಕ್ಸ್ ಲಬೂಶ್ಯೇರ್ ಚೌಕದಲ್ಲಿ ಅಸಂಖ್ಯಾತ ಜನರನ್ನು ಹೂಳಲಾಯಿತು. ಅದರಲ್ಲೂ ಕೆಲವರನ್ನು ಮೇಲ್ಮೇಲಷ್ಟೆ ಹೂಳಲಾಯಿತು. ಹಗಲು ಹೊತ್ತಿನಲ್ಲಿ ಜನನಿಬಿಡ ರಸ್ತೆಗಳ ಕಲರವದಲ್ಲಿ ಬೇರೆ ಯಾವುದೇ ಸದ್ದು ಗಮನಕ್ಕೆ ಬರುತ್ತಿರಲಿಲ್ಲ. ಆದರೆ ಕತ್ತಲ ನೀರವ ಮೌನದಲ್ಲಿ ನೆರೆಹೊರೆಯ ನಿವಾಸಿಗಳು ದೂರದಿಂದ ಕೇಳಿಸುವ ನರಳಾಟದ ಸದ್ದಿನಿಂದ ಎಚ್ಚರಗೊಂಡರು. ಬೆಳಿಗ್ಗೆ ಜನರನ್ನು ಹೂತ ಗುಂಡಿಗಳ ಮಣ್ಣಿನಿಂದ ಒಂದು ಕೈ ಹೊರಚಾಚಿದ್ದನ್ನು ಅವರು ಕಂಡರು. ಅದರ ಪರಿಣಾಮವಾಗಿ, ಶವಗಳನ್ನು ಹೊರತೆಗೆಯುವಂತೆ ಆದೇಶಿಸಲಾಯಿತು...

21 'ಡೇಲಿ ನ್ಯೂಸ್': ಇಂಗ್ಲಿಷ್ ಲಿಬರಲ್ (ಉದಾರವಾದಿ) ದೈನಿಕ. ಕೈಗಾರಿಕಾ ಬಂಡವಾಳಶಾಹಿಗಳ ಮುಖವಾಣಿ. 1840ರಿಂದ 1930ರ ವರೆಗೆ ಲಂಡನ್‌ನಲ್ಲಿ ಪ್ರಕಟಗೊಂಡಿತು.

22 'ಲೆ ಟೆಂಪ್ಸ್': ಪ್ರಭಾವಶಾಲಿ ಫ್ರೆಂಚ್ ಲಿಬರಲ್ ದೈನಿಕ. 1861ರಿಂದ 1943ರ ವರೆಗೆ ಪ್ಯಾರಿಸ್‌ನಿಂದ ಪ್ರಕಟವಾಯಿತು.

ಗಾಯಗೊಂಡ ಅನೇಕರನ್ನು ಜೀವಂತವಾಗಿ ಹೂತಿದ್ದರು ಎನ್ನುವುದರಲ್ಲಿ ನನಗೆ ಎಳ್ಳಷ್ಟೂ ಅನುಮಾನವಿಲ್ಲ. ಒಂದು ಪ್ರಕರಣದ ಬಗ್ಗೆ ನಾನು ಪ್ರಮಾಣ ಮಾಡಿ ಹೇಳಬಹುದಾಗಿದೆ. ಪ್ಲಾಸ್ ವಾಂದೋಂನ ಮನೆಯೊಂದರ ಅಂಗಳದಲ್ಲಿ ಬ್ರುನೆಲ್‌ರನ್ನು ಅವರ ಪತ್ನಿಯೊಂದಿಗೆ ಗುಂಡಿಟ್ಟ ಮೇಲೆ ದೇಹಗಳು 27ರ ಮಧ್ಯಾಹ್ನದ ವರೆಗೂ ಅಲ್ಲೇ ಬಿದ್ದಿದ್ದವು. ಶವಗಳನ್ನು ತೆಗೆಯಲೆಂದು ತಂಡದವರು ಬಂದಾಗ ಮಹಿಳೆ ಇನ್ನೂ ಜೀವಂತವಾಗಿದ್ದನ್ನು ನೋಡಿ ಆಕೆಯನ್ನು ಒಂದು ಅಂಬುಲೆನ್ಸ್‌ಗೆ ಕರೆದೊಯ್ದರು. ಆಕೆಗೆ ನಾಲ್ಕು ಗುಂಡುಗಳು ತಗಲಿದ್ದರೂ ಆಕೆ ಈಗ ಅಪಾಯದಿಂದ ಪಾರಾಗಿದ್ದಾರೆ". ('ಈವನಿಂಗ್ ಸ್ಟಾಂಡರ್ಡ್'[23]ನ ಪ್ಯಾರಿಸ್ ವರದಿಗಾರ, ಜೂನ್ 8).

2.

'ಲಂಡನ್ ಟೈಮ್ಸ್'ನ[24] ಜೂನ್ 13ರ ಸಂಚಿಕೆಯಲ್ಲಿ ಈ ಕೆಳಗಿನ ಪತ್ರ ಪ್ರಕಟವಾಯಿತು:

'ಟೈಮ್ಸ್' ಸಂಪಾದಕರಿಗೆ:

"ಮಾನ್ಯರೇ, ಜೂಲ್ಸ್ ಫಾವ್ರ್ ಯುರೋಪ್‌ನ ಎಲ್ಲಾ ಶಕ್ತಿಗಳಿಗೆ 1871 ಜೂನ್ 5ರಂದು ಒಂದು ಸುತ್ತೋಲೆ ಹೊರಡಿಸಿ ಅಂತರರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯನ್ನು ಬೇಟೆಯಾಡುವಂತೆ ಕರೆ ನೀಡಿದ. ಆ ದಸ್ತಾವೇಜಿನ ಲಕ್ಷಣವನ್ನು ತಿಳಿಸಲು ಕೆಲವೇ ಮಾತುಗಳು ಸಾಕು.

"ಇಂಟರ್‌ನ್ಯಾಷನಲ್‌ಅನ್ನು '1864 ಸೆಪ್ಟೆಂಬರ್ 28ರಂದು ಲಂಡನ್‌ನ ಲಾಂಗ್ ಏಕ್ರ್‌ನ ಸೇಂಟ್ ಮಾರ್ಟಿನ್ ಹಾಲ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ' ಸ್ಥಾಪಿಸಲಾಯಿತು ಎನ್ನುವುದನ್ನು ನಮ್ಮ ನಿಯಮಗಳ ಪೀಠಿಕೆಯಲ್ಲೇ ಹೇಳಲಾಗಿದೆ. ಆದರೆ ಜೂಲ್ಸ್ ಫಾವ್ರ್ ತನ್ನದೇ ಆದ ಉದ್ದೇಶಕ್ಕಾಗಿ ಅದರ ಸ್ಥಾಪನೆಯನ್ನು 1862ರಷ್ಟು ಹಿಂದಕ್ಕೆ ಕೊಂಡೊಯ್ದಿದ್ದಾನೆ.

"ನಮ್ಮ ಸಿದ್ಧಾಂತಗಳನ್ನು ವಿವರಿಸಲಿಕ್ಕಾಗಿ ಆತ 'ಇಂಟರ್‌ನ್ಯಾಷನಲ್'ನ 1869ರ ಮಾರ್ಚ್ 25ರ ಹಾಳೆಯ ಉಲ್ಲೇಖವನ್ನು ಉದ್ದರಿಸುತ್ತಾರೆ'. ಹಾಗಾದರೆ ಆತ ಪ್ರಸ್ತಾವಿಸಿದ ಆ ಉಲ್ಲೇಖವೇನು? ಇಂಟರ್‌ನ್ಯಾಷನಲ್‌ನದ್ದಲ್ಲದ ಸಂಘವೊಂದರ ಹಾಳೆಯದು. ತಾನು ಒಬ್ಬ ಯುವ ವಕೀಲನಾಗಿದ್ದಾಗಲೇ ಆತ 'ನ್ಯಾಷನಲ್' ವೃತ್ತಪತ್ರಿಕೆಯ ಪರವಾಗಿ ವಾದಿಸುವ ಸಂದರ್ಭದಲ್ಲಿ ಈ ರೀತಿಯ ಕುಟಿಲತನಗಳನ್ನು ನಡೆಸಿದ್ದ. ಆ ಪತ್ರಿಕೆ ವಿರುದ್ಧ ಕ್ಯಾಬೆಟ್ ಮಾನಹಾನಿ ಪ್ರಕರಣ ಹೂಡಿದ್ದ. ತನ್ನದೇ ವಿವರಣೆಗಳನ್ನು ಮಧ್ಯೆ ಸೇರಿಸಿ ಹೇಳುವ ಸಂದರ್ಭದಲ್ಲಿ ಆತ ಕ್ಯಾಬೆಟ್‌ನ ಕರಪತ್ರದ ಆಯ್ದ ಭಾಗಗಳನ್ನು ಓದುತ್ತಿರುವಂತೆ ನಟಿಸಿದ– ಈ ತಂತ್ರವನ್ನು ನ್ಯಾಯಾಲಯ ಬಹಿರಂಗಪಡಿಸಿತು. ಒಂದು ವೇಳೆ ಕ್ಯಾಬೆಟ್ ತಾಳ್ಮೆ ವಹಿಸದಿದ್ದರೆ ಜೂಲ್ಸ್ ಫಾವ್ರ್‌ಯನ್ನು ಪ್ಯಾರಿಸ್

23 'ದಿ ಈವನಿಂಗ್ ಸ್ಟಾಂಡರ್ಡ್': ಲಂಡನ್‌ನಲ್ಲಿ 1857ರಿಂದ 1905ರ ವರೆಗೆ ಪ್ರಕಟವಾದ ಇಂಗ್ಲಿಷ್ ಕನ್ಸರ್ವೇಟಿವ್ ದಿನಪತ್ರಿಕೆ.

24 'ದಿ ಟೈಮ್ಸ್': 1788ರಲ್ಲಿ ಸ್ಥಾಪನೆಯಾದ ಪ್ರಭಾವಶಾಲಿ ಇಂಗ್ಲಿಷ್ ಪತ್ರಿಕೆ. 19ನೇ ಶತಮಾನದ ಎಪ್ಪತ್ತರ ದಶಕದಲ್ಲಿ ಉದಾರವಾದಿ ನಿಲವಿಗೆ ಬದ್ಧವಾಗಿತ್ತು.

ಬಾರ್‌ನಿಂದ ನ್ಯಾಯಾಲಯ ಹೊರ ಹಾಕುವ ಶಿಕ್ಷೆ ವಿಧಿಸುತ್ತಿತ್ತು. ಇಂಟರ್‌ನ್ಯಾಷನಲ್‌ಗೆ ಸಂಬಂಧಿಸಿದ ದಸ್ತಾವೇಜುಗಳು ಎಂದು ಆತ ಉಲ್ಲೇಖಿಸಿದ್ದರಲ್ಲಿ ಒಂದೇ ಒಂದು ಕೂಡ ಇಂಟರ್‌ನ್ಯಾಷನಲ್‌ದ್ದಾಗಿರಲಿಲ್ಲ. ಉದಾಹರಣೆಗೆ, ' ಕೂಟವು ತಾನು ನಾಸ್ತಿಕ ಎಂಬುದನ್ನು ಲಂಡನ್‌ನಲ್ಲಿ 1869ರಲ್ಲಿ ಸ್ಥಾಪನೆಯಾದ ಅದರ ಜನರಲ್ ಕೌನ್ಸಿಲ್ ಘೋಷಿಸುತ್ತದೆ' ಎಂದು ಆತ ಹೇಳಿದ. ಜನರಲ್ ಕೌನ್ಸಿಲ್ ಯಾವತ್ತೂ ಆ ರೀತಿಯ ದಾಖಲೆಯನ್ನು ಹೊರಡಿಸಿಲ್ಲ. ಅದಕ್ಕೆ ಬದಲಾಗಿ, ಜೂಲ್ಸ್ ಫಾವ್ರ್ ಉಲ್ಲೇಖಿಸಿರುವ 'ಅಲಯನ್ಸ್'– ಲಾ ಅಲಯನ್ಸ್ ದಲ ಡೆಮಾಕ್ರಟೀ ಸೋಷಲಿಸ್ಟ್ ಅಟ್ ಜಿನೇವಾ' ಇದರ ಮೂಲ ನಿಯಮಗಳನ್ನು ರದ್ದು ಮಾಡುವ ದಸ್ತಾವೇಜನ್ನು ಜನರಲ್ ಕೌನ್ಸಿಲ್ ಹೊರಡಿಸಿತ್ತು.

"ಸಾಮ್ರಾಜ್ಯದ ವಿರುದ್ಧವೂ ಇದೆ ಎಂದು ನಟಿಸುವ ತನ್ನ ಸುತ್ತೋಲೆಯುದ್ದಕ್ಕೂ ಜೂಲ್ಸ್ ಫಾವ್ರ್ ಸಾಮ್ರಾಜ್ಯದ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಪೊಲೀಸ್–ಸಂಶೋಧನೆಗಳನ್ನು ಪುನರುಚ್ಚರಿಸಿದ್ದಾರೆ. ಆ ಸಂಶೋಧನೆಗಳು ಸ್ವತಃ ಸಾಮ್ರಾಜ್ಯದ ನ್ಯಾಯಾಲಯಗಳಲ್ಲೇ ದಯನೀಯವಾಗಿ ಬಿದ್ದು ಹೋಗಿವೆ.

"ಹಿಂದಿನ ಯುದ್ಧದ ಬಗ್ಗೆ ಕಳೆದ ಜುಲೈ ಮತ್ತು ಸೆಪ್ಟೆಂಬರ್‌ನಲ್ಲಿ ಮಾಡಿದ ಎರಡು ಭಾಷಣಗಳಲ್ಲಿ ಇಂಟರ್‌ನ್ಯಾಷನಲ್‌ನ ಜನರಲ್ ಕೌನ್ಸಿಲ್, ಫ್ರಾನ್ಸ್ ಮೇಲೆ ದಂಡೆತ್ತುವ ಪ್ರಷ್ಯನ್ ಯೋಜನೆಗಳನ್ನು ಖಂಡಿಸಿತ್ತು. ಆನಂತರ, ಜೂಲ್ಸ್ ಫಾವ್ರ್‌ಯ ಆಪ್ತ ಕಾರ್ಯದರ್ಶಿ ರೈಟ್‌ಲಿಂಗರ್ ರಾಷ್ಟ್ರೀಯ ರಕ್ಷಣೆಯ ಸರಕಾರದ ಪರವಾಗಿ, ಬಿಸ್ಮಾರ್ಕ್ ವಿರುದ್ಧ ಮತಪ್ರದರ್ಶನ ನಡೆಸುವಂತೆ ಜನರಲ್ ಕೌನ್ಸಿಲ್‌ನ ಕೆಲವು ಸದಸ್ಯರಿಗೆ ವಿಫಲ ಮನವಿ ಮಾಡಿದ್ದ. ಗಣರಾಜ್ಯವನ್ನು ಪ್ರಸ್ತಾವಿಸದಂತೆಯೂ ಆತ ವಿಶೇಷವಾಗಿ ಕೋರಿದ್ದ. ಲಂಡನ್‌ಗೆ ಜೂಲ್ಸ್ ಫಾವ್ರ್‌ಯ ನಿರೀಕ್ಷಿತ ಆಗಮನದ ವೇಳೆ, ಮತಪ್ರದರ್ಶನಕ್ಕೆ ಸಿದ್ಧತೆಗಳನ್ನು ಮಾಡಲಾಯಿತು. ಜೂಲ್ಸ್ ಫಾವ್ರ್ ಮತ್ತು ಆತನ ಸಹಚರರ ಬಗ್ಗೆ ಎಚ್ಚರದಿಂದಿರಬೇಕೆಂದು ಜನರಲ್ ಕೌನ್ಸಿಲ್ ಸೆಪ್ಟೆಂಬರ್ 9ರ ಭಾಷಣದಲ್ಲಿ ಪ್ಯಾರಿಸ್ ದುಡಿಯುವ ಜನರಿಗೆ ಮುಂಚೆಯೇ ಸ್ಪಷ್ಟವಾಗಿ ಎಚ್ಚರಿಕೆ ನೀಡಿತ್ತು. ಆದಾಗ್ಯೂ ಸದುದ್ದೇಶವನ್ನು ಗಮನದಲ್ಲಿಟ್ಟುಕೊಂಡು ಪ್ರದರ್ಶನಕ್ಕೆ ತಯಾರಿ ಮಾಡಲಾಯಿತು.

"ಅದಕ್ಕೆ ಪ್ರತಿಯಾಗಿ, ಇಂಟರ್‌ನ್ಯಾಷನಲ್ ಯುರೋಪ್‌ನ ಎಲ್ಲಾ ಕ್ಯಾಬಿನೆಟ್‌ಗಳಿಗೆ ಜೂಲ್ಸ್ ಫಾವ್ರ್ ಬಗ್ಗೆ ಸುತ್ತೋಲೆ ಕಳಿಸಿ ದಿವಂಗತ ಎಂ. ಮಿಲಿಯರ್ ಪ್ಯಾರಿಸ್‌ನಲ್ಲಿ ಪ್ರಕಟಿಸಿದ ದಾಖಲೆಗಳನ್ನು ವಿಶೇಷವಾಗಿ ಅವುಗಳ ಗಮನಕ್ಕೆ ತಂದರೆ ಜೂಲ್ಸ್ ಫಾವ್ರ್ ಏನು ಹೇಳುತ್ತಾರೆ?

"ಮಾನ್ಯರೆ, ನಾನು ನಿಮ್ಮ ವಿಧೇಯ ಸೇವಕ",

ಜಾನ್ ಹೇಲ್ಸ್,<br>ಕಾರ್ಯದರ್ಶಿ, ಅಂತರ್‍ರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆ ಜನರಲ್<br>ಕೌನ್ಸಿಲ್,<br>"ಲಂಡನ್, 1871 ಜೂನ್ 12".

'ಅಂತರ್ರಾಷ್ಟ್ರೀಯ ಸಂಘಟನೆ ಮತ್ತದರ ಗುರಿಗಳು" ಲೇಖನದಲ್ಲಿ ಆ ಶ್ರದ್ಧಾವಂತ ಪತ್ರಿಕೆ 'ಲಂಡನ್ ಸ್ಪೆಕ್ಟೇಟರ್'[25] ಜೂನ್ 24ರ ಸಂಚಿಕೆಯಲ್ಲಿ ಅದೇ ರೀತಿಯ ತಂತ್ರಗಳ ಪೈಕಿ ಜೂಲ್ಸ್ ಫಾವ್ರ್ ಮಾಡಿದ್ದಕ್ಕಿಂತ ಹೆಚ್ಚಿನ ರೀತಿಯಲ್ಲಿ 'ಅಲಯನ್ಸ್'ನ ದಸ್ತಾವೇಜನ್ನು ಇಂಟರ್‌ನ್ಯಾಷನಲ್‌ನ ದಸ್ತಾವೇಜು ಎಂದು ಉಲ್ಲೇಖಗಳನ್ನು ಪೂರ್ಣವಾಗಿ ನಮೂದಿಸಿತ್ತು ಹಾಗೂ ನಿರಾಕರಣೆಯನ್ನು ಟೈಮ್ಸ್ ಪ್ರಕಟಿಸಿದ 11 ದಿನಗಳ ನಂತರ ಇದನ್ನು ಪ್ರಕಟಿಸಿತ್ತು. ಎಲ್ಲಾ ಕ್ರೈಸ್ತರ ಪೈಕಿ ಪ್ರೊಟೆಸ್ಟೆಂಟರು ತುಂಬಾ ಕೆಟ್ಟವರು ಎಂದು ಫ್ರೆಡರಿಕ್ ದ ಗ್ರೇಟ್ ಹೇಳುತ್ತಿದ್ದ ಬಗ್ಗೆ ನಮಗೇನೂ ಅಚ್ಚರಿಯೆನಿಸುವುದಿಲ್ಲ.

1871ರ ಎಪ್ರಿಲ್–ಮೇನಲ್ಲಿ ಮಾರ್ಕ್ಸ್ ಬರೆದು, ಅಂತರ್ರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯ ಜನರಲ್ ಕೌನ್ಸಿಲ್ 1871 ಮೇ 30ರಂದು ಅಂಗೀಕರಿಸಿದ ಬರಹ. ಮೂಲತಃ ಒಂದು ಪ್ರತ್ಯೇಕ ಇಂಗ್ಲಿಷ್ ಕರಪತ್ರವಾಗಿ ಲಂಡನ್‌ನಲ್ಲಿ ಪ್ರಕಟಿಸಲಾಯಿತು.

ಅದೇ ಸಮಯಕ್ಕೆ ಜರ್ಮನ್ ಮತ್ತು ಫ್ರೆಂಚ್ ಆವೃತ್ತಿಗಳು ಪ್ರಕಟವಾದವು.

ಜರ್ಮನ್ ಆವೃತ್ತಿಯನ್ನು ಏಂಗೆಲ್ಸ್ ಸಂಪಾದಿಸಿದ್ದು ಅವರ ಮುನ್ನುಡಿಯಿರುವ ಅದು 1891ರಲ್ಲಿ ಪ್ರತ್ಯೇಕ ಆವೃತ್ತಿಯಾಗಿ ಬರ್ಲಿನ್‌ನಲ್ಲಿ ಪ್ರಕಟವಾಯಿತು.

1871ರ ಇಂಗ್ಲಿಷ್ ಕರಪತ್ರಕ್ಕನುಗುಣವಾಗಿ ಮುದ್ರಿಸಲಾಗಿದೆ.

25 'ಸ್ಪೆಕ್ಟೇಟರ್':ಲಂಡನ್‌ನಲ್ಲಿ 1828ರಿಂದ ಪ್ರಕಟವಾದ ಒಂದು ಉದಾರವಾದಿ ವಾರಪತ್ರಿಕೆ.


Bangunlah kaum yang terhina, bangunlah kaum yang lapar!
Kehendak yang mulya dalam dunia, senantiasa tambah besar.
Lenjapkan adat dan paham tua, kita rakyat sadar-sadar.
Dunia sudah berganti rupa, untuk kemenangan kita.
है जंग हमारी आख़री, जिस पर है फ़ैसला.
गाओ इन्तर्नास्योनाल्!
उठो! के वक़्त आया!

# ಪ್ರಭುತ್ವ ಮತ್ತು ಕ್ರಾಂತಿ - ಅಧ್ಯಾಯ 3
# 1871ರ ಪ್ಯಾರಿಸ್ ಕಮ್ಯೂನ್‌ನ ಅನುಭವ
# ಮಾರ್ಕ್ಸ್‌ರವರ ವಿಶ್ಲೇಷಣೆ

**ವಿ.ಐ.ಲೆನಿನ್**

## 1. ಕಮ್ಯೂನಾರ್ಡರ ಪ್ರಯತ್ನವನ್ನುವೀರೋಚಿತಗೊಳಿಸಿದ್ದು ಯಾವುದು?

1870ರ ಶರತ್ಕಾಲದಲ್ಲಿ, ಕಮ್ಯೂನ್‌ಗೆ ಕೆಲವು ತಿಂಗಳುಗಳ ಮುನ್ನ ಮಾರ್ಕ್ಸ್ ಪ್ಯಾರಿಸ್ ಕಾರ್ಮಿಕರಿಗೆ ಸರಕಾರವನ್ನು ಕಿತ್ತೆಸೆಯುವ ಯಾವುದೇ ಯತ್ನ ಹತಾಶ ಹುಚ್ಚುತನವಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರೆಂಬುದು[1] ಸುವಿದಿತ. ಆದರೆ 1871ರ ಮಾರ್ಚ್ ತಿಂಗಳಲ್ಲಿ ಒಂದು ನಿರ್ಣಾಯಕ ಸಮರ ಕಾರ್ಮಿಕರ ಮೇಲೆ ಎರಗಿದಾಗ, ಮತ್ತು ಅವರು ಅದನ್ನು ಸ್ವೀಕರಿಸಿದಾಗ, ದಂಗೆಯೇಳುವುದು ಒಂದು ಸತ್ಯ ಸಂಗತಿಯಾದಾಗ, ಮಾರ್ಕ್ಸ್ ಶ್ರಮಜೀವಿ ವರ್ಗದ ಕ್ರಾಂತಿಯನ್ನು ಪ್ರತಿಕೂಲ ಲಕ್ಷಣಗಳಿದ್ದಾಗ್ಯೂ ಸಹ ಅತ್ಯಂತ ಹುರುಪಿನಿಂದ ಸ್ವಾಗತಿಸಿದರು. ಮಾರ್ಕ್ಸ್‌ವಾದದ ಕುಖ್ಯಾತ ರಶಿಯನ್ ತತ್ವಭ್ರಷ್ಟ ಪ್ಲೆಹಾನೊವ್ 1905ರ ನವಂಬರ್‌ನಲ್ಲಿ ಕಾರ್ಮಿಕರ ಹಾಗೂ ರೈತರ ಹೋರಾಟದ ಬಗೆಗೆ ಉತ್ತೇಜಕವಾಗಿ ಬರೆದು 1905ರ ಡಿಸೆಂಬರ್ ನಂತರ ಉದಾರವಾದೀ ಶೈಲಿಯಲ್ಲಿ“ಅವರು ಶಸ್ತ್ರ ಕೈಕೊಳ್ಳಬಾರದಿತ್ತು” ಎಂದು ಕೂಗಿದಂತೆ ಮಾರ್ಕ್ಸ್ ಅದೊಂದು “ಅಕಾಲಿಕ’ ಆಂದೋಲನ ಎಂದು ಖಂಡಿಸುವ ಒಣ ತಾತ್ತ್ವಿಕ ನಿಲುವಿಗೆ ಅಂಟಿಕೊಳ್ಳಲಿಲ್ಲ.

ಆದರೆ ಮಾರ್ಕ್ಸ್ “ಆಕಾಶಕ್ಕೇ ಲಗ್ಗೆ ಹಾಕಿದರು” ಎಂದು ತಾನೇ ವರ್ಣಿಸಿದ ಕಮ್ಯೂನಾರ್ಡರ ವೀರಾವೇಶದ ಬಗೆಗೆ ಉತ್ಸಾಹಿತರಾಗಿದ್ದರಷ್ಟೇ ಅಲ್ಲ. ಈ ಸಾಮೂಹಿಕ ಕ್ರಾಂತಿಕಾರಿ ಆಂದೋಲನ ತನ್ನ ಗುರಿಯನ್ನು ಸಾಧಿಸದೇ ಹೋದರೂ ಅವರು ಅದನ್ನು ಅಪಾರ ಪ್ರಾಮುಖ್ಯತೆಯ ಚಾರಿತ್ರಿಕ ಅನುಭವವೆಂದು, ವಿಶ್ವ ಶ್ರಮಜೀವಿ ವರ್ಗದ

---

1 “ಫ್ರಾಂಕೊ–ಪ್ರಷ್ಯನ್ ಯುದ್ಧಕ್ಕೆ ಸಂಬಂಧಿಸಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಜನರಲ್ ಕೌನ್ಸಿಲ್‌ನ ಬಿನ್ನಹ. ಯೂರೋಪ್ ಮತ್ತು ಅಮೆರಿಕದಲ್ಲಿನ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸದಸ್ಯರನ್ನು ಉದ್ದೇಶಿಸಿದ್ದು” ಎಂಬುದಕ್ಕೆ ಇಲ್ಲಿ ಉಲ್ಲೇಖ. ಇದನ್ನು ಮಾರ್ಕ್ಸ್ ಲಂಡನ್‌ನಲ್ಲಿ 1870ರ ಸೆಪ್ಟೆಂಬರ್ 6 ಹಾಗೂ 9ರ ನಡುವೆ ಬರೆದರು.

ಕ್ರಾಂತಿಯಲ್ಲಿನ ಒಂದು ಖಚಿತ ಮುನ್ನಡೆಯೆಂದು, ನೂರಾರು ಕಾರ್ಯಕ್ರಮಗಳು ಹಾಗೂ ತರ್ಕಗಳಿಗಿಂತ ಹೆಚ್ಚು ಮುಖ್ಯವಾದ ಒಂದು ವ್ಯವಹಾರಿಕ ಹೆಜ್ಜೆಯೆಂದು ಪರಿಗಣಿಸಿದರು.

ಮಾರ್ಕ್ಸ್ ಈ ಪ್ರಯೋಗವನ್ನು ವಿಶ್ಲೇಷಿಸಲು, ಅದರಿಂದ ಕಾರ್ಯತಂತ್ರದ ಪಾಠಗಳನ್ನು ಕಲಿಯಲು ಮತ್ತು ಅದರ ಬೆಳಕಿನಲ್ಲಿ ತಮ್ಮ ಸಿದ್ಧಾಂತವನ್ನು ಪುನಃ ಪರೀಕ್ಷಿಸಲು ಹೆಣಗಿದರು. ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಮಾಡಬೇಕಾಗಿದೆ ಎಂದು ಮಾರ್ಕ್ಸ್ ಯೋಚಿಸಿದ ಏಕೈಕ 'ತಿದ್ದುಪಾಟ'ನ್ನು ಅವರು ಮಾಡಿದ್ದು ಪ್ಯಾರಿಸ್ ಕಮ್ಯೂನಿನ ಕ್ರಾಂತಿಕಾರಿ ಅನುಭವದ ಆಧಾರದಲ್ಲಿ.

"ಕಮ್ಯುನಿಸ್ಟ್ ಪ್ರಣಾಳಿಕೆ"ಯ ಇಬ್ಬರು ಕರ್ತೃಗಳೂ ಸಹಿ ಹಾಕಿದ ಹೊಸ ಜರ್ಮನ್ ಆವೃತ್ತಿಯ ಕೊನೆಯ ಮುನ್ನುಡಿಯ ದಿನಾಂಕ ಜೂನ್ 24, 1872. ಈ ಮುನ್ನುಡಿಯಲ್ಲಿ ಕರ್ತೃಗಳಾದ ಕಾರ್ಲ್‌ಮಾರ್ಕ್ಸ್ ಹಾಗೂ ಫ್ರೆಡರಿಕ್ ಎಂಗೆಲ್ಸ್, "ಕಮ್ಯುನಿಸ್ಟ್ ಪ್ರಣಾಳಿಕೆ"ಯ ಕಾರ್ಯಕ್ರಮವು "ಕೆಲವು ವಿವರಗಳಲ್ಲಿ ಹಳತಾಗಿದೆ" ಎಂದು ಹೇಳುತ್ತಾರೆ. ಮುಂದುವರೆದು

ಅವರು ಹೀಗೆ ಹೇಳುತ್ತಾರೆ:

> *"....ಕಮ್ಯೂನ್ ಒಂದು ವಿಷಯವನ್ನು ವಿಶೇಷವಾಗಿ ಸಾಬೀತು ಪಡಿಸಿತು. ಅದೆಂದರೆ 'ಕಾರ್ಮಿಕ ವರ್ಗ ಸಿದ್ಧಗೊಳಿಸಿಟ್ಟ ಪ್ರಭುತ್ವ ಯಂತ್ರವನ್ನು ಸುಮ್ಮನೆ ತನ್ನ ಕೈಗೆ ತೆಗೆದುಕೊಂಡು ಅದನ್ನು ತನ್ನ ಉದ್ದೇಶಗಳಿಗೆ ಚಲಾಯಿಸಲುಸಾಧ್ಯವಿಲ್ಲ'...."*

ಈ ಮೇಲಿನ ವಾಕ್ಯದಲ್ಲಿ ಒಂಟಿ ಉದ್ಧರಣ ಚಿಹ್ನೆಯೊಳಗಿರುವ ಮಾತುಗಳನ್ನು ಕರ್ತೃಗಳು ಮಾರ್ಕ್ಸ್‌ರವರ "ಫ್ರಾನ್ಸ್‌ನಲ್ಲಿ ಅಂತರ್ಯುದ್ಧ" ಎಂಬ ಪುಸ್ತಕದಿಂದ ತೆಗೆದುಕೊಂಡಿದ್ದರು.

ಹೀಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಪ್ಯಾರಿಸ್ ಕಮ್ಯೂನ್‌ನ ಒಂದು ಪ್ರಧಾನ ಹಾಗೂ ಮೂಲಭೂತ ಪಾಠವನ್ನು ಎಷ್ಟು ಅಪಾರ ಪ್ರಾಮುಖ್ಯತೆಯದೆಂದು ಪರಿಗಣಿಸಿದರೆಂದರೆ, ಅವರು ಅದನ್ನು "ಕಮ್ಯುನಿಸ್ಟ್ ಪ್ರಣಾಳಿಕೆ"ಗೆ ಒಂದು ಪ್ರಮುಖ ತಿದ್ದುಪಾಟಾಗಿ ಸೇರಿಸಿದರು.

ಸಂದರ್ಭಸಾಧಕರು ತಮ್ಮ ಸ್ವಭಾವಕ್ಕನುಗುಣವಾಗಿ, ಈ ಪ್ರಮುಖ ತಿದ್ದುಪಾಟನ್ನೇವಿ ರೂಪಗೊಳಿಸಿರುವುದು ಮತ್ತು ಅದರ ಅರ್ಥ "ಕಮ್ಯುನಿಸ್ಟ್ ಪ್ರಣಾಳಿಕೆ"ಯ ಓದುಗರಲ್ಲಿ ನೂರರಲ್ಲಿ ತೊಂಬತ್ತೊಂಬತ್ತು ಮಂದಿಗೆ ಅಲ್ಲದಿದ್ದರೂ ಬಹುಶಃ ಹತ್ತರಲ್ಲಿ ಒಂಬತ್ತು ಮಂದಿಗೆ ತಿಳಿದಿಲ್ಲ. ಈ ವಿಕೃತಿಯ ಬಗೆಗೆ ಮುಂದೆ, ಇವುಗಳಿಗೇ ವಿಶೇಷವಾಗಿ ಮೀಸಲಾದ ಒಂದು ಅಧ್ಯಾಯದಲ್ಲಿ, ಹೆಚ್ಚು ಪೂರ್ಣವಾಗಿ ಪರಿಶೀಲಿಸೋಣ. ಇಲ್ಲಿ ಮೇಲೆ ಉದ್ಧರಿಸಿರುವ ಮಾರ್ಕ್ಸ್‌ರವರ ಸುಪ್ರಸಿದ್ಧ ಹೇಳಿಕೆಯನ್ನು ಪ್ರಸ್ತುತದಲ್ಲಿ ಎಷ್ಟು ಕೆಟ್ಟದಾಗಿ "ವ್ಯಾಖ್ಯಾನಿಸಲಾಗುತ್ತಿದೆ" ಎಂಬುದನ್ನು ಗಮನಿಸಿದರೆ ಸಾಕು. ಮಾರ್ಕ್ಸ್ ಇಲ್ಲಿ ಅಧಿಕಾರವನ್ನು ಕಿತ್ತುಕೊಳ್ಳುವುದರ ಬಗ್ಗೆ ಹೇಳುತ್ತಿಲ್ಲ, ತದ್ವಿರುದ್ಧವಾಗಿ ನಿಧಾನ

ಬೆಳವಣಿಗೆಯ ವಿಚಾರವನ್ನು ಒತ್ತಿ ಹೇಳುತ್ತಾರೆ ಎಂದು ಮುಂತಾಗಿ ಈ ವ್ಯಾಖ್ಯಾನ ಹೇಳುತ್ತದೆ.

ವಾಸ್ತವವಾಗಿ, ನಿಜಾಂಶ ಇದಕ್ಕೆ ತದ್ವಿರುದ್ಧವಾಗಿದೆ. ಕಾರ್ಮಿಕ ವರ್ಗ "ಸಿದ್ಧಗೊಳಿಸಿಟ್ಟ ಪ್ರಭುತ್ವ ಯಂತ್ರವನ್ನು" ಒಡೆಯಬೇಕು, ಕುಟ್ಟಿ ಪುಡಿ ಮಾಡಬೇಕು, ಅದನ್ನು ಕೇವಲ ತನ್ನ ಕೈಗೆ ತೆಗೆದುಕೊಳುವುದಕ್ಕಷ್ಟೇ ತನ್ನನ್ನು ಸೀಮಿತಗೊಳಿಸಿಕೊಳ್ಳಕೂಡದು, ಎಂಬುದೇ ಮಾರ್ಕ್ಸ್ ವಿಚಾರ..

1871ರ ಏಪ್ರಿಲ್ 12ರಂದು, ಕಮ್ಯೂನ್‌ನ ಸಮಯದಲ್ಲೇ ಮಾರ್ಕ್ಸ್ ಕೂಗೆಲ್‌ಮನ್‌ಗೆ ಬರೆದರು:

> *"ನೀವು ನನ್ನ 'ಏಯ್ಟೀಂತ್ ಬ್ರುಮೇರ್'ನ ಕೊನೆಯ ಅಧ್ಯಾಯವನ್ನು ನೋಡಿದಲ್ಲಿ, ಫ್ರೆಂಚ್ ಕ್ರಾಂತಿಯ ಮುಂದಿನ ಯತ್ನ ಇನ್ನೆಷ್ಟು ಮಾತ್ರವೂ ಹಿಂದಿನಂತೆ ಅಧಿಕಾರಶಾಹಿ–ಸೈನಿಕ ಯಂತ್ರವನ್ನು ಒಂದು ಕೈಯಿಂದ ಮತ್ತೊಂದಕ್ಕೆ ವರ್ಗಾಯಿಸುವದಕ್ಕಾಗಿ ಇರುವುದಿಲ್ಲ, ಬದಲಿಗೆ ಅದನ್ನು ಪುಡಿಗುಟ್ಟುವುದಕ್ಕೆ ಇರುತ್ತದೆ' ಮತ್ತು ಇದು ಯುರೋಪು ಖಂಡದಲ್ಲಿ ಜರುಗಲಿರುವ ಪ್ರತಿಯೊಂದು ನಿಜವಾದ ಜನತಾ ಕ್ರಾಂತಿಗೂ ಪೂರ್ವಭಾವಿ ಷರತ್ತಾಗಿದೆ ಎಂದು ನಾನು ಘೋಷಿಸಿರುವುದನ್ನು ನೀವು ಕಾಣುವಿರಿ. ಇದನ್ನೇ ಪ್ಯಾರಿಸ್ಸಿನಲ್ಲಿ ನಮ್ಮ ವೀರ ಪಾರ್ಟಿ ಸಂಗಾತಿಗಳು ಮಾಡಲು ಯತ್ನಿಸುತ್ತಿರುವುದು" ("Neue Zeit," ಸಂ.20, 1, 1901–1902, ಪು. 709.*
>
> *ಇಲ್ಲಿನ ಒತ್ತು ಮಾರ್ಕ್ಸ್‌ರವರದೇ. ಮೂಲದಲ್ಲಿ zerbrechen ಎಂಬ ಪದವನ್ನು ಬಳಸಲಾಗಿದೆ. ಮಾರ್ಕ್ಸ್ ಕೂಗೆಲ್‌ಮನ್‌ರಿಗೆ ಬರೆದ ಪತ್ರಗಳು ರಶಿಯನ್‌ನಲ್ಲಿ ಕಮ್ಮಿಯೆಂದರೆ ಎರಡು ಆವೃತ್ತಿಗಳಲ್ಲಿ ಪ್ರಕಟವಾಗಿವೆ. ಅವುಗಳಲ್ಲೊಂದನ್ನು ನಾನೇ ಸಂಪಾದಿಸಿ ಅದಕ್ಕೆ ಮುನ್ನುಡಿಯನ್ನೂ ಬರೆದಿದ್ದೇನೆ.)*

"ಅಧಿಕಾರಶಾಹಿ–ಸೈನಿಕ ಯಂತ್ರವನ್ನು ಪುಡಿಗುಟ್ಟುವುದಕ್ಕೆ" ಎಂಬ ಮಾತುಗಳು ಕ್ರಾಂತಿಯ ಸಮಯದಲ್ಲಿ ಪ್ರಭುತ್ವಕ್ಕೆ ಸಂಬಂಧಿಸಿ ಶ್ರಮಜೀವಿ ವರ್ಗದ ಕಾರ್ಯಭಾರದ ಬಗೆಗೆ ಮಾರ್ಕ್ಸ್‌ವಾದದ ಪ್ರಧಾನ ಪಾಠವನ್ನು ವ್ಯಕ್ತಪಡಿಸುತ್ತವೆ. ಈ ಬೋಧೆಯನ್ನು ಇಂದು ಚಾಲ್ತಿಯಲ್ಲಿರುವ ಮಾರ್ಕ್ಸ್‌ವಾದದ ಕೌತ್‌ಸ್ಕಿವಾದಿ "ವ್ಯಾಖ್ಯಾನವು" ಸಂಪೂರ್ಣವಾಗಿ ಉಪೇಕ್ಷಿಸಿದೆಯಷ್ಟೇ ಅಲ್ಲ ತೀವ್ರವಾಗಿ ವಿರೂಪಗೊಳಿಸಿರುವುದು ಈ ಪಾಠವನ್ನೇ!

ಇನ್ನು 'ದಿ ಎಯ್ಟೀಂತ್ ಬ್ರುಮೇರ್'ಗೆ ಮಾರ್ಕ್ಸ್‌ರ ಉಲ್ಲೇಖದ ಬಗೆಗೆ ಹೇಳುವುದಾದರೆ, ನಾವು ಅದರ ಸಂಬಂಧಪಟ್ಟ ಪರಿಚ್ಛೇದವನ್ನು ಮೇಲೆ ಪೂರ್ಣವಾಗಿ ಉದ್ಧರಿಸಿದ್ದೇವೆ.

ಮಾರ್ಕ್ಸ್‌ರ ಮೇಲೆ ಉದ್ಧರಿಸಿರುವ ತರ್ಕದಲ್ಲಿ ಎರಡು ಅಂಶಗಳನ್ನು ವಿಶೇಷವಾಗಿ ಗಮನಿಸುವುದು ಸ್ವಾರಸ್ಯಕರ. ಮೊದಲನೆಯದು, ಅವರು ತಮ್ಮ ತೀರ್ಮಾನವನ್ನು ಯೂರೋಪು ಖಂಡಕ್ಕಷ್ಟೇ ಮಿತಿಗೊಳಿಸುತ್ತಾರೆ, ಎಂಬುದು. ಇದನ್ನು 1871ರಲ್ಲಿ ಅರ್ಥ ಮಾಡಿಕೊಳ್ಳಬಹುದಾಗಿದ್ದಿತು. ಆಗ ಬ್ರಿಟನ್ ಇನ್ನೂ ಒಂದು ಪರಿಶುದ್ಧ

ಬಂಡವಾಳಶಾಹಿಯಾದ ಆದರೆ ಸೈನಿಕಶಾಹಿ ಕೂಟವಿಲ್ಲದ ಮತ್ತು ಗಣನೀಯ ಪ್ರಮಾಣದಲ್ಲಿ ಅಧಿಕಾರಶಾಹಿಯೂ ಇಲ್ಲದ ದೇಶವೊಂದರ ಮಾದರಿಯಾಗಿದ್ದಿತು. ಆದ್ದರಿಂದ ಮಾರ್ಕ್ಸ್ ಬ್ರಿಟನ್ನನ್ನು ಹೊರತಾಗಿಸಿದರು. ಅಲ್ಲಿ ಕ್ರಾಂತಿ, ಜನತಾ ಕ್ರಾಂತಿಸಹ, ಆಗ ಸಾಧ್ಯವೆಂದು ತೋರಿಬರುತ್ತಿತ್ತು ಮತ್ತು "ಸಿದ್ಧಗೊಳಿಸಿಟ್ಟ ಪ್ರಭುತ್ವ ಯಂತ್ರ"ವನ್ನು ನಾಶಗೊಳಿಸುವ ಪೂರ್ವ ಶರತ್ತು ಇಲ್ಲದೆಯೇ ಅಂಥ ಕ್ರಾಂತಿ ನಿಜಕ್ಕೂ ಸಾಧ್ಯವಿತ್ತು.

ಇಂದು, 1917ರಲ್ಲಿ, ಮೊದಲ ಸಾಮ್ರಾಜ್ಯಶಾಹಿ ಮಹಾಯುದ್ಧದ ಕಾಲದಲ್ಲಿ, ಮಾರ್ಕ್ಸ್ ಹಾಕಿದ ಈ ಪರಿಮಿತಿ ಸಮಂಜಸವಾಗಿ ಉಳಿದಿಲ್ಲ. ಸೈನಿಕ ಕೂಟಗಳು ಹಾಗೂ ಅಧಿಕಾರಶಾಹಿಯನ್ನು ಹೊಂದಿರದ ಅರ್ಥದಲ್ಲಿ ಆಂಗ್ಲೋ–ಸಾಕ್ಸನ್ "ಸ್ವಾತಂತ್ರ್ಯ"ಕ್ಕೆ ಇಡೀ ಜಗತ್ತಿನಲ್ಲೇ ಅತ್ಯಂತ ದೊಡ್ಡ ಹಾಗೂ ಕೊನೆಯ ಪ್ರತಿನಿಧಿಗಳಾಗಿದ್ದ ಬ್ರಿಟನ್ ಹಾಗೂ ಅಮೆರಿಕ ಇವೆರಡೂ, ಎಲ್ಲವನ್ನೂ ಹತ್ತಿಕ್ಕುವ ಮತ್ತು ಎಲ್ಲವನ್ನೂ ತಮ್ಮ ಅಧೀನಕ್ಕೊಳಪಡಿಸಿಕೊಳ್ಳುವ ಅಧಿಕಾರಶಾಹಿ–ಸೈನಿಕ ಸಂಸ್ಥೆಗಳ ಅಖಿಲ– ಐರೋಪ್ಯ ಹೊಲಸಿನ, ರಕ್ತಸಿಕ್ತ ಕೆಸರಿನಲ್ಲಿ ಸಂಪೂರ್ಣವಾಗಿ ಮುಳುಗಿವೆ. ಇಂದು ಬ್ರಿಟನ್ ಮತ್ತು

ಅಮೆರಿಕಗಳಲ್ಲಿ ಸಹ, "ಪ್ರತಿಯೊಂದು ನಿಜವಾದ ಜನತಾ ಕ್ರಾಂತಿಗೆ ಪೂರ್ವಷರತ್ತೆಂದರೆ" "ಸಿದ್ಧಗೊಳಿಸಿಟ್ಟ ಪ್ರಭುತ್ವ ಯಂತ್ರ"ವನ್ನು (ಆ ದೇಶಗಳಲ್ಲಿ 1914–1917ರ ವರ್ಷಗಳಲ್ಲಿ "ಐರೋಪ್ಯ", ಸರ್ವಸಾಮಾನ್ಯ ಸಾಮ್ರಾಜ್ಯಶಾಹಿ ಪರಿಪೂರ್ಣತೆಯ ಮಟ್ಟಕ್ಕೆ ತರಲಾಗಿರುವ ಪ್ರಭುತ್ವ ಯಂತ್ರವನ್ನು) ಪುಡಿಗುಟ್ಟುವುದು, ನಾಶಪಡಿಸುವುದು.

ಎರಡನೆಯದಾಗಿ, ಅಧಿಕಾರಶಾಹಿ–ಸೈನಿಕ ಪ್ರಭುತ್ವ ಯಂತ್ರವನ್ನು ನಾಶಗೊಳಿಸುವುದು "ಪ್ರತಿಯೊಂದು ನಿಜವಾದ ಜನತಾ ಕ್ರಾಂತಿಗೆ ಪೂರ್ವಷರತ್ತು" ಎಂಬ ಮಾರ್ಕ್ಸ್‌ರವರ ಅತ್ಯಂತ ಆಳವಾದ ಹೇಳಿಕೆಯ ಕಡೆಗೂ ನಿರ್ದಿಷ್ಟ ಗಮನ ನೀಡಬೇಕು. ಒಂದು "ಜನತಾ" ಕ್ರಾಂತಿಯ ಈ ವಿಚಾರವು ಮಾರ್ಕ್ಸ್‌ರಿಂದ ಬಂದಿರುವುದು ಸ್ಟ್ರೂವೆಯವರ ಅನುಯಾಯಿಗಳಾದ ರಶಿಯನ್ ಪ್ಲೆಹಾನೊವ್‌ವಾದಿಗಳಿಗೂ, ಮೆನ್ಷೆವಿಕರಿಗೂ ವಿಚಿತ್ರವೆಂದು ಕಾಣಬರುತ್ತದೆ. ತಾವು ಮಾರ್ಕ್ಸ್‌ವಾದಿಗಳು ಎಂದು ಪರಿಗಣಿಸಲ್ಪಡಬೇಕು ಎಂದು ಬಯಸುವ ಇವರು ಬಹುಶಃ ಅಂಥ ಅಭಿವ್ಯಕ್ತಿಯನ್ನು ಮಾರ್ಕ್ಸ್ "ಕೈ ತಪ್ಪಿ ಬರೆದಿದ್ದಾರೆ" ಎಂದೇ ಘೋಷಿಸಬಹುದು. ಇವರು ಮಾರ್ಕ್ಸ್‌ವಾದವನ್ನು ಎಂಥ ನೀಚ ಉದಾರವಾದಿ ರೂಪಕ್ಕೆ ಇಳಿಸಿದ್ದಾರೆಂದರೆ ಅವರಿಗೆ ಬೂರ್ಶ್ವಾ ಕ್ರಾಂತಿ ಹಾಗೂ ಶ್ರಮಜೀವಿ ವರ್ಗಕ್ರಾಂತಿಗಳು ತದ್ವಿರುದ್ಧವಾದವುಗಳು ಎಂಬುದರ ಆಚೆ ಬೇರೇನೂ ಇಲ್ಲ, ಈ ಬೇಧವನ್ನು ಕೂಡ ಅವರು ಅತ್ಯಂತ ನಿರ್ಜೀವವಾದ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ.

ಇಪ್ಪತ್ತನೆಯ ಶತಮಾನದ ಕ್ರಾಂತಿಗಳನ್ನು ಉದಾಹರಣೆಗಳಾಗಿ ತೆಗೆದುಕೊಂಡರೆ, ಪೋರ್ಚುಗೀಸ್ ಹಾಗೂ ತುರ್ಕಿ ಕ್ರಾಂತಿಗಳೆರಡೂ ಬೂರ್ಶ್ವಾ ಕ್ರಾಂತಿಗಳಾಗಿದ್ದವೆಂದು ನಾವು ಒಪ್ಪಿಕೊಳ್ಳಬೇಕು. ಆದರೆ ಅವುಗಳಲ್ಲಿ ಯಾವೊಂದೂ, "ಜನತಾ" ಕ್ರಾಂತಿಯಲ್ಲ. ಏಕೆಂದರೆ ಅವುಗಳಲ್ಲಿ ಯಾವೊಂದರಲ್ಲೂ ಜನಸಮೂಹವಾಗಲೀ, ಅವರಲ್ಲಿ ದೊಡ್ಡ ಪ್ರಮಾಣದಲ್ಲಿ ಬಹುಸಂಖ್ಯಾತರಾಗಲೀ ತಮ್ಮ ಸ್ವಂತ ಆರ್ಥಿಕ ಹಾಗೂ ರಾಜಕೀಯ

ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸ್ವತಂತ್ರವಾಗಿ ಕ್ರಿಯಾಶೀಲವಾಗಿ ಯಾವುದೇ ಗಮನಾರ್ಹ ಮಟ್ಟದಲ್ಲಿ ಮುಂದೆ ಬಂದಿರಲಿಲ್ಲ. ತದ್ವಿರುದ್ಧವಾಗಿ, 1905–07ರ ರಶಿಯನ್ ಬೂರ್ಶ್ವಾ ಕ್ರಾಂತಿಯು ಪೋರ್ಚುಗೀಸ್ ಹಾಗೂ ಟರ್ಕಿಷ್ ಕ್ರಾಂತಿಗಳು ಕೆಲವು ಸಂದರ್ಭಗಳಲ್ಲಿ ಸಾಧಿಸಿದಂಥ "ಉಜ್ವಲ" ಯಶಸ್ಸುಗಳನ್ನೇನೂ ತೋರಿಸದಿದ್ದರೂ, ಅದು ನಿಸ್ಸಂದೇಹವಾಗಿಯೂ "ನಿಜವಾದ ಜನತಾ" ಕ್ರಾಂತಿಯಾಗಿದ್ದಿತು; ಏಕೆಂದರೆ ಜನಸಮೂಹ, ಅವರಲ್ಲಿ ಬಹುಸಂಖ್ಯಾತರು, ದಮನ ಹಾಗೂ ಶೋಷಣೆಯಲ್ಲಿ ನಲುಗಿ ಹೋಗಿದ್ದ ಅತ್ಯಂತ ತಳಮಟ್ಟದ ಸಾಮಾಜಿಕ ಗುಂಪುಗಳು, ಸ್ವತಂತ್ರವಾಗಿ ಎದ್ದುನಿಂತು ಕ್ರಾಂತಿಯ ಇಡೀ ಮಾರ್ಗದ ಮೇಲೆ ತಮ್ಮ ಸ್ವಂತ ಬೇಡಿಕೆಗಳ, ಮತ್ತುನಾಶಗೊಳಿಸಲಾಗುತ್ತಿದ್ದ ಹಳೆಯ ಸಮಾಜದ ಸ್ಥಳದಲ್ಲಿ ತಮ್ಮದೇ ಆದ ರೀತಿಯಲ್ಲಿಒಂದು ಹೊಸ ಸಮಾಜವನ್ನು ಕಟ್ಟುವ ಪ್ರಯತ್ನದ ಮುದ್ರೆಯನ್ನು ಒತ್ತಿದರು.

1871ರಲ್ಲಿ ಯೂರೋಪಿನಲ್ಲಿ ಶ್ರಮಜೀವಿ ವರ್ಗವು ಆ ಖಂಡದ ಯಾವುದೇ ದೇಶದಲ್ಲೂ ಜನತೆಯಲ್ಲಿ ಬಹುಸಂಖ್ಯಾತ ವಿಭಾಗವಾಗಿರಲಿಲ್ಲ. ಬಹುಸಂಖ್ಯಾತ ಜನರನ್ನು ತನ್ನ ಪ್ರವಾಹದೊಳಕ್ಕೆ ನಿಜಕ್ಕೂ ಸೆಳೆದುಕೊಳ್ಳುವ "ಜನತಾ" ಕ್ರಾಂತಿಯು, ರೈತರು ಹಾಗೂ ಶ್ರಮಜೀವಿ ವರ್ಗ ಇಬ್ಬರನ್ನೂ ಆವರಿಸಿಕೊಂಡರಷ್ಟೇ ಜನತಾಕ್ರಾಂತಿಯಾಗಬಲ್ಲುದು. ಈ ಎರಡು ವರ್ಗಗಳು ಆಗ "ಜನತೆ" ಎನಿಸಿಕೊಂಡಿದ್ದವು. ಇವೆರಡನ್ನೂ "ಅಧಿಕಾರಶಾಹಿ–ಸೈನಿಕ ಪ್ರಭುತ್ವ ಯಂತ್ರ"ವು ದಮನ ಮಾಡುತ್ತದೆ, ಹತ್ತಿಕ್ಕುತ್ತದೆ ಮತ್ತು ಶೋಷಿಸುತ್ತದೆ ಎಂಬ ಸಂಗತಿಯಿಂದಾಗಿ ಅವು ಒಂದುಗೂಡಿರುತ್ತವೆ. ಆ ಯಂತ್ರವನ್ನು ಪುಡಿಗುಟ್ಟುವುದು, ಅದನ್ನು ಮುರಿದು ಹಾಕುವುದು, ನಿಜಕ್ಕೂ "ಜನರ"ಹಿತಗಳಿಗೆ, ಅವರಲ್ಲಿ ಬಹುಸಂಖ್ಯಾತರಾದ ಕಾರ್ಮಿಕರ ಹಾಗೂ ಹೆಚ್ಚಿನ ರೈತರ ಹಿತಗಳಿಗೆ ಅನುಗುಣವಾಗಿರುತ್ತದೆ. ಇದು ಬಡ ರೈತಾಪಿಗಳ ಹಾಗೂ ಶ್ರಮಿಕರ ಒಂದು ಮುಕ್ತ ಮೈತ್ರಿಗೆ "ಪೂರ್ವಷರತ್ತು" ಆಗಿರುತ್ತದೆ. ಅತ್ತ ಇಂಥ ಒಂದು ಮೈತ್ರಿ ಇಲ್ಲದೆ ಪ್ರಜಾಪ್ರಭುತ್ವ ಅಸ್ಥಿರವಾಗಿರುತ್ತದೆ ಮತ್ತು ಸಮಾಜವಾದಿ ಪರಿವರ್ತನೆ ಅಸಾಧ್ಯವಾಗಿರುತ್ತದೆ.

ಪ್ಯಾರಿಸ್ ಕಮ್ಯೂನ್ ವಾಸ್ತವವಾಗಿ ಅಂಥ ಒಂದು ಮೈತ್ರಿಯತ್ತ ಸಾಗುತ್ತಲಿತ್ತು ಎಂಬುದು ಸುವಿದಿತ. ಆದರೆ ಅನೇಕ ಆಂತರಿಕ ಹಾಗೂ ಬಾಹ್ಯ ಸನ್ನಿವೇಶಗಳಿಂದಾಗಿ ಅದು ತನ್ನ ಗುರಿಯನ್ನು ತಲುಪಲಿಲ್ಲ.

ತತ್ಫಲವಾಗಿ "ನಿಜವಾದ ಜನತಾ ಕ್ರಾಂತಿ"ಯ ವಿಷಯ ಹೇಳುವಾಗ ಮಾರ್ಕ್ಸ್,ಪೆಟಿ ಬೂರ್ಶ್ವಾ ಲಕ್ಷಣಗಳನ್ನು ಸ್ವಲ್ಪವೂ ಕಡೆಗಾಣಿಸದೆಯೇ (ಅವರುಪೆಟಿ ಬೂರ್ಶ್ವಾ ಬಗೆಗೆ ಬೇಕಾದಷ್ಟು ಹೇಳಿದರು, ಮತ್ತೆ ಮತ್ತೆ ಹೇಳಿದರು) 1871ರಲ್ಲಿ ಯೂರೋಪು ಖಂಡದ ಹೆಚ್ಚಿನ ದೇಶಗಳಲ್ಲಿ ವಾಸ್ತವಿಕ ವರ್ಗ ಬಲಾಬಲಗಳನ್ನು ಕಟ್ಟುನಿಟ್ಟಾಗಿ ಗಣನೆಗೆ ತಂದುಕೊಂಡಿದ್ದರು. ಇನ್ನೊಂದೆಡೆಯಲ್ಲಿ, ಪ್ರಭುತ್ವ ಯಂತ್ರವನ್ನು"ಪುಡಿ ಗುಟ್ಟುವುದು" ರೈತರ ಹಾಗೂ ಕಾರ್ಮಿಕರ ಇಬ್ಬರ ಹಿತಗಳಿಗೂ ಅವಶ್ಯವಾದುದು, ಅದು ಅವರನ್ನು ಒಂದುಗೂಡಿಸಿದೆ, ಮತ್ತು "ಪರಪುಷ್ಟಜೀವಿ"ಯನ್ನು ತೊಲಗಿಸಿ

ಅದರಸ್ಥಳದಲ್ಲಿ ಹೊಸತಾದುದೊಂದನ್ನು ಸ್ಥಾಪಿಸುವ ಸಮಾನ ಕಾರ್ಯಭಾರವನ್ನು ಅವರ ಮುಂದಿರಿಸಿದೆ ಎಂದು ಅವರು ಹೇಳಿದರು.

ನಿಖರವಾಗಿ ಯಾವುದನ್ನು ಸ್ಥಾಪಿಸುವುದು?

## 2. ಪುಡಿಗುಟ್ಟಿ ಹಾಕಿದ ಪ್ರಭುತ್ವ ಯಂತ್ರದ ಸ್ಥಳದಲ್ಲಿ ಬರಬೇಕಾದುದು ಏನು?

1847ರಲ್ಲಿ, "ಕಮ್ಯುನಿಸ್ಟ್ ಪ್ರಣಾಳಿಕೆ"ಯಲ್ಲಿ ಮೇಲಿನ ಪ್ರಶ್ನೆಗೆ ಮಾರ್ಕ್ಸ್‌ರ ಉತ್ತರ ಇನ್ನೂ ಶುದ್ಧ ಅಮೂರ್ತವಾಗಿದ್ದಿತು; ನಿಖರವಾಗಿ ಹೇಳುವುದಾದರೆ, ಅದು ಕಾರ್ಯಭಾರಗಳನ್ನು ಸೂಚಿಸುವ ಒಂದು ಉತ್ತರವಾಗಿದ್ದಿತೇ ಹೊರತು ಅವುಗಳನ್ನು ಸಾಧಿಸುವ ವಿಧಾನಗಳನ್ನಲ್ಲ. "ಪ್ರಜಾಪ್ರಭುತ್ವದ ಸಮರವನ್ನು ಗೆದ್ದುಕೊಂಡು" ಈ ಯಂತ್ರದ ಸ್ಥಳದಲ್ಲಿ "ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ" ಬರಬೇಕು ಎಂಬುದು "ಕಮ್ಯುನಿಸ್ಟ್ ಪ್ರಣಾಳಿಕೆ"ಯಲ್ಲಿ ನೀಡಿದ್ದ ಉತ್ತರ.

'ಮಾರ್ಕ್ಸ್ ಎಂದೂ ಕಲ್ಪನಾವಿಹಾರದಲ್ಲಿ ತೊಡಗಿದವರಲ್ಲ. ಆಳುವ ವರ್ಗವಾಗಿ ಶ್ರಮಜೀವಿ ವರ್ಗದ ಸಂಘಟನೆಯು ಯಾವ ನಿರ್ದಿಷ್ಟ ರೂಪ ಪಡೆಯುತ್ತದೆ, ಮತ್ತು ಸಾಮೂಹಿಕ ಚಳವಳಿಯ ಅನುಭವ ಈ ಸಂಘಟನೆ ಅತ್ಯಂತ ಸಂಪೂರ್ಣ, ಅತ್ಯಂತ ಸುಸಂಗತವಾಗಿ "ಪ್ರಜಾಪ್ರಭುತ್ವದ ಸಮರವನ್ನು ಗೆದ್ದುಕೊಳ್ಳು"ವುದರೊಂದಿಗೆ ನಿಖರವಾಗಿ ಸಂಯೋಜನಗೊಳ್ಳುತ್ತದೆ ಎಂಬ ಪ್ರಶ್ನೆಗೆ ಉತ್ತರವನ್ನು ಒದಗಿಸುವುದೆಂದು ಅವರು ನಿರೀಕ್ಷಿಸಿದರು.

ಕಮ್ಯೂನ್‌ನ ಅನುಭವವು ಅಲ್ಪವೇ ಆಗಿದ್ದರೂ ಅದನ್ನು ಮಾರ್ಕ್ಸ್ ತಮ್ಮ "ಫ್ರಾನ್ಸಿನಲ್ಲಿ ಅಂತರ್ಯುದ್ಧ" ಕೃತಿಯಲ್ಲಿ ಅತ್ಯಂತ ಎಚ್ಚರಿಕೆಯ ವಿಶ್ಲೇಷಣೆಗೆ ಗುರಿಪಡಿಸಿದರು. ಅವರಈ ಕೃತಿಯಿಂದ ಬಹುಮುಖ್ಯ ಭಾಗಗಳನ್ನು ಉದ್ಧರಿಸೋಣ:

> *"ಮಧ್ಯಯುಗದಲ್ಲಿ ಹುಟ್ಟಿಕೊಂಡು ಹತ್ತೊಂಬತ್ತನೆಯ ಶತಮಾನದಲ್ಲಿ "ಸ್ಥಾಯಿಸೈನ್ಯ, ಪೊಲೀಸು, ಅಧಿಕಾರಶಾಹಿ, ಪಾದ್ರಿಗಳು, ನ್ಯಾಯಸ್ಥಾನ ಈ ಸರ್ವಾಂತರ್ಯಾಮಿ ಅಂಗಸಂಸ್ಥೆಗಳಿರುವ ಕೇಂದ್ರೀಕೃತ ಪ್ರಭುತ್ವ ಅಧಿಕಾರ"ವು ಬೆಳೆದು ಬಂತು. ಬಂಡವಾಳ ಹಾಗೂ ಶ್ರಮದ ನಡುವೆ ವರ್ಗ ವೈಷಮ್ಯಗಳು ಬೆಳೆಯುವುದರೊಂದಿಗೆ "ಪ್ರಭುತ್ವ ಅಧಿಕಾರವು ಹೆಚ್ಚು ಹೆಚ್ಚಾಗಿ ಕಾರ್ಮಿಕವರ್ಗವನ್ನು ಹತ್ತಿಕ್ಕಲು ಸಂಘಟಿಸಿದ ಸಾರ್ವಜನಿಕ ಶಕ್ತಿಯ, ವರ್ಗ ಆಳ್ವಿಕೆಯ ಯಂತ್ರದ ಸ್ವರೂಪವನ್ನು ತಳೆಯತೊಡಗಿತು. ವರ್ಗಹೋರಾಟದ ಮುನ್ನಡೆಯನ್ನುತೋರಿಸುವ ಪ್ರತಿಯೊಂದು ಕ್ರಾಂತಿಯ ನಂತರ ಪ್ರಭುತ್ವ ಅಧಿಕಾರದ ಶುದ್ಧಬಲಪ್ರಯೋಗದ ಸ್ವರೂಪ ಹೆಚ್ಚು ಹೆಚ್ಚು ಸ್ಫುಟವಾಗಿ ಕಾಣಬರುತ್ತದೆ." 1848–1849ರ ಕ್ರಾಂತಿಯ ನಂತರ ಪ್ರಭುತ್ವ ಅಧಿಕಾರ "ಶ್ರಮದ ವಿರುದ್ಧ ಬಂಡವಾಳದರಾಷ್ಟ್ರೀಯ ಯುದ್ಧ ಸಾಧನ" ವಾಯಿತು. ದ್ವಿತೀಯ ಸಾಮ್ರಾಜ್ಯವು ಇದನ್ನು ಕ್ರೋಡೀಕರಿಸಿತು."*

> *"ಸಾಮ್ರಾಜ್ಯಕ್ಕೆ ನೇರವಾಗಿ ಪ್ರತಿವಾದಿಯಾಗಿದ್ದುದು ಕಮ್ಯೂನ್." ಅದು "ವರ್ಗ ಆಳ್ವಿಕೆಯ ರಾಜಪ್ರಭುತ್ವ ಸ್ವರೂಪವನ್ನು ತೆಗೆದು ಹಾಕುವುದಷ್ಟೇ ಅಲ್ಲ, ವರ್ಗಆಳ್ವಿಕೆಯನ್ನೇ ತೊಡೆದು ಹಾಕುವ ಗಣತಂತ್ರ"ದ ಒಂದು "ನಿರ್ದಿಷ್ಟ ರೂಪ"ವಾಗಿತ್ತು."*

ಶ್ರಮಜೀವಿ ವರ್ಗದ ಸಮಾಜವಾದಿ ಗಣತಂತ್ರದ ಈ "ನಿರ್ದಿಷ್ಟ" ರೂಪ ಏನಾಗಿತ್ತು? ಅದು ಸೃಷ್ಟಿಸತೊಡಗಿದ ಪ್ರಭುತ್ವ ಯಾವುದಾಗಿತ್ತು?

> *"ಕಮ್ಯೂನ್‌ನ ಮೊದಲ ಹುಕುಂ, ಅದರಿಂದಾಗಿ, ಸ್ಥಾಯಿ ಸೈನ್ಯವನ್ನು ಹತ್ತಿಕ್ಕುವುದು, ಅದರ ಸ್ಥಳದಲ್ಲಿ ಶಸ್ತ್ರಸಜ್ಜಿತ ಜನತೆಯ ಸೈನ್ಯವನ್ನು ತರುವುದು."*

ಈ ಆಗ್ರಹ ಈಗ ಸಮಾಜವಾದಿ ಎಂದು ಕರೆದುಕೊಳ್ಳುವ ಪ್ರತಿಯೊಂದು ಪಕ್ಷದ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಅವುಗಳ ಕಾರ್ಯಕ್ರಮಗಳ ನಿಜವಾದ ಯೋಗ್ಯತೆಯನ್ನು ನಮ್ಮ ಸಮಾಜವಾದಿ–ಕ್ರಾಂತಿಕಾರಿಗಳ ಹಾಗೂ ಮೆನ್ಷೆವಿಕರ ವರ್ತನೆ ಬಹಳ ಚೆನ್ನಾಗಿ ತೋರಿಸುತ್ತದೆ. ಅವರು ಫೆಬ್ರವರಿ 27ರ ಕ್ರಾಂತಿಯಾದ ಕೂಡಲೇ ವಾಸ್ತವವಾಗಿ ಈ ಆಗ್ರಹವನ್ನು ಕ್ರಿಯೆಗಿಳಿಸಲು ನಿರಾಕರಿಸಿದರು!

> *"ಕಮ್ಯೂನ್ ರಚನೆಗೊಂಡದ್ದು ಪೌರಸಭಾ ಸದಸ್ಯರುಗಳಿಂದ. ಇವರು ಪಟ್ಟಣದವಿವಿಧ ವಾರ್ಡುಗಳಿಂದ ಸಾರ್ವತ್ರಿಕ ಮತದಾನದ ಮೂಲಕ ಆಯ್ಕೆಗೊಂಡಿದ್ದರು, ಅವುಗಳಿಗೆ ಜವಾಬ್ದಾರರರಾಗಿದ್ದರು ಮತ್ತು ಅವರನ್ನು ಯಾವುದೇ ಕಾಲದಲ್ಲೂ ಹಿಂದಕ್ಕೆ ಕರೆಯಬಹುದಿತ್ತು. ಅದರ ಸದಸ್ಯರಲ್ಲಿ ಬಹುಸಂಖ್ಯಾತರು ಸಹಜವಾಗಿಯೇ ದುಡಿಯುವ ಜನರಾಗಿದ್ದರು, ಅಥವಾ ಕಾರ್ಮಿಕ ವರ್ಗದಅಂಗೀಕೃತ ಪ್ರತಿನಿಧಿಗಳಾಗಿದ್ದರು..."*

> *"ಅದುವರೆವಿಗೂ ಸರಕಾರದ ಸಾಧನವಾಗಿದ್ದ ಪೊಲೀಸು ಇಲಾಖೆಯ ರಾಜಕೀಯ ಲಾಂಛನಗಳನ್ನು ಕೂಡಲೇ ಕಿತ್ತು ಹಾಕಲಾಯಿತು. ಅದನ್ನು ಕಮ್ಯೂನಿಗೆ ಜವಾಬುದಾರಿಯಾದ ಮತ್ತು ಎಲ್ಲ ಕಾಲದಲ್ಲೂ ಹಿಂತೆಗೆದುಕೊಳ್ಳಬಹುದಾದಂಥ ಸಾಧನವನ್ನಾಗಿ ಪರಿವರ್ತಿಸಲಾಯಿತು. ಆಡಳಿತದ ಇತರ ಎಲ್ಲ ಶಾಖೆಗಳ ಅಧಿಕಾರಿಗಳಿಗೂ ಇದೇ ರೀತಿ ಮಾಡಲಾಯಿತು.... ಕಮ್ಯೂನ್‌ನ ಸದಸ್ಯರಿಂದ ಹಿಡಿದು ಕೆಳಗಿನವರೆಗೆ ಎಲ್ಲರೂ ಸಾರ್ವಜನಿಕ ಸೇವೆಯನ್ನು ದುಡಿಮೆಗಾರರ ಸಂಬಳದಲ್ಲಿ ಮಾಡಬೇಕಿತ್ತು. ಪ್ರಭುತ್ವದ ಉನ್ನತ ಪ್ರತಿಷ್ಠಿತರ ವಿಶೇಷ ಸೌಲಭ್ಯಗಳೂ ಪ್ರತಿನಿಧಿ ಭತ್ಯಗಳೂ ಅವರೊಂದಿಗೇ ಕಣ್ಮರೆಯಾದವು.... ಹಳೆಯ ಸರಕಾರದ ಭೌತಿಕ ಶಕ್ತಿಯ ಸಾಧನಗಳಾದ ಸ್ಥಾಯಿ ಸೈನ್ಯ ಹಾಗೂ ಪೊಲೀಸನ್ನು ತೊಡೆದು ಹಾಕಿದನಂತರ ಕಮ್ಯೂನ್ ಕೂಡಲೇ ಆಧ್ಯಾತ್ಮಿಕ ದಬ್ಬಾಳಿಕೆಯ ಸಾಧನವನ್ನು, ಪಾದ್ರಿಗಳ ಅಧಿಕಾರವನ್ನು ಮುರಿಯಲು ಹೊರಟಿತು..........ನ್ಯಾಯಾಂಗದ ನಿರ್ವಾಹಕರುಗಳು ಸೋಗಿನ ಸ್ವಾತಂತ್ರ್ಯವನ್ನು ಕಳೆದುಕೊಂಡರು.... ಅವರು ಅಂದಿನಿಂದಾಚೆಗೆ ಆ ಹುದ್ದೆಗಳಿಗೆ ಆಯ್ಕೆಗೊಳ್ಳಬೇಕಾಗಿದ್ದಿತು, ಜವಾಬ್ದಾರರಾಗಬೇಕಿದ್ದಿತು ಮತ್ತು ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಬದ್ಧರಾಗಬೇಕಿದ್ದಿತು...."*

ಆದ್ದರಿಂದ ಕಮ್ಯೂನ್ ಪುಡಿಗುಟ್ಟಿದ ಪ್ರಭುತ್ವ ಯಂತ್ರದ ಸ್ಥಳದಲ್ಲಿ ಹೆಚ್ಚು ಪೂರ್ಣವಾದ ಪ್ರಜಾಪ್ರಭುತ್ವವನ್ನು "ಮಾತ್ರವೇ" ತಂದಂತೆ ಕಾಣುತ್ತದೆ: ಸ್ಥಾಯಿ ಸೈನ್ಯದ ರದ್ದತಿ; ಎಲ್ಲ ಅಧಿಕಾರಿಗಳೂ ಚುನಾಯಿಸಲ್ಪಡುವ ಮತ್ತು ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಬದ್ಧರಾಗುವ ವ್ಯವಸ್ಥೆ. ಆದರೆ ವಾಸ್ತವವಾಗಿ ಈ "ಮಾತ್ರವೇ" ಎಂಬುದು ಕೆಲವು ನಿರ್ದಿಷ್ಟ

ಸಂಸ್ಥೆಗಳ ಸ್ಥಳದಲ್ಲಿ ಮೂಲಭೂತವಾಗಿ ಭಿನ್ನ ಮಾದರಿಯ ಇತರ ಸಂಸ್ಥೆಗಳನ್ನು ರಚಿಸುವ ಒಂದು ಬೃಹತ್ ಪ್ರಮಾಣದ ಬದಲಾವಣೆಯನ್ನು ಸೂಚಿಸುತ್ತದೆ. ಇದು "ಪರಿಮಾಣವು ಗುಣವಾಗಿ ಪರಿವರ್ತನೆಯಾಗುವ" ಒಂದು ನಿಖರವಾದ ದೃಷ್ಟಾಂತ : ಪರಿಕಲ್ಪಿಸಲು ಸಾಧ್ಯವಾದಷ್ಟೂ ಪೂರ್ಣವಾಗಿ ಹಾಗೂ ಸುಸಂಗತವಾಗಿ ಜಾರಿಗೆ ತಂದ ಪ್ರಜಾಪ್ರಭುತ್ವ ಬೂರ್ಶ್ವಾ ಸ್ವರೂಪದಿಂದ ಶ್ರಮಜೀವಿ ಪ್ರಜಾಪ್ರಭುತ್ವವಾಗಿ ಪರಿವರ್ತನೆಗೊಂಡಿದೆ; ಪ್ರಭುತ್ವ (= ಒಂದು ನಿರ್ದಿಷ್ಟ ವರ್ಗವನ್ನು ಹತ್ತಿಕ್ಕಲು ಬಳಸುವ ಒಂದು ವಿಶೇಷ ಶಕ್ತಿ) ಇನ್ನೆಂದೂ ಅಂಥ ಪ್ರಭುತ್ವವೇ ಆಗಿರದಂತೆ ಪರಿವರ್ತನೆಗೊಂಡಿದೆ.

ಆಗಲೂ ಬೂರ್ಶ್ವಾಗಳನ್ನು ಹತ್ತಿಕ್ಕುವುದು ಮತ್ತು ಅವರ ಪ್ರತಿರೋಧವನ್ನು ಸದೆ ಬಡಿಯುವುದು ಇನ್ನೂ ಅವಶ್ಯ. ನಿರ್ದಿಷ್ಟವಾಗಿ ಕಮ್ಯೂನ್‌ಗೆ ಇದು ಬಹಳ ಅವಶ್ಯವಾಗಿದಿತು. ಇದನ್ನು ಸಾಕಷ್ಟು ದೃಢತೆಯಿಂದ ಮಾಡದಿದ್ದುದು ಅದರ ಸೋಲಿನ ಕಾರಣಗಳಲ್ಲೊಂದು. ಆದರೆ ಇಲ್ಲಿ ದಬ್ಬಾಳಿಕೆಯ ಅಂಗ ಇಲ್ಲಿ ಬಹುಸಂಖ್ಯಾತ ಜನತೆ, ಗುಲಾಮಗಿರಿ, ಜೀತದಾಳು ಹಾಗೂ ಕೂಲಿ ಗುಲಾಮಿಕೆಯ ಅಡಿಯಲ್ಲಿ ಯಾವತ್ತೂ ಇದ್ದಂತೆ ಅಲ್ಪಮತದಲ್ಲಿ ಇರುವವರು ಅಲ್ಲ. ಬಹುಸಂಖ್ಯಾತ ಜನತೆಯೇ ತನ್ನ ಪೀಡಕರನ್ನು ಹತ್ತಿಕ್ಕುವುದರಿಂದ, ಹತ್ತಿಕ್ಕಲು ಒಂದು "ವಿಶೇಷ ಶಕ್ತಿ" ಇನ್ನು ಮುಂದೆ ಅವಶ್ಯವಿಲ್ಲ! ಈ ಅರ್ಥದಲ್ಲಿ ಪ್ರಭುತ್ವ ಕ್ಷಯಿಸಿ ಹೋಗತೊಡಗುತ್ತದೆ. ವಿಶೇಷ ಅಧಿಕಾರಗಳಿದ್ದ ಅಲ್ಪಮತೀಯರ ವಿಶೇಷ ಸಂಸ್ಥೆಗಳ (ವಿಶೇಷ ಸೌಲಭ್ಯಗಳಿರುವ ಅಧಿಕಾರಿ ವೃಂದ, ಸ್ಥಾಯಿ ಸೈನ್ಯದ ಮುಖ್ಯಸ್ಥರುಗಳ)ಬದಲು ಬಹುಮತೀಯರೇ ನೇರವಾಗಿ ಈ ಕಾರ್ಯಗಳನ್ನೆಲ್ಲ ನೆರವೇರಿಸಬಲ್ಲರು. ಪ್ರಭುತ್ವ ಅಧಿಕಾರದ ಕಾರ್ಯಭಾರಗಳನ್ನು ಇಡಿಯಾಗಿ ಜನರೇ ಹೆಚ್ಚು ಹೆಚ್ಚಾಗಿ ನೆರವೇರಿಸತೊಡಗಿದಾಗ ಪ್ರಭುತ್ವ ಅಧಿಕಾರದ ಅಸ್ತಿತ್ವದ ಅಗತ್ಯತೆ ಅಷ್ಟೂ ಕಮ್ಮಿಯಾಗುತ್ತದೆ.

ಈ ಸಂದರ್ಭದಲ್ಲಿ ಮಾರ್ಕ್ಸ್ ಒತ್ತಿ ಹೇಳಿದ ಕಮ್ಯೂನ್ ಕೈಕೊಂಡ ಈ ಕೆಳಗಿನ ಕ್ರಮಗಳು ವಿಶೇಷವಾಗಿ ಗಮನಾರ್ಹವಾಗಿವೆ: ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ಎಲ್ಲ ಪ್ರತಿನಿಧಿ ಭತ್ಯೆಗಳ ಮತ್ತು ಎಲ್ಲ ಹಣಕಾಸು ಸೌಲಭ್ಯಗಳ ನಿರ್ಮೂಲನೆ, ಪ್ರಭುತ್ವದ ಎಲ್ಲ ಸೇವಕರ ಸಂಭಾವನೆಯನ್ನೂ "ಕಾರ್ಮಿಕರ ಕೂಲಿ"ಯ ಮಟ್ಟಕ್ಕೆ ಇಳಿಸುವುದು. ಇದು

ಬೇರೆ ಯಾವುದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಬೂರ್ಶ್ವಾ ಪ್ರಜಾಪ್ರಭುತ್ವದಿಂದ ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವಕ್ಕೆ, ಪೀಡಕರ ಪ್ರಜಾಪ್ರಭುತ್ವದಿಂದ ಪೀಡಿತ ವರ್ಗಗಳ ಪ್ರಜಾಪ್ರಭುತ್ವಕ್ಕೆ, ಒಂದು ನಿರ್ದಿಷ್ಟ ವರ್ಗವನ್ನು ಹತ್ತಿಕ್ಕಲು "ವಿಶೇಷ ಶಕ್ತಿಯಾಗಿ"ರುವ ಪ್ರಭುತ್ವದಿಂದ ಪೀಡಕರನ್ನು ಹತ್ತಿಕ್ಕಲು ಬಹುಮತೀಯ ಜನತೆಯ –ಕಾರ್ಮಿಕರ ಹಾಗೂ ರೈತರ–ಸಾರ್ವತ್ರಿಕಶಕ್ತಿಯ ಸ್ಥಿತಿಗೆ ಆದ ತಿರುವನ್ನು ತೋರಿಸಿ ಕೊಡುತ್ತದೆ.

ಮತ್ತು ಬಹುಶಃ ಪ್ರಭುತ್ವದ ಸಮಸ್ಯೆಗೆ ಸಂಬಂಧಿಸಿದಂತೆ ಅತ್ಯಂತ ಮಹತ್ವದ ಈ ನಿರ್ದಿಷ್ಟ, ಎದ್ದು ಕಾಣುವ ಅಂಶದ ಮೇಲೆಯೇ, ಮಾರ್ಕ್ಸ್‌ರ ವಿಚಾರಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿರುವುದು! ಜನಪ್ರಿಯ ವ್ಯಾಖ್ಯಾನಗಳಲ್ಲಿ–ಅವುಗಳ ಸಂಖ್ಯೆ ಅಪಾರವೆಂದೇ ಹೇಳಬಹುದು – ಈ ವಿಷಯವನ್ನು ಪ್ರಸ್ತಾಪಿಸುವುದಿಲ್ಲ. ಏನು ಮಾಡಲಾಗಿದೆ ಎಂದರೆ ಅದು ಹಳೇ ಶೈಲಿಯ "ಭೋಳೆತನ"ದ ಸಂಗತಿಯೇನೋ, ಎಂಬಂತೆ ಮೌನವಹಿಸಲಾಗಿದೆ, – ಕ್ರಿಶ್ಚಿಯನರು ತಮ್ಮ ಧರ್ಮಕ್ಕೆ ಪ್ರಭುತ್ವ ಧರ್ಮದ ಸ್ಥಾನಮಾನ ದೊರೆತ ನಂತರ ಪ್ರಜಾಸತ್ತಾತ್ಮಕ ಕ್ರಾಂತಿಕಾರಿ ಚೈತನ್ಯವಿದ್ದ ಆದಿಕಾಲದ ಕ್ರೈಸ್ತಮತದ "ಭೋಳೆತನ"ವನ್ನು"ಮರೆತಂತೆ."

ಉನ್ನತ ಪ್ರಭುತ್ವ ಅಧಿಕಾರಿಗಳ ಸಂಭಾವನೆಯನ್ನು ಕಮ್ಮಿ ಮಾಡಿದುದು ಭೋಳೆ, ಆದಿಕಾಲದ ಪ್ರಜಾಪ್ರಭುತ್ವದ ಬೇಡಿಕೆ 'ಅಷ್ಟೆ' ಎಂದು ತೋರಿಬರಬಹುದು. ಆಧುನಿಕ ಸಂದರ್ಭಸಾಧಕತೆಯ "ಸಂಸ್ಥಾಪಕರಲ್ಲಿ" ಒಬ್ಬರಾದ ಮಾಜಿ ಸೋಷಿಯಲ್ ಡೆಮೊಕ್ರಾಟ್ ಎಡುವಾರ್ಡ್ ಬೆರ್ನ್‌ಸ್ಟೈನ್ "ಆದಿಕಾಲ"ದ ಪ್ರಜಾಪ್ರಭುತ್ವದ ಬಗೆಗೆ ಕೀಳು ಬೂರ್ಶ್ವಾ ಅಪಹಾಸ್ಯದ ಮಾತುಗಳನ್ನು ಒಂದಲ್ಲ ಅನೇಕ ಬಾರಿ ಪುನರುಚ್ಚರಿಸಿದ್ದಾರೆ. ಎಲ್ಲ ಸಂದರ್ಭಸಾಧಕರಂತೆ ಮತ್ತು ಇಂದಿನ ಕೌತ್‌ಸ್ಕಿವಾದಿಗಳಂತೆ ಈತನೂ, ಎಲ್ಲಕ್ಕೂ ಮೊದಲಾಗಿ, "ಆದಿಕಾಲ"ದ ಪ್ರಜಾಪ್ರಭುತ್ವಕ್ಕೆ ಒಂದಿಷ್ಟು "ಮರಳಿಕೆ" ಇಲ್ಲದೆ ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಪರಿವರ್ತನೆ ಸಾಧ್ಯವಿಲ್ಲ ಎಂಬುದನ್ನು –ಅರ್ಥ ಮಾಡಿಕೊಳ್ಳಲೇ ಇಲ್ಲ (ಬೇರೆ ಯಾವ ರೀತಿಯಲ್ಲಿ ತಾನೇ ಬಹುಮತೀಯರು, ಅನಂತರ ಒಬ್ಬರೂ ಬಿಡದೆ ಇಡೀ ಜನತೆ, ಪ್ರಭುತ್ವದ ನಿರ್ವಹಣೆ ನಡೆಸುವತ್ತ ಸಾಗಬಲ್ಲರು?)ಆಮೇಲೆ ಎರಡನೆಯದಾಗಿ, ಬಂಡವಾಳಶಾಹಿ ಹಾಗೂ ಬಂಡವಾಳಶಾಹಿ ಸಂಸ್ಕೃತಿಯಮೇಲೆ ಆಧರಿಸಿದ "ಆದಿಕಾಲದ ಪ್ರಜಾಪ್ರಭುತ್ವ" ಇತಿಹಾಸಪೂರ್ವ ಅಥವಾ ಬಂಡವಾಳಶಾಹಿ ಪೂರ್ವ ಕಾಲಗಳಲ್ಲಿದ್ದ ಆದಿಕಾಲದ ಪ್ರಜಾಪ್ರಭುತ್ವವಲ್ಲ ಎಂಬುದನ್ನೂ ಅವರು ಅರ್ಥ ಮಾಡಿಕೊಳ್ಳಲಿಲ್ಲ. ಬಂಡವಾಳಶಾಹಿ ಸಂಸ್ಕೃತಿ ಬೃಹತ್ ಪ್ರಮಾಣದ ಉತ್ಪಾದನೆ, ಕಾರ್ಖಾನೆಗಳು, ರೈಲ್ವೇ, ಅಂಚೆ ವ್ಯವಸ್ಥೆ, ಟೆಲಿಫೋನ್ ಇತ್ಯಾದಿಗಳನ್ನು ಸೃಷ್ಟಿಸಿದೆ. ಮತ್ತು ಇವುಗಳ ಆಧಾರದ ಮೇಲೆ ಹಳೆಯ "ಪ್ರಭುತ್ವ ಅಧಿಕಾರದ" ಬಹುಪಾಲು ಕೆಲಸ–ಕಾರ್ಯಗಳು ಎಷ್ಟು ಸರಳಗೊಂಡಿವೆಯೆಂದರೆ ಮತ್ತು ಅವನ್ನು ನೋಂದಾಯಿಸುವ, ದಾಖಲಿಸಿ ಕೊಳ್ಳುವ ಹಾಗೂ ಶೋಧಿಸುವ ಎಂಥ ಅತ್ಯಂತ ಸರಳ ಕ್ರಿಯೆಗಳಿಗೆ ಅವನ್ನುಇಳಿಸಲು ಸಾಧ್ಯವಿದೆಯೆಂದರೆ, ಪ್ರತಿಯೊಬ್ಬ ಅಕ್ಷರಸ್ಥ ವ್ಯಕ್ತಿಯೂ ಅವನ್ನು ಸುಲಭವಾಗಿನೆರವೇರಿಸಲು ಸಾಧ್ಯ, ಸಾಮಾನ್ಯ "ಕೆಲಸಗಾರರ ಕೂಲಿ"ಗೆ ತೀರ ಸುಲಭವಾಗಿನೆರವೇರಿಸಲು ಸಾಧ್ಯ. ಈ ಕಾರ್ಯಗಳಿಗೆ ಅಂಟಿಕೊಂಡಿರುವ ಪ್ರತಿಯೊಂದು ವಿಶೇಷಾಧಿಕಾರದ ಛಾಯೆಯನ್ನೂ, "ಅಧಿಕೃತಭವ್ಯತೆ"ಯ ಪ್ರತಿಯೊಂದು ತೋರಿಕೆಯನ್ನೂ, ಅವುಗಳಿಂದ ಕಿತ್ತುಹಾಕಲು ಸಾಧ್ಯ (ಮತ್ತು ಕಿತ್ತು ಹಾಕಬೇಕು).

ಎಲ್ಲ ಅಧಿಕಾರಿಗಳೂ, ಯಾವ ವಿನಾಯ್ತಿಯೂ ಇಲ್ಲದೆ, ಚುನಾಯಿತರಾಗಬೇಕು, ಮತ್ತು ಯಾವುದೇ ಸಮಯದಲ್ಲೂ ಹಿಂದಕ್ಕೆ ಕರೆಸಿಕೊಳ್ಳುವುದಕ್ಕೆ ಅವರು ಬದ್ಧರಾಗಿರಬೇಕು, ಅವರ ಸಂಬಳಗಳನ್ನು ಸಾಮಾನ್ಯ "ಕೆಲಸಗಾರರ ಕೂಲಿ"ಯ

ಮಟ್ಟಕ್ಕೆ ಇಳಿಸಬೇಕು–ಈ ಸರಳವಾದ ಹಾಗೂ "ಸ್ವಯಂವೇದ್ಯ"ವಾದ ಪ್ರಜಾಸತ್ತಾತ್ಮಕ ಕ್ರಮಗಳು, ಕಾರ್ಮಿಕರ ಹಾಗೂ ಬಹುಪಾಲು ರೈತರ ಹಿತಗಳನ್ನು ಸಂಪೂರ್ಣವಾಗಿ ಒಂದುಗೂಡಿಸುತ್ತವೆ ಮತ್ತು ಅದೇ ಹೊತ್ತಿನಲ್ಲಿ ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಕರೆದೊಯ್ಯುವ ಸೇತುವೆಯಾಗಿಯೂ ಕೆಲಸ ಮಾಡುತ್ತವೆ. ಈ ಕ್ರಮಗಳು ಪ್ರಭುತ್ವದ ಮರುಸಂಘಟನೆಗೆ, ಸಮಾಜದ ಶುದ್ಧ ರಾಜಕೀಯ ಮರು ಸಂಘಟನೆಗೆ, ಸಂಬಂಧಿಸಿದವುಗಳು ಆದರೆ, ನಿಜ, ಅವು ಪೂರ್ಣ ಅರ್ಥವನ್ನು ಮತ್ತು ಮಹತ್ವವನ್ನು ಗಳಿಸಿಕೊಳ್ಳುವುದು "ಕಸಿದುಕೊಳ್ಳುವವರಿಂದ ಕಸಿದುಕೊಳ್ಳುವ" ಕಾರ್ಯವನ್ನು ಸಾಧಿಸುವುದಕ್ಕೆ ಅಥವಾ ಅದಕ್ಕಾಗಿ ಸಿದ್ಧತೆ ಮಾಡುವುದಕ್ಕೆ ಅಂದರೆ, ಉತ್ಪಾದನಾ ಸಾಧನಗಳನ್ನು ಬಂಡವಾಳಶಾಹಿ ಖಾಸಗಿ ಒಡೆತನದಿಂದ ಸಾಮಾಜಿಕ ಒಡೆತನಕ್ಕೆ ಪರಿವರ್ತಿಸುವುದಕ್ಕೆ ಸಂಬಂಧಿಸಿ ಮಾತ್ರವೇ.

ಮಾರ್ಕ್ಸ್, "ಕಮ್ಯೂನ್ ಎಲ್ಲ ಬೂರ್ಶ್ವಾ ಕ್ರಾಂತಿಗಳ ಧ್ಯೇಯ ನುಡಿಯಾದ ಅಗ್ಗದ ಸರಕಾರ ಎಂಬುದನ್ನು, ಸೈನ್ಯ ಮತ್ತು ಅಧಿಕಾರಿ ಸಮೂಹ ಎಂಬ ಎರಡು ಅತ್ಯಂತ ಹೆಚ್ಚು ಖರ್ಚಿನ ಮೂಲಗಳನ್ನು ರದ್ದುಗೊಳಿಸುವ ಮೂಲಕ, ವಾಸ್ತವಗೊಳಿಸಿತು" ಎಂದು ಬರೆದರು.

ಪೆಟಿ ಬೂರ್ಶ್ವಾಗಳ ಇತರ ವಿಭಾಗಗಳಂತೆ ರೈತರುಗಳಿಂದಲೂ ತೀರ ಕೆಲವೇ ಮಂದಿಯಷ್ಟೆ "ಮೇಲಿನ ಸ್ಥಾನಗಳಿಗೆ ಏರುತ್ತಾರೆ," ಬೂರ್ಶ್ವಾ ಅರ್ಥದಲ್ಲಿ "ಜಗತ್ತಿನಲ್ಲಿ ಏಳಿಗೆ ಪಡೆಯುತ್ತಾರೆ," ಅಂದರೆ, ಒಳ್ಳೆಯ ಸ್ಥಿತಿಯಲ್ಲಿರುವವರು, ಬೂರ್ಶ್ವಾಗಳುಆಗುತ್ತಾರೆ ಅಥವಾ ಸುಭದ್ರ ಹಾಗೂ ವಿಶೇಷಾಧಿಕಾರಗಳಸ್ಥಾನಗಳನ್ನುಪಡೆದಅಧಿಕಾರಿಗಳಾಗುತ್ತಾರೆ. ರೈತರಿರುವ ಪ್ರತಿಯೊಂದು ಬಂಡವಾಳಶಾಹಿ ದೇಶದಲ್ಲೂ(ಬಹುಮಟ್ಟಿಗಿನ ಬಂಡವಾಳಶಾಹಿ ದೇಶಗಳಲ್ಲಿ ಇದ್ದೇ ಇರುವಂತೆ), ಅವರಲ್ಲಿ ಬಹುಪಾಲುಮಂದಿ ಸರಕಾರದ ದಮನಕ್ಕೆ ಒಳಗಾಗಿರುತ್ತಾರೆ, ಸರಕಾರವನ್ನು ಉರುಳಿಸಲು ಮತ್ತು"ಅಗ್ಗದ" ಸರಕಾರಕ್ಕಾಗಿ ಹಂಬಲಿಸುತ್ತಿರುತ್ತಾರೆ. ಈ ಕಾರ್ಯವನ್ನು ಶ್ರಮಜೀವಿ ವರ್ಗವು ಸಾಧಿಸಬಲ್ಲುದು. ಮತ್ತು ಅದನ್ನು ಸಾಧಿಸುವ ಮೂಲಕ ಶ್ರಮಜೀವಿ ವರ್ಗವು ಅದೇ ಹೊತ್ತಿನಲ್ಲಿ ಪ್ರಭುತ್ವದ ಸಮಾಜವಾದೀ ಮರುಸಂಘಟನೆಯತ್ತ ಒಂದು ಹೆಜ್ಜೆ ಮುಂದಿಡುತ್ತದೆ.

## 3. ಪಾರ್ಲಿಮೆಂಟರಿವಾದದ ಕೊನೆ

*"ಕಮ್ಯೂನ್ ಒಂದು ಕೆಲಸ ಮಾಡುವ ಸಂಸ್ಥೆ, ಒಂದು ಪಾರ್ಲಿಮೆಂಟರಿ ಸಂಸ್ಥೆಯಲ್ಲ. ಏಕಕಾಲದಲ್ಲಿ ಕಾರ್ಯಾಂಗದ ಹಾಗೂ ಶಾಸಕಾಂಗದ ಕಾರ್ಯಗಳನ್ನು ನೆರವೇರಿಸುವಂತದ್ದು......." ಎಂದು ಮಾರ್ಕ್ಸ್ ಬರೆದರು.*

*"ಆಳುವ ವರ್ಗದ ಯಾವ ಸದಸ್ಯ ಪಾರ್ಲಿಮೆಂಟಿನಲ್ಲಿ ಜನರನ್ನು ಪ್ರತಿನಿಧಿಸಬೇಕು ಮತ್ತು ದಮನಿಸಬೇಕು ಎಂಬುದನ್ನು ಮೂರು ಅಥವಾ ಆರು ವರ್ಷಗಳಿಗೊಮ್ಮೆ ನಿರ್ಧರಿಸುವ ಬದಲು, ಸಾರ್ವತ್ರಿಕ ಮತದಾನ*

*ಕಮ್ಯೂನ್‌ಗಳಲ್ಲಿ ವ್ಯವಸ್ಥಿತರಾದ ಜನರ ಸೇವೆ ಸಲ್ಲಿಸುವಂತದ್ದು, ವೈಯಕ್ತಿಕ ಮತದಾನ ಪ್ರತಿಯೊಬ್ಬ ಮಾಲಕ*

*ತನ್ನ ವ್ಯವಹಾರಕ್ಕೆ ಕಾರ್ಮಿಕರ, ಫೋರ್ಮನ್‌ಗಳ ಹಾಗೂ ಲೆಕ್ಕಪತ್ರ ಬರೆಯುವವರ ಹುಡುಕಾಟದಲ್ಲಿ, ಸೇವೆ ಸಲ್ಲಿಸುವಂತೆ."*

ಸಾಮಾಜಿಕ–ಕುರುಡು ದೇಶಭಕ್ತಿ ಹಾಗೂ ಸಂದರ್ಭಸಾಧಕತನ ಚಾಲ್ತಿಯಲ್ಲಿರುವುದರಿಂದಾಗಿ ಪಾರ್ಲಿಮೆಂಟರಿವಾದದ ಬಗ್ಗೆ 1871ರಲ್ಲಿ ಮಾಡಿದ್ದ ಈ ಅಸಾಧಾರಣ ವಿಮರ್ಶೆ ಕೂಡ ಈಗ ಮಾರ್ಕ್ಸ್‌ವಾದದ "ಮರೆತ ಮಾತು"ಗಳಿಗೆ ಸೇರಿದೆ. ವೃತ್ತಿದಾರ ಸಂಪುಟ ಸಚಿವರುಗಳು ಮತ್ತು ಪಾರ್ಲಿಮೆಂಟ್ ಸದಸ್ಯರುಗಳು, ಶ್ರಮಜೀವಿ ವರ್ಗಕ್ಕೆ ವಿಶ್ವಾಸದ್ರೋಹ ಬಗೆದವರು ಮತ್ತು ನಮ್ಮ ಕಾಲದ "ವ್ಯಾವಹಾರಿಕ' 'ಸಮಾಜವಾದಿಗಳು ಪಾರ್ಲಿಮೆಂಟರಿವಾದದ ಎಲ್ಲ ಟೀಕೆಗಳನ್ನೂ ಅರಾಜಕತಾವಾದಿಗಳಿಗೆ ಬಿಟ್ಟುಕೊಟ್ಟಿದ್ದಾರೆ ಮತ್ತು ಈ ಅದ್ಭುತ ತರ್ಕಧ ಆಧಾರದ ಮೇಲೆ ಅವರು ಪಾರ್ಲಿಮೆಂಟರಿವಾದದ ಟೀಕೆ–ವಿಮರ್ಶೆಗಳೆಲ್ಲವನ್ನೂ "ಅರಾಜಕತಾವಾದ" ಎಂದೇ ಖಂಡಿಸುತ್ತಾರೆ !! "ಮುಂದುವರೆದ" ಪಾರ್ಲಿಮೆಂಟರಿ ವ್ಯವಸ್ಥೆಯುಳ್ಳ ದೇಶಗಳ ಶ್ರಮಜೀವಿವರ್ಗ ಇಂತಹ ಶ್ಶೈಡ್‌ಮನ್‌ಗಳು, ಡೇವೀಡ್‌ಗಳು, ಲೇಗೀನ್ಸ್‌ಗಳು, ಸೆಂಬಾಗಳು, ರೆನೊದೇಲ್‌ಗಳು, ಹೆಂಡೆರ್‌ಸನ್‌ಗಳು, ವಾಂದೆರ್‌ವೆಲ್ದೆಗಳು, ಸ್ತೌನಿಂಗ್‌ಗಳು, ಬ್ರಾಂಟಿಂಗ್‌ಗಳು, ಬಿಸ್ಸೊಲಾತಿಗಳು ಇವರೇ ಮುಂತಾದ "ಸಮಾಜವಾದಿ"ಗಳವರ್ತನೆಯಿಂದ ಬೇಸರಗೊಂಡು ಹೆಚ್ಚು ಹೆಚ್ಚಾಗಿ ತನ್ನ ಸಹಾನುಭೂತಿಯನ್ನು ಅರಾಜಕತಾ–ಸಿಂಡಿಕಾಲಿಸಂಗೆ ತೋರುತ್ತಿದೆ–ಅದು ಸಂದರ್ಭಸಾಧಕತನದ ಅವಳಿಯಷ್ಟೇ ಆಗಿದ್ದರೂಸಹ.

ಆದರೆ ಮಾರ್ಕ್ಸ್‌ಗೆ ಕ್ರಾಂತಿಕಾರಿ ದ್ವಂದ್ವಾತ್ಮಕತೆ ಎಂದೂ ಪ್ಲೆಹಾನೊವ್, ಕೌತ್‌ಸ್ಕಿ ಮತ್ತಿತರರು ಅದನ್ನು ಮಾಡಿರುವಂತೆ ಟೊಳ್ಳು ಷೋಕಿಯ ಪದಗುಚ್ಛವಾಗಿರಲಿಲ್ಲ, ಆಟಿಕೆಯ ಸದ್ದಾಗಿರಲಿಲ್ಲ. ಮಾರ್ಕ್ಸ್‌ಗೆ ಬೂರ್ಶ್ವಾ ಪಾರ್ಲಿಮೆಂಟರಿವಾದದ "ಹಂದಿಕೂಪ" ಗಳನ್ನೂ ಕೂಡ ಬಳಸಲಾರದ ಅರಾಕತಾವಾದದ ಅಸಮರ್ಥತೆಗಾಗಿ ಅದರೊಂದಿಗೆ ನಿಷ್ಕರುಣೆಯಿಂದ ಸಂಬಂಧ ಕಡಿದುಕೊಳ್ಳುವುದು ಹೇಗೆಂಬುದು ತಿಳಿದಿತ್ತು. ಆದರೆ ಅದೇ ಹೊತ್ತಿನಲ್ಲಿ ಅವರು ಪಾರ್ಲಿಮೆಂಟರಿವಾದವನ್ನು ಹೇಗೆ ನಿಜಕ್ಕೂ ಕ್ರಾಂತಿಕಾರಿಯಾದ ಶ್ರಮಜೀವಿ ವರ್ಗದ ವಿಮರ್ಶೆಗೆ ಗುರಿಪಡಿಸಬೇಕೆಂಬುದನ್ನೂ ತಿಳಿದಿದ್ದರು.

ಪ್ರತಿ ಕೆಲವು ವರ್ಷಗಳಿಗೊಮ್ಮೆ ಆಳುವ ವರ್ಗದ ಯಾವ ಸದಸ್ಯ ಜನರನ್ನು ಪಾರ್ಲಿಮೆಂಟ್ ಮೂಲಕ ದಮನ ಮಾಡಬೇಕು, ತುಳಿದು ಹಾಕಬೇಕು ಎಂಬುದನ್ನು ನಿರ್ಧರಿಸುವುದು–ಇದೇ ಬೂರ್ಶ್ವಾ ಪಾರ್ಲಿಮೆಂಟರಿವಾದದ ನಿಜವಾದ ಸಾರವಾಗಿದೆ, ಇದು ಪಾರ್ಲಿಮೆಂಟರಿ–ಸಂವಿಧಾನಾತ್ಮಕ ರಾಜಪ್ರಭುತ್ವಗಳಲ್ಲಷ್ಟೇ ಅಲ್ಲ, ಅತ್ಯಂತ ಪ್ರಜಾಸತ್ತಾತ್ಮಕ ಗಣತಂತ್ರಗಳಲ್ಲೂ ಸಹ.

ಆದರೆ ನಾವು ಪ್ರಭುತ್ವದ ಪ್ರಶ್ನೆಯನ್ನು ಪರಿಶೀಲಿಸುತ್ತಿದ್ದರೆ, ಪಾರ್ಲಿಮೆಂಟರಿವಾದ ಪ್ರಭುತ್ವದ ಸಂಸ್ಥೆಗಳಲ್ಲಿ ಒಂದು ಎಂದು ನಾವು ಪರಿಗಣಿಸಿದರೆ, ಈ ರಂಗದಲ್ಲಿ ಶ್ರಮಜೀವಿವರ್ಗದ ಕಾರ್ಯಭಾರಗಳ ದೃಷ್ಟಿಯಿಂದ ಈ ಪಾರ್ಲಿಮೆಂಟರಿವಾದದಿಂದ ಹೊರಬರುವ ಮಾರ್ಗ ಯಾವುದು? ಅದನ್ನು ನಿವಾರಿಸುವುದು ಹೇಗೆ?

ಮತ್ತೊಮ್ಮೆ ನಾವು ಈ ಮಾತನ್ನು ಹೇಳಬೇಕು: ಕಮ್ಯೂನ್‌ನ ಅಧ್ಯಯನದ ಮೇಲೆ ಆಧರಿಸಿದ ಮಾರ್ಕ್ಸ್‌ರ ಪಾಟಗಳನ್ನು ಇಂದಿನ "ಸೋಶಿಯಲ್ ಡೆಮೊಕ್ರಾಟ್" (ಅಂದರೆ ಇಂದು ಸಮಾಜವಾದಕ್ಕೆ ದ್ರೋಹ ಬಗೆಯುವಾತ) ಎಷ್ಟು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೆಂದರೆ ಆತ ಪಾರ್ಲಿಮೆಂಟರಿವಾದದ ಅರಾಜಕತಾವಾದಿ ಅಥವಾ ಪ್ರತಿಗಾಮಿ ಟೀಕೆಯನ್ನು ಬಿಟ್ಟು ಬೇರಾವ ಟೀಕೆಯನ್ನೂ ನಿಜಕ್ಕೂ ಅರ್ಥಮಾಡಿಕೊಳ್ಳಲಾರ.

ನಿಜ, ಪಾರ್ಲಿಮೆಂಟರಿವಾದದಿಂದ ಹೊರಬರುವ ಮಾರ್ಗ ಎಂದರೆ ಪ್ರಾತಿನಿಧಿಕ ಸಂಸ್ಥೆಗಳನ್ನು ಮತ್ತು ಆಯ್ಕೆಯ ಸೂತ್ರವನ್ನು ಕೊನೆಗೊಳಿಸುವುದಲ್ಲ, ಬದಲಿಗೆ, ಈ ಪ್ರಾತಿನಿಧಿಕ ಸಂಸ್ಥೆಗಳು ಮಾತುಗಾರಿಕೆಯ ಚಾವಡಿಗಳಾಗದೆ "ಕೆಲಸ ಮಾಡುವ" ಸಂಸ್ಥೆಗಳಾಗುವಂತೆ ಪರಿವರ್ತಿಸುವುದು. "ಕಮ್ಯೂನ್ ಒಂದು ಕೆಲಸ ಮಾಡುವ ಸಂಸ್ಥೆ, ಒಂದು ಪಾರ್ಲಿಮೆಂಟರಿ ಸಂಸ್ಥೆಯಲ್ಲ. ಏಕಕಾಲದಲ್ಲಿ ಕಾರ್ಯಾಂಗದ ಹಾಗೂ ಶಾಸಕಾಂಗದ ಕಾರ್ಯಗಳನ್ನು ನೆರವೇರಿಸುವಂತದ್ದು."

"ಒಂದು ಕೆಲಸ ಮಾಡುವ, ಪಾರ್ಲಿಮೆಂಟರಿಯಲ್ಲದ ಸಂಸ್ಥೆ" – ಇದು ಇಂದಿನ ಪಾರ್ಲಿಮೆಂಟರಿ ದೇಶಗಳಿಗೆ, ಅಮೆರಿಕದಿಂದ ಸ್ವಿಟ್ಸರ್ಲೆಂಡ್‌ವರೆಗೆ, ಫ್ರಾನ್ಸಿನಿಂದ ಬ್ರಿಟನ್‌ವರೆಗೆ, ನಾರ್ವೆ ಮತ್ತು ಇತರ ದೇಶದವರೆಗೆ ಮಾಡಿರುವ ನೇರ ಪ್ರಹಾರ. ಈ ದೇಶಗಳಲ್ಲಿ "ಪ್ರಭುತ್ವ"ದ ನಿಜವಾದ ವ್ಯವಹಾರವನ್ನು ಪರದೆಯ ಹಿಂದೆ ಮಾಡಲಾಗುತ್ತದೆ, ವಿವಿಧ ಇಲಾಖೆಗಳು, ಕಾರ್ಯಾಲಯಗಳು ಮತ್ತು ಅಧಿಕಾರಿ ಸಮೂಹಗಳು ನಡೆಸುತ್ತವೆ.ಪಾರ್ಲಿಮೆಂಟನ್ನು "ಸಾಮಾನ್ಯ ಜನ"ರನ್ನು ಮೋಸಗೊಳಿಸುವ ವಿಶೇಷ ಉದ್ದೇಶದಿಂದ ಮಾತನಾಡಲು ಬಿಡಲಾಗಿರುತ್ತದೆ. ಇದು ಎಷ್ಟು ನಿಜವೆಂದರೆ, ಬೂರ್ಶ್ವಾ ಪ್ರಜಾಸತ್ತಾತ್ಮಕ ಗಣತಂತ್ರವಾದ ರಶಿಯನ್ ಗಣತಂತ್ರದಲ್ಲೂ ಸಹ ಅದು ನಿಜವಾದ ಪಾರ್ಲಿಮೆಂಟನ್ನು ಸ್ಥಾಪಿಸಲು ಮುಂದಾಗುವ ಮುನ್ನವೇ ಪಾರ್ಲಿಮೆಂಟರಿವಾದದ ಈ ಎಲ್ಲ ಪಾಪಗಳೂ ಒಮ್ಮೆಗೇ ಹೊರಬಂದವು. ಸ್ಕೋಬೆಲೆವ್‌ಗಳು ಹಾಗೂ ತ್ಸೆರೆತೇಲಿಗಳು, ಚೆರ್ನೋವ್ ಹಾಗೂ ಅವ್‌ಕ್ಸೆಂತ್ಯೆವ್‌ಗಳಂತಹ ಕೊಳೆತ ಮೂಢಮತಿ ವೀರರು ಅತ್ಯಂತ ಅಸಹ್ಯ ಬೂರ್ಶ್ವಾ ಪಾರ್ಲಿಮೆಂಟರಿವಾದದ ಶೈಲಿಯನ್ನು ಅನುಸರಿಸಿ ಸೋವಿಯತ್‌ಗಳನ್ನೂ ಕೇವಲ ಮಾತುಗಾರಿಕೆಯ ಚಾವಡಿಗಳನ್ನಾಗಿ ಪರಿವರ್ತಿಸುವ ಮೂಲಕ ಕಲುಷಿತಗೊಳಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಸೋವಿಯತ್‌ಗಳಲ್ಲಿ "ಸಮಾಜವಾದಿ" ಸಚಿವರುಗಳು ಎಲ್ಲವನ್ನೂ ನಂಬುವ ಹಳ್ಳಿಗರನ್ನು ಆಡಂಬರದ ಮಾತುಗಾರಿಕೆಯಿಂದ ಮತ್ತು ನಿರ್ಣಯಗಳಿಂದ ಮೋಸಗೊಳಿಸುತ್ತಿದ್ದಾರೆ. ಸರಕಾರದಲ್ಲೇ ಒಂದು ರೀತಿಯ ಖಾಯಂ ಕಲ–ಬೆರಕೆ ನಡೆಯುತ್ತಿದೆ, ಈ ಮೂಲಕ ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯ  ಸಮಾಜವಾದಿ–ಕ್ರಾಂತಿಕಾರಿಗಳೂ, ಮೆನ್ಷೆವಿಕರೂ ಒಬ್ಬರಾದ ಮೇಲೆ ಒಬ್ಬರಂತೆ "ಕಡುಬಿ"ನ ಲಾಭದಾಯಕ ಹಾಗೂ ಗೌರವಾರ್ಹ ಹುದ್ದೆಗಳ ಸಮೀಪ ಹೋಗಲು, ಅವನ್ನು ಪಡೆಯಲು–ಸಾಧ್ಯವಾಗಬಹುದು; ಮತ್ತೊಂದೆಡೆಯಲ್ಲಿ ಜನರ "ಗಮನ"ವನ್ನು"ಹಿಡಿದಿರಿಸಿ", ಆ ನಡುವೆ ಕಚೇರಿಗಳು ಮತ್ತು ಸೇನಾಲಯಗಳು "ಪ್ರಭುತ್ವ"ದ ವ್ಯವಹಾರಗಳನ್ನು "ಮಾಡಲು" ಹೋಗಲು ಸಾಧ್ಯವಾಗಬಹುದು ಎಂದು.

'ದ್ಯೇಲೊ ನರೊದಾ'[2], ಆಳುವ ಸಮಾಜವಾದಿ–ಕ್ರಾಂತಿಕಾರಿಗಳ ಪಕ್ಷದ ಮುಖಪತ್ರಿಕೆ, ಈಚೆಗೆ ಒಂದು ಪ್ರಮುಖ ಲೇಖನದಲ್ಲಿ, "ಸಮಾಜವಾದಿಗಳು" (ಹೀಗೆ ಹೇಳುವುದಕ್ಕೆ ಕ್ಷಮೆಯಿರಲಿ) ಮುಖ್ಯಸ್ಥರಾಗಿರುವ ಸಚಿವಾಲಯಗಳಲ್ಲೂ ಸಹ ಇಡೀ ಅಧಿಕಾರಶಾಹಿ ಯಂತ್ರ ವಾಸ್ತವವಾಗಿ ಬದಲಾಗದೆ ಹಾಗೇ ಉಳಿದಿದೆ, ಹಳೆಯ ರೀತಿಯಲ್ಲೇ ಕೆಲಸ ಮಾಡುತ್ತಿದೆ ಮತ್ತು ಸಾಕಷ್ಟು 'ಮುಕ್ತವಾಗಿಯೇ' ಕ್ರಾಂತಿಕಾರಿ ಕ್ರಮಗಳನ್ನು ಸಂಪೂರ್ಣವಾಗಿ ಬುಡಮೇಲು ಮಾಡುತ್ತಿದೆ, ಧ್ವಂಸ ಮಾಡುತ್ತಿದೆ ಎಂದು ಒಪ್ಪಿಕೊಂಡಿದೆ– "ಎಲ್ಲರೂ"ರಾಜಕೀಯ ವ್ಯಭಿಚಾರದಲ್ಲಿ ತೊಡಗಿರುವ "ಉತ್ತಮ ಸಮಾಜ"ದ ಜನರ ಸಾಟಿಯಿಲ್ಲದ ಬಿಚ್ಚುಮನಸ್ಸಿನಿಂದ ಒಪ್ಪಿಕೊಂಡು ಬರೆದಿದೆ! ಈ ತಪ್ಪೊಪ್ಪಿಗೆ ಇಲ್ಲದಿದ್ದರೂ, ಸಮಾಜವಾದಿ–ಕ್ರಾಂತಿಕಾರಿಗಳು ಮತ್ತು ಮೆನ್ಷೆವಿಕರು ಸರಕಾರದಲ್ಲಿ ಭಾಗವಹಿಸುತ್ತಿರುವುದರ ನಿಜವಾದ ಇತಿಹಾಸವೇ ಇದನ್ನು ಸಾಬೀತು ಪಡಿಸುವುದಿಲ್ಲವೇ? ಕೇಡೆಟ್‌ಗಳ ಸಚಿವರ ಸಾಂಗತ್ಯದಲ್ಲಿ, ಚೆರ್ನೋೀವ್‌ಗಳು, ರುಸಾನೊವ್‌ಗಳು, ಜೆನ್ಜಿನೊವ್‌ಗಳು ಮತ್ತಿತರರ "ದ್ಯೇಲೊ ನರೋದ" ಪತ್ರಿಕೆಯ ಸಂಪಾದಕರು ಎಷ್ಟು ಸಂಪೂರ್ಣವಾಗಿ ನಾಚಿಕೆಹೀನರಾಗಿದ್ದಾರೆ ಎಂದರೆ, "ತಮ್ಮ" ಸಚಿವಾಲಯಗಳಲ್ಲಿ ಏನೊಂದೂ ಬದಲಾಗಿಲ್ಲವೆಂದು, ಅದೊಂದು ಸಣ್ಣ ಗೋಲಿಯಾಟವಷ್ಟೇ ಎಂಬಂತೆ, ಭಂಡತನದಿಂದ ಒತ್ತಿ ಹೇಳುತ್ತಿದ್ದಾರೆ ಎಂಬುದು ಗಮನಾರ್ಹ!! ಗ್ರಾಮಾಂತರದ ಸರಳ ಸೈಮನ್ನರುಗಳನ್ನು ಗುಗ್ಗುಗಳಾಗಿ ಮಾಡಲು ಆಡಂಬರದ ಕ್ರಾಂತಿಕಾರಿ–ಪ್ರಜಾಸತ್ತಾತ್ಮಕ ಮಾತುಗಳು, ಬಂಡವಾಳಶಾಹಿಗಳ "ಹೃದಯಗಳನ್ನು ಹಿಗ್ಗಿಸಲು" ಅಧಿಕಾರಶಾಹಿ ಹಾಗೂ ಕೆಂಪುಪಟ್ಟಿ–ಇದೇ "ಸಾಚಾ" ಸಮ್ಮಿಶ್ರ ಕೂಟದ ಸಾರ.

ಕಮ್ಯೂನ್, ಬೂರ್ಶ್ವಾ ಸಮಾಜದ ಕೊಳೆತ ಮತ್ತು ಲಂಚಕೋರ ಪಾರ್ಲಿಮೆಂಟರಿ ವಾದದ ಸ್ಥಳದಲ್ಲಿ, ಅಭಿಪ್ರಾಯ ಹಾಗೂ ಚರ್ಚಾ ಸ್ವಾತಂತ್ರ್ಯವು ವಂಚನೆಯಾಗಿ ಅವನತಿಗೊಳ್ಳದಂಥ ಸಂಸ್ಥೆಗಳನ್ನು ಸ್ಥಾಪಿಸುತ್ತದೆ. ಏಕೆಂದರೆ ಇಲ್ಲಿ

ಪಾರ್ಲಿಮೆಂಟ್ ಸದಸ್ಯರುಗಳು ತಾವೇ ಕೆಲಸ ಮಾಡಬೇಕು, ತಮ್ಮದೇ ಶಾಸನಗಳನ್ನು ತಾವೇ ಕಾರ್ಯಗತಗೊಳಿಸಬೇಕು, ವಾಸ್ತವವಾಗಿ ಸಾಧಿಸಿದ ಫಲಿತಾಂಶಗಳನ್ನು ತಾವೇ ಪರೀಕ್ಷಿಸಬೇಕು ಮತ್ತು ತಮ್ಮ ಮತದಾರರಿಗೆ ನೇರವಾಗಿ ಜವಾಬ್ದಾರರಾಗಿರಬೇಕು. ಪ್ರಾತಿನಿಧಿಕ ಸಂಸ್ಥೆಗಳು ಉಳಿಯುತ್ತವೆ. ಆದರೆ ಇಲ್ಲಿ ಒಂದು ವಿಶೇಷ ವ್ಯವಸ್ಥೆಯಾಗಿ,

---

2 ದ್ಯೇಲೊ ನರೋದ(ಜನತಾ ಕಾರ್ಯ): ಸಮಾಜವಾದಿ–ಕ್ರಾಂತಿಕಾರಿಗಳ ಪಾರ್ಟಿಯ ಮುಖಪತ್ರವಾಗಿದ್ದ ದಿನಪತ್ರಿಕೆ. ಇದು ಪೆತ್ರೋಗ್ರಾದ್‌ನಿಂದ ಮಾರ್ಚ್ 1917ರಿಂದ ಜುಲೈ 1918ರವರೆಗೆ ಅನೇಕ ಬಾರಿ ಹೆಸರು ಬದಲಿಸಿಕೊಂಡು ಪ್ರಕಟವಾಗುತ್ತಿತ್ತು. ಇದು ರಕ್ಷಣಾತ್ಮಕ ರಾಜಿ ಮನೋಭಾವದ ನಿಲುವನ್ನು ಅನುಸರಿಸುತ್ತಿತ್ತು. ಬೂರ್ಷ್ವಾ ತಾತ್ಕಾಲಿಕ ಸರಕಾರಕ್ಕೆ ಬೆಂಬಲ ನೀಡಿತು. ಇದರ ಪ್ರಕಟಣೆಯನ್ನು ಮತ್ತೆ 1918ರ ಅಕ್ಟೋಬರ್‌ನಲ್ಲಿ ಸಮಾರದಲ್ಲಿ ಪ್ರಾರಂಭಿಸಲಾಯಿತು. ಅಲ್ಲಿ ಇದರ ನಾಲ್ಕು ಸಂಚಿಕೆಗಳು ಹೊರಬಂದವು. ಅನಂತರ 1919ರ ಮಾರ್ಚ್‌ನಲ್ಲಿ ಇದರ 10 ಸಂಚಿಕೆಗಳು ಮಾಸ್ಕೋದಿಂದ ಹೊರಬಂದವು. ಕ್ರಾಂತಿ–ವಿರೋಧಿ ಚಟುವಟಿಕೆಗಳಿಗಾಗಿ ಈ ಪತ್ರಿಕೆಯನ್ನು ಮುಚ್ಚಿಸಲಾಯಿತು.

ಶಾಸಕಾಂಗ ಹಾಗೂ ಕಾರ್ಯಾಂಗದ ನಡುವೆ ಶ್ರಮ ವಿಭಜನೆ ಮಾಡುವ, ಪ್ರತಿನಿಧಿಗಳಿಗೆ ವಿಶೇಷ ಸ್ಥಾನಮಾನ ನೀಡುವ ಪಾರ್ಲಿಮೆಂಟರಿವಾದ ಇರುವುದಿಲ್ಲ. ಪ್ರಾತಿನಿಧಿಕ ಸಂಸ್ಥೆಗಳಿಲ್ಲದ ಪ್ರಜಾಪ್ರಭುತ್ವವನ್ನು, ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವವನ್ನೂ ಸಹ,ನಾವು ಕಲ್ಪಿಸಿಕೊಳ್ಳಲಾರೆವು. ಆದರೆ ಬೂರ್ಶ್ವಾ ಸಮಾಜದ ಟೀಕೆ ನಮಗೆ ಪದಗಳಷ್ಟೇ ಆಗಿರದಿದ್ದರೆ, ಬೂರ್ಶ್ವಾಗಳನ್ನು ಕಿತ್ತೆಸೆಯುವುದು ಮೆನ್ಷೆವಿಕರಿಗೆ ಹಾಗೂ ಸಮಾಜವಾದಿ–ಕ್ರಾಂತಿಕಾರಿಗಳಿಗೆ, ಷ್ಯೆಡ್ ಮನ್‌ಗಳು ಮತ್ತು ಲೇಗೀನ್‌ಗಳು, ಸೆಂಬಾಗಳು ಮತ್ತುವಾಂದೆರ್‌ವೆಲ್ದೆಗಳಿಗೆ ಇರುವಂತೆ ಕಾರ್ಮಿಕರ ಮತಗಳನ್ನು ಗಿಟ್ಟಿಸಿಕೊಳ್ಳುವ “ಚುನಾವಣಾ” ಕೂಗಷ್ಟೇ ಆಗಿರದೆ ನಮ್ಮ ಶ್ರದ್ಧಾಪೂರ್ಣ ಹಾಗೂ ಪ್ರಾಮಾಣಿಕ ಬಯಕೆಯಾಗಿದ್ದರೆ, ನಾವು ಪಾರ್ಲಿಮೆಂಟರೀವಾದವಿಲ್ಲದ ಪ್ರಜಾಪ್ರಭುತ್ವವನ್ನು ಕಲ್ಪಿಸಿಕೊಳ್ಳಬಲ್ಲೆವು ಮತ್ತು ಕಲ್ಪಿಸಿಕೊಳ್ಳಬೇಕು.

ಕಮ್ಯೂನ್‌ಗೆ ಮತ್ತು ಶ್ರಮಜೀವಿ ವರ್ಗದ ಪ್ರಜಾಪ್ರಭುತ್ವಕ್ಕೆ ಅವಶ್ಯರಾದ ಆಅಧಿಕಾರಿಗಳ ಕಾರ್ಯದ ಬಗೆಗೆ ಮಾತನಾಡುತ್ತ ಮಾರ್ಕ್ಸ್ ಅವರನ್ನು “ಪ್ರತಿ ಒಬ್ಬನಲ್ಲಒಬ್ಬ ಯಜಮಾನ”ನ ಕೆಲಸಗಾರರೊಂದಿಗೆ, ಅಂದರೆ ಸಾಮಾನ್ಯ ಬಂಡವಾಳಶಾಹಿ ಉದ್ಯಮದ “ಕಾರ್ಮಿಕರು, ಫೋರ್ಮನ್ನರು ಹಾಗೂ ಲೆಕ್ಕ ಬರೆಯುವವರೊಂದಿಗೆ” ಹೋಲಿಸುತ್ತಾರೆ ಎಂಬುದನ್ನು ಗಮನಿಸುವುದು ತುಂಬ ಬೋಧಪ್ರದವಾಗಿದೆ.

ಮಾರ್ಕ್ಸ್ ಒಂದು “ಹೊಸ” ಸಮಾಜವನ್ನು ಕಲ್ಪಿಸಿದರು ಅಥವಾ ಆವಿಷ್ಕರಿಸಿದರುಎಂಬ ಅರ್ಥದಲ್ಲಿ ಅವರಲ್ಲಿ ಕಾಲ್ಪನಿಕ ಲೋಕದಲ್ಲಿ ವಿಹರಿಸುವ ಒಂದಿಷ್ಟು ಛಾಯೆಯೂ ಇಲ್ಲ. ಇಲ್ಲ, ಅವರು ಹೊಸ ಸಮಾಜವು ಹಳತರಿಂದ ಹುಟ್ಟಿಕೊಂಡುದನ್ನು ಅಭ್ಯಸಿಸಿದರು. ಹಳತರಿಂದ ಹೊಸತಕ್ಕೆ ಪರಿವರ್ತನೆಯ ರೂಪಗಳನ್ನು ಒಂದು ಸಾಮೂಹಿಕ ಶ್ರಮಿಕ

ವರ್ಗದ ಆಂದೋಲನವಾಗಿ ಅಭ್ಯಸಿಸಿದರು. ಮತ್ತು ಅದರಿಂದ ವ್ಯಾವಹಾರಿಕ ಪಾಠಗಳನ್ನು ಕಲಿಯಲು ಯತ್ನಿಸಿದರು. ಅವರು ಕಮ್ಯೂನಿನಿಂದ “ಕಲಿತರು”, ಎಲ್ಲ ಮಹಾ ಕ್ರಾಂತಿಕಾರಿ ಚಿಂತಕರು ದಮನಕ್ಕೊಳಗಾದ ವರ್ಗಗಳ ಮಹಾ ಆಂದೋಲನಗಳ ಅನುಭವದಿಂದ ಯಾವುದೇ ಮುಲಾಜಿಲ್ಲದೆ ಕಲಿಯುವಂತೆ, ಮತ್ತು ಎಂದೂ ಅವುಗಳಿಗೆ ಒಣಪಾಂಡಿತ್ಯದ “ನೀತಿಬೋಧೆ”ಗಳನ್ನು(“ಅವರು ಶಸ್ತ್ರ ಕೈಗೆತ್ತಿಕೊಳ್ಳಬಾರದಿತ್ತು’ ಎಂದು ಪ್ಲೆಹಾನೊವ್, “ಒಂದು ವರ್ಗವು ತನಗೆ ತಾನೇ ಮಿತಿ ಹಾಕಿಕೊಳ್ಳಬೇಕು” ಎಂದು ತ್ಸೆರೆತೇಲಿ ಹೇಳಿದಂತೆ)ಹೇಳಹೋಗಲಿಲ್ಲ.

ಅಧಿಕಾರಶಾಹಿಯನ್ನು ಕೂಡಲೇ ಎಲ್ಲೆಲ್ಲೂ ಮತ್ತು ಸಂಪೂರ್ಣವಾಗಿ ಅಂತ್ಯಗೊಳಿಸುವುದು ಸಾಧ್ಯವಿಲ್ಲದ ಮಾತು. ಅದೊಂದು ಅಸಾಧ್ಯ ಕಲ್ಪನಾವಿಹಾರ. ಆದರೆ ಹಳೆಯ ಅಧಿಕಾರಶಾಹಿ ಯಂತ್ರವನ್ನು ಕೂಡಲೇ ಪುಡಿಗುಟ್ಟುವುದು ಮತ್ತು ಎಲ್ಲ ಅಧಿಕಾರಶಾಹಿಯನ್ನೂ ಕ್ರಮೇಣ ಅಂತ್ಯಗೊಳಿಸುವುದನ್ನು ಸಾಧ್ಯವಾಗಿಸುವ ಒಂದು ಹೊಸಯಂತ್ರವನ್ನು ಕೂಡಲೇ ನಿರ್ಮಿಸತೊಡಗುವುದು– ಇದು ಕಲ್ಪನಾ ವಿಹಾರವಲ್ಲ. ಅದು ಕಮ್ಯೂನ್‌ನ ಅನುಭವ, ಕ್ರಾಂತಿಕಾರಿ ಶ್ರಮಜೀವಿ ವರ್ಗದ ನೇರ ಹಾಗೂ ತಕ್ಷಣದ ಕಾರ್ಯಭಾರ.

ಬಂಡವಾಳಶಾಹಿ "ಪ್ರಭುತ್ವ" ಆಡಳಿತದ ಕ್ರಿಯೆಗಳನ್ನು ಸರಳೀಕರಿಸುತ್ತದೆ; ಅದರಿಂದಾಗಿ "ಯಜಮಾನಿಕೆ ನಡೆಸು"ವುದನ್ನು ಪಕ್ಕಕ್ಕೆ ತಳ್ಳಿ ಇಡೀ ವಿಷಯವನ್ನು ಶ್ರಮಜೀವಿಗಳನ್ನು (ಆಳುವ ವರ್ಗವಾಗಿ) ಸಂಘಟಿಸುವುದಕ್ಕೆ ಸೀಮಿತಗೊಳಿಸುವುದು ಸಾಧ್ಯವಾಗುತ್ತದೆ. ಹೀಗೆ ಸಂಘಟಿತವಾದ ಶ್ರಮಜೀವಿ ವರ್ಗವು ಇಡೀ ಸಮಾಜದ ಹೆಸರಿನಲ್ಲಿ "ಕಾರ್ಮಿಕರನ್ನು, ಫೋರ್ಮನ್ನರನ್ನು ಮತ್ತು ಲೆಕ್ಕ ಬರೆಯುವವರನ್ನು" ಕೆಲಸ ಮಾಡಲು ನೇಮಕಗೊಳಿಸುತ್ತದೆ.

ನಾವೇನೂ ಕಲ್ಪನಾವಿಹಾರಿಗಳಲ್ಲ. ನಾವು ಎಲ್ಲ ಆಡಳಿತವನ್ನು, ಅದರೊಂದಿಗೆ ಎಲ್ಲ ಅಡಿಯಾಳುತನವನ್ನು ಒಮ್ಮೆಗೇ ತೊಲಗಿಸಿ ಬಿಡುವ "ಕನಸು" ಕಾಣುವುದಿಲ್ಲ.ಶ್ರಮಜೀವಿ ವರ್ಗದ ಸರ್ವಾಧಿಕಾರದ ಕಾರ್ಯಭಾರಗಳನ್ನು ಗ್ರಹಿಸಿಕೊಳ್ಳದ ಈಅರಾಜಕತಾವಾದಿ ಕನಸುಗಳು ಮಾರ್ಕ್ಸ್‌ವಾದಕ್ಕೆ ಸಂಪೂರ್ಣವಾಗಿ ಪರಕೀಯವಾದವುಗಳು, ಮತ್ತು ಅವು ಜನರು ಭಿನ್ನರಾಗುವವರೆಗೆ ಸಮಾಜವಾದಿ ಕ್ರಾಂತಿಯನ್ನು ಮುಂದೆ ಹಾಕುವ ಕೆಲಸವನ್ನಷ್ಟೇ ಮಾಡಬಲ್ಲವು. ಇಲ್ಲ, ನಮಗೆ ಸಮಾಜವಾದಿ ಕ್ರಾಂತಿಯು ಈಗ ಹೇಗಿದ್ದಾರೋ ಹಾಗೆಯೇ ಇರುವ ಜನರೊಂದಿಗೆ, ಅಡಿಯಾಳುತನ, ಹತೋಟಿಯನ್ನು ತೊಲಗಿಸಲಾರದ ಜನರೊಂದಿಗೆ ಮತ್ತು "ಫೋರ್ಮನ್ ಮತ್ತು ಲೆಕ್ಕ ಬರೆಯುವವರ" ಜೊತೆಗೆ ಸಾಮಾಜಿಕ ಕ್ರಾಂತಿ ಬೇಕಾಗಿದೆ.

ಆದರೆ ಅಧೀನತೆ ಎಲ್ಲ ಶೋಷಿತ ಹಾಗೂ ದುಡಿಯುವ ಜನರ ಸಶಸ್ತ್ರ ಮುಂಚೂಣಿಗೆ, ಅಂದರೆ, ಎಲ್ಲ ಶೋಷಿತರಿಗೆ ಮತ್ತು ದುಡಿಯುವ ಜನತೆಗೆ, ಅಂದರೆ ಶ್ರಮಜೀವಿವರ್ಗಕ್ಕೆ ಇರಬೇಕು. ಪ್ರಭುತ್ವ ಅಧಿಕಾರಿಗಳ ನಿರ್ದಿಷ್ಟ "ಯಜಮಾನಿಕೆ"ಯ ಸ್ಥಳದಲ್ಲಿ"ಫೋರ್ಮನ್ ಹಾಗೂ ಲೆಕ್ಕಬರೆಯುವವರ" ಸರಳ ಕರ್ತವ್ಯಗಳನ್ನು ಸ್ಥಾಪಿಸುವ ಕಾರ್ಯದ ಆರಂಭವನ್ನು ಒಮ್ಮೆಗೇ ರಾತ್ರೋರಾತ್ರಿ ಮಾಡಲು ಸಾಧ್ಯ ಮತ್ತು ಮಾಡಬೇಕು. ಈಕೆಲಸಗಳು ಆಗಲೇ ಸರಾಸರಿ ಪಟ್ಟಣವಾಸಿಯ ಸಾಮರ್ಥ್ಯದೊಳಗೇ ಸಂಪೂರ್ಣವಾಗಿಇವೆ ಮತ್ತು ಆತ ಅವನ್ನು "ಕೆಲಸಗಾರರ ಕೂಲಿ"ಗೇ ಮಾಡಬಲ್ಲ.

ನಾವು, ಕಾರ್ಮಿಕರು, ಬಂಡವಾಳಶಾಹಿಯು ಆಗಲೇ ಏನನ್ನು ಸೃಷ್ಟಿಸಿದೆಯೋಅದರ ಆಧಾರದ ಮೇಲೆ, ಕಾರ್ಮಿಕರಾಗಿ ನಮ್ಮ ಸ್ವಂತ ಅನುಭವವನ್ನು ಅವಲಂಬಿಸಿ ಸಶಸ್ತ್ರ ಕಾರ್ಮಿಕರ ಪ್ರಭುತ್ವಾಧಿಕಾರದ ಬೆಂಬಲದೊಂದಿಗೆ ಕಟ್ಟುನಿಟ್ಟಾದ, ಉಕ್ಕಿನ ಶಿಸ್ತನ್ನು ಸ್ಥಾಪಿಸಿ, ಬೃಹತ್ ಪ್ರಮಾಣದ ಉತ್ಪಾದನೆಯನ್ನು ಸಂಘಟಿಸುತ್ತೇವೆ. ನಾವು ಪ್ರಭುತ್ವ

ಅಧಿಕಾರಿಗಳ ಪಾತ್ರವನ್ನು ಜವಾಬ್ದಾರಿಯುತರಾದ, ಹಿಂದಕ್ಕೆ ಕರೆಸಿಕೊಳ್ಳಲು ಸಾಧ್ಯವಿರುವಂಥ, ಸಾಧಾರಣ ಸಂಬಳದ "ಫೋರ್ಮನ್ನರು ಮತ್ತು ಲೆಕ್ಕ ಬರೆಯುವವರಾಗಿ" (ನಿಜ, ಎಲ್ಲ ರೀತಿಗಳ ಮಾದರಿಗಳ ಹಾಗೂ ಗುಣಮಟ್ಟಗಳ ತಂತ್ರಜ್ಞರ ನೆರವಿನೊಂದಿಗೆ)ನಮ್ಮ ಆದೇಶಗಳನ್ನು ಕೇವಲ ಪಾಲಿಸುತ್ತ ಹೋಗುವವರ ಮಟ್ಟಕ್ಕೆ ಇಳಿಸುತ್ತೇವೆ. ಇದೇ ನಮ್ಮ ಶ್ರಮಜೀವಿ ವರ್ಗದ ಕಾರ್ಯಭಾರವಾಗಿದೆ. ಶ್ರಮಜೀವಿ ವರ್ಗ ಕ್ರಾಂತಿಯನ್ನು ಸಾಧಿಸುವುದನ್ನು ನಾವು ಇದರಿಂದಲೇ ಪ್ರಾರಂಭಿಸಬಲ್ಲೆವು ಮತ್ತು ಪ್ರಾರಂಭಿಸಬೇಕು. ಬೃಹತ್ ಪ್ರಮಾಣದ ಉತ್ಪಾದನೆಯ ಆಧಾರದ ಮೇಲೆ ಅಂಥ ಒಂದು ಆರಂಭವು ಅದಾಗಿಯೇ, ಎಲ್ಲ ಅಧಿಕಾರಶಾಹಿಯೂ

ಕ್ರಮೇಣ "ಕ್ಷಯಿಸಿ ಹೋಗುವ" ಒಂದು ವ್ಯವಸ್ಥೆಯತ್ತ, ಉದ್ಧರಣ ಚಿಹ್ನೆಗಳಿಲ್ಲದ ವ್ಯವಸ್ಥೆಯತ್ತ, ಸಂಬಳದ ಗುಲಾಮಗಿರಿಯೊಂದಿಗೆ ಯಾವ ಸಾಮ್ಯತೆಯೂ ಹೊಂದಿರದಂಥ ವ್ಯವಸ್ಥೆಯತ್ತ, ನಿಯಂತ್ರಣ ಹಾಗೂ ಲೆಕ್ಕ ಬರೆಯುವ ಕೆಲಸಗಳು ಹೆಚ್ಚೆಚ್ಚು ಸರಳವಾಗಿ ಒಬ್ಬೊಬ್ಬರೂ ಸರದಿಯಲ್ಲಿ ಅವುಗಳನ್ನು ನೆರವೇರಿಸುವಂತಾಗಿ, ನಂತರ ಅದೊಂದು ಅಭ್ಯಾಸವಾಗಿ ಬಿಟ್ಟು ಜನರ ವಿಶೇಷ ವಿಭಾಗವೊಂದರ ವಿಶೇಷ ಕೆಲಸವಾಗಿ ಉಳಿಯದೆ ಅಂತಿಮವಾಗಿ ನಶಿಸಿ ಹೋಗುವವ್ಯವಸ್ಥೆಯತ್ತ ದಾರಿ ಮಾಡಿ ಕೊಡುತ್ತದೆ.

ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಒಬ್ಬ ಹಾಸ್ಯಪ್ರಿಯ ಜರ್ಮನ್ ಸೋಶಿಯಲ್ ಡೆಮೊಕ್ರಾಟ್ ಅಂಚೆ ವ್ಯವಸ್ಥೆಯನ್ನು ಸಮಾಜವಾದೀ ಆರ್ಥಿಕ ಪದ್ಧತಿಗೆ ದೃಷ್ಟಾಂತವೆಂದು ಕರೆದರು. ಇದು ತುಂಬ ನಿಜ. ಸದ್ಯಕ್ಕೆ ಅಂಚೆ ವ್ಯವಸ್ಥೆಯು ಪ್ರಭುತ್ವ–ಬಂಡವಾಳಶಾಹಿ ಏಕಸ್ವಾಮ್ಯದ ರೀತಿಯಲ್ಲಿ ಸಂಘಟಿತವಾದ ಒಂದು ವ್ಯವಹಾರವಾಗಿದೆ. ಸಾಮ್ರಾಜ್ಯಶಾಹಿಯುಎಲ್ಲ ಟ್ರಸ್ಟ್‌ಗಳನ್ನೂ ಇದೇ ಮಾದರಿಯ ಸಂಘಟನೆಗಳನ್ನಾಗಿ ಕ್ರಮೇಣ ಪರಿವರ್ತಿಸುತ್ತಿದೆ.

ಇವುಗಳಲ್ಲಿ ಅತಿ ದುಡಿಮೆಯಿಂದ ಹಾಗೂ ಹಸಿವಿನಿಂದ ಕಂಗಾಲಾದ "ಸಾಮಾನ್ಯ" ಜನರ ಮೇಲೆ ಅದೇ ಬೂರ್ಶ್ವಾ ಅಧಿಕಾರಶಾಹಿ ನಿಂತಿರುತ್ತದೆ. ಆದರೆ ಸಾಮಾಜಿಕ ನಿರ್ವಹಣೆಯ ತಂತ್ರ ಇಲ್ಲಿ ಆಗಲೇ ಹಸ್ತಗತವಾಗಿರುತ್ತದೆ. ನಾವು ಒಮ್ಮೆ ಬಂಡವಾಳಶಾಹಿಗಳನ್ನು ಕಿತ್ತೆಸೆದು ಈ ಶೋಷಕರ ಪ್ರತಿರೋಧವನ್ನು ಸಶಸ್ತ್ರ ಕಾರ್ಮಿಕರ ಬಿಗಿ ಮುಷ್ಠಿಯಿಂದ ಪುಡಿಗುಟ್ಟಿ, ಆಧುನಿಕ ಪ್ರಭುತ್ವದ ಅಧಿಕಾರಶಾಹಿ ಯಂತ್ರವನ್ನು ಮುರಿದು ಹಾಕಿದೆವೆಂದರೆ, ನಮ್ಮ ಬಳಿ ಪರ ಪುಷ್ಟಜೀವಿ"ಯಿಂದ ಮುಕ್ತವಾದ ಭವ್ಯವಾಗಿ ಸಜ್ಜುಗೊಂಡ ಯಂತ್ರ ಸಾಧನವೊಂದು ಇರುತ್ತದೆ. ಈ ಯಂತ್ರಸಾಧನವನ್ನು ಐಕ್ಯಗೊಂಡ ಕಾರ್ಮಿಕರು ತಾವೇ ಚೆನ್ನಾಗಿ ನಡೆಸಬಲ್ಲರು. ಅವರು ತಂತ್ರಜ್ಞರನ್ನೂ ಫೋರ್ಮನ್ನರನ್ನೂ ಲೆಕ್ಕ ಬರೆಯುವವರನ್ನೂ ಸಂಬಳಕ್ಕೆ ಗೊತ್ತು ಮಾಡಿಕೊಳ್ಳುತ್ತಾರೆ ಮತ್ತು ಅವರಿಗೆಲ್ಲ, ಒಟ್ಟಾರೆಯಾಗಿ ಎಲ್ಲ "ಪ್ರಭುತ್ವ" ಅಧಿಕಾರಿಗಳಿಗೂ, ಕೆಲಸಗಾರರ ಕೂಲಿಗಳನ್ನು ಕೊಡುತ್ತಾರೆ. ಇಲ್ಲಿ ಒಂದು ಮೂರ್ತ, ವ್ಯಾವಹಾರಿಕ ಕಾರ್ಯಭಾರವಿದೆ. ಇದನ್ನು ಎಲ್ಲ ಟ್ರಸ್ಟ್‌ಗಳಿಗೆ ಸಂಬಂಧಪಟ್ಟಂತೆ ತಕ್ಷಣವೇ ಪೂರೈಸಲು ಸಾಧ್ಯವಿದೆ. ಇದು ದುಡಿಯುವ ಜನರನ್ನು ಶೋಷಣೆಯಿಂದ ಮುಕ್ತರನ್ನಾಗಿ ಮಾಡುವ ಕಾರ್ಯಭಾರ, ಇದು ಕಮ್ಯೂನ್ ಆಗಲೇ ಆಚರಣೆಗೆ ತರಲು ಪ್ರಾರಂಭಿಸಿದ್ದುದನ್ನು (ಅದರಲ್ಲೂ ವಿಶೇಷವಾಗಿ ಪ್ರಭುತ್ವವನ್ನು ಕಟ್ಟುವುದರಲ್ಲಿ ಪ್ರಾರಂಭಿಸಿದ್ದುದನ್ನು) ಗಣನೆಗೆ ತೆಗೆದುಕೊಂಡಂಥ ಕಾರ್ಯಭಾರ.

ಇಡೀ ಆರ್ಥಿಕ ವ್ಯವಸ್ಥೆಯನ್ನು ಅಂಚೆ ವ್ಯವಸ್ಥೆಯ ರೀತಿಯಲ್ಲಿ ತಂತ್ರಜ್ಞರೂ, ಫೋರ್ಮನ್ನರೂ ಲೆಕ್ಕ ಬರೆಯುವವರೂ ಮತ್ತು ಎಲ್ಲ ಅಧಿಕಾರಿಗಳೂ "ಒಬ್ಬ ಕೆಲಸಗಾರನ ಕೂಲಿ"ಗೆ ಹೆಚ್ಚಿಲ್ಲದಂತೆ ಸಂಬಳಗಳನ್ನು ಪಡೆಯುವಂತೆ, ಎಲ್ಲರೂ ಸಶಸ್ತ್ರ ಶ್ರಮಜೀವಿವರ್ಗದ ನಿಯಂತ್ರಣ ಹಾಗೂ ನಾಯಕತ್ವದ ಅಡಿ ಇರುವಂತೆ, ಸಂಘಟಿಸುವುದು–ಇದೇ ನಮ್ಮ ತಕ್ಷಣದ ಗುರಿಯಾಗಿದೆ. ಪಾರ್ಲಿಮೆಂಟರಿ ವಾದದ

ಅಂತ್ಯವನ್ನು ತರುವಂತದ್ದುಮತ್ತು ಪ್ರಾತಿನಿಧಿಕ ಸಂಸ್ಥೆಗಳನ್ನು ಉಳಿಸಿಕೊಳ್ಳುವಂತೆ ಮಾಡುವಂತದ್ದು ಇದೇ. ಈ ಸಂಸ್ಥೆಗಳಲ್ಲಿ ಬೂರ್ಶ್ವಾಗಳ ವ್ಯಭಿಚಾರದಿಂದ ದುಡಿಯುವ ವರ್ಗಗಳನ್ನುಮುಕ್ತಗೊಳಿಸುವುದು ಕೂಡ ಇದೇ.

## 4. ರಾಷ್ಟ್ರೀಯ ಐಕ್ಯತೆಯ ಸಂಘಟನೆ

*"...ರಾಷ್ಟ್ರೀಯ ಸಂಘಟನೆಯ ಒಂದು ಸಂಕ್ಷಿಪ್ತ ನಿರೂಪಣೆಯಲ್ಲಿ(ಇದನ್ನು ವಿವರವಾಗಿ ಬೆಳೆಸುವಷ್ಟು ಸಮಯ ಕಮ್ಯೂನ್ ಬಳಿ ಇರಲಿಲ್ಲ) ಅದು, ಕಮ್ಯೂನ್ ಅತ್ಯಂತ ಸಣ್ಣ ಹಳ್ಳಿಯ ರಾಜಕೀಯ ರೂಪವಾಗಿಯೂ ಇರಬೇಕು ಎಂದು ಸಂಕ್ಷಿಪ್ತವಾಗಿ ತಿಳಿಸುತ್ತದೆ...." ಕಮ್ಯೂನ್‌ಗಳು ಪ್ಯಾರಿಸ್ಸಿನಲ್ಲಿ "ರಾಷ್ಟ್ರೀಯ ನಿಯೋಗ"ವನ್ನು ಚುನಾಯಿಸಬೇಕಿತ್ತು.*

*"...ಕೇಂದ್ರ ಸರಕಾರಕ್ಕೆ ಉಳಿಯುತ್ತಿದ್ದ ಕೆಲವೇ, ಆದರೆ ಮುಖ್ಯವಾದ ಕ್ರಿಯೆಗಳನ್ನು, ಉದ್ದೇಶಪೂರ್ವಕವಾದ ಸುಳ್ಳು ಹೇಳಿಕೆಗಳಲ್ಲಿ ತಿಳಿಸುತ್ತಿದ್ದಂತೆ, ಹತ್ತಿಕ್ಕಲಾಗುತ್ತಿರಲಿಲ್ಲ, ಬದಲಾಗಿ ಅವನ್ನು ಕಮ್ಯೂನ್‌ಗಳ, ಅಂದರೆ ಕಟ್ಟುನಿಟ್ಟಾಗಿ ಜವಾಬ್ದಾರಿಯುತರಾದ ಅಧಿಕಾರಿಗಳಿಗೆ ವರ್ಗಾಯಿಸಬೇಕಿದ್ದಿತು.."*

*"...ರಾಷ್ಟ್ರೀಯ ಐಕ್ಯತೆಯನ್ನು ಭಂಗಗೊಳಿಸಲಾಗುತ್ತಿರಲಿಲ್ಲ, ಅದಕ್ಕೆ ಪ್ರತಿಯಾಗಿ, ಕಮ್ಯೂನ್‌ಗಳನ್ನು ರಚಿಸುವ ಮೂಲಕ ಅದನ್ನು ಸಂಘಟಿಸಬೇಕಿತ್ತು; ಅದು,ಅಂಥ ರಾಷ್ಟ್ರೀಯ ಐಕ್ಯತೆಯ ಮೂರ್ತ ಸ್ವರೂಪ ತಾನೇ ಎಂದು ಸೋಗುಹಾಕಿಕೊಂಡರೂ, ರಾಷ್ಟ್ರದಿಂದಸ್ವತಂತ್ರವಾಗಿ, ಅದಕ್ಕೂಮೇಲೆ ಇರಬಯಸಿದ್ದ, ರಾಷ್ಟ್ರದ ದೇಹದ ಮೇಲಿನ ಪರಪುಷ್ಟಜೀವಿಯಾಗಿಯೂ ದುರ್ಮಾಂಸವಾಗಿಯೂ ಇದ್ದುಕೊಂಡಿದ್ದ, ಪ್ರಭುತ್ವಾಧಿಕಾರವನ್ನು ನಾಶಗೊಳಿಸುವ ಮೂಲಕ ವಾಸ್ತವಗೊಳ್ಳಬೇಕಿತ್ತು. ಕೇವಲ ದಬ್ಬಾಳಿಕೆಯ ಉದ್ದೇಶದ ಹಳೆಯ ಸರಕಾರೀ*

*ಅಧಿಕಾರದ ಅಂಗಗಳನ್ನು ಕೊಯ್ದು ಹಾಕಬೇಕಿದ್ದಾಗಲೇ, ಅದರ ನ್ಯಾಯಯುತ ಕ್ರಿಯೆಗಳನ್ನು ಸಮಾಜವನ್ನು ಮೀರಿ ನಿಲ್ಲುವ ಹಕ್ಕಿನ ದಾವೆ ಹೂಡುತ್ತಿದ್ದ ಒಂದು ಅಧಿಕಾರ ಸಂಸ್ಥೆಯಿಂದ ಕಸಿದುಕೊಂಡು ಸಮಾಜದ ಜವಾಬ್ದಾರಿಯುತ ಸೇವಕರಿಗೆ ಒಪ್ಪಿಸಬೇಕಿತ್ತು..."*

ಮಾರ್ಕ್ಸ್‌ರವರ ಈ ವೀಕ್ಷಣೆಯ ಮಾತುಗಳನ್ನು ಅರ್ಥಮಾಡಿಕೊಳ್ಳಲು, ಇಂದಿನ ಸೋಶಿಯಲ್ ಡೆಮೊಕ್ರಸಿಯ ಸಂದರ್ಭಸಾಧಕರು ಎಷ್ಟರಮಟ್ಟಿಗೆ ವಿಫಲರಾಗಿದ್ದಾರೆ –ಅಥವಾ ನಿರಾಕರಿಸಿದ್ದಾರೆ ಎಂದು ಹೇಳುವುದೇ ಬಹುಶಃ ಹೆಚ್ಚು ನಿಜವಾದೀತು– ಎಂಬುದನ್ನು ಹೆರೊಸ್ಟ್ರಾಟಿಯನ್[3] ಖ್ಯಾತಿಯ ತತ್ತ್ವಭ್ರಷ್ಟ ಬೆರ್ನ್‌ಸ್ಟೈನ್ ರ

3 ಹೆರೊಸ್ಟ್ರಾಟ್: ಅಮರ ಖ್ಯಾತಿ ಗಳಿಸಲು ಎಫೆಸ್‌ನಲ್ಲಿ (ಕ್ರಿ.ಪೂ. 356ರಲ್ಲಿ) ಆರ್ಟೆಮಿಡಿ ದೈವ ಮಂದಿರವನ್ನು ಸುಟ್ಟು ಹಾಕಿದ ಗ್ರೀಕ.

"ಸಮಾಜವಾದದ ಪೂರ್ವಾಧಾರಗಳು ಮತ್ತು ಸೋಷಿಯಲ್ ಡೆಮೊಕ್ರಾಟರ ಕಾರ್ಯಭಾರಗಳು" ಎಂಬ ಪುಸ್ತಕ ಅತ್ಯುತ್ತಮವಾಗಿ ತೋರಿಸುತ್ತದೆ. ಮಾರ್ಕ್ಸ್‌ರವರ ಮೇಲೆ ಹೇಳಿದ ಪರಿಚ್ಛೇದಕ್ಕೆ ಸಂಬಂಧಿಸಿದಂತೆಯೇ ಬೆರ್ನ್‌ಸ್ಟೈನ್ ಹೀಗೆ ಬರೆದಿರುವುದು: "ಇದರ ರಾಜಕೀಯಸಾರದ ಬಗೆಗೆ ಹೇಳುವುದಾದರೆ" ಈ ಕಾರ್ಯಕ್ರಮ "ತನ್ನೆಲ್ಲ ಮೂಲ ಲಕ್ಷಣಗಳಲ್ಲೂ ಪ್ರೌದೋನ್‌ರ ಒಕ್ಕೂಟ ತತ್ತ್ವದೊಂದಿಗೆ ತುಂಬ ಸಾಮ್ಯತೆ ಹೊಂದಿದೆ....ಮಾರ್ಕ್ಸ್ ಮತ್ತು 'ಪೆಟಿಬೂರ್ಶ್ವಾ ' ಪ್ರೌದೋನ್‌ರ (ಬೆರ್ನ್‌ಸ್ಟೈನ್‌ರು "ಪೆಟಿ ಬೂರ್ಶ್ವಾ " ಎಂಬ ಪದವನ್ನು ಉದ್ಧರಣ ಚಿಹ್ನೆಗಳೊಳಗೆ ವ್ಯಂಗ್ಯವಾಗಿ ಕಾಣುವಂತೆ ಇರಿಸಿದ್ದಾರೆ) ನಡುವೆ ಏನೆಲ್ಲ ಇತರ ಭಿನ್ನಾಭಿಪ್ರಾಯಗಳಿದ್ದರೂ ಈ ಅಂಶಗಳಿಗೆ ಸಂಬಂಧಿಸಿ ಅವರ ವಿಚಾರಸರಣಿಗಳು ಎಷ್ಟು ಸಾಧ್ಯವೋ ಅಷ್ಟೂ ನಿಕಟವಾಗಿ ಸಾಗುತ್ತವೆ." ಮುಂದುವರೆದು ಬೆರ್ನ್‌ಸ್ಟೈನ್, ನಗರಸಭೆಗಳ ಪ್ರಾಮುಖ್ಯತೆ ಹೆಚ್ಚುತ್ತಿದೆ ನಿಜ, ಆದರೆ "ಪ್ರಜಾಪ್ರಭುತ್ವದ ಮೊದಲ ಕಾರ್ಯಭಾರ ಆಧುನಿಕ ಪ್ರಭುತ್ವಗಳ ಅಂತಹ ವಿಸರ್ಜನೆಯೇ, ಮಾರ್ಕ್ಸ್ ಮತ್ತು ಪ್ರೌದೋನ್ ಕಂಡುಕೊಂಡಂತೆ ಅವುಗಳ ಸಂಘಟನೆಯ ಅಂತಹ ಸಂಪೂರ್ಣಪರಿವರ್ತನೆಯೇ(ಪ್ರಾಂತೀಯ ಅಥವಾ ಜಿಲ್ಲಾ ಅಸೆಂಬ್ಲಿಗಳ ಪ್ರತಿನಿಧಿಗಳಿಂದ ಒಂದುರಾಷ್ಟ್ರೀಯ ಅಸೆಂಬ್ಲಿಯ ರಚನೆ, ಈ ಪ್ರಾಂತೀಯ ಅಥವಾ ಜಿಲ್ಲಾ ಅಸೆಂಬ್ಲಿಗಳ ರಚನೆ ಕಮ್ಯೂನ್‌ಗಳ ಪ್ರತಿನಿಧಿಗಳಿಂದ) ಎಂಬುದು, ಹಾಗಾಗಿ ಹಳೆಯ ರಾಷ್ಟ್ರೀಯ ಪ್ರಾತಿನಿಧ್ಯವಿಧಾನ ಕಣ್ಮರೆಯಾಗುತ್ತದೆ ಎಂಬುದು, ನನಗೆ ಸಂದೇಹಾಸ್ಪದವಾಗಿಯೇ ಕಂಡುಬರುತ್ತದೆ."(ಬೆರ್ನ್‌ಸ್ಟೈನ್, "ಪೂರ್ವಾಧಾರಗಳು," ಜರ್ಮನ್ ಆವೃತ್ತಿ, 1899, ಪು. 134 ಮತ್ತು136.)

"ಪರಪುಷ್ಟಜೀವಿ ದುರ್ಮಾಂಸವಾದ ಪ್ರಭುತ್ವಾಧಿಕಾರದ ವಿನಾಶ"ದ ಕುರಿತು ಮಾರ್ಕ್ಸ್‌ರ ಅಭಿಪ್ರಾಯವನ್ನು ಪ್ರೌದೋನ್‌ರ ಒಕ್ಕೂಟ ತತ್ತ್ವದೊಂದಿಗೆ ಗೊಂದಲಗೊಳಿಸುವುದು ನಿಜವಾಗಿಯೂ ಘೋರವಾದುದು! ಆದರೆ ಇದೇನೂ ಆಕಸ್ಮಿಕವಲ್ಲ. ಏಕೆಂದರೆ ಮಾರ್ಕ್ಸ್ ಇಲ್ಲಿ ಕೇಂದ್ರೀಯವಾದಕ್ಕೆ ವಿರುದ್ಧವಾಗಿ ಒಕ್ಕೂಟವಾದದ ಬಗೆಗೆ ಮಾತನಾಡುವುದಿಲ್ಲ, ಬದಲಿಗೆ ಎಲ್ಲ ಬೂರ್ಶ್ವಾ ದೇಶಗಳಲ್ಲೂ ಇರುವ ಹಳೆಯ ಬೂರ್ಶ್ವಾ ಪ್ರಭುತ್ವ ಯಂತ್ರವನ್ನು ಕುಟ್ಟಿ ಪುಡಿ ಮಾಡುವ ಬಗೆಗೆ ಮಾತನಾಡುತ್ತಾರೆ, ಎಂಬುದು ಸಂದರ್ಭಸಾಧಕನಿಗೆ ಎಂದೂ ಹೊಳೆಯಲಾರದು.

ಸಂದರ್ಭಸಾಧಕನಿಗೆ ಹೊಳೆಯುವ ಒಂದೇ ಒಂದು ವಿಷಯವೆಂದರೆ, ಆತ ತನ್ನಸುತ್ತ ಪೆಟಿ ಬೂರ್ಶ್ವಾ ಗೊಡ್ಡುತನದ ಹಾಗೂ "ಸುಧಾರಣಾವಾದಿ" ಸ್ಥಗಿತತೆಯ ಪರಿಸರದಲ್ಲಿ ಕಾಣುತ್ತಿರುವುದನ್ನು, ಅಂದರೆ, ಕೇವಲ "ನಗರಸಭೆ"ಗಳನ್ನು! ಸಂದರ್ಭಸಾಧಕವಾದಿ ಶ್ರಮಜೀವಿ ವರ್ಗದ ಕ್ರಾಂತಿಯ ಬಗೆಗೆ ಯೋಚಿಸುವ ಅಭ್ಯಾಸವನ್ನೂ ಮೀರಿ ಬೆಳೆದಿದ್ದಾನೆ.

ಇದು ಹಾಸ್ಯಾಸ್ಪದ. ಆದರೆ ವಿಶೇಷವೆಂದರೆ ಯಾರೂ ಬೆರ್ನ್‌ಸ್ಟೈನ್‌ರೊಂದಿಗೆ ಈ ವಿಷಯದ ಬಗೆಗೆ ವಾದಿಸಿಲ್ಲ. ಬೆರ್ನ್‌ಸ್ಟೈನ್‌ರ ವಾದವನ್ನು ಅನೇಕರು ನಿರಾಕರಿಸಿದ್ದಾರೆ, ವಿಶೇಷವಾಗಿ ರಶಿಯನ್ ಸಾಹಿತ್ಯದಲ್ಲಿ ಪ್ಲೆಹಾನೊವ್ ಹಾಗೂ ಯೂರೋಪಿಯನ್

ಸಾಹಿತ್ಯದಲ್ಲಿ ಕೌತ್‌ಸ್ಕಿ ಆದರೆ ಇವರಲ್ಲಿ ಯಾರೊಬ್ಬರೂ ಬೆರ್ನ್‌ಸ್ಟೈನ್‌ರ ಈ ಮಾರ್ಕ್ಸ್‌ವಾದದ ವಿರೂಪೀಕರಣದ ಬಗೆಗೆ ಏನೂ ಹೇಳಿಲ್ಲ.

ಸಂದರ್ಭಸಾಧಕನು ಕ್ರಾಂತಿಕಾರಿ ರೀತಿಯಲ್ಲಿ ಹೇಗೆ ಯೋಚಿಸಬೇಕು ಎಂಬುದನ್ನು, ಕ್ರಾಂತಿಯ ವಿಷಯವನ್ನು ಹೇಗೆ ಪರಿಶೀಲಿಸಬೇಕು ಎಂಬುದನ್ನು ಎಷ್ಟೊಂದು ಮರೆತಿದ್ದಾನೆಂದರೆ ಅವನು "ಒಕ್ಕೂಟತತ್ವ" ಮಾರ್ಕ್ಸ್‌ರದ್ದು ಎನ್ನುತ್ತಾ ಮಾರ್ಕ್ಸ್ ಮತ್ತು ಅರಾಜಕತಾವಾದದ ಸಂಸ್ಥಾಪಕ ಪ್ರೌದೋನ್ ನಡುವೆ ಗೊಂದಲ ಮಾಡಿಕೊಳ್ಳುತ್ತಾನೆ. ಇನ್ನು ತಾವು ಶಾಸ್ತ್ರೀಯ ಮಾರ್ಕ್ಸ್‌ವಾದಿಗಳು ಮತ್ತು ಕ್ರಾಂತಿಕಾರಿ ಮಾರ್ಕ್ಸ್‌ವಾದಿ ಸಿದ್ಧಾಂತದ ಸಂರಕ್ಷಕರು ಎಂದು ಹೇಳಿಕೊಳ್ಳುವ ಕೌತ್‌ಸ್ಕಿ ಹಾಗೂ ಪ್ಲೆಹಾನೊವ್‌ರ ಬಗೆಗೆ ಹೇಳುವುದಾದರೆ, ಅವರು ಈ ಅಂಶದ ಬಗ್ಗೆ ಮೌನದಿಂದಿದ್ದಾರೆ! ಮಾರ್ಕ್ಸ್‌ವಾದ ಮತ್ತು ಅರಾಜಕತಾವಾದದ ನಡುವಿನ ವ್ಯತ್ಯಾಸದ ಕುರಿತ ಅಭಿಪ್ರಾಯಗಳನ್ನು ಅತ್ಯಂತ ಒರಟುಗೊಳಿಸಿರುವುದರ ಒಂದು ಮೂಲ ಇಲ್ಲಿದೆ. ಇದು ಕೌತ್‌ಸ್ಕಿವಾದಿಗಳ ಹಾಗೂ ಸಂದರ್ಭಸಾಧಕರ ಗುಣಲಕ್ಷಣವಾಗಿದೆ. ಈ ಬಗ್ಗೆ ನಾವು ಮತ್ತೆ ಮುಂದೆ ಚರ್ಚಿಸೋಣ.

ಕಮ್ಯೂನ್‌ನ ಅನುಭವದ ಕುರಿತು ಮಾರ್ಕ್ಸ್‌ರವರ ಮೇಲೆ ಉದ್ಧರಿಸಿದ ಮಾತುಗಳಲ್ಲಿ ಒಕ್ಕೂಟತತ್ವದ ನೆರಳೂ ಇಲ್ಲ. ಸಂದರ್ಭಸಾಧಕ ಬೆರ್ನ್‌ಸ್ಟೈನ್ ಯಾವ ಅಂಶವನ್ನು ಕಾಣಲಿಲ್ಲವೋ ಆ ಅಂಶಕ್ಕೆ ಸಂಬಂಧಿಸಿ ಮಾರ್ಕ್ಸ್ ಮತ್ತು ಪ್ರೌದೋನ್‌ರ ಅಭಿಪ್ರಾಯ ಸಮಾನವಾಗಿತ್ತು. ಬೆರ್ನ್‌ಸ್ಟೈನರು ಎಲ್ಲಿ ಅವರಿಬ್ಬರ ಮಧ್ಯೆ ಸಮಾನ ಅಭಿಪ್ರಾಯವನ್ನು ಕಂಡರೋ ಆ ಅಂಶಕ್ಕೆ ಸಂಬಂಧಿಸಿ ಅವರ ನಡುವೆ ಭಿನ್ನಾಭಿಪ್ರಾಯ ಇತ್ತು.

ಮಾರ್ಕ್ಸ್ ಮತ್ತು ಪ್ರೌದೋನ್ ಇಬ್ಬರೂ ಆಧುನಿಕ ಪ್ರಭುತ್ವ ಯಂತ್ರವನ್ನು"ಪುಡಿಗುಟ್ಟುವುದರ" ಪರವಾಗಿದ್ದರು ಎಂಬಲ್ಲಿ ಅವರಲ್ಲಿ ಒಮ್ಮತವಿತ್ತು. ಮಾರ್ಕ್ಸ್‌ವಾದಮತ್ತು ಅರಾಜಕತಾವಾದ (ಪ್ರೌದೋನ್ ಹಾಗೂ ಬಕೂನಿನ್ ಇಬ್ಬರದ್ದೂ)ದ ಮಧ್ಯೆಈ ವಿಷಯಕ್ಕೆ ಸಂಬಂಧಿಸಿ ಒಂದೇ ರೀತಿಯ ಅಭಿಪ್ರಾಯಗಳಿರುವುದನ್ನು ಸಂದರ್ಭಸಾಧಕರಾಗಲೀ ಕೌತ್‌ಸ್ಕಿವಾದಿಗಳಾಗಲೀ ಕಾಣಬಯಸುವುದಿಲ್ಲ, ಏಕೆಂದರೆ, ಅವರು ಮಾರ್ಕ್ಸ್‌ವಾದದಿಂದ ದೂರ ಸರಿದಿರುವುದು ಇಲ್ಲಿಯೇ.

ಮಾರ್ಕ್ಸ್‌ರವರು ಪ್ರೌದೋನ್ ಹಾಗೂ ಬಕೂನಿನ್ ಇಬ್ಬರೊಂದಿಗೂ ಸ್ಪಷ್ಟವಾಗಿ ಭಿನ್ನಾಭಿಪ್ರಾಯ ಹೊಂದಿರುವುದು ಒಕ್ಕೂಟತತ್ವದ ಪ್ರಶ್ನೆಯ ಮೇಲೆಯೇ (ಶ್ರಮಜೀವಿ ವರ್ಗದ ಸರ್ವಾಧಿಕಾರದ ಪ್ರಶ್ನೆಯ ಮೇಲಂತೂ ಹೇಳಬೇಕಾಗಿಯೇ ಇಲ್ಲ). ಒಕ್ಕೂಟತತ್ವಒಂದು ಸೂತ್ರವಾಗಿ ತಾರ್ಕಿಕವಾಗಿ ಅರಾಜಕತಾವಾದದ ಪೆಟಿ ಬೂರ್ಶ್ವಾ ಅಭಿಪ್ರಾಯಗಳಿಂದಲೇ ಬರುವಂತದ್ದು. ಮಾರ್ಕ್ಸ್ ಒಬ್ಬ ಕೇಂದ್ರೀಯವಾದಿಯಾಗಿದ್ದರು. ಮೇಲೆ ಉದ್ಧರಿಸಿರುವ ಅವರ ಅಭಿಪ್ರಾಯದಲ್ಲಿ ಇದರಿಂದ ದೂರ ಸರಿದಿರುವ ಯಾವಅಂಶವೂ ಇಲ್ಲ. ಪ್ರಭುತ್ವದ ಬಗ್ಗೆ ಶುಷ್ಕಮತಿಗಳ "ಮೂಢನಂಬಿಕೆ"ಯಿಂದ ಪೂರಿತರಾಗಿರುವವರಷ್ಟೆ ಬೂರ್ಶ್ವಾ ಪ್ರಭುತ್ವಯಂತ್ರದ ವಿನಾಶವನ್ನು ಕೇಂದ್ರೀಯವಾದದ ವಿನಾಶವೆಂದು ತಪ್ಪು ತಿಳಿಯಬಲ್ಲರು!

ಈಗ ಶ್ರಮಜೀವಿಗಳು ಮತ್ತು ಬಡ ರೈತರು ಪ್ರಭುತ್ವಾಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ಕಮ್ಯೂನ್‌ಗಳಲ್ಲಿ ತಮ್ಮನ್ನು ತಾವೇ ಸಂಪೂರ್ಣವಾಗಿ

ಸ್ವತಂತ್ರವಾಗಿ ಸಂಘಟಿಸಿಕೊಂಡರೆ, ಮತ್ತು ಬಂಡವಾಳದ ಮೇಲೆ ಪ್ರಹಾರ ನೀಡಲು, ಬಂಡವಾಳಶಾಹಿಗಳ ಪ್ರತಿರೋಧವನ್ನು ಸದೆಬಡಿಯಲು ಹಾಗೂ ಖಾಸಗಿ ಮಾಲಿಕತ್ವದ ರೈಲ್ವೇ, ಕಾರ್ಖಾನೆಗಳು, ಭೂಮಿ ಮುಂತಾದವುಗಳನ್ನು ಇಡೀ ರಾಷ್ಟ್ರಕ್ಕೆ, ಇಡೀ ಸಮಾಜಕ್ಕೆ, ವರ್ಗಾಯಿಸಲು, ಎಲ್ಲ ಕಮ್ಯೂನ್‌ಗಳ ಕ್ರಿಯೆಯನ್ನೂ ಒಂದುಗೂಡಿಸಿದರೆ, ಅದು ಕೇಂದ್ರೀಯ ವಾದವಾಗುವುದಿಲ್ಲವೇ? ಅದು ಅತ್ಯಂತ ಸುಸಂಗತವಾದ ಪ್ರಜಾಸತ್ತಾತ್ಮಕ ಕೇಂದ್ರೀಯವಾದ ಹಾಗೂ ಅದಕ್ಕೂ ಮಿಗಿಲಾಗಿ ಶ್ರಮಜೀವಿ ವರ್ಗದಕೇಂದ್ರೀಯ ವಾದವಾಗುವುದಿಲ್ಲವೇ?

ಬೆರ್ನ್‌ಸ್ಟೈನ್ ಗೆ ಸ್ವಯಮಿಚ್ಛೆಯ ಕೇಂದ್ರೀಯವಾದದ ಸಾಧ್ಯತೆಯನ್ನು, ಬೂರ್ಶ್ವಾ ಆಳ್ವಿಕೆಯನ್ನು ಕಮ್ಯೂನ್‌ಗಳು ತಮಗೆ ತಾವೇ ರಾಷ್ಟ್ರವಾಗಿ ಸಂಯೋಗಗೊಳ್ಳುವ ಸಾಧ್ಯತೆಯನ್ನು, ಮತ್ತು ಬೂರ್ಶ್ವಾ ಪ್ರಭುತ್ವ ಯಂತ್ರವನ್ನು ನಾಶಗೊಳಿಸುವ ಉದ್ದೇಶದಿಂದ ಶ್ರಮಜೀವಿ ವರ್ಗದ ಕಮ್ಯೂನ್‌ಗಳು ತಮಗೆ ತಾವಾಗಿಯೇ ಬೆಸೆದುಕೊಳ್ಳುವ ಸಾಧ್ಯತೆಯನ್ನು ಪರಿಕಲ್ಪಿಸಿಕೊಳ್ಳುವುದು ಕೂಡ ಸಾಧ್ಯವಿಲ್ಲ. ಎಲ್ಲ ಮೂಢಮತಿಗಳಂತೆ ಬೆರ್ನ್‌ಸ್ಟೈನ್ ರವರೂ ಕೇಂದ್ರೀಯವಾದ ಎಂದರೆ ಮೇಲಿನಿಂದಷ್ಟೇ ಮತ್ತು ಅಧಿಕಾರಶಾಹಿ ಹಾಗೂ ಸೈನಿಕಕೂಟದಿಂದಷ್ಟೇ ಹೊರಿಸಬಹುದಾದದ್ದು ಮತ್ತು ಉಳಿಸಿಕೊಂಡು ಬರಬಹುದಾದದ್ದುಎಂದೇ ಚಿತ್ರಿಸುತ್ತಾರೆ.

ಮಾರ್ಕ್ಸ್, ತಮ್ಮ ಅಭಿಪ್ರಾಯಗಳನ್ನು ವಿರೂಪಗೊಳಿಸಬಹುದು ಎಂಬುದನ್ನು ಮುಂಗಂಡಿದ್ದರೋ ಎಂಬಂತೆ, ಕಮ್ಯೂನ್ ರಾಷ್ಟ್ರೀಯ ಐಕ್ಯತೆಯನ್ನು ನಾಶಗೊಳಿಸಬಯಸಿತ್ತು, ಕೇಂದ್ರೀಯ ಅಧಿಕಾರವನ್ನು ತೊಡೆದು ಹಾಕಲು ಬಯಸಿತ್ತು ಎಂಬ ಅಪಾದನೆ ಒಂದು ಉದ್ದೇಶಪೂರ್ವಕವಾದ ಮೋಸ ಎಂದು ಸುಸ್ಪಷ್ಟವಾಗಿ ಒತ್ತಿಹೇಳಿದರು. ಮಾರ್ಕ್ಸ್ "ರಾಷ್ಟ್ರೀಯ ಐಕ್ಯತೆಯನ್ನು...... ಸಂಘಟಿಸಬೇಕಿತ್ತು" ಎಂಬ ಪದಗಳನ್ನು, ಬೂರ್ಶ್ವಾ, ಸೈನಿಕ, ಅಧಿಕಾರಶಾಹಿ ಕೇಂದ್ರೀಯವಾದಕ್ಕೆ ಎದುರಾಗಿ ಪ್ರಜ್ಞಾಪೂರ್ವಕವಾದ, ಪ್ರಜಾಸತ್ತಾತ್ಮಕ, ಶ್ರಮಜೀವಿ ವರ್ಗದ ಕೇಂದ್ರೀಯವಾದವನ್ನು ನಿಲ್ಲಿಸುವುದಕ್ಕಾಗಿಯೇ ಉದ್ದೇಶಪೂರ್ವಕವಾಗಿ ಬಳಸಿದರು.

ಆದರೆ ಕೇಳ ಬಯಸದವರಿಗಿಂತ ಹೆಚ್ಚಿನ ಕಿವುಡರು ಬೇರಿಲ್ಲ. ಇಂದಿನ ಸೋಷಿಯಲ್ ಡೆಮೊಕ್ರಸಿಯ ಸಂದರ್ಭಸಾಧಕರು ಕೇಳಬಯಸದಂಥ ವಿಷಯವೆಂದರೆ ಪ್ರಭುತ್ವಾಧಿಕಾರ ವನ್ನು ನಾಶಗೊಳಿಸುವ, ಪರಪುಷ್ಟಜೀವಿ ದುರ್ಮಾಂಸವನ್ನು ಕತ್ತರಿಸಿಹಾಕುವ ಈ ವಿಷಯವೇ.

## 5. ಪರಪುಷ್ಟಜೀವಿ ಪ್ರಭುತ್ವದ ಅಂತ್ಯ

ಈ ವಿಷಯಕ್ಕೆ ಸಂಬಂಧಿಸಿ ಮಾರ್ಕ್ಸ್‌ರವರ ಮಾತುಗಳನ್ನು ನಾವಾಗಲೇ ಉದ್ಧರಿಸಿದ್ದೇವೆ. ಈಗ ನಾವು ಅವುಗಳಿಗೆ ಇನ್ನಷ್ಟು ಸೇರಿಸಬೇಕು.

> *"ಹೊಸ ಐತಿಹಾಸಿಕ ಸೃಷ್ಟಿಗಳು ಸಾಮಾಜಿಕ ಜೀವನದ ಹಳೆಯ ಹಾಗೂ ನಶಿಸಿಯೂ ಹೋಗಿರುವ ರೂಪಗಳೊಂದಿಗೆ ಸ್ವಲ್ಪಮಟ್ಟಿಗೆ ಸಾಮ್ಯತೆ*

*ಹೊಂದಿರಬಹುದಾದ ಕಾರಣದಿಂದ ಇವು ಹಳೆಯದರ ಪ್ರತಿರೂಪಗಳೇ ಎಂದುತಪ್ಪು ತಿಳಿಯುವಂತಾಗುವುದು ಸಾಮಾನ್ಯವಾಗಿ ಹೊಸ ಐತಿಹಾಸಿಕ ಸೃಷ್ಟಿಗಳಹಣೆ ಬರಹವಾಗಿದೆ. ಹಾಗಾಗಿ, ಆಧುನಿಕ ಪ್ರಭುತ್ವಾಧಿಕಾರವನ್ನು ಮುರಿಯುವಈ ಹೊಸ ಕಮ್ಯೂನ್ ಕೂಡ ಮಧ್ಯಯುಗದ ಕಮ್ಯೂನ್‌ಗಳ ಪುನರುತ್ಥಾನವೆಂದೇ...(ಮೊಂಟೆಸ್ಕ್ಯೂ ಮತ್ತು ಜಿರೋಂಡಿಸ್ಟರು[4] ಕಂಡರಿಸಿದಂತೆ)ಸಣ್ಣ ಪ್ರಭುತ್ವಗಳ ಒಕ್ಕೂಟವೆಂದೇ .. ಅತಿ ಕೇಂದ್ರೀಕರಣದ ವಿರುದ್ಧ ಹಳೆಯ ಹೋರಾಟದ ಒಂದು ಉತ್ಪ್ರೇಕ್ಷಿತ ರೂಪವೆಂದೇ... ಭಾವಿಸಲಾಗಿದೆ.*

*"ಕಮ್ಯೂನಿನ ಸಂವಿಧಾನ, ಇದುವರೆಗೂ, ಪರಪುಷ್ಟಜೀವಿ ದುರ್ಮಾಂಸವಾಗಿ ಸಮಾಜದಿಂದಲೇ ಪೋಷಣೆ ಪಡೆದು, ಅದರ ಸ್ವತಂತ್ರ ಚಲನೆಗೆ ಅಡ್ಡಿಯಾಗಿದ್ದ ಆ 'ಪ್ರಭುತ್ವ' ಅರಗಿಸಿ ಕೊಂಡಿದ್ದ ಎಲ್ಲ ಶಕ್ತಿಗಳನ್ನೂ ಸಾಮಾಜಿಕ ಹಂದರಕ್ಕೆ ಹಿಂದಿರುಗಿಸುವುದರಲ್ಲಿತ್ತು. ಈ ಒಂದು ಕಾರ್ಯದಿಂದ ಅದು ಫ್ರಾನ್ಸಿನ ಪುನರುಜ್ಜೀವನಕ್ಕೆ ಉಪಕ್ರಮ ಹಾಕಿಕೊಡಬಹುದಿತ್ತು...*

*"...ಕಮ್ಯೂನಿನ ಸಂವಿಧಾನ ಗ್ರಾಮೀಣ ಉತ್ಪಾದಕರನ್ನು ಅವರ ಪ್ರದೇಶಗಳ ಕೇಂದ್ರೀಯ ನಗರಗಳ ಬೌದ್ಧಿಕ ನಾಯಕತ್ವದಡಿ ತರುವುರಲ್ಲಿತ್ತು, ಮತ್ತು ಅಲ್ಲಿ ಅವರಿಗೆ ಅವರ ಹಿತಗಳ ಸಹಜ ವಿಶ್ವಸ್ತರಾಗಿ ನಗರದ ದುಡಿಯುವ ಜನರನ್ನು ಒದಗಿಸಿಕೊಡುವುದರಲ್ಲಿತ್ತು. ಕಮ್ಯೂನ್‌ನ ಅಸ್ತಿತ್ವವೇ ಸ್ಥಳೀಯ ಸ್ವಯಮಾಡಳಿತದ ಅಂಶವನ್ನು ತಾನಾಗಿಯೇ ಒಳಗೊಂಡಿತ್ತು, ಆದರೆ ಇನ್ನು ಮುಂದೆ ಅನವಶ್ಯವಾಗಿಬಿಟ್ಟಿರುವ ಪ್ರಭುತ್ವಾಧಿಕಾರಕ್ಕೆ ಪ್ರತಿಯಾಗಿ ಅಲ್ಲ."*

"ಪ್ರಭುತ್ವಾಧಿಕಾರವನ್ನು ಮುರಿಯುವುದು"; "ಪರಪುಷ್ಟಜೀವಿ ದುರ್ಮಾಂಸ", ಅದನು ್"ಕತ್ತರಿಸಿ ಹಾಕುವುದು," ಅದನ್ನು "ಮುಡಿಗುಟ್ಟುವುದು"; "ಪ್ರಭುತ್ವಾಧಿಕಾರ ಈಗ ಅನಾವಶ್ಯಕವಾಗಿದೆ" ಇವೆಲ್ಲ ಪದಪ್ರಯೋಗಗಳು, ಮಾರ್ಕ್ಸ್ ಕಮ್ಯೂನ್‌ನ ಅನುಭವವನ್ನು ಪರಿಶೀಲಿಸುವಾಗ, ವಿಶ್ಲೇಷಿಸುವಾಗ ಪ್ರಭುತ್ವಕ್ಕೆ ಸಂಬಂಧಿಸಿದಂತೆ ಬಳಸಿದವುಗಳು. ಇವೆಲ್ಲವನ್ನೂ ಅರ್ಧ ಶತಮಾನಕ್ಕಿಂತ ತುಸು ಕಡಿಮೆ ವರ್ಷಗಳ ಹಿಂದೆ ಬರೆಯಲಾಯಿತು. ಈಗ ವಿರೂಪಗೊಂಡಿರದ ಮಾರ್ಕ್ಸ್‌ವಾದವನ್ನು ಜನಸಮೂಹಗಳ ಅರಿವಿಗೆ ತರಲು ಇವೆಲ್ಲವನ್ನೂ ಅಗೆದು ತೆಗೆಯುವ ಕಾರ್ಯದಲ್ಲಿ ತೊಡಗಬೇಕಾಗಿದೆ. ಮಾರ್ಕ್ಸ್ ಬದುಕಿದ್ದು ಕಂಡಿದ್ದ ಕಳೆದ ಮಹಾಕ್ರಾಂತಿಯ ವೀಕ್ಷಣೆಯಿಂದ ಪಡೆದ ತೀರ್ಮಾನಗಳನ್ನು ಮುಂದಿನ ಮಹಾ ಶ್ರಮಜೀವಿ ಕ್ರಾಂತಿ ಸಮೀಪಿಸುತ್ತಿರುವ ಕಾಲಕ್ಕೆ ಸರಿಯಾಗಿ ಮರೆಯಲಾಗಿದೆ.

---

4 ಜಿರೋಂಡಿಸ್ಟರು: ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ನಡೆದ ಫ್ರೆಂಚ್ ಬೂರ್ಶ್ವಾ ಕ್ರಾಂತಿಯ ಸಮಯದಲ್ಲಿದ್ದ ಒಂದು ರಾಜಕೀಯ ಬೂರ್ಶ್ವಾ ಗುಂಪಿನ ಜನ. ಇವರು ಮಂದಗಾಮಿ ಬೂರ್ಶ್ವಾ ವರ್ಗದ ಹಿತಗಳನ್ನು ವ್ಯಕ್ತಪಡಿಸುತ್ತಿದ್ದರು. ಕ್ರಾಂತಿ ಮತ್ತು ಪ್ರತಿಕ್ರಾಂತಿಗಳ ನಡುವೆ ಡೋಲಾಯಮಾನ ಸ್ಥಿತಿಯಲ್ಲಿದ್ದರು. ರಾಜ ಪ್ರಭುತ್ವದೊಂದಿಗೆ ಸಮಜಾಯಿಷಿ ಸಹ ಮಾಡಿಕೊಂಡಿದ್ದರು.

*"...ಕಮ್ಯೂನನ್ನು ಬಹುವಿಧ ವ್ಯಾಖ್ಯಾನಗಳಿಗೆ ಒಳಪಡಿಸಿರುವುದು ಮತ್ತು ಅದರಲ್ಲಿ ವ್ಯಕ್ತಗೊಂಡ ಬಹುವಿಧಗಳ ಹಿತಾಸಕ್ತಿಗಳು, ಆದಕ್ಕೆ ಹಿಂದಿನ ಸರಕಾರಗಳ: ಎಲ್ಲ ರೂಪಗಳೂ ದಬ್ಬಾಳಿಕೆಯದ್ದೇ ಆಗಿದ್ದವು, ಕಮ್ಯೂನ್ ಒಂದು ತುಂಬ ಸಲೀಸಾದ ರಾಜಕೀಯ ರೂಪವಾಗಿತ್ತು ಎಂದು ತೋರಿಸಿಕೊಡುತ್ತವೆ. ಅದರ ನಿಜವಾದ ರಹಸ್ಯವಿದು: ಅದು ವಸ್ತುತಃ ಒಂದು ಕಾರ್ಮಿಕ ವರ್ಗದ ಸರಕಾರವಾಗಿತ್ತು, ಉತ್ಪಾದನೆಯನ್ನು ಕೈವಶ ಮಾಡಿಕೊಳ್ಳುವ ವರ್ಗಕ್ಕೆ ಎದುರಾಗಿಉತ್ಪಾದಿಸುವ ವರ್ಗದ ಹೋರಾಟದ ಫಲಿತಾಂಶವಾಗಿತ್ತು, ಶ್ರಮದ ಆರ್ಥಿಕಉದ್ಧಾರವನ್ನು ಸಾಧಿಸಲು ಕೊನೆಗೂ ಕಂಡುಹಿಡಿಯಲಾದ ರಾಜಕೀಯರೂಪವಾಗಿತ್ತು...."*

*"ಈ ಕೊನೆಯ ಶರತ್ತಿನ ವಿನಹ ಕಮ್ಯೂನಿನ ರಚನೆ ಅಸಾಧ್ಯವಾಗಿತ್ತು, ಒಂದು ಭ್ರಮೆಯಷ್ಟೆ ಆಗಿರುತ್ತಿತ್ತು......"*

ಕಲ್ಪನಾ ಲೋಕದಲ್ಲಿ ವಿಹರಿಸುವವರು ಸಮಾಜದ ಸಮಾಜವಾದಿ ಪರಿವರ್ತನೆಯನ್ನು ಸಾಧ್ಯ ಮಾಡಿಕೊಡುವಂಥ ರಾಜಕೀಯ ರೂಪಗಳನ್ನು "ಕಂಡು ಹಿಡಿಯುವ" ಕಾರ್ಯದಲ್ಲಿ ನಿರತರಾದರು. ಅರಾಜಕತಾವಾದಿಗಳು ರಾಜಕೀಯ ರೂಪಗಳ ಪ್ರಶ್ನೆಯನ್ನೇ ಸಂಪೂರ್ಣವಾಗಿ ತಳ್ಳಿಹಾಕಿದರು. ಇಂದಿನ ಸೋಷಿಯಲ್ ಡೆಮೊಕ್ರಸಿಯ ಸಂದರ್ಭಸಾಧಕರು ಪಾರ್ಲಿಮೆಂಟರಿ ಪ್ರಜಾಸತ್ತಾತ್ಮಕ ಪ್ರಭುತ್ವದ ಬೂರ್ಶ್ವಾ ರಾಜಕೀಯ ರೂಪಗಳನ್ನು ಸ್ವೀಕರಿಸಿದರು, ಅವು ಹಾಕುವ ಮಿತಿಗಳನ್ನು ಮೀರಿ ಹೋಗಲಾಗದು ಎನ್ನುತ್ತ ಆ "ಮಾದರಿ"ಯ ಮುಂದೆ ಕೈಜೋಡಿಸಿ ತಮ್ಮ ಹಣೆ ಚಚ್ಚಿಕೊಂಡರು ಮತ್ತು ಆ ರೂಪಗಳನ್ನು ಮುರಿಯುವ ಪ್ರತಿಯೊಂದು ಬಯಕೆಯನ್ನೂ ಅರಾಜಕತಾವಾದ ಎಂದು ಖಂಡಿಸಿದರು.

ಮಾರ್ಕ್ಸ್ ಸಮಾಜವಾದ ಮತ್ತು ರಾಜಕೀಯ ಹೋರಾಟದ ಇಡೀ ಇತಿಹಾಸದಿಂದ, ಪ್ರಭುತ್ವವು ಕಣ್ಮರೆಯಾಗುವುದು ಖಂಡಿತ, ಅದು ಕಣ್ಮರೆಯಾಗುವುದರ ಸಂಕ್ರಮಣರೂಪ (ಪ್ರಭುತ್ವದಿಂದ ಪ್ರಭುತ್ವವಲ್ಲದಕ್ಕೆ ಸ್ಥಿತ್ಯಂತರ) "ಆಳುವ ವರ್ಗವಾಗಿ ಸಂಘಟಿತವಾದ ಶ್ರಮಜೀವಿ ವರ್ಗ" ಎಂದು ನಿರೂಪಿಸಿದರು. ಆದರೆ ಅವರು ಈ ಭವಿಷ್ಯದ ಘಟ್ಟದ ರಾಜಕೀಯ ರೂಪಗಳನ್ನು ಕಂಡು ಹಿಡಿಯಲು ಹೋಗಲಿಲ್ಲ. ಅವರು ಫ್ರೆಂಚ್ ಇತಿಹಾಸವನ್ನು ಜಾಗರೂಕತೆಯಿಂದ ವೀಕ್ಷಿಸುವುದಕ್ಕೆ, ಅದನ್ನು ವಿಶ್ಲೇಷಿಸುವುದಕ್ಕೆ ಮತ್ತು 1851ನೆಯ ವರ್ಷವು ಒಯ್ದು ತೀರ್ಮಾನಕ್ಕೆ ಬರುವುದಕ್ಕೆ, ಅಂದರೆ ಪರಿಸ್ಥಿತಿ ಬೂರ್ಶ್ವಾ

ಪ್ರಭುತ್ವ ಯಂತ್ರವನ್ನು ನಾಶಗೊಳಿಸುವತ್ತ ಸಾಗುತ್ತಿದೆ ಎಂಬ ತೀರ್ಮಾನಕ್ಕೆ ಬರುವುದಕ್ಕೆ, ತಮ್ಮನ್ನು ಸೀಮಿತಗೊಳಿಸಿಕೊಂಡರು. ಮತ್ತು ಶ್ರಮಜೀವಿ ವರ್ಗದ ಸಾಮೂಹಿಕ ಕ್ರಾಂತಿಕಾರಿ ಆಂದೋಲನ ಭುಗಿಲೆದ್ದಾಗ

ಮಾರ್ಕ್ಸ್, ಅದು ವಿಫಲಗೊಂಡರೂ, ಅದು ಅಲ್ಪಕಾಲವಷ್ಟೆ ಇದ್ದರೂ ಮತ್ತು ಅದರ ಬಲಹೀನತೆ ಸ್ಪಷ್ಟವಾಗಿದ್ದರೂ, ಅದು ಕಂಡುಹಿಡಿದಿದ್ದ ರೂಪಗಳನ್ನು ಅಭ್ಯಸಿಸತೊಡಗಿದರು.

ಕಮ್ಯೂನ್ ಶ್ರಮಜೀವಿ ವರ್ಗ ಕ್ರಾಂತಿಯು "ಕೊನೆಗೂ ಕಂಡುಹಿಡಿದ," ರೂಪ,ಇದರ ಅಡಿಯಲ್ಲಿ ಶ್ರಮದ ಆರ್ಥಿಕ ವಿಮೋಚನೆ ನಡೆಯುವುದು ಸಾಧ್ಯ.

ಕಮ್ಯೂನ್ ಬೂರ್ಶ್ವಾ ಪ್ರಭುತ್ವ ಯಂತ್ರವನ್ನು ಪುಡುಗುಟ್ಟುವ ಒಂದು ಶ್ರಮಜೀವಿ ವರ್ಗದ ಕ್ರಾಂತಿಯ ಮೊದಲ ಪ್ರಯತ್ನ; ಮತ್ತು ಅದು "ಕೊನೆಗೂ ಕಂಡುಹಿಡಿದ" ರಾಜಕೀಯ ರೂಪ. ಪುಡಿಗುಟ್ಟಿದ ಪ್ರಭುತ್ವ ಯಂತ್ರದ ಸ್ಥಾನದಲ್ಲಿ ಬರಬೇಕಾಗಿರುವಂತದ್ದು.

1905ರ ಹಾಗೂ 1917ರ ರಶಿಯನ್ ಕ್ರಾಂತಿಗಳು ವಿಭಿನ್ನ ಸಂದರ್ಭಗಳಲ್ಲಿ ಮತ್ತು ವಿಭಿನ್ನ ಪರಿಸ್ಥಿತಿಗಳಲ್ಲಿ ಕಮ್ಯೂನ್‌ನ ಕಾರ್ಯವನ್ನು ಮುಂದುವರೆಸಿದವು ಮತ್ತು ಮಾರ್ಕ್ಸ್‌ರವರ ಉಜ್ವಲ ಚಾರಿತ್ರಿಕ ವಿಶ್ಲೇಷಣೆಯನ್ನು ದೃಢಪಡಿಸಿದವು ಎಂಬುದನ್ನು ನಾವು ಮುಂದೆ ನೋಡೋಣ.


O crime de rico a lei o cobre. O Estado esmaga o oprimido
Não há direitos para o pobre. Ao rico tudo é permitido
À opressão não mais sujeitos! Somos iguais todos os seres
Não mais deveres sem direitos. Não mais direitos sem deveres!
Su, lottiamo! l'ideale nostro alfine sarà l'Internazionale futura umanità!
Su, lottiamo! l'ideale nostro alfine sarà
l'Internazionale futura umanità!

# ಪ್ಯಾರಿಸ್ ಕಮ್ಯೂನಿನ ಕಲಾವಿದರ ಫೆಡರೇಶನಿನ ಪ್ರಣಾಳಿಕೆ

ಈ ಪ್ರಣಾಳಿಕೆಯನ್ನು ಎಪ್ರಿಲ್ 1871ರಲ್ಲಿ ಒಡಗೂಡಿಪ್ಯಾರಿಸ್‌ಕಮ್ಯೂನು ಕೆಲಸ ಮಾಡುತ್ತಿದ್ದ ನಡುವೆ ಅದರಲ್ಲಿ ಕಲೆಯ ಪಾತ್ರದ ಬಗ್ಗೆ ಪುನರಂದಾಜು ಮಾಡಲು ಸೇರಿದ್ದ ಕಲಾವಿದರ ಫೆಡರೇಶನಿನ ಕಲಾವಿದರು, ಶಿಲ್ಪಿಗಳು, ಅಲಂಕಾರ ಕಲಾವಿದರು ಬರೆದರು.

## ಪ್ಯಾರಿಸ್‌ಕಲಾವಿದರ ಫೆಡರೇಶನ್

ಪ್ಯಾರೀಸಿನ ಕಲಾವಿದರು, ಕಮ್ಯೂನಿನ ಗಣತಂತ್ರದ ನೀತಿಗಳಿಗೆ ಬದ್ಧವಾಗಿದ್ದು, ಒಂದು ಫೆಡರೇಶನ್ ರಚಿಸಿಕೊಂಡಿದ್ದಾರೆ.

ಈ ಕೆಳಗಿನ ಆಧಾರದ ಮೇಲೆ ಎಲ್ಲ ಕಲಾವಿದರನ್ನು ಒಗ್ಗೂಡಿಸಲಾಗಿದೆ :

- ಸರಕಾರದ ಮೇಲುಸ್ತುವಾರಿ ಮತ್ತು ವಿಶೇಷ ಸವಲತ್ತುಗಳಿಂದ ಮುಕ್ತವಾದ ಕಲಾ ಅಭಿವ್ಯಕ್ತಿ
- ಫೆಡರೇಶನ್ನಿನ ಕಲಾವಿದರ ಸದಸ್ಯರ ಹಕ್ಕುಗಳ ಸಮಾನತೆ
- ಕಲಾವಿದರ ಸಾರ್ವತ್ರಿಕ ಚುನಾವಣೆಯಲ್ಲಿ ಆಯ್ಕೆಯಾದ ಸಮಿತಿಯ ಮೂಲಕ ಎಲ್ಲ ಸದಸ್ಯರು ರಕ್ಷಿಸಲು ಬದ್ಧವಾಗಿರುವ ಪ್ರತಿಕಲಾವಿದನ ಸ್ವಾತಂತ್ರ್ಯ ಮತ್ತು ಘನತೆ

## ಸಮಿತಿಯ ರಚನೆ

- ಸಮಿತಿಯು ವಿವಿಧ ಕಲಾಪ್ರಕಾರಗಳನ್ನು ಪ್ರತಿನಿಧಿಸುವ 47 ಸದಸ್ಯರನ್ನು ಒಳಗೊಂಡಿರುತ್ತದೆ.
  - 16 ಚಿತ್ರಕಲಾವಿದರು
  - 10 ಶಿಲ್ಪಿಗಳು

- 5 ವಾಸ್ತುಶಿಲ್ಪಿಗಳು
- 6 ಕೆತ್ತನೆಯ ಕಲಾವಿದರು
- 10 ಅಲಂಕಾರಿಕ ಕಲಾವಿದರು (ತಪ್ಪಾಗಿ ಕೈಗಾರಿಕಾ ಕಲಾವಿದರು ಎಂದು ಕರೆಯಲಾಗುತ್ತಿರುವವರು)

- ಅವರನ್ನು ಪಟ್ಟಿ ವ್ಯವಸ್ಥೆ ಮತ್ತುಗೋಪ್ಯ ಮತದಾನದ ಮೂಲಕ ಆರಿಸಲಾಗುತ್ತದೆ.
- ಕಲೆಯಲ್ಲಿ ತಮ್ಮ ಸ್ಥಾನವನ್ನು (ಅವರ ಕೃತಿಗಳ ಪ್ರಸಿದ್ಧಿ ಅಥವಾ ಪ್ರದರ್ಶನದ ಪತ್ರ ಅಥವಾ ಇಬ್ಬರು ಕಲಾವಿದರು ಪ್ರಾಯೋಜನೆ ಮೂಲಕ) ಸಿದ್ಧಪಡಿಸಿರುವ ಪುರುಷ ಅಥವಾ ಮಹಿಳಾ ಕಲಾವಿದರು ಈ ಚುನಾವಣೆಯಲ್ಲಿ ಭಾಗವಹಿಸಬಹುದು.
- ಸಮಿತಿಯ ಸದಸ್ಯರ ಅವದಿ, ಒಂದು ವರ್ಷವಾಗಿರುತ್ತದೆ.
- ಒಂದು ವರ್ಷದ ನಂತರ, ಅವರಲ್ಲಿ ಗೋಪ್ಯ ಮತದಾನದಲ್ಲಿಆಯ್ಕೆಯಾಗುವ 15 ಸದಸ್ಯರು ಮುಂದುವರೆಯುತ್ತಾರೆ. ಉಳಿದ 32 ಸದಸ್ಯರನ್ನು ಬದಲಾಯಿಸಲಾಗುತ್ತದೆ.
- ಬದಲಾಯಿಸಲಾದ ಸದಸ್ಯರು ಒಂದು ವರ್ಷದ ನಂತರವೇ ಮತ್ತೆ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಬಹುದು.
- ತನ್ನ ಕರ್ತವ್ಯಗಳನ್ನು ಪೂರೈಸದ ಸದಸ್ಯರನ್ನು ಹಿಂತೆಗೆಯುವ ಹಕ್ಕು ಇರುತ್ತದೆ. ಇದಕ್ಕೆ ಒತ್ತಾಯಿಸಿ ಒಂದು ತಿಂಗಳ ನಂತರವೇ ಮತ್ತು ಮೂರನೇ ಎರಡರಷ್ಟು ಸದಸ್ಯರು ಬೆಂಬಲಿಸಿದರೆ ಮಾತ್ರ ಇದನ್ನು ಜಾರಿ ಮಾಡಬಹುದು.

## ಧ್ಯೇಯೋದ್ದೇಶಗಳ ಸ್ಥಾಪನೆ

ಕಲಾ ಜಗತ್ತಿನ ಆಡಳಿತವನ್ನು ಕಲಾವಿದರು ನಡೆಸುವಾಗಿನ ಧ್ಯೇಯೋದ್ದೇಶಗಳು ಹೀಗಿವೆ:

- ಹಿಂದಿನ ಕಲಾ ಭಂಡಾರವನ್ನು ಕಾಪಿಡುವುದು
- ಈಗಿರುವ ಎಲ್ಲ ಕಲೆಗಳನ್ನು ಪ್ರೋತ್ಸಾಹಿಸಲು ಮತ್ತು ಪ್ರದರ್ಶಿಸಲು ಅವಕಾಶ(Implementing and illuminating all the elements of the present)
- ಭವಿಷ್ಯವನ್ನು ಶಿಕ್ಷಣದ ಮೂಲಕ ಪುನರ್–ಸೃಷ್ಟಿ ಮಾಡುವುದು(Regenerating the future through education)

## ಸ್ಮಾರಕಗಳು ಮತ್ತು ಮ್ಯೂಸಿಯಂ ಗಳು

ಕಲೆಯ ದೃಷ್ಟಿಯಿಂದ ಪ್ರಮುಖವಾಗಿರುವ ಸ್ಮಾರಕಗಳು, ಮ್ಯೂಸಿಯಂಗಳು, ಖಾಸಗಿ ವ್ಯಕ್ತಿಗಳದ್ದು ಅಲ್ಲದ ಕಲಾಕೃತಿಗಳಿರುವ ಗ್ಯಾಲರಿಗಳು, ಸಂಗ್ರಹಗಳು, ಮತ್ತು ಲೈಬ್ರರಿಗಳನ್ನು ಕಾಪಿಡುವ ಜವಾಬ್ದಾರಿ ಮತ್ತು ಆಡಳಿತ ನಿರ್ವಹಣೆಯನ್ನು ಈ ಸಮಿತಿಗೆ ಒಪ್ಪಿಸಲಾಗುವುದು. ಈ ಸಮಿತಿಯು

- ಅವನ್ನು ಸ್ಥಾಪಿಸುವ, ಕಾಪಿಡುವ, ಅಗತ್ಯಕ್ಕೆ ತಕ್ಕಂತೆ ಹೊಂದಿಸುವ, ಸಂಗ್ರಹದಲ್ಲಿ ಹುಡುಕಲು ಸುಲಭವಾಗುವಂತೆ ಅಗತ್ಯ ವ್ಯವಸ್ಥೆ ಮಾಡುವ ಯೋಜನೆಗಳನ್ನು ಪೂರ್ಣಗೋಳಿಸುವುದು.
- ಅಧ್ಯಯನವನ್ನು ಉತ್ತೇಜಿಸಲು ಮತ್ತು ನೋಡುಗರಿಗೆ ಆಸಕ್ತಿಕರವಾಗುವಂತೆ ಅವುಗಳನ್ನು ಸಾರ್ವಜನಿಕರಿಗೆ ತೆರೆಯುವುದು.
- ಕಟ್ಟಡಗಳನ್ನು ಕಾಪಿಡುವ ಪರಿಸ್ಥಿತಿಯ ಮೇಲೆ ನಿಗಾ ಇಡುವುದು, ತುರ್ತು ರಿಪೇರಿಗಳನ್ನು ಸೂಚಿಸುವುದು ಮತ್ತು ತನ್ನ ಕೆಲಸದ ವಿವರಗಳನ್ನು ಕಮ್ಯೂನಿಗೆ ನೀಡುವುದು.
- ಈ ಸ್ಥಾವರಗಳಿಗೆ ಮತ್ತು ಪ್ರದರ್ಶನಗಳಿಗೆ ಅಗತ್ಯ ಸೇವೆಗಳನ್ನು ಒದಗಿಸಲು, ಸಾಮರ್ಥ್ಯ ಮತ್ತು ನೈತಿಕತೆಯನ್ನು ಪರಿಶೀಲಿಸಿ, ಸಮಿತಿಯು ಸೂಕ್ತ ವ್ಯಕ್ತಿಗಳನ್ನು ಆಡಳಿತಗಾರರು, ಒಬ್ಬ ಕಾರ್ಯದರ್ಶಿ, ಸಂಗ್ರಹಾಗಾರದ ಪರಿಣತರು ಮತ್ತು ವಾರ್ಡನ್ ಗಳಾಗಿನೇಮಿಸುವುದು.

## ಪ್ರದರ್ಶನಗಳು

- ಪ್ಯಾರೀಸಿನಲ್ಲಿ ನಡೆಯುವ ಕಮ್ಯೂನಿನ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರದರ್ಶನಗಳನ್ನು ಸಮಿತಿಯು ಸಂಘಟಿಸುವುದು
- ಪ್ಯಾರೀಸಿನಲ್ಲಿ ನಡೆಯದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರದರ್ಶನಗಳಿಗೆ, ಸಮಿತಿಯು ಪ್ಯಾರೀಸಿನ ಕಲಾವಿದರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಕಮಿಶನನ್ನು ಕಳಿಸುವುದು
- ಕಲಾವಿದರು ಸಹಿ ಮಾಡಿದ ತಮ್ಮ ಸ್ವಂತ ಅಥವಾ ಇನ್ನೊಂದು ಕಲಾಪ್ರಕಾರದಿಂದ (ಉದಾ: ಚಿತ್ರಗಳ ಕೆತ್ತನೆಗಳು) ಅನುವಾದಿಸಿದ ಕಲಾಕೃತಿಗಳಿಗೆ ಮಾತ್ರ ಸಮಿತಿಯು ಅವಕಾಶ ನೀಡುವುದು
- ಕಲಾಕೃತಿಯ ನಿಜವಾದ ಸೃಷ್ಟಿಕರ್ತನ ಹೆಸರಿನ ಬದಲುಅದರ 'ಸಂಪಾದಕ' ಅಥವಾ 'ಸಾಮೂಹಿಕ ಉತ್ಪಾದಕ'ರ ಹೆಸರನ್ನು ಗುರುತಿಸುವ ಎಲ್ಲ ವ್ಯಾಪಾರಿ ಪ್ರದರ್ಶನಗಳನ್ನು ಸಮಿತಿಯು ತಿರಸ್ಕರಿಸುತ್ತದೆ
- ಸಮಿತಿಗೆ ಪ್ರಶಸ್ತಿಗಳನ್ನು ಕೊಡಲಾಗುವುದಿಲ್ಲ

- ಕಮ್ಯೂನ್ ಪ್ರಾಯೋಜಿಸಿದ ಸಾಮಾನ್ಯ ಕಲಾಕೃತಿಗಳನ್ನು ಎಲ್ಲ ಪ್ರದರ್ಶಕರು ಸೂಚಿಸಿದ ಕಲಾವಿದರಿಗೆ ಸಮಿತಿಯು ಹಂಚುತ್ತದೆ
- ವಿಶೇಷ ಕಲಾಕೃತಿಗಳನ್ನು ಸಮಿತಿಯು ಸ್ಪರ್ಧೆಗೆ ಕಳಿಸುತ್ತದೆ

**ಶಿಕ್ಷಣ**

- ಸಮಿತಿಯು ಕಮ್ಯೂನಿನ ಪ್ರಾಥಮಿಕ ಮತ್ತು ವೃತ್ತಿಪರ ಶಾಲೆಗಳಲ್ಲಿ ಕಲೆಯ ಮತ್ತು ಮಾಡೆಲಿಂಗ್ ನ ಕಲಿಕೆಯ ಮೇಲುಸ್ತುವಾರಿಯನ್ನು ನಿರ್ವಹಿಸುವುದು ಮತ್ತು ಈ ಶಾಲೆಗಳಲ್ಲಿ ಶಿಕ್ಷಕರನ್ನು ಸ್ಪರ್ಧೆಯ ಮೂಲಕ ನೇಮಿಸಲಾಗುವುದು; ಅದು ಆಕರ್ಷಕ, ತಾರ್ಕಿಕ ವಿಧಾನಗಳನ್ನು ಅಂಗೀಕರಿಸುವುದನ್ನು ಉತ್ತೇಜಿಸುವುದು; ಮಾಡೆಲ್‌ಗಳ ಮೇಲೆ ಅದು ಮೊಹರನ್ನು ಹಾಕುವುದು; ಅದು ಹೆಚ್ಚಿನ ಸ್ಫೂರ್ತಿದಾಯಕವಾಗುವ ವಿಷಯಗಳನ್ನು ವಿನ್ಯಾಸಗೊಳಿಸಿ, ಅವುಗಳ ಅಧ್ಯಯನವನ್ನು ಕಮ್ಯೂನಿನ ಖರ್ಚಿನಲ್ಲಿ ಮಾಡಲಾಗುವುದು
- ಕಲೆಯ ಉಚ್ಚ ಶಿಕ್ಷಣ ಹಾಗೂ ಸೌಂದರ್ಯಶಾಸ್ತ್ರ, ಚರಿತ್ರೆ ಮತ್ತು ತತ್ವಶಾಸ್ತ್ರಗಳ ಕುರಿತು ಸಮ್ಮೇಳನಗಳನ್ನು ನಡೆಸಲು ದೊಡ್ಡ ಸಭಾಂಗಣಗಳನ್ನು ಕಟ್ಟಲು ಉಪಕ್ರಮಿಸುವುದು ಮತ್ತು ಉತ್ತೇಜನ ನೀಡುವುದು

**ಪ್ರಚಾರ**

- ಸಮಿತಿಯು ಪ್ರಚಾರಕ್ಕಾಗಿ‘Officiel des art’ಎಂಬ ‘ಕಲೆಯ ಅಧಿಕೃತ’ ಪತ್ರಿಕೆಯೊಂದನ್ನು ಆರಂಭಿಸುವುದು
- ಸಮಿತಿಯ ನಿಯಂತ್ರಣ ಮತ್ತು ಅದರ ಜವಾಬ್ದಾರಿಯಲ್ಲಿ, ಈ ಪತ್ರಿಕೆ ಕಲಾ ಜಗತ್ತಿನ ಸಾರ್ವಜನಿಕ ಕಾರ್ಯಕ್ರಮಗಳು ಮತ್ತು ಕಲಾವಿದರಿಗೆ ಉಪಯೋಗಿಯಾದ ಮಾಹಿತಿಯನ್ನು ಪ್ರಕಟಿಸುವುದು
- ಸಮಿತಿಯು ಅದರ ಕೆಲಸಗಳ ಸಾರ್ವಜನಿಕ ಲೆಕ್ಕಪತ್ರ, ಸಭೆಗಳ ಮಿನಿಟ್ಸ್, ಸ್ವೀಕೃತಿ ಮತ್ತು ಖರ್ಚುಗಳ ಬಜೆಟ್, ಮತ್ತು ಅದರ ಕೆಲಸವನ್ನು ಬಿಂಬಿಸುವ ಎಲ್ಲ ಅಂಕೆಸಂಖ್ಯೆಗಳನ್ನು ಪ್ರಕಟಿಸುವುದು
- ಸೌಂದರ್ಯಶಾಸ್ತ್ರದ ಪ್ರಬಂಧಗಳಿಗೆ ಮೀಸಲಾದ ಸಾಹಿತ್ಯ ವಿಭಾಗವು, ತಟಸ್ಥವಾಗಿದ್ದು ಎಲ್ಲಾ ಅಭಿಪ್ರಾಯಗಳು ಮತ್ತುಎಲ್ಲಾ ವಿಧಾನಗಳಿಗೆ ಪೂರ್ಣವಾಗಿ ತೆರೆದಿರುವುದು
- ಈ ಪತ್ರಿಕೆಯು ಪ್ರಗತಿಪರವು, ಸ್ವತಂತ್ರವು, ಘನತೆವೆತ್ತದ್ದು, ಪ್ರಾಮಾಣಿಕವುಅಗಿದ್ದು, ನಮ್ಮ ಪುನರುತ್ಥಾನದ ಗಂಭೀರ ಹೇಳಿಕೆಯಾಗಿರುವುದು

## ಮಧ್ಯಸ್ಥಿಕೆ

- ಕಲೆಗೆ ಸಂಬಂಧಿಸಿದ ಎಲ್ಲಾ ವಿವಾದಗಳಿಗೆ, ಸಂಬಂಧಿಸಿದ ಪಕ್ಷಗಳ(ಕಲಾವಿದರು ಮತ್ತು ಇತರರು) ಫಿರ್ಯಾದಿನ ಆಧಾರದ ಮೇಲೆ ಪಂಚಾಯಿತಿ ಮಾಡುವ ಮಧ್ಯಸ್ಥಿಕೆದಾರರನ್ನು ಸಮಿತಿಯುನೇಮಿಸುವುದು
- ಸಾರ್ವಜನಿಕ ಆಸಕ್ತಿಯ ಮತ್ತು ಧೋರಣೆಗಳಿಗೆ ಸಂಬಂಧಿಸಿದಂತೆ ಸಮಿತಿಯು, ಮಧ್ಯಸ್ಥಿಕೆ ಮಂಡಳಿಯನ್ನು ರಚಿಸುವುದು ಮತ್ತು ಅದರ ನಿರ್ಣಯಗಳನ್ನು ಅಧಿಕೃತ ಪ್ರಚಾರ ಪತ್ರಿಕೆಯಲ್ಲಿ ಪ್ರಕಟಿಸುವುದು

## ವೈಯಕ್ತಿಕ ಮುನ್ನೆಜ್ಜೆ

- ಕಲೆಯ ಪ್ರಗತಿ, ಕಲಾವಿದರ ನೈತಿಕಅಥವಾ ಬೌದ್ಧಿಕ ವಿಮೋಚನೆ, ಅವರ ಭೌತಿಕ ಪರಿಸ್ಥಿತಿಯ ಸುಧಾರಣೆ ಇತ್ಯಾದಿಗಳ ಕುರಿತು ತಮ್ಮ ಪ್ರಸ್ತಾವಗಳು, ಪ್ರಾಜೆಕ್ಟುಗಳು, ವರದಿಗಳು ಮತ್ತು ಅಭಿಪ್ರಾಯಗಳನ್ನು ಕಳಿಸಲು ಸಮಿತಿಯು ಎಲ್ಲ ನಾಗರಿಕರನ್ನು ಆಹ್ವಾನಿಸುವುದು
- ಇವುಗಳೆಲ್ಲದರ ಒಂದು ಹೇಳಿಕೆಯನ್ನು ಸಮಿತಿಯು ಕಮ್ಯೂನಿಗೆ ಕೊಡುವುದು ಮತ್ತು ತನ್ನ ನೈತಿಕ ಬೆಂಬಲ ಮತ್ತು ಸಹಯೋಗವನ್ನು ಸಾಧ್ಯವೆನಿಸುವ ಎಲ್ಲದಕ್ಕೂ ನೀಡುವುದು
- ಸಮಿತಿಯು ಈ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವಎಲ್ಲಾ ಪ್ರಯತ್ನಗಳಿಗೆ ಸಾರ್ವಜನಿಕ ಅಭಿಪ್ರಾಯದ ಸಮ್ಮತಿಯನ್ನು ಪಡೆಯುವುದು ಮತ್ತು ಈ ಪ್ರಸ್ತಾವಗಳನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಅದಕ್ಕೆ ಪ್ರಚಾರ ನೀಡುವುದು
- ಕೊನೆಯದಾಗಿ, ಶಬ್ದ, ಪೆನ್, ಪೆನ್ಸಿಲ್, ಮಹಾನ್ ಕಲಾಕೃತಿಗಳ ಜನಪ್ರಿಯ ನಕಲುಗಳ ಮೂಲಕ ಫ್ರಾನ್ಸಿನ ಸಣ್ಣ ಹಳ್ಳಿಗಳಿಂದ ಹಿಡಿದು ಪಟ್ಟಣಗಳ ಪುರಭವನಗಳ ವರೆಗೆ ಪ್ರದರ್ಶನಗಳಲ್ಲಿ ಮತ್ತು ಎಲ್ಲೆಡೆಯಲ್ಲೂ ಬುದ್ಧಿಪೂರ್ವಕ ಮತ್ತು ಆರೋಗ್ಯಕರ ಬಿಂಬಗಳನ್ನು ಪ್ರದರ್ಶಿಸುವ ಮೂಲಕ; ನಮ್ಮ ಪುನರುತ್ಥಾನ, ಸಾಮುದಾಯಿಕ ಆಸ್ತಿಯ ಆರಂಭ, ಉಜ್ವಲ ಭವಿಷ್ಯ ಮತ್ತು ಸಾರ್ವತ್ರಿಕ ಗಣತಂತ್ರಗಳ ನಿಟ್ಟಿನಲ್ಲಿ ಸಮಿತಿಯು ಕೆಲಸ ಮಾಡುವುದು

G. COURBET, MOULINET, STEPHEN MARTIN, ALEXANDRE JOUSSE, ROSZEZENCH, TRICHON, DALOU, JULES HÉREAU, C. CHABERT, H. DUBOIS, A. FALEYNIÈRE, EUGÈNE POTTIER, PERRIN, A. MOUILLIARD.

(ಇದನ್ನು ಫ್ರೆಂಚ್‌ನಿಂದ ಇಂಗ್ಲೀಷಿಗೆ ಅನುವಾದಿಸಿದ್ದು ಜೆಫ್ ಸ್ಕಿನ್ನರ್. ಈ ಅನುವಾದವನ್ನು ಮೂಲತಃ ರೆಡ್ ವೆಜ್ ಮ್ಯಾಗಝೀನ್‌ನಲ್ಲಿ ಪ್ರಕಟಿಸಲಾಗಿತ್ತು. ಈ ಅನುವಾದವನ್ನು ಟ್ರೈಕಾಂಟಿನೆಂಟಲ್ ಇನ್ಸ್ಟಿಟ್ಯೂಟ್ ಫಾರ್ ಸೋಶಿಯಲ್ ರಿಸರ್ಚ್ ಪರಿಷ್ಕರಿಸಿದೆ)


Mi vse ustvarjamo na svetu, zato naj vse bo naša last;
zato naj delavcu in kmetu pripada tudi vsa oblast.
Ko vse lenuhe in tirane uniči naša trda pest,
krivice bodo vse pregnane, svoboden rod vasi in mest.
ہے جنگ ہماری اخری جس پر ہے فیصلہ
گاو انٹرناسیونال اٹھو کے وقت ایا ہے جنگ ہماری اخری جس پر
ہے فیصلہ گاو انٹرناسیونال اٹھو کے وقت ایا

# ಕಮ್ಯೂನ್ ಧೀರರ ಸಂಕಲ್ಪ

**ಬರ್ಟೋಲ್ಟ್ ಬ್ರೆಕ್ಟ್**
**(ಬಿ.ಪೀರ್ ಬಾಷ)**

ಅರ್ಥವಾಗುತ್ತಿದೆ ನಮಗೆ; ಅದು ನಮ್ಮ ದೌರ್ಬಲ್ಯ
ನಿಮ್ಮ ಕಾನೂನುಗಳನ್ನು ಜಾರಿಗೊಳಿಸಲು ಬಿಟ್ಟಿದ್ದು
ವಿನಮ್ರತೆಯ ತ್ಯಜಿಸುತ್ತೇವೆ, ಇದು ನಮ್ಮ ಸಂಕಲ್ಪ
ಇನ್ನು ಮುಂದೆ ಕಾನೂನೇ ಬೆನ್ನಿಗಿರುತ್ತದೆ ನಮ್ಮ ಧ್ಯೇಯಕ್ಕೆ

ಅರಿವಾಗುತ್ತಿದೆ ನಮಗೆ; ತಲೆಗೆ ಬಂದೂಕು ಹಿಡಿದೇ
ನೀವು ನಮ್ಮನ್ನು ಸೆರೆಹಿಡಿದಿದ್ದೀರೆಂದು
ನಿಮ್ಮ ಚಿತ್ರಹಿಂಸೆಗೆ ಹೆದರೆವಿನ್ನು, ಇದು ನಮ್ಮ ಸಂಕಲ್ಪ
ಅರಿತಿದ್ದೇವೆ, ಗುಲಾಮಗಿರಿ ಸಾವಿಗಿಂತಲೂ ಹೀನವೆಂದು

ಮನವರಿಕೆಯಾಗುತ್ತಿದೆ ನಮಗೆ; ಹಸಿವಿನಲ್ಲಿಟ್ಟೇ ನಮ್ಮನ್ನು
ನೀವು ಕೂಡಿಟ್ಟೇದ್ದೀರೆಂದು, ಹೆಚ್ಚಿನದ್ದೆಲ್ಲವನ್ನೂ
ಕಿತ್ತುಕೊಳ್ಳುತ್ತೇವೆ, ಇದು ನಮ್ಮ ಸಂಕಲ್ಪ
ನಮ್ಮಿಂದ ದೂರವಿಟ್ಟದ್ದನ್ನು ಬಾಗಿಲೊಡೆದು

ಅರಿವಾಗುತ್ತಿದೆ ನಮಗೆ; ತಲೆಗೆ ಬಂದೂಕು ಹಿಡಿದೇ
ನೀವು ನಮ್ಮನ್ನು ಸೆರೆಹಿಡಿದಿದ್ದೀರೆಂದು
ನಿಮ್ಮ ಚಿತ್ರಹಿಂಸೆಗೆ ಹೆದರೆವಿನ್ನು, ಇದು ನಮ್ಮ ಸಂಕಲ್ಪ
ಅರಿತಿದ್ದೇವೆ, ಗುಲಾಮಗಿರಿಸಾವಿಗಿಂತಲೂ ಹೀನವಾದುದೆಂದು

ಅರ್ಥವಾಗುತ್ತಿದೆ ಈಗ; ಖಾಲಿ ಮನೆಗಳ ನಡುವೆ
ನಮ್ಮನ್ನು ನೀವು ನಿರ್ವಸಿತರಾಗಿಸಿದ್ದು
ಇನ್ನು ಬೇಲಿ ಮುರಿಯುತ್ತೇವೆ, ಇದು ನಮ್ಮ ಸಂಕಲ್ಪ
ಪ್ರತಿ ದುಡಿಮೆಗಾರನಿಗೆ ಮನೆಯಿರುತ್ತದೆಂದು

ಅರಿವಾಗುತ್ತಿದೆ ನಮಗೆ; ತಲೆಗೆ ಬಂದೂಕು ಹಿಡಿದೇ
ನೀವು ನಮ್ಮನ್ನು ಸೆರೆಹಿಡಿದಿದ್ದೀರೆಂದು
ನಿಮ್ಮ ಚಿತ್ರಹಿಂಸೆಗೆ ಹೆದರೆವಿನ್ನು, ಇದು ನಮ್ಮ ಸಂಕಲ್ಪ
ಅರಿತಿದ್ದೇವೆ, ಗುಲಾಮಗಿರಿ ಸಾವಿಗಿಂತಲೂ ಹೀನವಾದುದೆಂದು

ಅರಿವಾಗಿದೆ ನಮಗೊಂದು ಬದುಕಿನ ಕೂಲಿ ಕೊಡಿರೆಂದು
ನಿಮ್ಮನ್ನು ವಿನಂತಿಸಿಕೊಳ್ಳಬಾರದೆಂದು
ನಿಮ್ಮಿಂದ ಕಾರ್ಖಾನೆಗಳನ್ನು ಪಡೆಯುತ್ತೇವೆ, ಇದು ನಮ್ಮ ಸಂಕಲ್ಪ
ಅರಿವಾಗಿದೆ ನಮಗೆ ನಿಮ್ಮ ನಷ್ಟವೇ ನಮ್ಮ ಗಳಿಕೆಯೆಂದು

ಅರಿವಾಗುತ್ತಿದೆ ನಮಗೆ; ತಲೆಗೆ ಬಂದೂಕು ಹಿಡಿದೇ
ನೀವು ನಮ್ಮನ್ನು ಸೆರೆಹಿಡಿದಿದ್ದೀರೆಂದು
ನಿಮ್ಮ ಚಿತ್ರಹಿಂಸೆಗೆ ಹೆದರೆವಿನ್ನು, ಇದು ನಮ್ಮ ಸಂಕಲ್ಪ
ಅರಿತಿದ್ದೇವೆ, ಗುಲಾಮಗಿರಿ ಸಾವಿಗಿಂತಲೂ ಹೀನವಾದುದೆಂದು

ಅರಿವಾಗುತ್ತಿದೆ ಈಗ; ಆಳುವವರ ಭರವಸೆಗಳ ಮೇಲೆ
ಅವಲಂಬಿಸಲಾರೆವೆಂದು, ಉತ್ತಮ ಜೀವನದ
ಆರಂಭ ಸ್ವಾತಂತ್ರ್ಯದಿಂದಲೇ, ಇದು ನಮ್ಮ ಸಂಕಲ್ಪ
ನಮ್ಮ ಭವಿಷ್ಯ ಕಟ್ಟುವುದು ನಮ್ಮಿಷ್ಟದಿಂದಲೇ

ಸ್ಪಷ್ಟವಾಗುತ್ತಿದೆ ಈಗ; ಫಿರಂಗಿ ಘರ್ಜನೆಯ ಶಬ್ದಗಳಷ್ಟೇ
ನಿಮ್ಮೊಂದಿಗೆ ಮಾತಾಡುವ ಪದಗಳುಎಂದು
ಸಾಬೀತು ಪಡಿಸುತ್ತೇವೆ ನಿಮಗೆ, ನಾವು ಕಲಿತಿದ್ದೇವೆ ಪಾಠವನ್ನು
ತಿರುಗಿಸುತ್ತೇವೆ ಬಂದೂಕುಗಳನ್ನು ನಿಮ್ಮೆದೆಗಿನ್ನು.

****

# ದುಡಿವವರ ಜಗದ ಹಾಡು*

ಮೂಲ ಫ್ರೆಂಚ್ : **ಯುಜಿನ್ ಪೊಟಿಯೆರ್**

(ಅನು: ಕೆ.ನೀಲಾ)

ಏಳಿ ಎದ್ದೇಳಿ ದನಿಯಿಲ್ಲದ ದುರ್ಬಲರೇ,
ನಿದ್ದೆಯಿಂದ ಎದ್ದೇಳಿ ದುಡಿವವರೇ,
ಏಳಿ ಎದ್ದೇಳಿ, ಹಸಿವಿನ ಬಂಧಿಗಳೇ
ಬಂಡಾಯದ ಅರಿವು ಗುಡುಗುತಿದೆ
ಬೂಟಾಟಿಕೆಯ ಯುಗ  ಹೋಗುತಿದೆ

ಬನ್ನಿ ಗುಲಾಮಗಿರಿಯನು ಒದ್ದುಬಿಡೋಣ
ಸ್ವತಂತ್ರರಾಗೋಣ ವಿಮುಕ್ತರಾಗೋಣ
ಬದಲಾಗಲಿ ಈ ಜಗ ಪೂರ
ಈ ದಬ್ಬಾಳಿಕೆ ಈ ದೌರ್ಜನ್ಯ ಈ ಅನ್ಯಾಯ

ಹಾಡು ಜಗವೇ. ಏಳು! ಸಮಯ ಬಂದಿದೆ!
ಇದು ನಿರ್ಣಾಯಕ ಕೊನೆಯ ಯುದ್ಧ
ಹಾಡು ಜಗವೆ ಹಾಡು
ಮನುಕುಲವ ಒಗ್ಗೂಡಿಸುವ ಹಾಡು

ನಮ್ಮ ರಕ್ಷಿಸಲು ವಿಮೋಚನೆಗೆ
ಆಕಾಶದಿಂದಲಾರೂ ಇಳಿಯರು
ಧರ್ಮ, ರಾಜ, ನೇತಾರರು
ಯಾರೂ ಬರಲಾರರು

ಕಡಿದೊಗೆಯಬೇಕು ಕೋಳಗಳನು
ನಮ್ಮ ಕೈಗಳಿಂದಲೇ
ಕಡಿದೊಗೆಯಬೇಕು
ದ್ವೇಷ, ಆಸೆ, ಆಮಿಷಗಳ
ಭಯ ಭೀತಿಗಳ ಸರಪಳಿಯನು

ಕಳ್ಳರಾರೂ ಕದ್ದ ಮಾಲನು
ಹಂಚಿ ಖುಷಿ ಪಡಿಸಲಾರರು
ಕಬ್ಬಿಣ ಕಾದಿರುವಾಗಲೇ
ಏಟು ಹಾಕೋಣ ಬನ್ನಿ

ಮನುಕುಲವ ಒಗ್ಗೂಡಿಸುವ ಹಾಡು
ಇಂಟರ್‌ನ್ಯಾಶನಾಲ್ ಹಾಡೋಣ ಬನ್ನಿ

***'ಇಂಟರ್ ನ್ಯಾಶನಲ್' : ಪ್ಯಾರಿಸ್ ಕಮ್ಯೂನಿನ ಹಾಡು**

ಅಂತರ್ರಾಷ್ಟ್ರೀಯ ದುಡಿಯುವ ಜನರ, ಸೋಶಲಿಸ್ಟ್/ಕಮ್ಯುನಿಸ್ಟ್ ಚಳುವಳಿಗಳ 'ನಾಡಗೀತೆ' ಹಾಗೂ 'ಇಂಟರ್ ನ್ಯಾಶನಲ್' ಎಂದೇ ಪ್ರಸಿದ್ಧವಾದ ಈ ಹಾಡಿಗೂ ಪ್ಯಾರಿಸ್ ಕಮ್ಯೂನಿಗೂ ನೇರವಾದ ಸಂಬಂಧವಿದೆ. ಇದನ್ನು ಬರೆದ ಯುಜಿನ್ ಪೊಟಿಯೆರ್ ಒಬ್ಬ ಕಮ್ಯೂನಾರ್ಡ್(ಕಮ್ಯೂನ್ ಸಮರಧೀರ). ಕಮ್ಯುನಾರ್ಡರ ನರಮೇಧದಿಂದ ತಪ್ಪಿಸಿಕೊಂಡು ಲಂಡನಿಗೆ ವಲಸೆ ಹೋಗಲು ಅಡಗಿದ್ದಾಗ, ಕಮ್ಯೂನಿನ ಪತನದ ಕೆಲವೇ ವಾರಗಳಲ್ಲಿ (ಜೂನ್ 1871ರಲ್ಲಿ) ಕಮ್ಯೂನಿನ ಸ್ಫೂರ್ತಿಯನ್ನು ಅಮರಗೊಳಿಸಿದ ಈ ಹಾಡನ್ನು ಬರೆದ. ಆತ ಲಂಡನಿನಲ್ಲಿ ಸ್ವಲ್ಪ ಸಮಯ ವಾಸಿಸಿದ್ದು, ಆ ಮೇಲೆ ಅಮೆರಿಕಕ್ಕೆ ತೆರಳಿ ನ್ಯೂಯಾರ್ಕ್, ಫಿಲಡೆಲ್ಫಿಯದಲ್ಲಿ ನೆಲೆಸಿದ್ದ.

ಆತನ ನಿಧನವಾದ 1887ರಲ್ಲಿ ಪ್ರಕಟವಾದ ಫ್ರೆಂಚ್ ಕ್ರಾಂತಿಕಾರಿ ಹಾಡುಗಳ ಸಂಗ್ರಹದಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು. ಒಂದು ವರ್ಷದ ಬಳಿಕ ಪಿಯರೆ ಡೆಗೆಟೆರ್ ಈ ಹಾಡಿಗೆ ಸಂಗೀತ ಸಂಯೋಜಿಸಿದ. ಇದನ್ನು ಮೊದಲು ಫ್ರೆಂಚ್ ಸೋಶಲಿಸ್ಟ್ ಪಾರ್ಟಿ ತನ್ನ ಹಾಡಾಗಿಸಿಕೊಂಡಿತು ಮತ್ತು 1900ರ ಅಂತರ್ರಾಷ್ಟ್ರೀಯ ಕಾಂಗ್ರೆಸ್ ನಲ್ಲಿ ಪ್ರಸ್ತುತ ಪಡಿಸಿತು. ಆ ಮೇಲೆ ಅದು ಸೋಶಲಿಸ್ಟ್/ಕಮ್ಯುನಿಸ್ಟ್ ಚಳುವಳಿಗಳ 'ಅಧಿಕೃತ' ಹಾಡಾಯಿತು. ಇದು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ, ಬೊಲ್ಶೆವಿಕ್ ಪಕ್ಷದ, ಸೋವಿಯೆಟ್ ರಶ್ಯಾ, ಸೊವಿಯೆಟ್ ಒಕ್ಕೂಟದ 'ನಾಡಗೀತೆ'ಯಾಯಿತು. ಜಗತ್ತಿನ ಅತ್ಯಧಿಕ ಭಾಷೆಗಳಲ್ಲಿ (ಹಲವು ಭಾಷೆಗಳಲ್ಲಿ

ಅನೇಕ ಬಾರಿ – ಉದಾ: ಇಂಗ್ಲೀಷಿನಲ್ಲಿ 4 ಜನಪ್ರಿಯ ಅನುವಾದಗಳಿವೆ) ಅನುವಾದಿತವಾಗಿ ಅತ್ಯಂತ ಜನಪ್ರಿಯವಾದ ಸಮೂಹಗೀತೆ ಎನ್ನಲಾಗಿದೆ.

ಭಾರತೀಯ ಭಾಷೆಗಳಲ್ಲಿ ಬಂಗಾಳಿ (ನಜರುಲ್ ಇಸ್ಲಾಮ್ ಅವರೇ ಇದನ್ನು ಅನುವಾದಿಸಿದ್ದರು), ಹಿಂದಿ/ಉರ್ದು, ಮಲಯಾಳಂ ಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೆ ಅನುವಾದಿತವಾಗಿದೆ. ಇದು ಲಭ್ಯ ಮಾಹಿತಿ ಪ್ರಕಾರ ಬಹುಶಃ ಕನ್ನಡದಲ್ಲಿ ಮೊದಲ ಅನುವಾದ.





**ಚಿತ್ರಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಲು ಆಯ್ಕೆಯಾದ 41 ಮುಖಪುಟಗಳಲ್ಲಿ,
ಕರ್ನಾಟಕದಿಂದ ಆಯ್ಕೆಯಾದ ಎರಡು ಮುಖಪುಟಗಳು**

**ಹೆಚ್.ಆರ್.ನವೀನ್‌ಕುಮಾರ್,**
ರೈತ ಮುಖಂಡರು, ಹಾಸನ



**ರಾಜು ಎಂ.**
ಕ್ರಿಯಾ ಮಾಧ್ಯಮ, ಬೆಂಗಳೂರು



# ಪ್ಯಾರಿಸ್ ಕಮ್ಯೂನ್ 150

ಕಾರ್ಲ್ ಮಾರ್ಕ್ಸ್ | ವಿ.ಐ. ಲೆನಿನ್ | ಬರ್ಟೋಲ್ಟ್ ಬ್ರೆಕ್ಟ್ | ವಿಜಯ ಪ್ರಶಾದ್

ಅನುವಾದ : ವಸಂತರಾಜ ಎನ್.ಕೆ. | ವಿಶ್ವ ಕುಂದಾಪುರ | ಜಿ. ಶೀರ್ ಬಾಬಾ | ಕೆ. ನೀಲಾ

1871ರಲ್ಲಿ ಎಪ್ಪತ್ತೆರಡು ದಿನಗಳ ಕಾಲ, ಪ್ಯಾರಿಸಿನ ಕಾರ್ಮಿಕರು ಸ್ವರ್ಗದ ಬಾಗಿಲು ತೆರೆದರು. ಅವರು ತಮ್ಮದೇ ಪ್ರಜಾಸತ್ತಾತ್ಮಕ ನೀತಿ ತತ್ವಗಳೊಂದಿಗೆ ತಮ್ಮದೇ ಸರಕಾರವನ್ನು ಸ್ಥಾಪಿಸಲು ನಿರ್ಧರಿಸಿದರು. ಪ್ಯಾರಿಸ್‌ನ ಈ ಕಾರ್ಮಿಕರು 1789ರ ಫ್ರೆಂಚ್ ಕ್ರಾಂತಿಯ ಮತ್ತು 1848ರ ಕ್ರಾಂತಿಯ ವಾರಸುದಾರರಾಗಿದ್ದರು. ಈ ಪ್ರತಿಯೊಂದು ಕ್ಷಣದಲ್ಲಿಯೂ, ಅವರ ಬಂಡಾಯವನ್ನು ಅವರಿಂದ ಕಸಿದುಕೊಳ್ಳಲಾಯಿತು. 1871ರಲ್ಲಿನ ಹೋರಾಟ ಕೂಡ ಅವರ ಸೋಲಿನೊಂದಿಗೆ ಮುಕ್ತಾಯಗೊಳ್ಳುತ್ತದೆ, ಒಂದು ಲಕ್ಷಕ್ಕೂ ಹೆಚ್ಚು ಗಂಡಸರು ಮತ್ತು ಹೆಂಗಸರನ್ನು ಒಂದು [illegible] ಫ್ರೆಂಚ್ ಬೂರ್ಜ್ವಾ ವರ್ಗ ಸಾಯಿಸುತ್ತದೆ. ಈ ಎಪ್ಪತ್ತೆರಡು ದಿನಗಳ ಪ್ರಯೋಗವು ಪ್ಯಾರಿಸ್ ಕಮ್ಯೂನ್ ಎಂದು ಪ್ರಸಿದ್ಧವಾಗಿದೆ.

"ಕಮ್ಯೂನಿನ ಧ್ಯೇಯವೆಂದರೆ ಸಾಮಾಜಿಕ ಕ್ರಾಂತಿಯ ಧ್ಯೇಯ.
ಕಾರ್ಮಿಕರ ಸಂಪೂರ್ಣ ರಾಜಕೀಯ ಮತ್ತು ಆರ್ಥಿಕ ವಿಮೋಚನೆಯ ಧ್ಯೇಯ.
ಅದು ಸಮಸ್ತ ಜಗತ್ತಿನ ಶ್ರಮಜೀವಿಗಳ ಧ್ಯೇಯ.
ಈ ಭಾವದಲ್ಲಿ ಅದು ಅಜರಾಮರ"

– ವಿ.ಐ.ಲೆನಿನ್

ಈ ಪುಸ್ತಕ ಕಮ್ಯೂನಿನ ಕುರಿತು ಮಾರ್ಕ್ಸ್, ಲೆನಿನ್ ಮತ್ತು ಬ್ರೆಕ್ಟರ ಬರವಣಿಗೆಗಳನ್ನು, ಜತೆಗೆ ಸಮಾಜವಾದದೊಂದಿಗಿನ ಈ ಅಮರ ಪ್ರಯೋಗವನ್ನು ಈಗಿನ ಸಂದರ್ಭದಲ್ಲಿ ಇಡುವ ಒಂದು ಪ್ರಸ್ತಾವನೆಯನ್ನು ಒಟ್ಟುಗೂಡಿಸಿ ಕೊಡುತ್ತದೆ. ಜೊತೆಗೆ ಮೊದಲ ಬಾರಿಗೆ ಕನ್ನಡದಲ್ಲಿ ಕಮ್ಯೂನಿನ ಆಶಯವನ್ನು ವಿಶ್ವದ ಮೂಲೆ ಮೂಲೆಗಳಲ್ಲೂ ಮಾರ್ದನಿಸುವಂತೆ ಮಾಡಿದ 'ಇಂಟರ್‌ನ್ಯಾಶನಲ್' ಹಾಡಿನ ಕನ್ನಡ ಅನುವಾದವನ್ನು ಪ್ರಕಟಿಸಲಾಗುತ್ತಿದೆ.

